DAMAGE BOOK

brown book

THE BOOK WAS DRENCHED

UNIVERSAL LIBRARY
OU_200265
UNIVERSAL LIBRARY

**OSMANIA UNIVERSITY LIBRARY**

Call No. Accession No

Author

Title

This book should be returned on or before the date last marked below.

# ಆಕಸ್ಮಿಕ

ತ. ರಾ. ಸು.

ಪ್ರಸಾದ್ ಪಬ್ಲಿಕೇಷನ್ಸ್
ಮೈ ಸೂ ರು

ಪ್ರಥಮ ಮುದ್ರಣ: ಮೇ ೧೯೫೭

ಎಲ್ಲಾ ಹಕ್ಕುಗಳು ಲೇಖಕರವು

ಮುಖಚಿತ್ರ:

**ಜಿ. ಕೆ. ಮೂರ್ತಿ**

**ಒಂದೂವರೆ ರೂಪಾಯಿ**

**ಮುದ್ರಣ :**

ಇಂಡಿಯಾ ಪ್ರೆಸ್, ಮೈಸೂರು

# ಮುನ್ನುಡಿ

ಇಂದಿನ ಜನತೆ, ಆರಾಧಿಸುತ್ತಿರುವ ಆಧುನಿಕ ನಾಗರೀಕತೆ ಮಾನವನ ಜೀವನಕ್ಕೆ ಎಷ್ಟು ಸುಖಸೌಲಭ್ಯಗಳನ್ನು ನೀಡಿದೆಯೋ, ಅಷ್ಟೇ ಮಟ್ಟಿಗೆ ಆ ಜೀವನವನ್ನು ಸಮಸ್ಯಾಗ್ರಸ್ತವಾಗಿಯೂ ಮಾಡಿದೆ. ಇದು ಕೇವಲ ಆರ್ಥಿಕ ಸ್ವರೂಪಕ್ಕೆ ಸಂಬಂಧಿಸಿದ ಪ್ರಶ್ನೆಯಷ್ಟೇ ಅಲ್ಲ, ಮನೋಮುಖವಾಗಿಯೂ ಆಧುನಿಕ ಮಾನವನ ಬಾಳು ಸಮಸ್ಯಾಗ್ರಸ್ತವಾಗಿದೆ.

ಧರ್ಮದ ಶಾಶ್ವತವಾದ ತಳಹದಿಯನ್ನು ಕಳೆದುಕೊಂಡು, ಕೇವಲ ಭೋಗಸುಖವನ್ನು ಮಾತ್ರ ಉಳಿಸಿಕೊಂಡು ಬೆಳೆಯುತ್ತಿರುವ ಇಂದಿನ ನಾಗರಿಕತೆ, ತನ್ನ ಆರಾಧಕನಾದ ಮಾನವನಿಗೆ ಕೃತಿಯಲ್ಲಿ ತೃಪ್ತಿಯನ್ನು [illegible] ಅತೃಪ್ತಿಯೇ ಪ್ರಗತಿಯ ಹೆಗ್ಗುರುತು ಎಂಬ ಪಾಠವನ್ನು [illegible]

ಸೃಷ್ಟಿಶೀಲವಾದ, ರಚನಾತ್ಮಕವಾದ ಅತೃಪ್ತಿ ಪ್ರಗತಿ ಕ್ರಿಯೆಗೆ ನೋದನಕಾರಿಯಾಗಬಹುದಾದರೂ, ಭೋಗದ ಬಯಕೆಗಳ ಪಟ್ಟಿಯನ್ನು ಬೆಳೆಸಿಕೊಳ್ಳುವುದರಿಂದ ಯಾವ ಪ್ರಗತಿಯೂ ಸಾಧ್ಯವಾಗಲಾರದು. ಹಾಗಾದಾಗ, ಮಾನವ ಜೀವನ ಪ್ರಗತಿಪರವಾಗುವುದಕ್ಕೆ ಪ್ರತಿಯಾಗಿ, ಪತನೋನ್ಮುಖವಾಗುವುದು. ಇಂದಿನ ನಾಗರೀಕತೆ ಈ ಅಪಮಾರ್ಗದಲ್ಲಿ ಮುಂದುವರಿಯುತ್ತಿದೆ ಎನ್ನುವ ಮಾತನ್ನು, ಪುರಾಣ ಕಾಲದ ಮನೋಭಾವ, ಕಣ್ಣುಕಪಡ ಧರಿಸಿದ ಅಂಧಶ್ರದ್ಧೆಯ ಅಪಸ್ವರ ಎಂದು ಹಳಿಯುವ ಬದಲು, ತಾತ್ಸಾರದಿಂದ ತಳ್ಳಿಹಾಕುವ ಬದಲು, ನಮ್ಮ ವಿಚಾರದ ಕಣ್ಣನ್ನು ತೆರೆದು ನೋಡಿದಾಗ ಆ ವಾದದಲ್ಲಿಯೂ ಸತ್ಯದ ಬಿತ್ತು ಹುದುಗಿರುವುದು ನಮ್ಮ

ದೃಗ್ಗೋಚರವಾಗುತ್ತದೆ. ಭೋಗಪರಾಯಣವಾದ ನಾಗರೀಕತೆಯನ್ನೇ ಸಂಸ್ಕೃತಿ ಎಂದು ಭ್ರಮಿಸಿದುದರಿಂದ ಮಾನವನ ಬಾಳಿನಲ್ಲಿ ದಿನದಿನವೂ ಎಂಥ ದುರಂತ ನಡೆಯುತ್ತಿದೆ ಎಂಬುದು ಕಾಣಬರುತ್ತದೆ.

ಅತೃಪ್ತಿಯೇ ಪ್ರಗತಿಯ ಹೆಗ್ಗುರುತು ಎಂದು ನಂಬಿದ ಮಾನವ ತನ್ನ ಬಾಳಿನಲ್ಲಿ 'ಬೇಕು'ಗಳ ಪಟ್ಟಿಯನ್ನು ದಿನದಿನಕ್ಕೆ ಹೆಚ್ಚಿಸಿಕೊಳ್ಳುತ್ತಿದ್ದಾನೆ. ವ್ಯವಸ್ಥಿತ ನಿಯೋಜನೆ ಇಲ್ಲವೆ ನಡೆದ ಔದ್ಯೋಗೀಕರಣ (Industrialisation) ಮೂಡಿಸಿದ ಆರ್ಥಿಕ ಅಸಮತೆಯ ಕೃತಕ ವಾತಾವರಣದಲ್ಲಿ, ಕಲೆ, ರಾಜಕೀಯ, ವಿಜ್ಞಾನ – ಎಲ್ಲವೂ ಮಾನವನ ಬಾಳಿನಲ್ಲಿ ಬಗೆಬಗೆಯ ಬಯಕೆಗಳನ್ನು ಕೆರಳಿಸಿ, ಮಾನವನ್ನು ಬಯಕೆಯ ಬಂದಿಯಾಗಿ ಮಾಡಿದೆ.

ಅಷ್ಟೇ ಮಟ್ಟಿಗೆ, ಅದು ಮಾನವನಲ್ಲಿ, ಭೀತಿಯನ್ನು ಮೂಡಿಸಿದೆ. ಮಾನವನ ಬಾಳಿನ ತೃಪ್ತಿಯ ಬುನಾದಿಯನ್ನೇ ಹೊಯ್ದಾಡಿಸಿದ ನಾಗರೀಕತೆ, ಆ ತೃಪ್ತಿಯೊಂದಿಗೆ ಮಾನವನ ಆತ್ಮವಿಶ್ವಾಸವನ್ನು ಅಸ್ತವ್ಯಸ್ತಗೊಳಿಸಿ, ನಿಸರ್ಗವನ್ನು ಗೆದ್ದ ಮಾನವ ತನ್ನ ನೆರಳಿಗೂ ಹೆದರಿ ನಡೆಯುವಂತೆ ಮಾಡಿದೆ. ಭೋಗತೃಷೆ ಎಷ್ಟು ಬೆಳೆದಿದೆಯೋ, ಬಾಳ ಭೀತಿಯೂ ಅಷ್ಟೇ ಪ್ರಮಾಣದಲ್ಲಿ – ಏಕೇ ಇನ್ನೂ ಸ್ವಲ್ಪ ಹೆಚ್ಚಾಗಿ ಬೆಳದಿದೆ. ಇದನ್ನು ಗಮನಿಸಿಯೇ ಮನೋವಿಜ್ಞಾನಿಗಳು ಆಧುನಿಕ ಮಾನವನನ್ನು 'ಭೀತಿಯ ಶಿಶು' ಎಂಬುದಾಗಿ ಕರೆದಿದಾರೆ.

ಒಂದು ಕಡೆ ಮೀರಿ ಬೆಳೆದ ಬಯಕೆ, ಮತ್ತೊಂದು ಕಡೆ ತ್ರಿವಿಕ್ರಮನಂತೆ ಬಾಳನ್ನು ವ್ಯಾಪಿಸಿದ ಭೀತಿ – ಇವೆರಡೂ ನರಕದ ಬೇಟೆ ನಾಯಿಗಳಂತೆ ಜೊತೆಗೂಡಿ, ಆಧುನಿಕ ಮಾನವನ ಜೀವನವನ್ನು ದುರಂತದತ್ತ ಕೊಂಡೊಯ್ಯುತ್ತಿವೆ.

ಹಾಗೆ ಬಯಕೆ – ಭೀತಿಗಳ ವಿಷಚಕ್ರದಲ್ಲಿ ಸಿಲುಕಿ, ದುರಂತದತ್ತ ಧಾವಿಸುತ್ತಿರುವ ಯುವಕನೋರ್ವನ ಬಾಳಿನ ಚಿತ್ರಣ ಈ ಕಾದಂಬರಿ—'**ಆಕಸ್ಮಿಕ**

ಆ ಚಿತ್ರಣ '**ಆಕಸ್ಮಿಕ**'ದಲ್ಲಿ ಅರ್ಧವಾಗಿದೆ. ಅದರ ಮುಂದಿನ ಭಾಗವಾದ '**ಅಪರಾಧಿ**'ಯಲ್ಲಿ ಸಂಪೂರ್ಣವಾಗುತ್ತದೆ.

ಆಧುನಿಕ ಜೀವನದ ಬಗೆಬಗೆಯ ಮುಖಗಳನ್ನು ಚಿತ್ರಿಸಿ, ಜನರ ವಿಚಾರನೇತ್ರಗಳನ್ನು ಆ ಸಮಸ್ಯೆಗಳತ್ತ ಸೆಳೆಯಬೇಕು ಎನ್ನುವ ನನ್ನ ಪ್ರಯತ್ನದಲ್ಲಿ ಈ ಕಾದಂಬರಿಯೂ ಒಂದು ಹೆಜ್ಜೆ. ಈ ಕಾದಂಬರಿಯನ್ನು ರಚಿಸುವಲ್ಲಿ ಮನೋರಂಜನೆಯೊಂದೇ ಅಲ್ಲ, ವಿ ಚಾ ರ ವಿ ಕ ಸ ನ ವೂ ನನ್ನ ಉದ್ದೇಶ.

ಈ ಉದ್ದೇಶ ಕೃತಿರಚನೆಯಲ್ಲಿ ಎಷ್ಟರಮಟ್ಟಿಗೆ ಸಫಲವಾಗಿದೆ, [illegible]ಕವಾಗಿದೆ ಎಂಬುದನ್ನು ವಾಚಕ ಮಿತ್ರರು ಹೇಳಬೇಕು.

ಈ ಕಾದಂಬರಿಯನ್ನು ನನ್ನಿಂದ ಬರೆಯಿಸಿ, ಅಚ್ಚುಮಾಡಿ, ಕನ್ನಡಿಗರಿಗೆ ನೀಡುತ್ತಿರುವ ಮೈಸೂರಿನ 'ಪ್ರಸಾದ್ ಪಬ್ಲಿಕೇಷನ್ಸ್'ನ ಮಿತ್ರರಿಗೂ, ಅಚ್ಚುಕಟ್ಟಾಗಿ ಅಚ್ಚು ಮಾಡಿದ ಇಂಡಿಯಾ ಪ್ರೆಸ್‌ನವರಿಗೂ, ಮುಖಚಿತ್ರವನ್ನು ರಚಿಸಿದ ಧಾರವಾಡದ ಕಲಾವಿದ ಜಿ. ಕೆ. ಮೂರ್ತಿಯವರಿಗೂ ನಾನು ಸ್ನೇಹಋಣಿ.

ಗಿರಿಕನ್ಯಕಾ – ಯಾದವಗಿರಿ
ಮೈಸೂರು – ೨.
೧೦—೫—೧೯೫೭

**ತ. ರಾ. ಸು.**

# ೧

ರೈಲ್ವೆ ನಿಲ್ದಾಣದ ಜನವಿಹೀನ ವಿಶಾಲತೆಯಲ್ಲಿ, ಫ್ಲಾಟ್‌ಫಾರಂನಲ್ಲಿ ತೂಗುಹಾಕಿದ ಸೀಮೆಯೆಣ್ಣೆಯ ದೀಪ ಮಂಕಾಗಿ ಉರಿಯುತ್ತಿತ್ತು. ಸುತ್ತಲೂ ಕವಿದ ಮಬ್ಬಿನಲ್ಲಿ ದೀಪದ ಕ್ಷೀಣ ಕಾಂತಿ ಬೆಳಕಿಗಿಂತ ಹೆಚ್ಚಾಗಿ ಕತ್ತಲೆಯನ್ನೇ ಕಾರುತ್ತಿರುವಂತಿತ್ತು. ನಿಲ್ದಾಣದ ಹಿಂಬದಿಯಲ್ಲಿ ಸಾಕಷ್ಟು ದೂರದಲ್ಲಿದ್ದ ಊರಿನ ಅಂಗಡಿಗಳಲ್ಲಿ ಹೊತ್ತಿಸಿದ ದೀಪಗಳು, ದೂರದಿಂದ ಅಸ್ಪಷ್ಟವಾಗಿ ಕೇಳಬರುತ್ತಿದ್ದ ಜನಗಳ ಮಾತಿನ ಸದ್ದು, ಮಂಕು ಬೆಳಕಿನ ಎದುರಿಗೆ ಜನ ಸುಳಿವಾಗ, ಒಂದು ಕ್ಷಣ ಕಂಡು ಮರುಗಳಿಗೆಯೇ ಮಬ್ಬಿನಲ್ಲಿ ಮರೆಯಾಗುತ್ತಿದ್ದ ಅವರ ಅಸ್ಪಷ್ಟಾಕೃತಿ, ಇವ್ಯಾ ನಿರ್ಜನತೆಯ ಭಾವನೆಯನ್ನು ತಗ್ಗಿಸದೆ, ಅದಕ್ಕೆ ಪ್ರತಿಯಾಗಿ, ನಿಲ್ದಾಣದ ಎದುರು ಬದಿಯಲ್ಲಿ, ಕತ್ತಲೆಯಲ್ಲಿ, ಬಣ್ಣ, ಆಕಾರ ಕಳೆದುಕೊಂಡು, ಕತ್ತಲಿನ ಕಡಲೇ ಗಳಿಗೆ ಗಳಿಗೆಗೂ ಉಕ್ಕಿ, ಊರನ್ನು ನುಂಗಲು ನುಗ್ಗಿಬರುತ್ತಿರುವುದೇನೋ ಎಂಬಂತಿದ್ದ ಕಾಡುಗುಡ್ಡಗಳು ಮೂಡಿಸಿದ ಅಸಹಾಯಕ ಏಕಾಕಿತ್ವದ ಭಾವನೆಯನ್ನೇ ಮತ್ತಷ್ಟು ಬಲಿಸಿದ್ದವು.

ಜನವಿಹೀನ ನಿಲ್ದಾಣದಷ್ಟೇ, ನಿಲ್ದಾಣದ ಬದಿಯ ಹಳಿಗಳ ಮೇಲೆ ನಿಂತ ರೈಲಿನ ಸಾಲು ಡಬ್ಬಿಗಳೂ ನಿರ್ಜೀವವಾಗಿದ್ದವು. ಡಬ್ಬಿಗಳಿಗೆ ಇನ್ನೂ ಎಂಜಿನ್ನನ್ನು ಜೋಡಿಸಿರಲಿಲ್ಲವಾದುದರಿಂದ, ಅವುಗಳಲ್ಲೂ ಬೆಳಕಿರಲಿಲ್ಲ. ಡಬ್ಬಗಳ ತೆರೆದ ಕಿಟಕಿಗಳಿಂದಲೂ ಕತ್ತಲೆ ತೂರಿ ಬಂದು ಹತ್ತಾರು ಜೊತೆ ಕುರುಡುಗಣ್ಣುಗಳು, ಆ ಜನವಿಹೀನತೆಯನ್ನು ದಿಟ್ಟಿಸಿ ನೋಡುತ್ತಿರುವಂತಿತ್ತು. ದೂರದಲ್ಲೆಲ್ಲೋ ನಿಂತ ಎಂಜಿನ್ನು ಕಾರುತ್ತಿದ್ದ ಹೊಗೆ, ಅವರ ಸದ್ದು, ಆಗಾಗ ಅವರ ಅಗ್ಗಿಷ್ಟಿಕೆ (Furnace) ಯ ಬಾಗಿಲನ್ನು ತೆಗೆದು ಇದ್ದಿಲು ತುಂಬಿದಾಗ, ಚಕ್ಕನೆ ಚಿಮ್ಮುತ್ತಿದ್ದ ಉರಿನಾಲಗೆ, ಕಾರ್ಗತ್ತಲಲ್ಲಿ, ವಿಶಾಲ ಮಸಣದಲ್ಲಿ ಉರಿವ ಒಂಟಿ ಚಿತೆಯನ್ನು ನೆನಪಿಗೆ ತರುತ್ತಿತ್ತು.

ಸ್ಟೇಷನ್ನಿನಲ್ಲಿ ಕುಳಿತ ಸ್ಟೇರ್ಷನ್‌ಮಾಸ್ಟರ್, ಆಗಾಗ ಓಡಾಡುವ ಪೋರ್ಟರ್, ಯಾವಾಗಲೊ ಒಮ್ಮೊಮ್ಮೆ ಅವರು ಆಡುವ ತುಂಡು ಮಾತು,

ಅದೂ ಹತ್ತಿರದಲ್ಲಿ ಮನುಷ್ಯರಿರುವರೆಂಬ ಭಾವನೆಯನ್ನು ಮೂಡಿಸದೆ, ನಿಲ್ದಾಣದ ಕಂಭಕ್ಕೆ ಒರಗಿಕೊಂಡು, ಹಾಸಿಗೆಯ ಮೇಲೆ ಕುಳಿತಿದ್ದ ಮೂರ್ತಿಯ ಮನಸ್ಸಿನಲ್ಲಿ, ಪ್ರೇತಲೋಕದ ಕಲ್ಪನೆಯನ್ನೇ ಮೂಡಿಸಿತ್ತು.

ಹೊರಗೆ ಹಬ್ಬಿದ ಕತ್ತಲೆ ಮೂರ್ತಿಯ ಮನಸ್ಸಿನಲ್ಲೂ ಹಬ್ಬಿದಂತಾಗಿ, ಮನದಲ್ಲಿ ಮೂಡಿದ ಕಪ್ಪು ಭಾವನೆಗಳ ಬಂದಿಯಾಗಿದ್ದ ಮೂರ್ತಿ. ಬೇಸರವನ್ನೇ ಬಲಿಸುವ ಆ ಭಾವನೆಗಳನ್ನು ಮಿದುಳಿನಿಂದ ಕೊಡವಿ ಹಾಕಲು, ಮೂರ್ತಿ ದಾರಿಯಲ್ಲಿ ಓದಲೆಂದು ತಂದಿದ್ದ ಪುಸ್ತಕವನ್ನು ಕೈಗೆತ್ತಿಕೊಂಡ.

ಆದರೆ, ಗಾಳಿ ಕೊಂಚ ಬಲವಾಗಿ ಬೀಸಿದಾಗ, ಸ್ಟೇಷನ್ನಿನ ಅಗಲಕ್ಕೂ ತನ್ನ ನೆರಳನ್ನೇ ಹಬ್ಬಿಸಿ ತೂಗಾಡುತ್ತಿದ್ದ ದೀಪದ ಮಂಕು ಬೆಳಕಿನಲ್ಲಿ ಓದುವುದೂ ಸಾಧ್ಯವಾಗಲಿಲ್ಲ.

ಓದುವುದು ಸಾಧ್ಯವಿರಲಿಲ್ಲ; ಮಾತನಾಡಲು ಜೊತೆಯಿರಲಿಲ್ಲ. ಸುಮ್ಮನೆ ಕುಳಿತರೆ ತಲೆಯ ತುಂಬ ಏನೇನೋ, ಬೇಸರದ ಭಾರವನ್ನು ತಗ್ಗಿಸಲಾರದ ಕಾಡು ವಿಚಾರಗಳು.

ಇವೆಲ್ಲದರ ಜೊತೆಗೆ ಕಾಲವೂ ನಿಧಾನವಾಗಿ ಚಲಿಸುತ್ತಾ ಅವನನ್ನು ಕಾಡುವಂತಿತ್ತು. ಗಳಿಗೆ ಗಳಿಗೆಗೂ ಮನಸ್ಸನ್ನು ಭಾರವಾಗಿಸುವ ಈ ವಾತಾವರಣದಲ್ಲಿ, ಮೂರ್ತಿಯ ಮನಸ್ಸನ್ನು ಕೊಂಚ ಹಗುರಾಗಿಸಲು ಇದ್ದ ಏಕೈಕ ಸಾಧನ-ಸಿಗರೇಟು. ಆದರೆ ಮೊದಮೊದಲು ಬೇಸರವನ್ನು ಕಳೆಯಲು ಅಲ್ಪಸ್ವಲ್ಪ ಸಹಕಾರಿಯಾಗಿದ್ದ ಸಿಗರೇಟು, ನಾಲ್ಕಾರನ್ನು ಸೇದಿಯಾದ ಮೇಲೆ ಅದೂ ಬೇಸರವಾಗಿತ್ತು. ಹೊಗೆಸೊಪ್ಪಿನ ಹೊಗೆಯನ್ನು ಹೀರಿ ಹೀರಿ ಕಹಿಯಾದ ನಾಲಗೆ, 'ಇನ್ನು ಬಲವಂತ ಮಾಡಿದರೆ ನನ್ನಿಂದ ಸಹಿಸುವುದು ಸಾಧ್ಯವಿಲ್ಲ' ಎಂದು ಬಂಡಾಯ ಹೂಡುವ ಬೆದರಿಕೆ ಹಾಕಿತ್ತು. ಸಿಗರೇಟನ್ನು ಸುಟ್ಟು ಸುಟ್ಟು, ಮತ್ತೆ ಅದನ್ನು ಸುಡುವ ಆಸೆಯೂ ತೀರಿ ಹೋಗಿ, ಆ ನಿಲ್ದಾಣದಲ್ಲಿ ರೈಲನ್ನು ಹತ್ತುವ ನಿರ್ಧಾರ ಮಾಡಿದ ತನ್ನ ಮೂರ್ಖತನವನ್ನೇ ಹಳಿದುಕೊಳ್ಳುತ್ತಾ ಕುಳಿತಿದ್ದ ಮೂರ್ತಿ.

ಬೇಸರ ಮನದಲ್ಲಿ ಮೊದಲು ಅಡಿಯಿಟ್ಟಾಗ, ಅದನ್ನು ನಿವಾರಿಸಿಕೊಳ್ಳಲು ಬೇರೇನೂ ದಾರಿ ಕಾಣದಿದ್ದಾಗ, ಮೂರ್ತಿ ಅಂಥ ನಿರ್ಜನಾರಣ್ಯದಲ್ಲಿ ರೈಲ್ವೆ ನಿಲ್ದಾಣವನ್ನು ನಿರ್ಮಿಸಿದ ರೈಲ್ವೆ ಇಲಾಖೆಯವರನ್ನು,

ಜನರಿದ್ದೂ ನಿಲ್ದಾಣವನ್ನು ಜನವಿಹೀನವನ್ನಾಗಿಸಿದ ಆ ಹಳ್ಳಿಯನ್ನು—ಎಲ್ಲವನ್ನು ಶಪಿಸಿದ್ದ.

'ಥತ್, ಈ ಹಾಳು ರೈಲನ್ನ ಬೇಗಾದ್ರೂ ಬಿಡಬಾರ್ದೆ? ಯಾರಿಗೋಸ್ಕರ ಸುಮ್ಮನೆ ಕಾಯಿಸ್ತಾ ಇದಾರೋ?'

—ಎಂದು, ತಾನು ಬರುತ್ತಿದ್ದ ಹಾಗೇ ರೈಲನ್ನು ಓಡಿಸದ ಸ್ಟೇಷನ್ ಮಾಸ್ಟರನ್ನು ಮನಸ್ಸಿನಲ್ಲಿಯೇ ಹತ್ತಾರು ಬಾರಿ ಬೈದಿದ್ದ.

ಅವನು ನಿಲ್ದಾಣದಲ್ಲಿ ಕಾಲಿಟ್ಟಾಗ, ಆಗಾಗ ತನ್ನ ಮುಂದೆ ಓಡಾಡಿದ ಸ್ಟೇಷನ್‌ಮಾಸ್ಟರನ್ನು ಮಾತನಾಡಿಸಿ, ಆ ಮಾತುಕಥೆಯಲ್ಲಾದರೂ ಬೇಸರವನ್ನು ನೀಗಿಸಿಕೊಳ್ಳೋಣ ಎಂದು ಪ್ರಯತ್ನಿಸಿದ್ದ. ಆದರೆ ಅಪರಿಚಿತನಾದ ಸ್ಟೇಷನ್‌ಮಾಸ್ಟರನ್ನು ಏನು ಮಾತನಾಡಿಸುವುದು? ಒಂದೆರಡು ಸಲ ಅವರು ತನ್ನ ಕಣ್ಣಮುಂದೆ ಓಡಾಡಿದಾಗ, ಆತನೇ ತನ್ನನ್ನು ಏನಾದರೂ ಮಾತನಾಡಿಸಬಹುದು ಎಂದು ನಿರೀಕ್ಷಿಸಿದ ಮೂರ್ತಿ.

ಆದರೆ ಆತ ಸುಮ್ಮನೆ ಮೂರ್ತಿಯ ಮುಖ ನೋಡಿಕೊಂಡು ತನ್ನ ಕೆಲಸಕ್ಕೆ ಹೊರಟನಾಗಲಿ, 'ನೀನು ಯಾರು? ಎಲ್ಲಿಯವನು? ಯಾವ ಊರಿಗೆ ಹೋಗಬೇಕು?' ಎಂಬ ಕುರುಡು ಕುತೂಹಲದ ಪ್ರಶ್ನೆಗಳನ್ನು ಕೂಡ ಕೇಳಲಿಲ್ಲ. ಅಪರಿಚಯಸ್ಥರನ್ನು ಮಾತನಾಡಿಸಲೂ ಸಂಕೋಚಪಡುವ ಅತಿ-ಸಾಭ್ಯಸ್ತರ ಗುಂಪಿಗೆ ಸೇರಿದವನೇನೋ ಕೂತ ಎಂದುಕೊಂಡು ಕೊನೆಗೆ ಮೂರ್ತಿಯೇ ಮೇಲೆ ಬಿದ್ದು ಹೀಗಾದರೂ ಮಾತುಕಥೆ ಆರಂಭವಾಗಲಿ ಎಂದು—

"ರೈಲು ಇಲ್ಲಿಂದ ಎಷ್ಟು ಹೊತ್ತಿಗೆ ಹೊರಡುತ್ತೆ ಸಾರ್?"

—ಎಂದು ಕೇಳಿದಾಗ, ಆತ—

"ಎಂಟು ಹತ್ತಕ್ಕೆ"

—ಎಂದು 'ಟೆಲಿಗ್ರಾಫಿಕ್ ಭಾಷೆ' ಯಲ್ಲಿ ಉತ್ತರ ಕೊಟ್ಟು, ಅಷ್ಟು ಮಾತಾಡಿದುದೇ ಹೆಚ್ಚಾಯಿತೇನೋ ಎಂಬಂತೆ, ಮುಖ ತಿರುಗಿಸಿಕೊಂಡು ಹೊರಟುಹೋಗಿದ್ದ.

ಮತ್ತೊಮ್ಮೆ ಸಂಭಾಷಣೆಯನ್ನು ಆರಂಭಿಸಲು—

"ಈಗ ಟೈಂ ಎಷ್ಟು ಸಾರ್?"

—ಎಂದು ಪ್ರಶ್ನಿಸಿದಾಗ, ಆತ ಆ ಪ್ರಶ್ನೆಗೆ ಉತ್ತರ ಕೊಡದೆ, ಅದಕ್ಕೆ ಪ್ರತಿಯಾಗಿ, ಬುದ್ಧಿವಿಕಲರನ್ನು ನೋಡುವ ಬುದ್ಧಿವಂತನಂತೆ, ಮೂರ್ತಿಯ ಮುಖವನ್ನೂ, ಅವನ ಕೈಯೊಳಗಿನ ಗಡಿಯಾರವನ್ನೂ ದುರುದುರನೆ ನೋಡಿ—

" ಏಳು–ಇಪ್ಪತ್ತು "

—ಎಂದು ಗುಟುರು ಹಾಕುವ ಹಾಗೆ ಹೇಳಿ ತನ್ನ ದಾರಿ ಹಿಡಿದು ಹೋಗಿದ್ದ.

ಹೀಗೆ ಎರಡು ಮೂರು ಬಾರಿ ಸಂಭಾಷಣಾಪ್ರಯತ್ನ ವಿಫಲವಾದ ಬಳಿಕ—

" ಥತ್, ಇದ್ಯಾವುದೋ ಮಾತು ಬರದ ಮೂದೇವಿ, ಮಾತಾಡಿದರೆ ಮುತ್ತು ಉದುರಿಹೋಗುತ್ತೇನೋ ಅನ್ನೋ ಹಾಗೆ ಆಡ್ತಾನೆ. ಅದಕ್ಕೆಂತಲೇ ಕಾಣುತ್ತೆ ಅವನ್ನ ಇಂಥಾ ಜನ ಇಲ್ಲದ ಕೊಂಪೆಗೆ ತಂದು ಹಾಕಿದಾರೆ. ಈ ಸ್ಟೇಷನ್ಗೆ ತಕ್ಕ ಸ್ಟೇಷನ್‌ಮಾಸ್ಟರು ಇವರು."

—ಎಂದು ಹೊರಡದ ರೈಲನ್ನು, ಸಿರ್ಜನ ನಿಲ್ದಾಣವನ್ನು, ಬಸವನ ಹುಳುವಿನಂತೆ ತೆರಳುವ ಕಾಲವನ್ನು ಶಪಿಸಿ, ಬೇಸರವನ್ನು ನೀಗಿಸಲು ಒಂದು ಸಿಗರೇಟ್ ಹಚ್ಚಿ, ನಿಲ್ದಾಣದ ಅರೆಗತ್ತಲಿನಲ್ಲಿ ನಿಧಾನವಾಗಿ ಸೇದುತ್ತಾ ನಿಲ್ದಾಣದ ಅರೆಗತ್ತಲಿನಲ್ಲಿ ನಿಧಾನವಾಗಿ ಸೇದುತ್ತಾ ಕರಗುವ ಸಿಗರೇಟು ಹೊಗೆಯ ನೀಲಿಯ ಎಳೆಗಳನ್ನು ಅರೆಗಣ್ಣಿನಿಂದ ದಿಟ್ಟಿಸುತ್ತಾ, ನಿಲ್ದಾಣದ ಕಂಭಕ್ಕೆ ಮೈ ಒರಗಿಸಿದ.

*

# ೨

ಚಿಂತಿಸಲು ಯಾವ ನಿರ್ದಿಷ್ಟ ವಿಚಾರದ ಗುರಿಯೂ ಇಲ್ಲದ ಅವನ ಮನಸ್ಸು ಅಷ್ಟುಹೊತ್ತು ಅತ್ತಿತ್ತ ಸುಪ್ಪಳಿಸಿ, ಕೊನೆಗೆ ಕೆಲವೇ ಗಂಟೆಗಳ ಹಿಂದೆ ನೋಡಿದ ಜೋಗದ ಜಲಪಾತದ ರುದ್ರರಮಣೀಯತೆಯನ್ನು, ಆ ದರ್ಶನದಿಂದ ಅವನ ಚಿತ್ತಕಾಸಾರದಲ್ಲಿ ಮೂಡಿದ ಭಾವತರಂಗಗಳನ್ನು ಮತ್ತೆ ಮೆಲಕು ಹಾಕತೊಡಗಿತು.

ಜೋಗದ ಜಲಪಾತ!

ಆ ಹೆಸರೇ ನಿಸರ್ಗ ಸೌಂದರ್ಯದ ಪರಿಪೂರ್ಣಸ್ಥಿತಿಗೆ ಸಮಾನಾರ್ಥಕಪದವೆಂದು ಕೇಳಿ, ಎಷ್ಟೋ ದಿನದಿಂದ ಅದನ್ನೊಮ್ಮೆ ನೋಡಬೇಕೆಂದು ಮೂರ್ತಿ ಲೆಕ್ಕ ಹಾಕಿಕೊಂಡಿದ್ದ.

ಅದನ್ನು ಕಾಣುವ ಮೊದಲೇ, ನಾಲ್ಕು ಧಾರೆಗಳಾಗಿ ಸೀಳಿ, ಕೆಳಗಿನ ಶಿಲಾಮಯ ಪಾತಾಳಕ್ಕೆ ಧುಮ್ಮಿಕ್ಕುವ ಶರಾವತಿಯ ಜಲಧಾರೆಯ ಘೋರ ಗಂಭೀರ ಘೋಷ ಅವನ ಕಿವಿಗಳಲ್ಲಿ ಮಿಡಿದು, ಅವನಲ್ಲಿ ದರ್ಶನಾಕಾಂಕ್ಷೆಯನ್ನು ಮೂಡಿಸಿತ್ತು. ಆ ಜಲಪಾತವನ್ನು ಕಂಡು ಬಂದವರೆಲ್ಲಾ ಕಂಡು ಬಂದದ್ದು ಅದೇ ಜಲಪಾತವನ್ನಾದರೂ, ಒಬ್ಬೊಬ್ಬರೂ ಅದನ್ನು ಒಂದೊಂದು ಬಗೆಯಾಗಿ ಹಾಡಿ ಹೊಗಳಿದ್ದರು. ಅದನ್ನು ಕಾಣದೆ ಬರೀ ಅದರ ಕೀರ್ತಿಗೀತೆಯನ್ನು ಮಾತ್ರ ಕೇಳಿದ ಮೂರ್ತಿ ಎಷ್ಟೋ ಬಾರಿ 'ಇಷ್ಟು ಹೊಗಳಿಕೆಗೆ ಪಾತ್ರವಾದ ವಸ್ತು, ನಿಜವಾಗಿಯೂ ಅಷ್ಟು ಚೆನ್ನಾಗಿಲ್ಲದೆ, ಏನೇನೋ ಕಲ್ಪನಾಚಿತ್ರಗಳನ್ನು ಮನಸ್ಸಿನ ತುಂಬಮೂಡಿಸಿಕೊಂಡು ಅತಿ ಕುತೂಹಲದಿಂದ ನೋಡಹೋದಾಗ, ನಿರಾಶೆಯನ್ನೇ ಮೂಡಿಸಬಹುದು' ಎಂದು ಅಂದುಕೊಂಡಿದ್ದ. ಜೀವನದಲ್ಲಿ ಅಂಥಾ ಅನುಭವವೂ ಅವನಿಗೆ ಅನೇಕ ಬಾರಿ ಆಗಿತ್ತು. ಬಹಳ ಜನ ಚೆನ್ನಾಗಿದೆ ಎಂದು ಹೇಳಿದ ಪುಸ್ತಕವನ್ನು ಓದಿದಾಗ, ಬಹು ಚೆಲುವೆ ಎಂದ ಹೆಣ್ಣನ್ನು ನೋಡಿದಾಗ, ಅತಿ ಸುಂದರ ಎಂದ ಚಿತ್ರವನ್ನು ನೋಡಿದಾಗ, ಆ ವಸ್ತುವಿಗಿಂತಲೂ ಅದರ ಹೊಗಳಿಕೆಯೇ ಚೆನ್ನಾಗಿತ್ತು ಎನಿಸಿತ್ತು. ಅಂಥ ಅನುಭವವಾದಾಗ

ಲೆಲ್ಲಾ ಅವನಿಗೆ ಪರ್ಶಿಯದ ಮಹಾಕವಿ ಸಾದಿ ತನ್ನ ' ಗುಲಿಸ್ತಾನ್ ' ನಲ್ಲಿ ಬರೆದ ಕಥೆಯೊಂದು ನೆನಪಾಗಿತ್ತು.

ತನ್ನ ರಾಜ್ಯದಲ್ಲಿ ಅತಿ ಸುಂದರ, ಅತಿ ಬುದ್ಧಿವಂತ ಎಂದು ಹೆಸರಾದ ಮಜನೂ ಎಂಬ ತರುಣ, ಲೈಲಾ ಎಂಬ ತರುಣಿಯ ಸೌಂದರ್ಯಕ್ಕೆ ಮರುಳಾಗಿ ಆಕೆಗಾಗಿ ಹುಚ್ಚು ಹಿಡಿದು ಅಲೆಯುತ್ತಿದ್ದಾನೆ ಎಂಬುದನ್ನು ಕೇಳಿದಾಗ, ಆ ದೇಶದ ದೊರೆ ಆಶ್ಚರ್ಯಚಕಿತನಾಗಿ, ' ಮಜನೂನ ಕಣ್ಣನ್ನು ಇಷ್ಟು ಬಲವಾಗಿ ಕೊರೈಸಿದ ಹೆಣ್ಣು ಎಂಥ ಅಪರೂಪ ಲಾವಣ್ಯವತಿ ಇರಬೇಕು. ಆಕೆಯನ್ನೊಮ್ಮೆ ನೋಡಬೇಕು ' ಎಂದುಕೊಂಡು ಬಹು ಪ್ರಯತ್ನಪಟ್ಟು ಒಮ್ಮೆ ಲೈಲಾಳನ್ನು ನೋಡುವ ಭಾಗ್ಯ ಪಡೆದ. ಆಕೆಯನ್ನು ನೋಡಿದಾಗ ಆ ದೊರೆ ಆಕೆಯ ಸೌಂದರ್ಯದ ಬಗ್ಗೆ ಕಟ್ಟಿಕೊಂಡ ಕನಸುಗಳೆಲ್ಲವೂ ಸುಳ್ಳಾಗಿ ಅವನಿಗೆ ಅರಿವಾಯಿತು : ' ಲೈಲಾ ಅಂಥ ಅಪೂರ್ವ ಲಾವಣ್ಯವತಿಯಾದ ಅಪ್ಸರೆಯೇನಲ್ಲ ; ಬೇಕೆಂಪರೆ ತನ್ನ ರಾಜ್ಯದಲ್ಲೇ ಅವಳಿಗಿಂತ ಹೆಚ್ಚು ಸುಂದರಿಯರಾದವರು ಹತ್ತಾರು ಜನ ಸಿಗಬಹುದು ' ಎಂದು. ಆಗ ಆ ದೊರೆ ಮಜನೂನ ಬುದ್ಧಿಗೇಡಿತನಕ್ಕೆ ಮರುಗಿ, ಅವನನ್ನು ತನ್ನ ಬಳಿಗೆ ಕರೆಸಿಕೊಂಡು ' ಅಯ್ಯೋ ಮೂರ್ಖ, ಆ ಸಾಮಾನ್ಯ ಹೆಂಗಸಿಗೆ ನೀನು ಇಷ್ಟು ಮರುಳಾಗಿ ಹುಚ್ಚನಂತೆ ಅಲೆಯುವುದೇ ? ಬೇರೆ ಯಾವ ಹೆಣ್ಣಿನಲ್ಲೂ ಇರದಂಥಾ ಸೌಂದರ್ಯವನ್ನು ಅವಳಲ್ಲಿ ಏನು ಕಂಡೆ ? ' ಎಂದು ಕೇಳಿದನಂತೆ. ಆಗ ಮಜನೂ ಹೇಳಿದನಂತೆ ' ನಿನ್ನ ಕಣ್ಣಿಗೆ ಅವಳ ರೂಪಕಾಂತಿ ಕಾಣದೆ ಹೋಗಿರಬಹುದು. ಆದರೆ ಮಜನೂನ ಕಣ್ಣಿನಿಂದ ನೋಡು, ಕಾಣಿಸುತ್ತದೆ ' ಎಂದನಂತೆ.

ಸಾದಿ ಬರೆದ ಈ ಕಥೆಯನ್ನು ಓದಿದ ಮೂರ್ತಿ ' ಜೋಗದ ಜಲಪಾತದ ಸೌಂದರ್ಯವೂ, ಮೋಹಾವಿಷ್ಟವಾದ ಕಣ್ಣುಗಳಿಗೆ ಮಾತ್ರ ಅಪೂರ್ವವೆಂದು ಕಾಣಿಸಿರುವ ಲೈಲಾಳ ಸೌಂದರ್ಯದಂಥ ವಸ್ತುವೇ ಇರಬೇಕು. ಅಂಥ ಭ್ರಮೆ ಯಾವುದೂ ಇಲ್ಲದ ಕಣ್ಣುಗಳಿಗೆ ಅದರಲ್ಲಿ ವಿಶೇಷವೇನೂ ಕಾಣದೆ ಹೋಗಬಹುದು. ಅಷ್ಟಲ್ಲದೆ, ಗುಡ್ಡದ ತುದಿಯಿಂದ ಕೆಳಗೆ ಬೀಳುವ ನೀರಿನಲ್ಲಿ ಅಂಥ ಸೌಂದರ್ಯವೇನು ಇದ್ದೀತು ' ಎಂದುಕೊಂಡೇ ಜೋಗವನ್ನು ನೋಡಲು ಹೋಗಿದ್ದ.

ಆದರೆ ಅದನ್ನು ಕಂಡ ಬಳಿಕ ಅವನಿಗೆ ಅನಿಸಿತ್ತು—

ಅದರ ಸೌಂದರ್ಯವನ್ನು ಬಣ್ಣಿಸಿ ಹಾಡಿದವರ ಮಾತು ಅತಿಶಯೋಕ್ತಿ ತುಂಬಿದ ಕಗ್ಗವಲ್ಲ. ಅವರಿಗೆ ಆ ಸೌಂದರ್ಯವನ್ನು ಸಂಪೂರ್ಣವಾಗಿ ವರ್ಣಿಸಲು ಶಬ್ದಗಳೇ ಸಾಲದೆ, ತಿಳಿದಷ್ಟನ್ನೇ ಹೇಳಿದ ಅಲ್ಪೋಕ್ತಿ ಎಂದು.

ವರ್ಣನೆಗೆ ಮೀರಿದ ಸೌಂದರ್ಯ ಶರಾವತಿಯ ಜಲಪಾತದ್ದು.

ಆ ಜಲಪಾತ ಇನ್ನು ಅಷ್ಟು ದೂರ ಇದೆ ಎನ್ನುವಾಗಲೇ, ಸುತ್ತ ಹಬ್ಬಿದ ಭೀಮ ವನರಾಜಿಯ ಗಂಭೀರ ಮೌನವನ್ನು ಭೇದಿಸಿ ಕೇಳಿಬಂದ ಜಲಪಾತದ ಘೋಷವೇ, ಯಾವುದೋ ದಿವ್ಯ ನರ್ತನಾರಂಭದ ಮೊದಲ ಸಹಸ್ರ ಮೃದಂಗತಾಡನದಂತೆ ಕೇಳಿಬಂದು ಮೂರ್ತಿಯ ಚಿತ್ತದಲ್ಲಿದ್ದ ಎಲ್ಲ ಯೋಚನೆ, ವಿಚಾರಗಳನ್ನು ಮುಳುಗಿಸಿ, ಅವನ ಮನದಲ್ಲಿ ಭವ್ಯ ನಿರೀಕ್ಷೆಯೊಂದನ್ನೇ ಮೂಡಿಸಿ, ಬಸ್ಸಿನಲ್ಲಿ ಕುಳಿತ ಮೂರ್ತಿಗೆ, ಬಸ್ಸಿನಲ್ಲಿದ್ದ ಸಾಮಾನುಗಳನ್ನು ಕೆಳಗಿಳಿಸಿಕೊಳ್ಳಬೇಕೆಂಬುದನ್ನೂ ಮರೆಯಿಸಿ, ಆ ಮಹಾಘೋಷ ಕೇಳಿಬಂದತ್ತ ಓಡುವಂತೆ ಮಾಡಿತ್ತು.

ಉಳಿದೆಲ್ಲ ಯೋಚನೆಗಳನ್ನೂ ಮರೆತು, ಮೂರ್ತಿ, ಜಲಪಾತದ ಬಳಿ ಓಡಿ, ಪ್ರವಾಸಿ ಮಂದಿರದ ಕೈಸಾಲೆಯ ಮುಂದಿನ ಕೈಪಿಡಿಗೆ ಜೋತುಬಿದ್ದು, ಕಣ್ಣೆದುರಿಗೆ ಹಬ್ಬಿದ ಮಹಾಜಲಪಾತವನ್ನು ನೋಡಿದ.

ನೋಡಿದ—

ನೋಡುತ್ತಿದ್ದ ಹಾಗೇ ಒಂದು ಗಳಿಗೆ ಅವನ ಬುದ್ಧಿ ಸ್ತಂಭಿತವಾಗಿ ಹೋಯಿತು.

ಸುಂದರ ಎನಿಸಿಕೊಂಡ ಎಷ್ಟೋ ವಸ್ತುಗಳನ್ನು ಮೂರ್ತಿ ನೋಡಿದ್ದ. ಅವುಗಳನ್ನು ನೋಡಿ ಮಾರುಹೋದಾಗ, ಅವನ ಮನಸ್ಸಿನಲ್ಲಿ ಮೆಚ್ಚಿಕೆಯ ನೂರಾರು ಭಾವನೆಗಳ ತೆರೆ ಹೊಯ್ದು, ಅವನ ಚಿತ್ತ ಅಲ್ಲಕಲ್ಲೋಲವಾಗಿತ್ತು. ಏನೋ ಒಂದು ಬಗೆಯ ಉದ್ವಿಗ್ನತೆ ಅವನ ಬುದ್ಧಿಯನ್ನು ತುಂಬಿತ್ತು. ಹತ್ತಾರು ಚಿಟ್ಟೆಗಳನ್ನು ಕಂಡ ಮಗುವಿನ ಮನಸ್ಸಿನಂತಾಗಿತ್ತು.

ಆದರೆ ಶರಾವತಿ ಮೂಡಿಸಿದ ಪರಿಣಾಮವೇ ಬೇರೆ—

ಶರಾವತಿಯ ನಿರ್ಘೋಷವನ್ನು ಕೇಳಿದಾಗ ಅವನ ಹೃದಯದಲ್ಲೇನೇನೋ ನೂರೆಂಟು ಭಾವನೆಗಳು ಹರಿದಿದ್ದವು.

ನೋಡಿದಾಗ—

ಆ ಎಲ್ಲ ಭಾವನೆಗಳೂ, ಉದ್ವೇಗಗಳೂ ತಟಕ್ಕನೆ ಅಡಗಿಹೋಗಿ ಅವನ ಹೃದಯ ನಿಸ್ತರಂಗ ಕಾಸಾರದಂತಾಗಿತ್ತು. ಅಪಾರವೇಗದಿಂದ ಉರುಳುತ್ತಿದ್ದರೂ, ಬಹು ನಿಧಾನವಾಗಿ ಜಾರುತ್ತಿರುವಂತೆ ಕಾಣುವ ಹಿಂಜಿದ ಹತ್ತಿಯ ಉಂಡೆಗಳಂತೆ, ಅರ್ಧಬರ್ಧ ಹೆಪ್ಪುಗಟ್ಟಿದ ಹೊಗೆ ಇಬ್ಬನಿಯಂತಿರುವ ಜಲರಾಶಿಯನ್ನು ನೋಡಿದ ಮೂರ್ತಿ, ಪವಾಡದರ್ಶನದಿಂದ ಸಮ್ಮೂಢ ಚಿತ್ರನಾದವನಂತೆ, ಸುಮ್ಮನೆ ನೋಡುತ್ತಾ ನಿಂತ.

ನೋಡ ನೋಡುತ್ತಾ—

ಮಾನವನ ಹೃದಯದಲ್ಲಿಯ ಸುಪ್ತದಿವ್ಯತೆಯನ್ನು ಪ್ರಚೋದಿಸುವ ಮಂತ್ರಘೋಷದಂತೆ, ಜಲಪಾತದ ಘೋಷ ಮೂರ್ತಿಯ ಹೃದಯದಲ್ಲಿ ಗಂಭೀರ ವಿಚಾರತರಂಗಗಳನ್ನು ಮೂಡಿಸಿತು.

ಅಗ್ರದಲ್ಲಿ ಶಾಂತವಾದ ಹೊಳೆ, ಕೊನೆಗೆ ಹರಿಯುವುದೂ ಶಾಂತವಾದ ಹೊಳೆ—ಕೂಗಾಟ, ನೆಗೆದಾಟ, ನಲಿದಾಟ ಎಲ್ಲವೂ ನಡುವೆ ನಾಲ್ಕು ಸೀಳಾಗಿ ಧುಮ್ಮಿಕ್ಕುವಾಗ ಮಾತ್ರ.

ಒಂದೇ ಹೊಳೆಯ ನೀರು. ಬಣ್ಣ, ರುಚಿ ಗುಣ ಯಾವುದರಲ್ಲೂ ವ್ಯತ್ಯಾಸವಿಲ್ಲ—ಒಂದಾಗಿ ಹರಿಯುವಾಗ. ಆದರೆ ಕವಲು ಒಡೆದಾಗ ಒಂದೊಂದರದೂ ಒಂದೊಂದು ರೀತಿ. ಒಂದು ಪತನದಲ್ಲೂ ತನ್ನ ಗಾಂಭೀರ್ಯವನ್ನು ಕಳೆದುಕೊಳ್ಳದೆ ಜಾರುತ್ತಿದ್ದರೆ, ಮತ್ತೊಂದು ಬಯಲು ನಾಟಕದ ಖಳನಂತೆ ಕುಪ್ಪಳಿಸಿ, ಕುಣಿದು ಕಿರುಚಾಡುತ್ತದೆ; ಒಂದು ನರ್ತಿಸುತ್ತಾ ತೊನೆಯುತ್ತಾ ನಡೆದರೆ ಮತ್ತೊಂದು ಮೃತ್ಯುದರ್ಶನವಾದ ಹೇಡಿಯಂತೆ ಹುಯ್ಯಲಿಡುತ್ತದೆ.

ಆದರೆ ಕೊನೆಯಲ್ಲಿ, ಎಲ್ಲವೂ ಕಲೆತು, ತಮ್ಮ ನಡುಗಾಲದ ಗುಣಗಳನ್ನು ಕಳೆದುಕೊಂಡು ಒಂದಾಗಿ, ಯಾವುದೋ ಗುರಿಯತ್ತ ಹರಿಯುತ್ತವೆ.

ರಾಜಾ, ರೋರರ್, ರಾಕೆಟ್, ಲೇಡಿ—

ಆ ನಾಲ್ಕು ಸೀಳನ್ನು ನೋಡಿದಾಗ, ನೋಡನೋಡುತ್ತಾ ಮೂರ್ತಿಗೆ ವಿಶ್ವರಹಸ್ಯವೇ ತನ್ನ ಕಣ್ಣೆದುರು ಬಯಲಾದಂತೆ ಕಂಡಿತು.

ಮಾನವ ಲೋಕವೇ ಆ ಜಲಪಾತದಂತೆ—

ಹುಟ್ಟು ಎಲ್ಲರದೂ ಒಂದೆ; ಯಾರ ಹುಟ್ಟಿನಲ್ಲೂ ವ್ಯತ್ಯಾಸವಿಲ್ಲ. ಎಲ್ಲ ಬಾಳಿನ ಕೊನೆಯೂ ಒಂದೆ; ಅದರಲ್ಲಾವ ಭಿನ್ನತೆಯೂ ಇಲ್ಲ. ಆದರೆ ಹುಟ್ಟು ಸಾವುಗಳ ನಡುವಣ ಬಾಳು ಮಾತ್ರ ಒಬ್ಬೊಬ್ಬರದೂ ಒಂದೊಂದು ರೀತಿ; ಒಂದೂ ಇನ್ನೊಂದರ ಹಾಗಿಲ್ಲ.

ಈ ಭಾವನೆ ಮೂರ್ತಿಯ ಮನದಲ್ಲಿ ಮೂಡಿದಾಗ, ಮನುಕುಲಕ್ಕೆ ಈ ಚಿರಂತನ ಸತ್ಯವನ್ನು ಬೋಧಿಸುವ ಸಲುವಾಗಿಯೇ, ನಿಸರ್ಗಮಾತೆ ಈ ಮಹಾಜಲಪಾತ ಗುರುವನ್ನು ಸೃಷ್ಟಿಸಿರುವಳೇನೋ ಎಂದು ತೋರಿತು. ಯಾವುದೋ ದಿವ್ಯತೆಯ ದರ್ಶನವಾದಂತೆ ಅವನ ಮೈ ಪುಲಿಕಿತವಾಗಿ, ದೈವೀ ರಹಸ್ಯ ಅರಿವಾದ ಉಪನಿಷತ್ತಿನ ಮಹಾಋಷಿಯಂತೆ 'ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾಃ ಆಯೇ ಧಾಮಾನಿ ದಿವ್ಯಾನಿ ತಸ್ಥುಃ' ಎಂದು ಕೂಗಿ ಸಾರಬೇಕು ಎಂಬಷ್ಟು ಉತ್ಸಾಹ ಮೂಡಿತು.

ಆ ಜಲಪಾತವನ್ನು ನೋಡುವ ಮೊದಲು ಮೂರ್ತಿ, ಎಂದೂ ಆ ಬಗೆಯ ಭಾವನೆಗಳಿಗೆ ವಶನಾಗಿರಲಿಲ್ಲ. ಕೇವಲ ವಾಚನ ಕುತೂಹಲ ದಿಂದ ಕಾದಂಬರಿಗಳನ್ನು ಓದಿದಂತೆಯೇ ಭಾರತೀಯ ತತ್ವ ಶಾಸ್ತ್ರದ ಗ್ರಂಥ ಗಳನ್ನೂ ಓದಿದ್ದ. ಆದರೆ ಕಾದಂಬರಿಗೆ ಕೊಟ್ಟಷ್ಟು ಬೆಲೆಯನ್ನೂ ತತ್ವ ಶಾಸ್ತ್ರಕ್ಕೆ ಕೊಟ್ಟಿರಲಿಲ್ಲ. ಅಷ್ಟೇಕೆ 'ತತ್ವಶಾಸ್ತ್ರ ಮುಪ್ಪಿನ ಕಾಲದ ಊರಗೋಲೇ ಹೊರತು, ಯೌವ್ವನಕ್ಕೆ ಬೇಕಾದುದಲ್ಲ: ಯೌವ್ವನದಲ್ಲಿದು ಬೋಧಿಸುವುದೂ ಇಲ್ಲ' ಎಂದೇ ಮೂಗು ಮುರಿದಿದ್ದ.

ಆದರೆ ಇಂದು, ಎಂದೊ ಏನೋ ಓದಿದ ತತ್ವದ ಮಾತು ಅವನಿಗೆ ಸಾಕ್ಷಾತ್ ಜೀವನದರ್ಶನದಂತೆ ಕಂಡು, ಅವನಿಗರಿವಾಗದಂತೆಲೇ ಅವನ ಮೈ ಪುಲಕಿತವಾಗಿತ್ತು. ಆ ರೋಮಾಂಚದಲ್ಲಿ ಅವನ ಮೈಯ ಎತ್ತರ ಏಕೋ ಹೆಚ್ಚಿದಂತೆ ತೋರಿ, ಜಗತ್ತಿನ ಸಾಮಾನ್ಯ ಜನತೆಗಿಂತ ತಾನು ಅಷ್ಟು ಹೆಚ್ಚು ಎತ್ತರ ಎನಿಸಿತ್ತು.

ಆ ನೂತನವಾದ ಅನಿಸುವಿಕೆಯಲ್ಲಿ ಜಲಪಾತವನ್ನು ನೋಡುತ್ತಾ ಕುಳಿತಿದ್ದಾಗ ಮೂರ್ತಿಯ ಕಣ್ಣಿಗೆ ಜಲಪಾತದ ಅಡಿಯಲ್ಲಿ ನಿಂತ ಲಿಂಗಾ ಕಾರದ ಕಪ್ಪು ಶಿಲಾಖಂಡವೊಂದು ಕಾಣಿಸಿತು.

ಆ ಶಿಲೆಯ ಮೇಲೆ, ಮೇಲಿನಿಂದ ನೀರು ಮೊರೆಮೊರೆದು ಧುಮ್ಮಿಕ್ಕು

ತ್ತಿತ್ತು. ಕೆಳಕ್ಕೆ ಬಿದ್ದ ನೀರು ಮೊರೆಯುತ್ತಾ, ಕುದಿಯುತ್ತಾ, ನೊರೆ ಗಾರುತ್ತಾ, ಆ ಕಲ್ಲಿನ ಸುತ್ತಲೂ ಸುಳಿ ಸುತ್ತಿ ಸಾಗುತ್ತಿತ್ತು. ಆದರೆ ಆ ಕಲ್ಲು ಮಾತ್ರ ಅಚಲವಾಗಿತ್ತು. ಮೇಲಿನಿಂದ ಬೀಳುವ ನೀರಾಗಲಿ, ಸುತ್ತ ಸುತ್ತುವ ನೀರಾಗಲಿ, ಆ ಶಿಲೆಯ ಮೇಲೆ ಏನೊಂದೂ ಪರಿಣಾಮ ಮಾಡದೆ, ಜಗತ್ತಿನ ರಾಗ ಭಾವಗಳಿಗೆ, ಉದ್ವೇಗ ಆಕ್ರೋಶಗಳಿಗೆ ವಶ ನಾಗದೆ, ಧೀರಚಿತ್ತನಾಗಿ ನಿಂತ ವೇದಾಂತಿಯಂತೇ ತೋರಿತು ಆ ಕಲ್ಲು ಬಂಡೆ. ಅದನ್ನು ನೋಡಿ ಮೂರ್ತಿಗೆ ಅನ್ನಿಸಿತು—

ಈ ಜೀವನದಲ್ಲಿ ತಾನೂ ಹಾಗೆ ಇರಬೇಕು.

ಹಾಗೇ ಇರಬೇಕು. ಇಲ್ಲವಾದರೆ—

ನೀರಿನಂತೆ ಆ ಬಂಡೆಯೂ ಕುಣಿದು ಕುಪ್ಪಳಿಸಲೆತ್ನಿಸಿದರೆ, ಆ ಮಹಾ ಪ್ರವಾಹದಲ್ಲಿ ಅದು ಒಂದು ಗಳಿಗೆಯೂ ಉಳಿಯಲಾರದು.

ಸುತ್ತಲ ಜಗತ್ತಿನ ರಾಗದ್ವೇಷಗಳ ವಿಕಾರಕ್ಕೆ ಮನಸ್ಸನ್ನು ಮಾಡಿದ ಮನುಷ್ಯನೂ ಅಷ್ಟೆ: ಅವನ್ನು ಮೀರಿ ನಿಂತರೆ ಉಳಿವು, ಇಲ್ಲವಾದರೆ ಅಳಿವು.

ನಿಜ, ಜಗತ್ತಿನಲ್ಲಿ ಉಳಿಯಬೇಕೆಂದರೆ, ಸುತ್ತಲ ಸುಳಿಗೆ ಸೋಲದ ಆ ಶಿಲಾಖಂಡದಂತೆ ಇರಬೇಕು.

ಎಲ್ಲದರ ಆರಂಭ, ಅಂತ್ಯಗಳೂ ಒಂದೇ ಎಂದು ಅರಿವಾದ ಮೇಲೆ, ನಡುಗಾಲದ ಕ್ಷಣಿಕ ವಿಭಿನ್ನತೆಗೆ ವಶನಾಗಿ ಚಂಚಲನಾಗಬೇಕೇಕೆ? ಅದರಿಂದ ಏನು ಸಾರ್ಥಕ? ಬೀಳುವ ನೀರಿನೊಂದಿಗೆ ಸಿಡಿದ ನೂರು ಹನಿಗಳು ಬದುಕುತ್ತವೆಯೇ? ಊಹೂ—ಉಳಿಯುವುದು ಯಾವುದಕ್ಕೂ ಅಳುಕದ ಶಿಲೆಯೊಂದೆ.

ಈ ಮಾತು ಅನಿಸಿ, ಮೂರ್ತಿಗೆ ಏಕೋ ಹಿಂದಾರೂ ಕಾಣದ ಮಹಾ ಸತ್ಯವೊಂದು ಮನವರಿಕೆಯಾದಂತಾಗಿ, ಅಂದು ಕಂಡ ಸತ್ಯದ ಜಾಡಿನಲ್ಲಿ ನಡೆಯುತ್ತಾ, ಅವಿಚಲಿತಚಿತ್ತನಾಗಿ ಬಾಳಬೇಕು ಎಂದುಕೊಂಡ. ಹಾಗೆ ಅಂದುಕೊಂಡಷ್ಟಕ್ಕೇ ಅವನಿಗೆ, ಜೀವನದಲ್ಲಿ ತಾನೇನೋ ಬಹು ಹಿರಿದಾದು ದನ್ನು ಸಾಧಿಸಿದಷ್ಟು ಹೆಮ್ಮೆಯಾಗಿ, ಕೈಸಾಲೆಯಲ್ಲಿದ್ದ ಬೆತ್ತದ ಕುರ್ಚಿಗೆ

ಬೆನ್ನು ಚಾಚಿ, ಸಿಗರೇಟು ಹೊತ್ತಿಸಿ, ತೃಪ್ತಿಯ ಹೊಗೆಯೂದುತ್ತಾ ಕುಳಿತಿದ್ದ—

ಕುರ್ಚಿಯ ಮೇಲೆ ಕುಳಿತ ತಾನು, ಜಲಪಾತದಡಿಯಲ್ಲಿ ಕುಳಿತ ಶಿಲಾಖಂಡವೇ ಎಂಬಂತೆ.

ನೀರು ಜಾರುತ್ತಿತ್ತು ; ಜಾರುವ ನೀರು ಮೊರೆಯುತ್ತಿತ್ತು.

ಮೂರ್ತಿ ಕುಳಿತಿದ್ದ – ನಿರ್ಲಿಪ್ತ ವಿರಾಗಿಯಂತೆ.

* * * *

ಅವನು ಕೈಸಾಲೆಗೆ ಬಂದಾಗ, ಕೈಸಾಲೆಯಲ್ಲಿಯ ಕೋಣೆಗಳ ಬಾಗಿಲುಗಳಿಗೆ ದಪ್ಪವಾದ ತೆರೆಯನ್ನು ಹಾಕಿತ್ತು. ಅಷ್ಟು ದೂರದಿಂದಲೇ ಜಲಪಾತದ ಸದ್ದನ್ನು ಕೇಳಿ, ಅದನ್ನು ನೋಡುವ ಉತ್ಸಾಹದಿಂದ ಓಡಿಬಂದು ನೋಡುವುದರಲ್ಲೇ ತಲ್ಲೀನನಾದ ಮೂರ್ತಿಗೆ, ಆ ಕೋಣೆಗಳಲ್ಲಿ ಬೇರೆ ಯಾರಾದರೂ ಪ್ರವಾಸಿಗರು ಇರಬಹುದು ಎಂಬ ಅರಿವೂ ಇರಲಿಲ್ಲ. ಅದನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವೂ ಇರಲಿಲ್ಲ. ಆ ಜಗತ್ತಿನಲ್ಲೆಲ್ಲಾ ತಾನೊಬ್ಬನೇ ಒಬ್ಬ, ತನ್ನೊಬ್ಬನಿಗೆ ಮಾತ್ರ ಪ್ರಕೃತಿ ತನ್ನ ರಹಸ್ಯಗಳನ್ನು ದರ್ಶನ ಮಾಡಿಸುತ್ತಿದ್ದಾಳೆ ಎಂಬಂತೆ ಸುತ್ತಲ ಜಗತ್ತನ್ನು ಮರೆತು ಕುಳಿತಿದ್ದ.

ಹಾಗೆ ಕುಳಿತಿದ್ದಾಗ, ಇದ್ದಕ್ಕಿದ್ದ ಹಾಗೇ ಅವನ ಹಿಂದೆ ಹೆಣ್ಣಿನ ಕೈಬಳೆಗಳ ಸಪ್ಪಳಾಗಿ, ಬುದ್ಧಿಗಿಂತ ಮುಂಚಿತವಾಗಿ ವಯಸ್ಸು ಎಚ್ಚರವಾಗಿ ಮೂರ್ತಿ ಚಕ್ಕನೆ ತಲೆಯನ್ನು ತಿರುಗಿಸಿ, ಸದ್ದು ಬಂದ ಕಡೆ ನೋಡಿದ.

ಏಕೋ ಹಾಗೆ ನೋಡಿದ ಕಣ್ಣುಗಳನ್ನು ಬೇರೆ ಕಡೆ ತಿರುಗಿಸುವುದು ಅವನಿಗೆ ಅಸಾಧ್ಯವಾಯಿತು.

'ಓ! ಎಂಥ ಚೆಲುವೆ!'

—ಮೂರ್ತಿಗೆ ಅರಿವಿಲ್ಲದಂತೆಯೇ ಅವನ ಮನಸ್ಸು ನುಡಿಯಿತು.

ನಿಜ. ಆ ಹೆಣ್ಣು ಚೆಲುವೆ—

ಯಾರೋ ಬೊಂಬಾಯಿ ಕಡೆಯ ಹೆಣ್ಣಿರಬೇಕು. ಅಥವಾ ಬೊಂಬಾಯಿನ ಗಾಳಿಯಲ್ಲಿ ಬೆಳೆದ ಮಂಗಳೂರು ಕಡೆಯ ಹೆಂಗಸಿದ್ದರೂ ಇರಬಹುದು. ಇಲ್ಲವಾದರೆ ಬೇರೆ ಯಾರಿಗುಂಟು ಆ ಸೊಬಗು ಸೂಸುವ,

ಗುಲಾಬಿಯ ವರ್ಣದ ಅಂಗಕಾಂತಿ. ಮೈಬಣ್ಣ ಎಂಥ ಮನಸ್ಸನ್ನೂ ಮೋಹಿಸಿದರೆ, ಆ ಮೈಯ ಒಂದೊಂದೂ ಅವಯವದ ಸೌಂದರ್ಯ, ಕಂಡ ಕಣ್ಣನ್ನು ಅಲ್ಲೇ ಸೆರೆ ಹಿಡಿದು ನಿಲ್ಲಿಸುವಂಥದು. ಬಹು ತೆಳುವಾದ ತೆಳು ಹಸಿರು ಬಣ್ಣದ ರೇಶಿಮೆಯ ಕುಬುಸವನ್ನು ತೊಟ್ಟಿದನ್ನೂ ವಿಫಲಗೊಳಿಸುವ ಆಕೆಯ ವಕ್ಷಸೌಭಾಗ್ಯ, ಅಷ್ಟು ದೂರಕ್ಕೂ ತಮ್ಮ ಮೃದುತೆ, ನಯಗಳನ್ನು ಅನುಭವಮಾಡಿಸುವ ದುಂಡು ತೋಳುಗಳು, ಚಿತ್ತದಲ್ಲಿ ಬಯಕೆಯ ಉರಿ ಹೊತ್ತಿಸುವ ಕೆಂಪು ತುಂಬು ತುಟಿಗಳು, ಉದ್ವೇಗವನ್ನು ಉದ್ರೇಕಿಸುವ ನೀಲ ನಯನಗಳು, ಚಂಚಲವಾದ ಆ ಕಣ್ಣ ಬೆಳಕಿನೊಂದಿಗೆ ಆಟವಾಡುವ ಕಪ್ಪು ಮುಂಗುರುಳ ಸುರುಳಿಗಳು—

ಆ ರೂಪು, ಆ ರೂಪಿಗೆ ಮೆರುಗಿಟ್ಟ ಪ್ರಾಯ, ಆ ಪ್ರಾಯಕ್ಕೆ ಪರಿಮಳವಿತ್ತ ಉಡಿಗೆತೊಡಿಗೆಯ ವೈಖರಿ—

ಅದನ್ನು ನೋಡನೋಡುತ್ತಾ, ಏಕೋ ಸರಾಗವಾಗಿ ಆಡುತ್ತಿದ್ದ ಉಸಿರನ್ನು ಬಿಗಿಹಿಡಿದಂತಾಯಿತು ಮೂರ್ತಿಗೆ, ನರಗಳಲ್ಲಿ ಸಿಧಾನವಾಗಿ ಹರಿಯುತ್ತಿದ್ದ ರಕ್ತ, ಇದ್ದಕ್ಕಿದ್ದ ಹಾಗೇ ಭೋರ್ಗರೆವ ಪ್ರವಾಹವಾಗಿ ತನ್ನ ಮೈಯ ನರಗಳು ಸಿಡಿದೊಡೆಯುವವೋ ಏನೋ ಅನಿಸಿತು ಮೂರ್ತಿಗೆ.

ಹಾಗೆ ನೋಡುತ್ತಿದ್ದ.

ಕೊಠಡಿಯಿಂದ ಕೈಸಾಲೆಗೆ ಬರಲೆಂದು ಬಂದ ಹೆಣ್ಣು, ಕೈಸಾಲೆಯಲ್ಲಿ ಕುಳಿತ ಅಪರಿಚಿತನಾದ ಮೂರ್ತಿಯನ್ನು ಕಂಡು ಹಾಗೇ ತಡೆದು ನಿಂತಳು.

ಹಾಗೆ ನಿಂತ ಆಕೆಯ ಹಿಂದಿನಿಂದ ಬಂದ ಯಾರೋ ಒಬ್ಬಾತ, ಆಕೆ ಬಾಗಿಲಿಗೆ ನಿಂತಿದ್ದುದರಿಂದ ಕೈಸಾಲೆಯಲ್ಲಿ ಪರಕೀಯರು ಇರುವರೆಂಬುದನ್ನು ಕಾಣದೆ, ಆಕೆಯ ಹೆಗಲ ಮೇಲೆ ಕೈಹಾಕಿ,—

"You look more Exiting than the falls this evening (ಆ ಜಲಪಾತಕ್ಕಿಂತ ನೀನೇ ಹೆಚ್ಚು ಉದ್ರೇಕಕರಳಾಗಿ ಕಾಣಿಸುತ್ತೀಯ ಈ ಸಂಜೆ)"

—ಎಂದ ನಗುತ್ತಾ.

ಆ ಮಾತು, ಅವನು ಆ ಹೆಣ್ಣಿನ ಹೆಗಲ ಮೇಲೆ ಕೈಹಾಕಿದುದನ್ನು ಮೂರ್ತಿ ನೋಡಿದ. ಮೂರ್ತಿ ನೋಡಿದುದನ್ನು ಆಕೆಯೂ ನೋಡಿದಳು.

ನೋಡುತ್ತಿದ್ದ ಹಾಗೇ ಗುಲಾಬಿ ದಾಸವಾಳವಾಯಿತು !

ತನ್ನ ಎದೆಯನ್ನು ಸೇವರಿಸುತ್ತಿದ್ದ ಗಂಡಿನ ಕೈಯನ್ನು ಚಕ್ಕನೆ ಕಿತ್ತೊಗೆದು ಪಿಸುಧನಿಯಲ್ಲಿ ಏನೋ ಹೇಳಿದಳು ಆಕೆ. ಆಕೆ ಆ ಮಾತು ಹೇಳುತ್ತಿದ್ದಂತೆಯೇ ಗಂಡುಮೊಗವೊಂದು ಆಕೆಯ ಬೆನ್ನಿನ ಹಿಂದಿನಿಂದ ಹೊರಗೆ ಇಣುಕಿ ನೋಡಿ, ಆ ಮುಖವೂ ಕೆಂಪೇರಿತು.

ಅದು ನಾಚಿಕೆಯ ಕೆಂಪಷ್ಟೇ ಅಲ್ಲ, ಬೇಸರ, ಸಿಟ್ಟಿನ ಕೆಂಪೂ ಅಹುದು.

ಆತನೂ ಏನೋ ಒಟಗುಟ್ಟಿಕೊಳ್ಳುತ್ತಾ ಹೊರಗೆ ಬಂದು, ಕೈಸಾಲೆಯಲ್ಲಿ ಕುಳಿತ ಮೂರ್ತಿಯನ್ನು ದುರುಗುಟ್ಟಿ ನೋಡಿದ. ಆತ ಏನೂ ಹೇಳಲಿಲ್ಲವಾದರೂ ಮೂರ್ತಿಯನ್ನು ನೋಡಿದ ಅವನ ನೋಟವೇ ಹೇಳಿತು—

'ಛಿ ! ನೀಚ. ನೀನೆಂಥ ರಸಭಂಗ ಮಾಡಿದ ಪಾಪಿ'

ಆತನ ನೋಟ ಉರಿಯಾಗಿದ್ದು, ಮೂರ್ತಿ ಮೇಣವಾಗಿದ್ದಿದ್ದರೆ, ಅವನು ಉಳಿಯುತ್ತಿರಲಿಲ್ಲ.

ಅವನನ್ನು ಹಾಗೇ ದುರುಗುಟ್ಟಿ ನೋಡುತ್ತಲೇ, ಆತ ಕೈಸಾಲೆಯಲ್ಲಿದ್ದ ಎರಡು ಕುರ್ಚಿಗಳನ್ನು ಕೈಹಿಡಿಯ ಬಳಿಗೆ ಎಳೆದುಕೊಂಡು ಒಂದರ ಮೇಲೆ ತಾನು ಕುಳಿತ. ಆ ಹೆಂಗಸೂ ನಿಧಾನವಾಗಿ ನಡೆದು ಬಂದು, ಆತ ತನಗಾಗಿ ಹಾಕಿದ ಕುರ್ಚಿಯಲ್ಲಿ ಕುಳಿತಳು—ಆದರೆ ಆ ಕುರ್ಚಿಯನ್ನು ಅಷ್ಟುದೂರ ಜರುಗಿಸಿಕೊಂಡು.

ಆಕೆ ಆ ಕುರ್ಚಿಯನ್ನು ಎಳೆದ ರೀತಿಯೇ ಮೂರ್ತಿಗೆ ಹೇಳಿತು—

'ನೀನು ಇಲ್ಲಿರುವುದು ಅನುಚಿತ.'

ಮೂರ್ತಿಗೂ ಹಾಗೇ ಅನಿಸಿತು. ಆದರೂ ಏಕೋ ಅವನಿಗೆ ಅಲ್ಲಿಂದ ಎದ್ದು ಹೋಗುವುದಾಗಲಿಲ್ಲ. ಅವರ ಕಡೆ ನೋಡದೆ, ಸುಮ್ಮನೆ ಜಲಪಾತದ ಕಡೆಯೇ ನೋಡುತ್ತಾ ಕುಳಿತಿದ್ದ.

ಜಲಪಾತ ಮೊರೆಯುತ್ತಿತ್ತು.

ಆ ಮೊರೆತದಲ್ಲೂ ಅವನಿಗೆ ಆ ಹೆಣ್ಣು ತನ್ನ ಗಂಡನಿಗೆ–ನಿಜ, ಗಂಡನೇ ಇರಬೇಕು. ಆತ ಅವಳ ಎದೆಯ ಮೇಲೆ ಕೈಹಾಕಿದಾಗ, ಅತ್ತ

ಕಣ್ಣು ಹೊರಳಿಸಿದ ಮೂರ್ತಿಗೆ ಆಕೆಯ ವಕ್ಷದ ಮೇಲಿದ್ದ ಮಂಗಳಸೂತ್ರ ಹಾಗೆಂದು ಹೇಳಿತ್ತು–ಪಿಸುಧನಿಯಲ್ಲಿ—

'ಇಲ್ಲೇಕೆ, ಬೇರೆಲ್ಲಿಯಾದರೂ ಹೋಗಿ ಹಾಯಾಗಿ ಕುಳಿತು ಕೊಳ್ಳೋಣ'

—ಎಂದದ್ದು ಕೇಳಿಸಿತು.

ಆ ಮಾತಿಗೆ ಗಂಡು ತಲೆಹಾಕಿ, ಮೂರ್ತಿಯನ್ನು ನುಂಗುವಂತೆ ನೋಡಿ ಮೇಲಕ್ಕೆದ್ದು ಹೊರಟ. ಆಕೆಯೂ ಆತನನ್ನು ಹಿಂಬಾಲಿಸಿದಳು.

ಅರ್ಧಭಾಗ ಹಸಿರು ಕುಪ್ಪಸದಿಂದಾಛ್ಛಾದಿತವಾದ ಆಕೆಯ ದುಂಡು ತೋಳುಗಳು, ತಲೆಯ ದಪ್ಪ ತುರುಬು, ಉಟ್ಟರೇಶಿಮೆಯ ಸದ್ದು ಮಾಡುತ್ತಾ, ನಡೆವ ದೇಹ—

ಅದನ್ನು ನೋಡಿ ಮೂರ್ತಿ ನಿಟ್ಟುಸಿರುಬಿಟ್ಟ. ಅಷ್ಟುದೂರ ಕಂಡ ಆಕೆಯ ಮೈಯನ್ನು, ಬಂಗಲೆಯ ಬದಿಯಲ್ಲಿ ಬೆಳೆದ ಹೆಮ್ಮರಗಳು ಕಣ್ಣು ಮರೆಮಾಡಿದವು.

ಅತ್ತಲೇ ನೋಡುತ್ತಿದ್ದ ಕಣ್ಣುಗಳನ್ನು, ಮೂರ್ತಿ ಆಕೆ ಕಾಣದಾದ ಬಳಿಕ ಪ್ರಯತ್ನಪಟ್ಟು ಕಿತ್ತು ಜಲಪಾತದತ್ತ ತಿರುಗಿಸಿದ.

ಜಲಪಾತ ಮೊರೆಯುತ್ತಿತ್ತು, ನೀರು ಬೀಳುತಿತ್ತು—

ಆದರೆ ಏಕೋ ಅದರ ಸೌಂದರ್ಯ ಬೆಳಕು ಸತ್ತ ಹಗಲಿನಂತಾಗಿತ್ತು ಮೂರ್ತಿಯ ಪಾಲಿಗೆ. ಏಕೋ ಬೇಸರದಿಂದೆಂಬಂತೆ ನಿಧಾನವಾಗಿ ಬೀಳು ತ್ತಿದ್ದ ರಾಜಾನೀಳಿನ ತುಂಬುನೀರನ್ನು ನೋಡಿದ.

ಎಲ್ಲಿಂದಲೋ ಮಾದಕವಾದ ಹೆಣ್ಣುಕಂಠದ ನಗುವಿನ ಸದ್ದು ಕೇಳಿ, ಮೂರ್ತಿಯ ಮೈಯಲ್ಲಿ ಮಿಂಚು ಚಿಮ್ಮಿದಂತಾಯಿತು.

'ಭಾಗ್ಯವಂತ! ಇಲ್ಲಿಗೆ ಬಂದರೆ ಅಂಥ ಹೆಣ್ಣಿನ ಜೊತೆಯಲ್ಲಿ ಬರಬೇಕು— ಇಲ್ಲವಾದಲ್ಲಿ ಏನೂ ಸೊಗಸಿಲ್ಲ. ಇಂಥ ನಂದನಕ್ಕೆ ಒಂಟಿಯಾಗಿ ಬರುವುದಕ್ಕಿಂತ ಹೆಚ್ಚಿನ ಪಾಪ ಬೇರೊಂದಿಲ್ಲ.'

—ತನಗೆ ತಾನೇ ಹೇಳಿಕೊಂಡ ಮೂರ್ತಿ.

* * * *

ಇಳಿ ಮಧ್ಯಾಹ್ನದ ಹೊಂಬಿಸಿಲು, ನೀರುಬೀಳಿನ ಮೇಲೆ ಬಿದ್ದು ಕಾಮನಬಿಲ್ಲನ್ನು ಮೂಡಿಸಿತ್ತು. ಆದರೆ ಏಕೋ ಮೂರ್ತಿಗೆ ಅದರಲ್ಲಿ ಏನೂ ಸೊಬಗು ಕಾಣಲಿಲ್ಲ. ಸಿಟ್ಟುಸಿರು ಬಿಟ್ಟು ಮೇಲೆದ್ದು, ನಿಶ್ಶಬ್ದವಾದ ಕೈಸಾಲೆಯಲ್ಲಿ ಅತ್ತಿಂದಿತ್ತ ಅಲೆದಾಡಿದ. ಅವನ ನರನಾಡಿಗಳಲ್ಲಿ ಯಾವುದೋ ನಗು ಮಾರ್ಪಡಿಸಿ, ಅವನನ್ನು ಕೆರಳಿಸುತ್ತಿತ್ತು.

ಅವನು ಹಾಗೆ ಅಡ್ಡಾಡುತ್ತಿರುವಾಗಲೇ ಹೊರಬಂದ ಬಂಗಲೆಯ ಜವಾನ, ಕೈಸಾಲೆಯ ಮೇಲಿರಿಸಿದ ಅವನ ಸಾಮಾನನ್ನು ಕಂಡು—

" ರಾತ್ರಿ ಇಲ್ಲಿರ್ತೀರಾ ಸಾರ್ ? "

—ಎಂದು ಕೇಳಿದ.

" ಈಗ ವಾಪಸು ಹೋಗುವುದಕ್ಕೆ ಬಸ್ ಯಾವುದಾದರೂ ಇದೆಯೇ ? "

" ತಾಳಗುಪ್ಪಕ್ಕೆ ಹೋಗೋ ಕೊನೇ ಬಸ್ಸು ಇನ್ನೇನು ಬರುತ್ತೆ,"

" ಸರಿ ಹಾಗಾದ್ರೆ ! ನಾನು ಇಲ್ಲಿರೋಲ್ಲ."

—ಎಂದ ಮೂರ್ತಿ ಇದ್ದಕ್ಕಿದ್ದ ಹಾಗೇ ಅಲ್ಲಿಂದ ಹೊರಡುವ ನಿರ್ಧಾರಮಾಡಿ.

ಆ ರಾತ್ರಿ ಅಲ್ಲಿ ತಂಗಿದ್ದು, ಮರುಬೆಳಿಗ್ಗೆ ಅಲ್ಲಿಂದ ವಾಪಸು ಹೋಗುವುದು ಎಂದುಕೊಂಡು ಮಧ್ಯಾಹ್ನದ ಬಸ್ಸಿನಲ್ಲಿ ಜೋಗಕ್ಕೆ ಬಂದಿದ್ದ ಮೂರ್ತಿ. ಆದರೆ ಇಡೀ ರಾತ್ರಿ ಇರಲಿ, ಏಕೋ ಒಂದು ಗಳಿಗೆಯೂ ಅವನಿಗೆ ನಿಲ್ಲಲು ಮನಸ್ಸಾಗಲಿಲ್ಲ.

' ಬರಬೇಕು, ಇನ್ನೊಮ್ಮೆ ಬರಬೇಕು. ಬಂದರೆ 'ಹಾಗೆ' ಬರಬೇಕು.

—ಎಂದು ತನಗೆ ತಾನೇ ಹೇಳಿಕೊಳ್ಳುತ್ತಾ, ಏನೇನೋ ಊಹಿಸಿಕೊಳ್ಳುತ್ತಾ, ಬಸ್ಸು ಬರುವುದನ್ನೇ ಕಾಯುತ್ತಾ ಕೈಸಾಲೆಯಲ್ಲಿ ಅತ್ತಿಂದಿತ್ತ ಶತಪಥ ಹಾಕುತ್ತಾ ಕಾಲ ಕಳೆದ ಮೂರ್ತಿ.

ಗೊರಗುಟ್ಟುತ್ತಾ ಬಂದ ಬಸ್ಸು, ಅವನಿಗೆ, ಆ ಬೇಸರದ ನರಕದಿಂದ ಅವನನ್ನು ಉದ್ಧಾರಮಾಡಲು ಬಂದ ದೇವದೂತನಂತೇ ತೋರಿತು. ಬಂಗಲೆಯ ಆಳಿಗೆ ತನ್ನ ಸಾಮಾನನ್ನು ಬಸ್ಸಿನ ಮೇಲಿಡಲು ಹೇಳಿ, ಹೊರಡುವ ಮುನ್ನ ಕಡೆಯ ಬಾರಿಗೆಯ ಜಲಪಾತದತ್ತ ನೋಡಿದ.

ರಾಜಾ, ರಾಕೆಟ್, ರೋರರ್, ಲೇಡಿ—

ಗಂಭೀರವಾಗಿ, ಕುಣಿಯುತ್ತಾ, ಕೂಗುತ್ತಾ, ಕುಲುಕುತ್ತಾ ನೀರು ಬೀಳುತ್ತಿತ್ತು.

ಸಿಡಿಲಬ್ಬರದಿಂದ ಉರುಳಿದ ನೀರು ಮೊರೆಮೊರೆದು, ಹನಿತೂರಿ, ಸುಳಿಸುತ್ತಿ ಕಡೆದ ಹೊಗೆಯಂತೆ ವೇಗವಾಗಿ ಚಿಮ್ಮುತ್ತಿತ್ತು.

ಆದರೆ ಲಿಂಗಾಕಾರದ ಕಪ್ಪು ಶಿಲಾಖಂಡ ಮಾತ್ರ ಅಚಲವಾಗಿ ಕುಳಿತಿತ್ತು.

ಅದನ್ನು ನೋಡುತ್ತಿದ್ದ ಹಾಗೇ ಮೂರ್ತಿಗೆ, ಅದನ್ನು ಮೊದಲು ನೋಡಿದಾಗ ತನ್ನ ಮನದಲ್ಲಿ ಮೂಡಿದ ಭಾವಗಳ ನೆನಪು ಮರುಕಳಿಸಿತು—

'ಅಚಲನಾಗಿ ನಿಂತರೆ ಉಳಿವು.'

'ಥತ್, ಹಾಗಿರೋದು ಕಲ್ಲಿಗೆ ಮಾತ್ರ ಸಾಧ್ಯ. ಉಪ್ಪು ಹುಳಿ ತಿಂದ ಮನುಷ್ಯನಿಗಲ್ಲ.'

—ಎಂದು ಆ ಶಿಲೆಯನ್ನು ಹೀಯಾಳಿಸಿ ಬಸ್ಸಿನ ಕಡೆ ಕಾಲು ಹಾಕಿದ.

ಅವನ ಬೆನ್ನಹಿಂದೆ ಜಲಪಾತದ ಸಹಸ್ರ ಮೃದಂಗ ಘೋಷ ಕೇಳುತ್ತಿತ್ತು. ಆ ಘೋಷದ ಅಲೆಯ ಮೇಲೆ ಯಾವುದೋ ಮಾದಕವಾದ ನಗುವಿನ ನರ್ತನ ನಡೆದಿತ್ತು.

ಕಿವಿ ಕೇಳುತ್ತಿತ್ತು, ಕಣ್ಣು ಕಾಣುತ್ತಿತ್ತು—

ಇದ್ದಕ್ಕಿದ್ದ ಹಾಗೆ ಕೆಂಪು ದಾಸವಾಳವಾದ ಗುಲಾಬಿ!

ಕಿವಿ ಕೇಳುತ್ತಿತ್ತು—

'You look more Exiting than the falls this evening.'

ವೇಗವಾಗಿ, ಜಲಪಾತದ ಭೋರ್ಗರೆತವೇ ಬೆನ್ನಟ್ಟಿದವನಂತೆ ಹೋಗಿ ಬಸ್ಸಿನಲ್ಲಿ ಕುಳಿತಿದ್ದ ಮೂರ್ತಿ.

## ೩

ನಿರ್ಜನ, ನೀರವ ನಿಲ್ದಾಣದಲ್ಲಿ, ಗಾಳಿಗೆ ತೂಗುವ ಮಂಕು ದೀಪದ ಅರಗತ್ತಲೆಯಲ್ಲಿ, ಮೂರ್ತಿ, ಕತ್ತಲೆಯಲ್ಲಿ ಕರಗುವ ಸಿಗರೇಟಿನ ಹೊಗೆಯ, ಸಿಕ್ಕುಸಿಕ್ಕಾದ ನೀಲಿಯ ಎಳೆಗಳನ್ನು ಅರೆಗಣ್ಣಿನಿಂದ ದಿಟ್ಟಿಸುತ್ತಾ, ಹಾಸಿಗೆಯ ಮೇಲೆ ನಿಲ್ದಾಣದ ಕಂಭಕ್ಕೆ ಒರಗಿಕೊಂಡು ಕುಳಿತಿದ್ದ—

ಜೋಗಿನಲ್ಲಿ ಕಂಡುದರ ನೆನಪನ್ನು ಮತ್ತೆ ಮೆಲುಕು ಹಾಕುತ್ತಾ.

ದಾಸವಾಳವಾದ ಗುಲಾಬಿಯ ಹೂವು! ಓ! ಎಂಥ ಚೆಲುವೆ!

ಆ ಚೆಲುವೆಯನ್ನು ಮಡದಿಯಾಗಿ ಪಡೆದ ಅವನೆಂಥ ಭಾಗ್ಯವಂತ! (ಕುಬುಸ ತೊಟ್ಟುದನ್ನು ವಿಫಲಗೊಳಿಸುವ ವಕ್ಷಸೌಭಾಗ್ಯ, ಅದರ ಮೇಲಿನ ಆತನ ಕೈ) ಎಂಥ ಭಾಗ್ಯವಂತ!!

'ಅಂಥ ರತಿಯೊಂದಿಗಲ್ಲವಾದರೆ, ಆ ನಂದನಕ್ಕೆ ಹೋಗಬಾರದು.'

ಚಿತ್ತದಲ್ಲಿ ಬಯಕೆಯ ಉರಿ ಹೊತ್ತಿಸುವ ಕೆಂಪು ತುಂಬು ತುಟಿಗಳು, ಎದೆಯಲ್ಲಿ ಉದ್ವೇಗವನ್ನು ಉದ್ರೇಕಿಸುವ ವಿಶಾಲ ನೀಲ ನಯನಗಳು—

'ಅಂಥ ರತಿಯನ್ನು ಪಡೆಯುವ ಭಾಗ್ಯ ನನಗೇಕೆ ಬರಬಾರದು?'

—ಬಯಕೆಯಲ್ಲಿ ಬಳಲಿದ ಹೃದಯ ಮಾಡಲು ಕೆಲಸ, ಆಡಲು ಮಾತು ಇಲ್ಲದೆ ಕುಳಿತ ಮೂರ್ತಿಯನ್ನು ಕೇಳಿದವು.

ಏಕೆ ಬರಬಾರದು? ಅಂಥ ಚೆಲುವೆ ತನ್ನವಳೇಕೆ ಆಗಬಾರದು?

ಆಕೆಯೇ ಎನ್ನುವುದೇನು, ಆಕೆಯಂಥ ಚೆಲುವೆ ಯಾರಾದರೂ ಸರಿಯೆ.

ಅಂದೇ ಏನು ರೂಪವತಿಯರಾದ ಹೆಣ್ಣುಗಳನ್ನು ಕಂಡಾಗಲೆಲ್ಲಾ ಮೂರ್ತಿಗೆ ಅನಿಸಿತ್ತು – ಆ ರೂಪವತಿ ತನ್ನವಳೇಕೆ ಆಗಬಾರದು?

ನಗರದ ಬೀದಿಗಳಲ್ಲಿ, ಕಾಲೇಜಿನಲ್ಲಿ, ಕಾದಂಬರಿಯ ಪುಟಗಳಲ್ಲಿ, ವೃತ್ತಪತ್ರಿಕೆಯ ಹಾಳೆಗಳಲ್ಲಿ, ಸಿನಿಮಾದ ತೆರೆಯ ಮೇಲೆ – ಎಲ್ಲಿ, ಯಾವ ರೂಪವತಿ ಕಂಡರೂ, ಅವನ ಮನಸ್ಸು ಅವನನ್ನೇ ಕೇಳುತ್ತಿತ್ತು—

'ಆ ರೂಪವತಿ ನನ್ನವಳಾಗಬಾರದೇಕೆ?'

ಏಕಾಗಬಾರದು ? ಅದಕ್ಕೆ ಏನು ಅಭ್ಯಂತರ? ಆ ರೂಪವನ್ನು ಪಡೆಯಲು ಬೇಕಾದ ಯಾವ ಅರ್ಹತೆ ತನಗಿಲ್ಲ? ಏಕಿಲ್ಲ – ಎಲ್ಲವೂ ಇದೆ.

ಕಣ್ಣು ಮೋಹಿಸಿದ ಹೆಣ್ಣಿನ ಜೊತೆಗಿದ್ದ ಗಂಡಿನಂತೆಯೇ ಉಡುಪು ಧರಿಸಿ, ಕ್ರಾಪು ತಿದ್ದಿ, ಕಣ್ಣು ತಿರುಗಿಸಿ, ತುಟಿಯಲುಗಿಸಿ ತನ್ನನ್ನೇ ತಾನು ಕೇಳಿಕೊಂಡಿದ್ದ ಮೂರ್ತಿ—

'ನನ್ನಲ್ಲಿ ಇಲ್ಲದಿರುವುದು ಅವನಲ್ಲಿ ಏನಿದೆ? ಆ ಹೆಣ್ಣು ಅವನವಳೇ ಏಕಾಗಬೇಕು ? ನನ್ನವಳಾಗಬಾರದೇಕೆ ? '

ಹಾಗನಿಸಿ ಹೊಟ್ಟೆಯಲ್ಲಿ ಕೆಂಡ ಕಲಕಿದ ಹಾಗಾದಾಗಲೆಲ್ಲಾ ಮೂರ್ತಿಗೆ ಒಂದು ಸಮಾಧಾನ ತೋರಿತ್ತು—

'ನಾನು ಯಾರಿಗೂ ಕಡಿಮೆಯಿಲ್ಲ. ಸೈಗಾಲ್‌ನ ಹಾಗೇ ಹಾಡಬಲ್ಲೆ. ಷರ್ವಾನಿ, ಸುರ್ವಾಲ್ ಧರಿಸಿ, ಖಾದಿ ಟೋಪಿ ತಲೆಗಿಟ್ಟರೆ ನೆಹರೂ ಕಂಡ ಹಾಗೇ ಕಾಣುತ್ತೇನೆ. ಮೀಸೆಯ 'ಕಟ್' ಥೇಟ್ ರೇನಾಲ್ಡ್ ಕೊಲ್ಮನ್ ಹಾಗೇ – ಏನೂ ವ್ಯತ್ಯಾಸವಿಲ್ಲ. ಆದ್ದರಿಂದ ಅವರನ್ನು ಮೋಹಿಸಿದ ಹೆಂಗಸರು ನನ್ನನ್ನು ಮೋಹಿಸಲು ಏನಡ್ಡಿ? ಏನೂ ಇಲ್ಲ. ಮೊದಲು ಅವರು ಕಣ್ಣಿಗೆ ಬಿದ್ದು, ಆ ಲಾವಣ್ಯ ಅವರ ಪಾಲಾಯಿತು. ನಾನೇ ಮೊದಲು ಕಣ್ಣಿಗೆ ಬಿದ್ದಿದ್ದರೆ, ' ಆಕೆ ' ಖಂಡಿತ ನನ್ನವಳೇ ಆಗುತ್ತಿದ್ದಳು.'

ನಾನೇ ಮೊದಲು ಕಣ್ಣಿಗೆ ಬಿದ್ದಿದ್ದರೆ—

ಎಷ್ಟೋ ದಿನದಂತೆ ಅಂದೂ ಮೂರ್ತಿ, ಜೋಗ್‌ನಲ್ಲಿ ಕಂಡ ಹೆಣ್ಣಿನ ಮುಖವನ್ನು ಮನದಿದಿರು ತಂದುಕೊಂಡು ತನಗೆ ತಾನೇ ಹೇಳಿಕೊಂಡ—

' ಆ ಹೆಣ್ಣು, ಮದುವೆಯಾಗದೆ, ಒಂಟಿಯಾಗಿ ನನ್ನನ್ನು ಕಂಡಿದ್ದರೆ—'

ಆಕೆ, ಊಹೂ, ಆಕೆಯಿಲ್ಲವಾದರೆ ಹೋಗಲಿ ಆಕೆಯಂಥ ಮತ್ತೊಬ್ಬ ಹೆಣ್ಣು, ಈ ನಿರ್ಜನ ನಿಲ್ದಾಣದಲ್ಲಿ ತನ್ನ ಕಣ್ಣಿಗೆ ಬಿದ್ದಿದ್ದರೆ............

ಬಿ....ದ್ದಿ....ದ್ದ....ರೆ....

........................

[ಜನವಿಹೀನವಾದ ರೈಲ್ವೆ ನಿಲ್ದಾಣ. ಮಂಕಾಗಿ ಹಳದಿಯ ಬಣ್ಣವನ್ನು ಚೆಲ್ಲುತ್ತಾ, ಕತ್ತಲೆಯನ್ನು ಕಳೆಯುವುದಕ್ಕಿಂತ ಹೆಚ್ಚಾಗಿ ಬೆಳೆಸುವಂಥ

ದೀಪವೊಂದು ಕಬ್ಬಿಣದ ಜಂತೆಯಿಂದ ತೂಗಾಡುತ್ತಿದೆ. ದೀಪ ಉರಿಯುತ್ತಿರುವ ಕೋಣೆಯಲ್ಲಿ ಸ್ಟೇಷನ್ಮಾಸ್ಟರ್ ಕಡೆದ ವಿಗ್ರಹದ ಹಾಗೆ ಕುಳಿತಿದಾನೆ. ಆ ಕೋಣೆಯ ಬಾಗಿಲಿನಲ್ಲಿ ಅರೆಗತ್ತಲಿನಲ್ಲಿ ದೊಡ್ಡ ಹದ್ದಿನಂತೆ, ನೀಲಿಯ ಅಂಗಿ, ರುಮಾಲು ಧರಿಸಿದ ಪೋರ್ಟರ್, ತಲೆಯ ಮೇಲೆ ಕೈ ಕಟ್ಟಿಕೊಂಡು, ಮೊಳಕಾಲಿನಲ್ಲಿ ಮುಖ ಮರೆಸಿಕೊಂಡು ಕುಳಿತಿದಾನೆ. ನಿಲ್ದಾಣದ ಇದುರಿನಲ್ಲಿ ಖಾಲಿ ರೈಲ್ವೆ ಬಂಡಿಗಳ ಸಾಲು. ದೂರದಲ್ಲಿ ರೈಲ್ವೆ ಎಂಜಿನ್ ಬುಸ್‌ಗುಟ್ಟುವ ಸದ್ದು ಕೇಳುತ್ತದೆ.

ನಿಲ್ದಾಣದ ಮುಂಭಾಗದಲ್ಲಿ, ಕಂಭಕ್ಕೆ ಒರಗಿಕೊಂಡು 'ಆ' ಯುವತಿ ಕುಳಿತಿದಾಳೆ. ಮಾತನಾಡುವುದಕ್ಕೆ ಜೊತೆಯಿಲ್ಲದೆ, ಆಕೆ ಒಂಟಿತನದ ಬೇಸರದಿಂದ ಆಗಾಗ ಆಕಳಿಸುತ್ತಾಳೆ.

ಅನತಿ ಕಾಲದಲ್ಲೇ ಮೂರ್ತಿ ನಿಲ್ದಾಣದಲ್ಲಿ ಪ್ರವೇಶಿಸಿ, ಸುತ್ತಲೂ ಕಣ್ಣು ಹೊರಳಿಸಿ, ಕಂಭಕ್ಕೆ ಒರಗಿ ಕುಳಿತ ತರುಣಿಯನ್ನು ನೋಡುತ್ತಾನೆ. ಅಷ್ಟು ದೂರಕ್ಕೂ, ಆ ಅರೆಗತ್ತಲಿನಲ್ಲೂ ಆಕೆಯನ್ನು ನೋಡುತ್ತಿದ್ದ ಹಾಗೇ ಮೂರ್ತಿಗೆ ಆಕೆ ಅತ್ಯಂತ ರೂಪವತಿ ಎಂದು ಅರಿವಾಗುತ್ತದೆ. ಆಕೆಯನ್ನು ಮಾತನಾಡಿಸಬೇಕು ಎನಿಸುತ್ತದೆ. ಆದರೂ ಆ ದೌರ್ಬಲ್ಯವನ್ನು ತೋರಗೊಡದೆ, ಆಕೆಯನ್ನು ನೋಡಿಯೂ ನೋಡದವನಂತೆ, ಅತ್ತಿಂದಿತ್ತ ಶತಪಥ ಹಾಕುತ್ತಾ ಇರುತ್ತಾನೆ.

ಅವನು ಹಾಗೆ ಸುತ್ತುತ್ತಿರುವಾಗ ಆ ತರುಣಿಯ ಕಣ್ಣು ಅವನತ್ತ ತಿರುಗುತ್ತದೆ. ಮೂರ್ತಿಯನ್ನು ಕಂಡು, ಆಕೆಯ ಸುಂದರ ನಯನಗಳಲ್ಲಿ ಮೆಚ್ಚುಗೆ ಮೂಡಿದುದು, ಆ ಕತ್ತಲಿನಲ್ಲೂ, ನೋಡದಿದ್ದರೂ ಮೂರ್ತಿಗೆ ಅರಿವಾಗುತ್ತದೆ. ಹಾಗೇ ಆ ತರುಣಿ ತನಗೆ ತಾನೇ ಪಿಸುಧನಿಯಲ್ಲಿ 'ಓ! ಎಂಥ ಸುಂದರ ಪುರುಷ' ಎಂದುಕೊಂಡುದೂ ಮೂರ್ತಿಗೆ ಕೇಳಿಸಿ, ಅವನ ಹೃದಯ ಹೆಮ್ಮೆಯಿಂದ ಉಬ್ಬಿ, ಹಾಗೇ ಆಕೆಯ ಬಳಿ ಹಾರಿ ಹೋಗಬೇಕು ಎನ್ನಿಸುತ್ತದೆ. ಆದರೆ ಆ ಭಾವನೆಯನ್ನು ತಡೆಹಿಡಿದು, ಅಷ್ಟುದೂರ ಹೋಗಿ 'ಶುಕ–ರಂಭಾ' ಚಿತ್ರದಲ್ಲಿನ ಶುಕ ಋಷಿಯ ಹಾಗೆ ತಾನೂ ಒಂದು ಕಂಭಕ್ಕೆ ಒರಗಿಕೊಂಡು ಕುಳಿತುಕೊಳ್ಳುತ್ತಾನೆ.

ಬಳಿಕ ಆ ಯುವತಿಯೇ ಕುಳಿತ ಕಡೆಯಿಂದ ಮೇಲಕ್ಕೆದ್ದು

ಮೂರ್ತಿಯ ಸಮೀಪದಲ್ಲೇ ಸುಳಿಯುತ್ತಾ ನಾಲ್ಕಾರು ಬಾರಿ ಅತ್ತಿಂದಿತ್ತ, ಇತ್ತಿಂದತ್ತ ಓಡಾಡುತ್ತಾಳೆ. ಒಮ್ಮೊಮ್ಮೆ ಅವನ ಬಳಿ ಸುಳಿದಾಗಲೂ ಬಯಕೆಯ ಕಾಂತಿಯಿಂದ ಹೊಳೆಯುವ ಆಕೆಯ ಕಣ್ಣುಗಳು ಅವನತ್ತ ತಿರುಗಿ, ಅರೆಗತ್ತಲು ಕವಿದ ನಿಲ್ದಾಣದಲ್ಲಿ ದೀಪದ ಬೆಳಕು ಬಿದ್ದಂತಾಗುವುದು.

ಆದರೂ ಮೂರ್ತಿ ಅಚಲನಾಗಿ ಕುಳಿತಿರುತ್ತಾನೆ. ಕೊನೆಗೆ, ಆ ತರುಣಿಯೇ ಸೋತು, ಮೃದುಪದಗತಿಯಿಂದ ಅವನ ಬಳಿ ಸಾರುತ್ತಾಳೆ. ಹತ್ತಿರ ಬಂದು ಮೂರ್ತಿಯ ಗಮನವನ್ನು ತನ್ನತ್ತ ಸೆಳೆಯುವ ಉದ್ದೇಶದಿಂದ ಮೃದುವಾಗಿ ಕೆಮ್ಮಿ—

ತರುಣಿ :—ಕ್ಷಮಿಸಿ....ತಾವು....ತಾವು....

ಮೂರ್ತಿ :—(ಸ್ವಗತ) ಆಹಾ! ಈಕೆಯ ಧ್ವನಿಯೂ ದೇಹದಷ್ಟೇ ಮನೋಹರವಾಗಿದೆ. ಈಕೆಯ ತನು ವಸಂತದ ಉದ್ಯಾನವಾದರೆ, ಈಕೆಯ ಮಧುರ ಕಂಠಧ್ವನಿ, ಆ ಉದ್ಯಾನದಲ್ಲಿ ಕುಕಿ ಎತ್ತಿರುವ ಕೋಕಿಲೆ.

ತರುಣಿ :—(ಮೂರ್ತಿ ಸುಮ್ಮನಿರುವುದನ್ನು ಕಂಡು ತಾನೇ) ತಾವು....ತಾವು....ಜಗತ್ಪ್ರಸಿದ್ಧ ಸಿನಿಮಾ ನಟ ದೀಲೀಪ್‌ಕುಮಾರ್ ಅಲ್ಲವೇ?

ಮೂರ್ತಿ :—ಅಲ್ಲ, ನಾನು ಮೂರ್ತಿ.

ತರುಣಿ :—(ಅಚ್ಚರಿಯಿಂದ) ಹಾಗೇ! ಅಷ್ಟು ದೂರದಿಂದ ನೋಡಿ ನನಗೆ ಖಂಡಿತವಾಗಿಯೂ ನೀವೇ ದಿಲೀಪ್‌ಕುಮಾರ್ ಎನಿಸಿತ್ತು. ನೂರಾರು ಚಿತ್ರಗಳಲ್ಲಿ ನೋಡಿದ್ದೇನಲ್ಲ—ನಿಮಗೂ ಆತನಿಗೂ ಕೊಂಚವೂ ವ್ಯತ್ಯಾಸವಿಲ್ಲ.

ಮೂರ್ತಿ :—(ಗಂಭೀರವಾಗಿ) ನಿಜ, ನಿಜ, ನಿಮ್ಮ ಹಾಗೆ ಎಷ್ಟೋ ಮಂದಿ ಭ್ರಮಿಸಿದ್ದಾರೆ.

ತರುಣಿ :—ಹಾಗಾದರೆ ನನ್ನನ್ನು ಕ್ಷಮಿಸಿ. ಅಷ್ಟು ದೂರದಿಂದ ನಿಮ್ಮನ್ನು ನೋಡಿ, ಅವರೇ ನೀವು ಎಂದುಕೊಂಡು ಮಾತನಾಡಿಸಬೇಕು ಎಂದು ಬಂದೆ. ತಾವು ಏನೋ ಯೋಚಿಸುತ್ತಿದ್ದೀರೆಂದು ಕಾಣುತ್ತದೆ. ತಮ್ಮ ಚಿಂತನೆಗೆ ಭಂಗ ತಂದ ನನ್ನ ಅಪರಾಧವನ್ನು ಮನ್ನಿಸಿ....

ಮೂರ್ತಿ :—(ಆತುರನಾಗಿ) ಛೇ! ಛೇ! ಅಪರಾಧವೇನೂ ಇಲ್ಲ.

ಸೌಂದರ್ಯವೆಂದೂ ಅಪರಾಧ ಮಾಡಲಾರದು. ಬನ್ನಿ, ಕುಳಿತುಕೊಳ್ಳಿ. ನನ್ನಿಂದ ಏನಾಗಬೇಕಾಗಿತ್ತು ಹೇಳಿ.

[ತರುಣಿ, ಮೂರ್ತಿ ಅಷ್ಟು ಹೇಳುವುದನ್ನೇ ಕಾದಿದ್ದವಳಂತೆ, ಆತನಿಗೆ ಅತ್ಯಂತ ಸಮೀಪವರ್ತಿಯಾಗಿ, ಮೂರ್ತಿ ಕುಳಿತ 'ಹೋಲ್ಡಾಲ್' ನ ಮೇಲೆಯೇ ಕುಳಿತುಕೊಳ್ಳುತ್ತಾಳೆ.]

ತರುಣಿ :—ತಮ್ಮದು ಬಹು ಉದಾರ ಹೃದಯ.

ಮೂರ್ತಿ :—ಏಕೆ ?

ತರುಣಿ :—ಈ ನಿರ್ಜನ ನಿಲ್ದಾಣದಲ್ಲಿ ಒಂಟಿಯಾಗಿ ಕುಳಿತು ತುಂಬಾ ಬೇಸರವಾಗಿತ್ತು.

ಮೂರ್ತಿ :—ಏನು - ಚೆಲುವಿಕೆಗೂ ಬೇಸರದ ಬಾಧೆಯೇ ? ಹಾಗೆಂದೂ ಆಗಲಾರದು.

ತರುಣಿ :—ಅದನ್ನೇ ನಾನು ತಮ್ಮ ಉದಾರ ಹೃದಯ ಎಂದದ್ದು!.... ಆ ಬೇಸರದ ಹೊತ್ತಿನಲ್ಲಿ ತಮ್ಮನ್ನು ಕಂಡೆ—ಹತ್ತಿರ ಬಂದು ಮಾತನಾಡಿಸ ಬೇಕು ಎಂದು ಬಯಕೆಯಾಯಿತು. ಅದಕ್ಕಾಗಿಯೇ ಬಂದು ಮಾತನಾಡಿಸಿದೆ. ಮಾತನಾಡಿಸಿದಾಗಲೂ ತಾವು ನನ್ನ ಮಾತಿಗೆ ಉತ್ತರ ಕೊಡುತ್ತೀರೋ ಇಲ್ಲವೋ ಎಂಬ ಭಯವಿತ್ತು....

ಮೂರ್ತಿ :—ಏಕೆ ?

ತರುಣಿ :—ತಮ್ಮಂಥ....ತಮ್ಮಂಥ....ತಮ್ಮಂಥ....

ಮೂರ್ತಿ :—ಸಂಕೋಚವೇಕೆ ? ನಿಶ್ಚಿಂತೆಯಿಂದ ಹೇಳಿ.

ತರುಣಿ :—ತಮ್ಮಂಥ ಸುಂದರಪುರುಷರು ನನ್ನಂಥವಳನ್ನು ಮಾತ ನಾಡಿಸುತ್ತಿರೋ ಇಲ್ಲವೋ ಎಂದು ಅಳಕುತ್ತಿದ್ದೆ....

ಮೂರ್ತಿ :—ನಾನು ಸುಂದರಪುರುಷ ಅಹುದೋ ಅಲ್ಲವೋ, ಅದನ್ನು ನಿಮ್ಮ ಕಣ್ಣುಗಳೇ ಹೇಳಬೇಕು. ಆದರೆ ನಿಮ್ಮ ಸೌಂದರ್ಯವೂ ಕಡಮೆಯ ದೇನಲ್ಲ.

ತರುಣಿ :—ಹಾಗಾದರೆ ನಾನು ಧನ್ಯಳಾದೆ.

ಮೂರ್ತಿ :—ಏಕೆ ?

ತರುಣಿ :—ಪುಷ್ಪಕ್ಕೆ ಬೇಕಾದುದು ಪತಂಗ ಪ್ರಶಂಸೆಯೇ ಅಲ್ಲವೇ ?

ತಮ್ಮ ಮೆಚ್ಚುಗೆಗೆ ಪಾತ್ರವಾಗಿ ನನ್ನ ಅಲ್ಪ ಸೌಂದರ್ಯ ಧನ್ಯವಾಯಿತು. ನನ್ನ ಭಾಗ್ಯವಿಶೇಷದಿಂದ ತಮ್ಮಂಥವರ ದರ್ಶನವಾಯಿತು....ಮತ್ತೇನು ತಾನೇ ಬಯಸಲಿ....

[ಮಾತನಾಡುತ್ತ ಆಡುತ್ತ, ಹೋಲ್ಡಾಲ್‌ನ ಮೇಲೆ ಸರ್ರುಗಿ, ತನ್ನ ದೇಹವನ್ನು ಮೂರ್ತಿಯ ಮೈಗೆ ತಗುಲಿಸಿ, ಏನೋ ಬಯಕೆ ತುಂಬಿದ ನೋಟದಿಂದ ಅವನತ್ತ ನೋಡುತ್ತಾಳೆ.]

ಮೂರ್ತಿ :—(ಕೊಂಚ ಉದ್ವಿಗ್ನನಾಗಿ) ಏಕೋ ಮಾತನ್ನು ಅರ್ಧಕ್ಕೇ ನಿಲ್ಲಿಸಿಬಿಟ್ಟಿರಲ್ಲಾ. ನನ್ನಿಂದ ಏನಾಗಬೇಕಿತ್ತು ಹೇಳಿ.

ತರುಣಿ :—ಹೇಳಲೇ ?

ಮೂರ್ತಿ :—ಹೇಳಿ....

ತರುಣಿ :—ಹೇಳಿದರೆ....ಹೇಳಿದರೆ....ಅತಿ ಆಸೆಯವಳು ಎಂದು ಬೇಸರಮಾಡಿಕೊಳ್ಳುತ್ತೀರೋ ಏನೋ........

ಮೂರ್ತಿ :—ಖಂಡಿತವಾಗಿಯೂ ಇಲ್ಲ.

ತರುಣಿ :—ಹಾಗಾದರೆ....ಹಾಗಾದರೆ........

[ಮಾತನಾಡುತ್ತ ಆಡುತ್ತ ಆಕೆಯ ಸುಂದರ ಮುಖ, ಅವನ ಮುಖದ ಬಳಿ ಸಾರಿ, ಆಕೆಯ ತೋಳುಗಳು ಅವನ ಮೈಯನ್ನು ಮೃದುವಾಗಿ, ಅಷ್ಟೇ ಬಿಗಿಯಾಗಿ ಬಳಸಿ, ಆಕೆಯ ತುಟಿಗಳು ಅರಳುವವು. ಮೂರ್ತಿಯ ತೋಳು ಗಳೂ ಆಕೆಯನ್ನು ಬಳಸಿ ಬಿಗಿಯುವವು. ಉದ್ರಿಕ್ತ ತರುಣಿ ಅವನನ್ನು ಚಕ್ಕನೆ ಚುಂಬಿಸುವಳು. ಬಳಿಕ—]

ತರುಣಿ :—(ಮೃದುಸ್ವರದಲ್ಲಿ) ಬೇಸರವಾಯಿತೇ ?

ಮೂರ್ತಿ :—ಏಕೆ ?

ತರುಣಿ :—ಸಭ್ಯತೆಯನ್ನು ಅತಿಕ್ರಮಿಸಿದೆನೆಂದು. ನನ್ನನ್ನು ಕ್ಷಮಿಸಿ. ನಿಮ್ಮ ಮಧುಸಾಮೀಪ್ಯದಲ್ಲಿ ಸಂಯಮ ನನ್ನಿಂದ ಸಾಧ್ಯವಾಗಲಿಲ್ಲ. ಬೇಸರ ಮಾಡಿಕೊಳ್ಳಬೇಡಿ.

ಮೂರ್ತಿ :—ಖಂಡಿತವಾಗಿಯೂ ಬೇಸರವಿಲ್ಲ.

ತರುಣಿ :—ಇಲ್ಲವೇ ?

ಮೂರ್ತಿ!—ಇಲ್ಲ, ಇಗೋ ಆ ಮಾತಿಗೆ ಸಾಕ್ಷಿ—

(ತಾನು ತರುಣಿಯನ್ನು ಬಿಗಿದಪ್ಪಿ ಚುಂಬಿಸುವನು. ತುಟಿಗೆ ತುಟಿ ಸೋಕಿದಾಗ ಬೆಂಕಿ ಮುಟ್ಟಿದಂತಾಗುವುದು.) ]

* * * *

'ಹ್ಹಾ!' ಎಂದು ಕಣ್ಣುಬಿಟ್ಟ ಮೂರ್ತಿ. ಅವನ ಕೈಯಲ್ಲಿ ಹಿಡಿದ ಹೊತ್ತಿಸಿದ ಸೀಗರೇಟು, ತುದಿಯವರೆವಿಗೂ ಉರಿದು ತನ್ನನ್ನು ಮರೆತ ಅವನ ಮೈಮರೆವುತನವನ್ನು ಶಿಕ್ಷಿಸಲೆಂಬಂತೆ ಅವನ ಕೈಯನ್ನು ಸುಟ್ಟಿತ್ತು.

ಜನವಿಹೀನ ಸಿಲ್ದಾಣದಲ್ಲಿ ಬೇಸರದ ಗಾಳಿ ಸುಯ್ಯುತ್ತಿತ್ತು.

ಒಂದು ಗಳಿಗೆ ಮೂರ್ತಿಗೆ ತನ್ನ ಕನಸಿಗಾಗಿ ತನಗೇ ನಾಚಿಕೆಯಾಯಿತು. ಅದರ ಮರುಗಳಿಗೆಯೇ ಆ ನಾಚಿಕೆಯೇ ಎಲ್ಲೋ ನಾಚಿ ಮುಖ ಮರೆಸಿಕೊಂಡು, ಅವನ ಹೃದಯದ ಒಳಗಿನ ಒಳದನಿ ನುಡಿಯಿತು—

'ಹಾಗಾಗಬಾರದೇಕೆ? ಆದರೆ ಎಷ್ಟು ಸೊಗಸು.'

ಕನಸು ಮುರಿದ ಆರೆ ಎಚ್ಚರದಲ್ಲಿ, ಸಿಲ್ದಾಣದಲ್ಲಿ ತುಂಬಿದ ಬೇಸರದಲ್ಲಿ ಮತ್ತೆ ಬಯಕೆ ಸುಳಿದಾಡಿತು. ವಾಸ್ತವ ಪರಿಸ್ಥಿತಿಯ ಬೇಸರದ ಜಡತೆಯನ್ನು ನೀಗಿಕೊಳ್ಳಲು ಮನಸ್ಸು ಯಾವುದೋ ಅವಾಸ್ತವ, ಸ್ವಪ್ನ ಜಗತ್ತಿನಲ್ಲಿ ಸಂಭವಿಸಬಹುದಾದ ಘಟನೆಗಳಿಗೆ ಶರಣು ಹೋಯಿತು.

ವಾಸ್ತವ ಜಗತ್ತಿನಲ್ಲಿ ನಡೆಯಬಹುದಾದುದಕ್ಕೆ ಒಂದು ಗತಿ ಇದೆ, ಒಂದು ಮಿತಿ ಇದೆ. ವ್ಯವಹಾರಜ್ಞಾನ ಅಷ್ಟು ಆಗಬಹುದು, ಇದು ಅಸಾಧ್ಯ ಎಂಬ ಪರಿಮಿತಿಯನ್ನು ಕಂಡುಕೊಂಡಿರುತ್ತದೆ. ಕತ್ತಿಗೆ ಕಟ್ಟಿದ ಸರಪಳಿ, ಬಂಧಿತ ಶ್ವಾನಕ್ಕೆ ಇಷ್ಟೇ ದೂರ ಚಲಿಸಬಹುದು ಎಂಬ ಪರಿಮಿತಿಯನ್ನು ಕಲ್ಪಿಸಿರುವಂತೆ, ಮಾನವನ ಮನಸ್ಸಿಗೂ, ವಾಸ್ತವಿಕತೆ ಅಂಥ ಒಂದು ಅರಿವನ್ನು ಮೂಡಿಸಿರುತ್ತದೆ. ಒಮ್ಮೆ ಆ ಪರಿಮಿತಿಯ ಅರಿವಿನ ಕೊಂಡಿ ಕಳಚಿ, ಬುದ್ಧಿ ಅವಾಸ್ತವ ಊಹಾರಾಜ್ಯದ ಯಾತ್ರಿಕನಾಯಿತೆಂದರೆ, ಆಗ ಅಸಂಭವನೀಯವೂ ಸಂಭವನೀಯ ಎಂದೇ ತೋರುತ್ತದೆ. ಈ ಕಲ್ಪನಾ ರಾಜ್ಯ ವಿಹಾರದಿಂದ ಜೀವನಕ್ಕೆ ಯಾವ ಬಗೆಯ ಲಾಭವೂ ಇಲ್ಲವೆಂಬುದು ಎಲ್ಲರಿಗೂ ಗೊತ್ತಿರುವುದೇ. ಆದರೆ ವಾಸ್ತವಿಕತೆ ದುರ್ಭರವೆನಿಸಿದಾಗ,

ಮಾನವನ ಮನಸ್ಸು ಸ್ವಪ್ನಲೋಕದ ವಿಹಂಗಮನಾಗಿ, ಹೃದಯವನ್ನು ಹಗುರಾಗಿಸಿಕೊಳ್ಳಲು ಎಳೆಸುತ್ತದೆ.

ಮೂರ್ತಿಯ ಮನಸ್ಸು ಈಗ ಅದೇ ದಾರಿ ಹಿಡಿದಿತ್ತು.

ಬೇರಾವ ರೀತಿಯಲ್ಲೂ ನೀಗಿಕೊಳ್ಳಲಾಗದ ಬೇಸರವನ್ನು ಬಾಳಿನಲ್ಲಿ ಮತ್ತೆಂದೂ ಕಾಣಲಾಗದ ಹೆಣ್ಣಿನ ಮೂಲಕ ನೀಗಿಸಿಕೊಳ್ಳಲು ಯತ್ನಿಸುತ್ತಿದ್ದ.

ಸ್ವಪ್ನಲೋಕದಲ್ಲಿ ಆಗಬಾರದ ಘಟನೆ ಯಾವುದು? ನಮ್ಮ ಊಹೆಯ ಪರಿಮಿತಿಯೇ ಸ್ವಪ್ನಲೋಕದ ಸೀಮೆ.

ನಿಲ್ದಾಣದ ನಿರ್ಜನ ನೀರವತೆಯಲ್ಲಿ ಕುಳಿತ ಮೂರ್ತಿಯೂ ತನ್ನ ಊಹೆಯ ಕುದುರೆಯನ್ನು, ಬಯಕೆಯ ಕಡಿವಾಣವನ್ನು ಸಡಿಲ ಬಿಟ್ಟು ಸ್ವಪ್ನಲೋಕದಲ್ಲಿ ಓಡಿಸುತ್ತಿದ್ದ.

ಆ 'ರೆ' ರಾಜ್ಯದಲ್ಲಿ—

ಹೀಗಾಗಬಾರದೇಕೆ?

* * * *

'ಜೋಗದ ಜಲಪಾತದ ಬಳಿಯ ಮಹಾಕಾನನ. ಸಂಜೆಯ ಮಬ್ಬು ಗತ್ತಲಿನಲ್ಲಿ ವನದ ಹಸಿರು ಮರೆಯಾಗಿ, ಅಸ್ಪಷ್ಟ, ಅವ್ಯಕ್ತ ಭೀತಿಯೇ ಮಬ್ಬಾದಂತೆ ಹಬ್ಬಿದೆ ಕಾಡಿನಲ್ಲಿ. ದೂರದ ಜಲಪಾತದ ನಿರ್ಘೋಷ, ವನದ ಮೌನವನ್ನು ಕಡೆಕಡೆದು ಹೆಪ್ಪುಗಟ್ಟಿಸಿದೆ. ಅಪರಿಚಿತ ವನದಲ್ಲಿ ಮೂರ್ತಿ ಒಂಟಿಯಾಗಿ ಯಾವುದೋ ಕಾಲುಜಾಡನ್ನು ಹಿಡಿದು ನಡೆಯುತ್ತಿದ್ದಾನೆ. ಅಕ್ಕಪಕ್ಕದ ಬನಗತ್ತಲೆಯಲ್ಲಿ ಯಾವು ಯಾವೋ ಘೋರವನಪಶುಗಳು ಹೊಂಚು ಹಾಕುತ್ತ ಸಂಚರಿಸುತ್ತಿರುವಂತೆ ಭಾಸವಾಗುತ್ತಿದೆ ಅವನಿಗೆ. ಆದರೂ ತನ್ನನ್ನು ಮಾತ್ರ ಯಾವುದೂ ಏನೂ ಮಾಡಲಾಗದು ಎಂಬಷ್ಟು ನಿರ್ಭಯವಾಗಿ ನಡೆಯುತ್ತಿದ್ದಾನೆ. ಗಳಿಗೆ ಗಳಿಗೆಗೂ ಕತ್ತಲು ಬಲಿಯುತ್ತಿದೆ.

'ಕತ್ತಲಿನಲ್ಲಿ ಅನಂತವಾಗಿ ಕಾಣುವ ಕಾಡಿನಲ್ಲಿ ನಾನು ಒಬ್ಬನೇ ಎಂದುಕೊಂಡು ಮೂರ್ತಿ ನಡೆಯುತ್ತಿರುವಾಗ, ಅಷ್ಟು ದೂರದಿಂದ ಎಲ್ಲೋ ಹೆಣ್ಣೊಬ್ಬಳು ಭೀತಳಾಗಿ ಚೀರಿದ ಸದ್ದು ಕೇಳಿ, ಮೂರ್ತಿ, ಇದಿರಾದ ಕಲ್ಲು,

ಮುಳ್ಳು, ಪೊದೆ, ಗಿಡಮರಗಳನ್ನಾವುದನ್ನು ಲೆಕ್ಕಿಸದೆ, ಮುಳ್ಳು ಪೊದೆಗಳಿಗೆ ಸಿಲುಕಿ, ತೊಟ್ಟ ಬಟ್ಟೆ ಹರಿದು ಚಿಂದಿಯಾದುದನ್ನೂ ಲೆಕ್ಕಿಸದೆ, ಸದ್ದು ಕೇಳಿ ಬಂದ ಕಡೆಗೆ ನುಗ್ಗುತ್ತಾನೆ. ಅವನು ನುಗ್ಗಿದ ವೇಗಕ್ಕೆ ಹೆದರಿ ಮೊಲ, ಹಾವು, ಹುಳು ಹುಪ್ಪಟೆಗಳು ದಿಕ್ಕುಪಾಲಾಗಿ ಓಡುತ್ತವೆ.

'ಓಡಿಬಂದು ಮೂರ್ತಿ ನೋಡುತ್ತಾನೆ – ಹೆಣ್ಣೊಬ್ಬಳು ಹೆದರಿ, ಆರ್ತಳಾಗಿ ಚೀರುತ್ತಾ ನಿಂತಿದ್ದಾಳೆ. ಆಕೆಗೆ ಸ್ವಲ್ಪ ದೂರದಲ್ಲಿ, ಕತ್ತಲಿನಲ್ಲಿ ತನ್ನ ರಂಜಕ ನೇತ್ರಗಳನ್ನು ಹೊಳೆಯಿಸಿ, ಎದೆ ಬಿರಿಯುವಂತೆ ಮೊರೆಯುತ್ತ ಹೆಬ್ಬುಲಿಯೊಂದು, ಆಕೆಯ ಮೇಲೆ ಲಂಘಿಸಲು ಸಿದ್ಧವಾಗಿ ನಿಂತಿದೆ. 'ಅಯ್ಯೋ ಈ ಹುಲಿಯಿಂದ ನನ್ನನ್ನು ರಕ್ಷಿಸುವವರಾರೂ ಇಲ್ಲವೇ?' ಎಂದು ಗೋಳಿಡುತ್ತಿದ್ದಾಳೆ ಹೆಣ್ಣು. 'ಆ' ಹೆಣ್ಣು – ಜೋಗದ ಪ್ರವಾಸಿ ಮಂದಿರದ ಕೈಸಾಲೆಯಲ್ಲಿ ಕಂಡ ಹೆಣ್ಣು. ಬರಿ ಹೆಣ್ಣೇ ಅಲ್ಲ ಚೆಲುವೆ – ಭೀತಳಾಗಿ, ಆರ್ತಳಾಗಿ ಹಂಬಲಿಸಿ ಹುಯ್ಯಲಿಡುತ್ತಿದ್ದಾಳೆ, (ಆಹಾ! ಭೀತಿಯಲ್ಲೂ ಎಷ್ಟು ಚೆಲುವೆಯಾಗಿ ಕಾಣುತ್ತಿದ್ದಾಳೆ ಆ ಬಾಲೆ!)

'ಅದನ್ನು ಕಂಡವನೇ ಮೂರ್ತಿ — ಚೆಲುವೆ! ಭೀತಳಾಗಬೇಡ, ನಾನಿದ್ದೇನೆ.' ಎಂದು ಭೀತಬಾಲೆಗೆ ಅಭಯವನ್ನು ನುಡಿದು, ಬರಿಗೈಯಲ್ಲೇ ಹುಲಿಯ ಮೇಲೆ ಲಂಘಿಸುತ್ತಾನೆ. ಈ ಅನಿರೀಕ್ಷಿತ ಧಾಳಿಯಿಂದ ಚಕಿತವಾದ ಹುಲಿ ಒಂದು ಗಳಿಗೆ ಹೆದರಿ ಹಿಂಜರಿದು, ಮರುಗಳಿಗೆಯೇ ತನ್ನ ಆಹಾರಕ್ಕೆ ಅಡ್ಡವಾಗಿ ಬಂದ ಮೂರ್ತಿಯ ಮೇಲೆ ಹಾರುತ್ತದೆ. 'ಮೂರ್ಖ ಹುಲಿಯೇ, ನಿನ್ನ ಆಹಾರಕ್ಕೆ ಈ ಚೆಲುವೆಯೇ ಆಗಬೇಕಾಗಿತ್ತೆ? ಬೇರೆ ಲಕ್ಷಾಂತರ ಮಂದಿ ಕುರೂಪಿಗಳಾದ ಸ್ತ್ರೀಯರಲ್ಲಿ ಯಾರನ್ನಾದರೂ ನೀನು ಆರಿಸಿದ್ದರೆ ನಿನ್ನನ್ನು ಕ್ಷಮಿಸಬಹುದಾಗಿತ್ತು. ಆದರೆ ಇಂಥ ಸುಂದರಿಯನ್ನು ಆಹಾರವಾಗಿ ಮಾಡಿಕೊಂಡು ನಿನ್ನ ಹೊಲಸು ಹೊಟ್ಟೆಯನ್ನು ತುಂಬಿಸಿಕೊಳ್ಳಲೆತ್ನಿಸಿದುದು ನಿನ್ನ ಅಕ್ಷಮ್ಯ ಅಪರಾಧ. ಈ ಅಪರಾಧಕ್ಕೆ ನಿನ್ನ ಹೊಟ್ಟೆಯನ್ನು ಬಗೆದು, ಮತ್ತೆಂದೂ, ಯಾರನ್ನೂ ತಿನ್ನಲಾಗದಂತೆ ಮಾಡುವುದೇ ತಕ್ಕ ಶಿಕ್ಷೆ' ಎಂದು, ತನ್ನನ್ನು ಹೆದರಿಸಲೆತ್ನಿಸಿದ ಹುಲಿಯನ್ನು ಹೀಯಾಳಿಸಿ ನಗುತ್ತಾ, ಅದರ ಮೇಲೆ ಬಿದ್ದು, ಮೂರ್ತಿ ಅದರ ತೆರೆದ ಬಾಯನ್ನು ಎರಡೂ ಕೈಗಳಿಂದ ಹಿಡಿದು ಸೀಳುತ್ತಾನೆ – ಬಟ್ಟೆಯನ್ನು ಹರಿಯುವಂತೆ. ಕಾಡು ಮಾರ್ಮೊಳಗು

ವಂತೆ ಮೊರೆದು ಹುಲಿ, ರಕ್ತ ಕಾರಿ ಸಾಯುತ್ತದೆ. ಆ ಹುಲಿಯ ಸೀಳು ಗಳನ್ನು ದಿಗ್ಬಲಿ ಚೆಲ್ಲುವಂತೆ ಒಗೆದು, ರಕ್ತಸಿಕ್ತಗಾತ್ರನಾದ ಮೂರ್ತಿ, ಭೀತಿಯಿಂದ ನಡುಗುತ್ತಾ ನಿಂತಿರುವ ಚೆಲುವೆಯ ಬಳಿ ಸಾರಿ—

"ಇಗೋ – ನಿಮ್ಮ ಭೀತಿಕಾರಣ ನಿವಾರಣೆಯಾಯಿತು, ಇನ್ನು ಹೆದರಬೇಡಿ"

'—ಎನ್ನುತ್ತಾನೆ.

"ನನ್ನ ಪಾಲಿನ ದೇವರಾಗಿ ಬಂದು, ಈ ದಿನ ನನ್ನ ಪ್ರಾಣವನ್ನು ರಕ್ಷಿಸಿದಿರಿ. ಈ ನಿಮ್ಮ ಉಪಕಾರವನ್ನು ನಾನು ಹೇಗೆ ತೀರಿಸಬಲ್ಲೆ."

"ಛೆ! ಛೆ! ಇದೇನು ಮಹಾಕೆಲಸ ಎಂದು ಹೀಗಾಡುತ್ತೀರ. ನಾನು ಮಾಡಿದುದು ಹೆಚ್ಚೇನೂ ಅಲ್ಲ."

"ಈ ಹುಲಿಯನ್ನು ಬರಿಗೈಯಲ್ಲೇ ಕೊಂದು ನನ್ನ ಜೀವವನ್ನು ಉಳಿಸಿದುದು ಹೆಚ್ಚಲ್ಲವೇ? ಅಂತೂ ನಿಮ್ಮದು ಮಹಾಧೈರ್ಯ."

"ನಿಮ್ಮ ಸೌಂದರ್ಯವೇ ನನ್ನ ತೋಳಲ್ಲಿ ಧೈರ್ಯವನ್ನು, ಭೀಮ ಬಲವನ್ನು ತುಂಬಿತು. ನಿಮ್ಮ ಜೀವ ಆಪತ್ತಿನಲ್ಲಿ ಸಿಲುಕಿದಾಗ, ಒಂದು ಹುಲಿಯೇನು, ಕಾಡಿನಲ್ಲಿರುವ ಹುಲಿಗಳೆಲ್ಲಾ ಮುಂದೆಯಾಗಿ ಬಂದು ಮೇಲೆ ಬಿದ್ದಿದ್ದರೂ, ಅವೆಲ್ಲವನ್ನೂ ಹೀಗೇ ಸೀಳಿ ಬಿಸುಡುತ್ತಿದ್ದೆ. ಅದಿರಲಿ – ನಿಮ್ಮ ನ್ನೊಂದು ಪ್ರಶ್ನೆ ಕೇಳಬಹುದೇ?"

"ಏನು ಕೇಳಿ?"

"ಇಂಥ ಭಯಂಕರ ಕಾಡಿನಲ್ಲಿ, ಇಂಥ ಸಂಜೆಗತ್ತಲ ಅವೇಳೆಯಲ್ಲಿ ಒಂಟಿಯಾಗಿ ಬಂದಿರೇಕೆ?"

'ಮೂರ್ತಿಯ ಪ್ರಶ್ನೆಯನ್ನು ಕೇಳಿ ಆಕೆಯ ಮುಖ ಏಕೋ ಲಜ್ಜೆ ಗೆಂಪಾಗುತ್ತದೆ. ಕೂಡಲೇ ಉತ್ತರ ಕೊಡದೆ, ಸುಮ್ಮನೆ ಕಾಲ ಬೆರಳಿನಿಂದ ನೆಲ ಕೆರೆಯುತ್ತಾ ನಿಲ್ಲುತ್ತಾಳೆ. ಆಕೆ ತನ್ನ ಪ್ರಶ್ನೆಗೆ ಉತ್ತರ ಕೊಡದೆ ಸುಮ್ಮನೆ ನಿಂತುದನ್ನು ಕಂಡ ಮೂರ್ತಿ ತಾನೇ ಪುನಃ ಪ್ರಶ್ನಿಸುತ್ತಾನೆ—

"ಅದೇಕೆ ಸುಮ್ಮನೆ ನಿಂತಿರಿ? ಆ ಪ್ರಶ್ನೆಯನ್ನು ನಾನು ಕೇಳ ಬಾರದಾಗಿತ್ತೆ?"

"ಛೆ, ಛೆ! ಹಾಗೇನೂ ಇಲ್ಲ."

" ಮತ್ತೆ........"

" ನಿಮ್ಮ ಪ್ರಶ್ನೆಗೆ........ಹೇಗೆ ಉತ್ತರ ಹೇಳುವುದೆಂದು........ ಯೋಚಿಸುತ್ತಿದ್ದೆ........"

" ಏಕೆ ನನ್ನ ಪ್ರಶ್ನೆಗೆ ಉತ್ತರ ಹೇಳುವುದು ಅಷ್ಟು ಕಷ್ಟವೇ ? "

" ಹಾಗೇನೂ ಅಲ್ಲ........"

" ಮತ್ತೆ........"

" ಹೇಳಿದರೆ ನೀವು ಏನು ತಿಳಿದುಕೊಳ್ಳುತ್ತೀರೋ........ಎಲ್ಲಿ ನಿರ್ಲಜ್ಜೆ ಎನ್ನುತ್ತೀರೋ........ಏನೋ........"

" ಅಂಥ ಅನುಮಾನ ಬೇಡಿ. ನಿಮ್ಮ ಮನಸ್ಸಿನಲ್ಲಿರುವ ಮಾತನ್ನು ಹೇಳಿ."

" ಈ ದಿನ....ಈ ದಿನ....ಮಧ್ಯಾಹ್ನ ಟಿ. ಬಿ. ಮುಂದಿನ ಕೈಸಾಲೆ ಯಲ್ಲಿ....ನೀವು....ಜಲಪಾತವನ್ನು ನೋಡುತ್ತಾ ಕುಳಿತಿರಲಿಲ್ಲವೇ ?.... "

" ಹೌದು."

" ಆಗ ನಾನೂ ನಿಮ್ಮನ್ನು ನೋಡಿದೆ...."

" ಹಾಗೇ...."

" ನಾನು ನಿಮ್ಮನ್ನು ನೋಡಿದುದು ನಿಮಗೆ ತಿಳಿಯಿತೋ ಇಲ್ಲವೋ. ನಾನಂತೂ ನಿಮ್ಮನ್ನು ನೋಡಿದೆ........"

—ಅಷ್ಟು ಹೇಳಿ ಆಕೆ ಮತ್ತೆ ಅವನತಶಿರೆಯಾಗಿ ಮಾತನ್ನು ನಿಲ್ಲಿಸಿದಳು.

" ಮುಂದೆ ಹೇಳಿ, ಅದೇಕೆ ಮಾತು ನಿಲ್ಲಿಸಿದಿರಲ್ಲಾ ? "

—ಮೂರ್ತಿಯೇ ಒತ್ತಾಯ ಮಾಡಿ ಕೇಳಿದ.

" ಆಗ........ಆಗ........ನಿಮ್ಮನ್ನು ನೋಡುತ್ತಿದ್ದ ಹಾಗೆ........ ನನಗೆ....ಏನೋ ಆಗಿಹೋಯಿತು...."

" ಏನಾಯಿತು ? "

" ಏನೋ ನನ್ನ ಬಾಳಿನ ಬಯಕೆ ಸಫಲವಾದಂತಾಯಿತು....ಅಲ್ಲೇ ನಿಮ್ಮನ್ನು ಮಾತನಾಡಿಸಬೇಕು ಎಂದುಕೊಂಡೆ. ಆದರೆ ಆಗಲಿಲ್ಲ........

ಅದಕ್ಕಾಗಿ....ಅದಕ್ಕಾಗಿ....ನೀವು ಸಂಜೆ ವಾಕಿಂಗ್ ಹೊರಟಾಗ ನಿಮ್ಮನ್ನು ಹಿಂಬಾಲಿಸಿದೆ....ಆದರೆ ಸಂಜೆಗತ್ತಲಿನಲ್ಲಿ ದಾರಿ ತಪ್ಪಿತು....."

" ನನಗಾಗಿ, ಈ ಮಹಾಕಾನನದ ಕಾರ್ಗತ್ತಲಲ್ಲಿ ಬಂದಿರಾ ನೀವು...."

" ಹೂ. ಆದರೆ ನನ್ನ ಮೇಲೆ ನಿಮಗೆ ವಿಶ್ವಾಸವಿದೆಯೋ ಇಲ್ಲವೋ ನಾನು ಕಾಣೆ........"

" ಖಂಡಿತವಾಗಿಯೂ ಇದೆ."

" ಇದ್ದರೆ...."

" ರೆ—? "

" ನೀವು ಎನ್ನಬೇಡಿ........"

" ಏನು ಎನ್ನಬೇಕು ? "

" ನಿಮಗೆ ನನ್ನಲ್ಲಿರುವ ವಿಶ್ವಾಸವನ್ನೇ ಕೇಳಿ ನೋಡಿ. ಅದು ಏನೆಂದು ಕರೆಯಬೇಕೆನ್ನುತ್ತದೋ ಹಾಗೆ ಕರೆಯಿರಿ. ಅದೇ ನನಗೆ ಒಪ್ಪಿಗೆ."

—ಎನ್ನುತ್ತಾಳೆ ಆಕೆ, ಆ ಮಾತನ್ನು ಆಡುತ್ತಲೇ ನೆಲದತ್ತ ಬಾಗಿಸಿದ ತಲೆಯನ್ನು ಮೇಲೆತ್ತಿ ನೋಡಿ. ಹಾಗೆ ನೋಡಿದಾಗ ಆಕೆಯ ಕಣ್ಣುಗಳು ಮಸೆದ ಮಿಂಚಿನ ಕಾಂತಿಯಿಂದ ಥಳಥಳಿಸುತ್ತವೆ.

ಆಕೆಯ ಮಾತನ್ನು ಕೇಳಿದ ಮೂರ್ತಿಯ ಹೃದಯ ಒಲೆಯ ಮೇಲಿನ ಹಾಲಿನಂತೆ ಉಕ್ಕಿ, ಆ ಭಾವೋತ್ಕರ್ಷವನ್ನು ಸಹಿಸಲಾಗದೆ ಆಲಂಬನವನ್ನು ಬಯಸಿದಂತೆ, ಆಕೆಯನ್ನು ಬಿಗಿದಪ್ಪಿ—

" ಪ್ರಿಯತಮೆ "

—ಎನ್ನುತ್ತಾನೆ.

ಆಕೆಯೂ—

" ಪ್ರಾಣೇಶ್ವರ "

—ಎಂದು ಅವನ ತುಟಿಗೆ ತನ್ನ ಕೆಂದುಟಿಗಳನ್ನು ಸೋಕಿಸುತ್ತಾಳೆ. ತುಟಿ ಸೋಕಿದ ಮೂರ್ತಿಗೆ ಮತ್ತು ಬಂದಹಾಗಾಗಿ, ತನ್ನನ್ನು ಅಪ್ಪಿದ ಹೆಣ್ಣನ್ನು ಮತ್ತಷ್ಟು ಬಿಗಿಯಾಗಿ ಆಲಂಗಿಸುತ್ತಾನೆ.

ಆಕೆಯ ತೋಳುಗಳೂ ಅವನ ಮೈಯನ್ನು ಬಿಗಿಯುತ್ತವೆ.

ಆ ಆಲಿಂಗನದ ಆನಂದದಲ್ಲಿ ಸುತ್ತಲ ಜಗತ್ತಿನ ಪ್ರಜ್ಞೆಯೇ ಮರೆತು ಹೋಗುತ್ತದೆ ಅವರಿಗೆ.

ಎಲ್ಲೊ........ಎಲ್ಲೋ........ಕನಸಿನಾಳದಲ್ಲಿ........

# ೪

'ಠಣ್' ಎಂದು ಎಲ್ಲೋ ಗಂಟೆ ಹೊಡೆದ ಸದ್ದು ಕೇಳಿ, ಮೂರ್ತಿ ತನ್ನನ್ನು ಕವಿದ ಅರೆನಿದ್ದೆಯಿಂದ ಮೇಲೆದ್ದ. ನಿದ್ರೆಯಲ್ಲಿ ಕಂಡ ಕನಸಿನ ಸವಿ ಇನ್ನೂ ನಾಲಿಗೆಯ ಮೇಲಿದ್ದು, 'ಥೂ. ಏಕೆ ಎಚ್ಚರವಾಯಿತೋ' ಎಂದು ತನ್ನನ್ನು ತಾನೇ ಶಪಿಸಿಕೊಂಡು, ಇನ್ನೂ ನಿದ್ರೆಯ ಮುಂಪರ ಕವಿದ ಕಣ್ಣನ್ನು ಉಜ್ಜಿಕೊಳ್ಳುತ್ತಾ ಸುತ್ತಲೂ ನೋಡಿದ.

ಆಗ ಅವನಿಗೆ ತಾನು ರೈಲ್ವೆ ನಿಲ್ದಾಣದಲ್ಲಿರುವುದು ಅರಿವಾಯಿತು.

ಅದುವರೆಗೂ ಮೂರ್ತಿಯನ್ನು ಮಾತನಾಡಿಸದಿದ್ದ ಪೋರ್ಟರ್, ಆಗ ಅವನ ಹತ್ತಿರ ಬಂದು—

"ಟಿಕೆಟ್ ತೆಗೆದುಕೊಂಡಿದೀರಾ ಸಾರ್?"

—ಎಂದು ಕೇಳಿದ.

"ಇನ್ನೂ ಇಲ್ಲ."

"ಫಸ್ಟ್ ಬೆಲ್ಲಾಯಿತು. ಈಗ ಟಿಕೆಟ್ಟು ಕೊಡುತ್ತಾರೆ. ಹೋಗಿ ತೆಗೆದುಕೊಳ್ಳಿ."

—ಎಂದು ಹೇಳಿ, ಕೈಲಿ ಹಿಡಿದಿದ್ದ ಲಾಂದರವನ್ನು ತೂಗಾಡಿಸುತ್ತಾ ಯಾವುದೋ ಕೆಲಸದ ಮೇಲೆ ಹೋದ.

ಆತನ ಮಾತಿನಂತೆ, ಮೂರ್ತಿ ಮೇಲೆದ್ದು, ಮೈಯ ನರನರವನ್ನೂ ಆವರಿಸಿದ ನಿದ್ರೆಯ ಜಡತೆಯನ್ನು ಮುರಿಯುವವನಂತೆ ಮೈ ಮುರಿದು, ಟಿಕೆಟ್ಟನ್ನು ತರಲು ಹೋದ.

ಮೂರ್ತಿ ಟಿಕೆಟ್ಟನ್ನು ತೆಗೆದುಕೊಳ್ಳುತ್ತಿರುವಾಗಲೇ, ಸ್ಟೇಷನ್ನಿನ ಹಿಂಭಾಗದಲ್ಲಿ ಅದುವರೆಗೂ ಹರಡಿದ ಕತ್ತಲನ್ನು, ಮೌನವನ್ನು, ಕತ್ತರಿಸಿ, ಬಸ್ಸೊಂದು ಬಂದು ನಿಂತಿತು.

ಬಸ್ಸಿನಲ್ಲೂ ಹೆಚ್ಚು ಜನರಿದ್ದಂತಿರಲಿಲ್ಲ. ಬಸ್ಸು ನಿಲ್ಲುತ್ತಿದ್ದ ಹಾಗೇ ಇಬ್ಬರು ಬಸ್ಸಿನಿಂದ ಅವಸರವಸರವಾಗಿ ಕೆಳಗಿಳಿದರು. ಆ ಇಬ್ಬರ ಪೈಕಿ

ಒಬ್ಬ ಗಂಡಸು, ಇನ್ನೊಂದು ವ್ಯಕ್ತಿ ಹೆಂಗಸು ಎಂಬುದು ಬಸ್ಸಿನ ಒಳಗಿನ ದೀಪದ ಕ್ಷೀಣ ಕಾಂತಿಯಿಂದ ಮೂರ್ತಿಗೆ ತಿಳಿಯಿತು.

ಬಸ್ಸಿನಿಂದ ಇಳಿದ ಹೆಂಗಸು ಹಾಗೇ ಬಸ್ಸಿನ ಬದಿಯಲ್ಲಿ ನಿಂತುಕೊಂಡಳು. ಗಂಡಸು, ಬಸ್ಸಿನ ಹಿಂಭಾಗದಲ್ಲಿ ನಿಂತು, ಒಳಗಿನ ಕಂಡಕ್ಟರಿಗೆ—

" ಟಾಪ್ ಮೇಲೆ ಸಾಮಾನಿದೆ. ಬೇಗ ಇಳಿಸಿಕೊಡಿ. ರೈಲಿಗೆ ಹೊತ್ತಾಯ್ತು."

—ಎಂದು ಕೂಗಿ ಹೇಳಿದ.

" ಇನ್ನೂ ರೈಲು ಹೊರಡೋಕೆ ಇಪ್ಪತ್ತಿಮಿಷ ಟೈಂ ಇದೆ. ಅವಸರ ಮಾಡ್ಕೋಬ್ಯಾಡ್ರಿ."

—ಎಂದು ಆ ಪ್ರಯಾಣಿಕರಿಗೆ ಅಭಯ ನೀಡುತ್ತಲೇ ಕಂಡಕ್ಟರ್, ಯಥಾಸಾವಕಾಶವಾಗಿ, ಬಸ್ಸಿನ ಹಿಂಭಾಗದ ನಿಚ್ಚಣಿಕೆಯನ್ನು ಹತ್ತಿ, ' ಟಾಪ್ ' ನ ಮೇಲಿದ್ದ ಸಾಮಾನುಗಳನ್ನು ಇಳಿಸಿಕೊಟ್ಟ.

ಟಾಪ್‌ನ ಮೇಲಿದ್ದ ಸಾಮಾನುಗಳು ಎರಡೇ. ಒಂದು ಟ್ರಂಕು, ಒಂದು ಹಾಸಿಗೆಯ ಸುರುಳಿ – ಆದರೂ ಅವು ಸಾಕಷ್ಟು ಭಾರವಾದವು ಎಂಬುದು, ಅದನ್ನು ಇಳಿಸಿಕೊಳ್ಳಲು, ಆ ಗಂಡು ಪ್ರಯಾಣಿಕ ಪಡುತ್ತಿದ್ದ ಶ್ರಮದಿಂದಲೇ ಕಾಣುತ್ತಿತ್ತು. ಹಾಸಿಗೆಯನ್ನೇನೋ ಆತ ಶ್ರಮಪಟ್ಟು ತಾನೊಬ್ಬನೇ ಇಳಿಸಿಕೊಂಡ. ಆದರೆ ಟ್ರಂಕನ್ನು ಇಳಿಸಿಕೊಳ್ಳುವುದು ಅಷ್ಟು ಸುಲಭವಾಗಲಿಲ್ಲ. ಇಳಿಸಿಕೊಳ್ಳಲು ಎತ್ತಿದ ತೋಳಿನ ಮೇಲೆ ಬಿದ್ದ ಟ್ರಂಕಿನ ಭಾರವನ್ನು ಹೊರಲಾಗದೆ, ಅದೆಲ್ಲವನ್ನು ನೋಡುತ್ತಾ ನಿಂತಿದ್ದ ಹೆಣ್ಣಿನ ಕಡೆಗೆ ತಿರುಗಿ—

" ಅದೇನಾಟ ನೋಡ್ತಾ ಇದೀಯ ನಿಂತ್ಕೊಂಡು, ಅಯ್ಯೋ – ಮೂದೇವಿ. ಇದನ್ನು ಹಿಡುಕೋ ಬಾ."

—ಎಂದು ಕೂಗಿದ ಆಯಾಸ, ಸಿಟ್ಟು, ಅಧಿಕಾರ ಎಲ್ಲವೂ ಬೆರೆತ ಧ್ವನಿಯಲ್ಲಿ.

ಆ ಮಾತು ಕೇಳಿದ ಹೆಣ್ಣು, ಯಾಂತ್ರಿಕವಾಗಿ ಅವನ ಬಳಿ ಸಾರಿ ಟ್ರಂಕನ್ನು ಇಳಿಸಿಕೊಳ್ಳಲು ನೆರವಾದಳು.

ಅವರ ಸಾಮಾನನ್ನು ಇಳಿಸಿಕೊಟ್ಟ ಬಳಿಕ, ಕಂಡಕ್ಟರು ಒಳಗೆ ಕುಳಿತು 'ರೈಟ್' ಎಂದು ಸೂಚನೆ ಕೊಟ್ಟ ಕೂಡಲೇ ಬಸ್ಸು ಗೊರ್ರೆಂದು ಸದ್ದು ಮಾಡುತ್ತಾ ಹೊರಟುಹೋಯಿತು.

ಬಸ್ಸಿನಿಂದ ಪ್ರಯಾಣಿಕರಿಬ್ಬರು ಇಳಿದುದನ್ನು, ಅವರ ಬಳಿ ಭಾರವಾದ ಸಾಮಾನು ಇದ್ದುದನ್ನು ಮೂರ್ತಿಯಂತೆಯೇ, ಆ ನಿಲ್ದಾಣದ ಪೋರ್ಟರೂ ನೋಡಿರಬೇಕು. ಆತ, ಸಾಮಾನನ್ನು ಇಳಿಸಿ, ಆ ಆಯಾಸದಿಂದ ಮುಖದ ಮೇಲೆ ಮೂಡಿದ ಬೆವರನ್ನು, ಹೆಗಲ ಮೇಲಿನ ಉತ್ತರೀಯದ ತುದಿಯಿಂದ ಒರೆಸಿಕೊಳ್ಳುತ್ತಿದ್ದ ಪ್ರಯಾಣಿಕನ ಬಳಿ ಹೋಗಿ—

"ಸಾಮಾನು ಗಾಡೀಗೆ ಇಟ್ಟುಕೊಡ್ಲೆ ಬುದ್ಧಿ"

—ಎಂದು ಕೇಳಿದ.

"ಏನು ಕೊಡಬೇಕು ?"

—ಆತ ಕೇಳಿದ.

"ಎಲ್ಲಿಗೆ ಹೋಗಬೇಕು ನೀವು ?"

—ಪೋರ್ಟರ್ ಪ್ರಶ್ನೆಮಾಡಿದ.

"ಕಡೂರಿಗೆ."

"ಹಂಗಾದ್ರೆ ಬೆಂಗಳೂರಿಗೆ ಹೋಗೋ 'ಥ್ರೂ' ಗಾಡೀಲೇ ಹೋಗಿ. ಬೀರೂರಿನಲ್ಲಿ ಬದಲಾಯಿಸೋದು ಇರೋಕಿಲ್ಲ. ಆ ಗಾಡಿಗೆ ಮಡಗಿ ಕೊಡ್ತೀನಿ – ಎಂಟಾಣೆ ಕೊಡಿ."

"ಎರಡಾಣೆ ಕೊಡ್ತೀನಿ. ಬೇಕಾದ್ರೆ ತಗೊಂಡುಹೋಗಿ ಇಡು."

"ಊಹೂ. ರೈಲಿಗೆ ಹೊತ್ತಾಯ್ತು. ಸುಮ್ನೆ ಚೌಕಾಶಿ ಯಾಕೆ, ಆರಾಣೆ ಕೊಟ್ಬಿಡಿ. ಹೆಗಲು ಮುರಿಯೋ ಅಷ್ಟು ಭಾರ ಐತೆ ಸಾಮಾನು"

—ಎಂದ ಪೋರ್ಟರ್, ಒಮ್ಮೆ ಹಾಸಿಗೆಯನ್ನು ಒಂದೇ ಕೈಲೆತ್ತಲು ಯತ್ನಿಸಿ, ಆಗದೆ.

"ಅದೆಲ್ಲಾ ಆಗೋದಿಲ್ಲ. ಮೂರಾಣೆ ಕೊಡ್ತೀನಿ. ಅಷ್ಟೆ. ಇಷ್ಟ ಇದ್ರೆ ಸಾಮಾನು ಎತ್ತು, ಇಲ್ದೆಹೋದ್ರೆ ನಿನ್ನ ಪಾಡಿಗೆ ನೀನು ಹೋಗು."

—ಎಂದ ಪ್ರಯಾಣಿಕ ಗಡುಸಾಗಿ.

" ಸರ್ಕ್ಕಾರಿ ರೇಟ್ ನಾಲ್ಕಾಣೆ ಐತೆ. ಅಷ್ಟು ಕೊಟ್ರೆ ಕೊಡಿ, ಬಿಟ್ರೆ ಬಿಡಿ."

—ಎಂದು ತನಗೆ ಆ ಕೂಲಿಯೇ ಬೇಕಾಗದವನಂತೆ ಸ್ಟೇಷನ್ನಿನ ಕಡೆ ಹೆಜ್ಜೆ ಹಾಕಿದ.

ಆ ಮಾತಿಗೆ ಉತ್ತರವಾಗಿ ಹೆಂಗಸು, ಪ್ರಯಾಣಿಕನಿಗೆ ಪಿಸುಧನಿಯಲ್ಲಿ ಏನು ಹೇಳಿದಳೋ ಏನೋ ಆತ ಒರಟಾಗಿ—

" ನಿಮ್ಮಪ್ಪನ ಮನೆ ಗಂಟೇನು ಹೋಗಬೇಕು ಹೇಳು. ನಾಲ್ಕಾಣೆ ಅಂದ್ರೆ ಸಸಾರ ಆಗಿಹೋಯ್ತು. ದುಡಿಯೋರಿಗಾದ್ರೆ ಆ ದುಃಖ ಗೊತ್ತು. ಹ್ಞು - ಹೆಂಗಸರಿಗೇನು ಗೊತ್ತು ಹೇಳು. ದುಡಿಯೋನೊಬ್ಬನಿದ್ರೆ ಖರ್ಚು ಮಾಡಿಸೋದು ಸುಲಭ."

—ಎಂದು ಗೊಣಗುಟ್ಟುತ್ತಲೇ—

" ಹೂ, ಹೂ, ಇವತ್ತು ಬೆಳಿಗ್ಗೆ ನರಿ ಮುಖ ನೋಡಿ ಎದ್ದಿದ್ದೇಂತ ಕಾಣುತ್ತೆ. ಹತ್ತು ನಿಮಿಷದ ಕೆಲಸಕ್ಕೆ ನಾಲ್ಕಾಣೆ ದುಡಿದೆ. ತಗೋ...."

—ಎಂದು ಪೋರ್ಟರ್‌ಗೆ ಅಪ್ಪಣೆಮಾಡಿ—

" ನೀನು ಹೋಗಿ ಗಾಡೀಲಿ ಕೂತುಕೋ. ನಾನು ಟಿಕೆಟ್ ತಗೊಂಡು ಬರ್ತೀನಿ."

—ಎಂದು ಹೆಂಗಸಿಗೆ ಅಪ್ಪಣೆ ಮಾಡಿ, ಅಲ್ಲಿ ನಿಲ್ಲದೆ ಟಿಕೆಟ್ ತೆಗೆದು ಕೊಳ್ಳಲು ನಿಲ್ದಾಣದ ಕಡೆ ಬಂದ.

ಆ ವೇಳೆಗಾಗಲೇ ತಾನು ಟಿಕೆಟ್ಟನ್ನು ತೆಗೆದುಕೊಂಡ ಮೂರ್ತಿ, ' ಬುಕ್ಕಿಂಗ್ ವಿಂಡೊ ' (Booking Window) ದ ಬಳಿ ಬಂದ ಆ ಪ್ರಯಾಣಿಕನಿಗೆ ಟಿಕೆಟ್ ಕೊಳ್ಳಲು ಜಾಗ ಬಿಟ್ಟು, ಒಂದು ಪಕ್ಕಕ್ಕೆ ನಿಂತು, ಯಾವ ಉದ್ದೇಶವೂ ಇಲ್ಲದ ಕುರುಡು ಕುತೂಹಲದಿಂದ ಆ ಪ್ರಯಾಣಿಕನನ್ನು ನೋಡಿದ.

ಆತ ನೋಡುವುದಕ್ಕೆ ಅಷ್ಟೇನೂ ದಷ್ಟಪುಷ್ಟವಾಗಿರಲಿಲ್ಲ. ಆಳು ಅಷ್ಟು ಎತ್ತರವೂ ಆಗಿರಲಿಲ್ಲ. ತೆಳ್ಳನೆಯ ಪಂಚೆಯುಟ್ಟು, ಮೇಲೆ ಮುಚ್ಚು ಎದೆಯ ಕೋಟನ್ನು ಧರಿಸಿ, ಅದರ ಮೇಲೆ ಉತ್ತರೀಯವನ್ನು ಹೊದ್ದು ಕೊಂಡಿದ್ದ. ಆತನ ಮುಖ ಟಿಕೆಟ್ ರೂಂನ ಕಡೆ ತಿರುಗಿದ್ದುದರಿಂದ, ಆತನ

ಮುಖ ಮೂರ್ತಿಗೆ ಕಾಣಲಿಲ್ಲ. ಅವನತ್ತ ತಿರುಗಿದ ಬೆನ್ನಿನ ಮೇಲೆ, ಭುಜದ ವರೆಗೂ ಇಳಿಬಿದ್ದ, ನಾಟಕದವರ ತರಹ ಕತ್ತರಿಸಿದ ಕೂದಲು ಕಾಣಿಸಿತು.

'ಪರವಾಯಿಲ್ಲ, ನೋಡೋಕೆ ಹೀಗಿದ್ರೂ ಒಳ್ಳೆ ಜೋರಿನ ಆಸಾಮಿ'

—ಎಂದುಕೊಳ್ಳುತ್ತಲೇ ಮೂರ್ತಿ, ಸಿಗರೇಟು ಹೊತ್ತಿಸಿ, ಆ ವೇಳೆಗೆ ಸಾಮಾನು ಹೊತ್ತ ಪೋರ್ಟರ್‌ನನ್ನು ಹಿಂಬಾಲಿಸಿ ಬಂದ ಆ ಪ್ರಯಾಣಿಕನ ಜೊತೆಯ ಹೆಂಗಸನ್ನು ನೋಡಿದ.

ಭಾರವಾದ ಸಾಮಾನನ್ನು ಹೊತ್ತು ತೂಗಾಡುತ್ತಾ ನಡೆಯುತ್ತಿದ್ದ ಪೋರ್ಟರನ ಹಿಂದೆ ಬರುತ್ತಿದ್ದ ಆ ಹೆಂಗಸು ತಲೆತಗ್ಗಿಸಿ ನಡೆಯುತ್ತಿದ್ದುದರಿಂದ ಮೂರ್ತಿಗೆ ಆಕೆಯ ಮುಖ ಸ್ಪಷ್ಟವಾಗಿ ಕಾಣಲಿಲ್ಲವಾದರೂ, ಆಕೆ ಅವನ ಮುಂದೆ ಹಾದುಹೋಗುವಾಗ ಒಮ್ಮೆ, ಒಂದು ಕ್ಷಣಕಾಲ ಮುಖವೆತ್ತಿ, ಅವನ ಕಡೆ ಕಣ್ಣು ಹಾಯಿಸಿದಾಗ, 'ಬುಕಿಂಗ್' ಕಿಟಕಿಯೊಳಗಿನಿಂದ ತೂರಿಬಂದ ದೀಪದ ಅಲ್ಪ ಬೆಳಕಿನಲ್ಲೂ ಆ ಮುಖ ಸುಂದರವೆಂದೇ ತೋರಿತು. ಅವನತ್ತ ಒಂದು ಗಳಿಗೆ ಸುಳಿದು ಮಾಯವಾದ ಆ ಕಣ್ಣುಗಳ ಬೆಳಕು, ತನ್ನ ಸುಮಧುರ ಸೌರಭದಿಂದ ದೂರವಿರುವ ಕಣ್ಣನ್ನು ತನ್ನತ್ತ ಎಳೆದುಕೊಳ್ಳುವ ಹೂವಿನಂತೆ, ಮೂರ್ತಿಯ ನೋಟವನ್ನು ತನ್ನತ್ತ ಸೆಳೆದುಕೊಂಡಿತು. ಮತ್ತೊಮ್ಮೆ ಆ ಮುಖ ಕಾಣುವುದೇನೋ ಎಂಬ ಆಶೆಯಿಂದ ಮೂರ್ತಿ ಆ ಕಡೆ ನೋಡಿದ. ಆದರೆ ಆಕೆಯ ಮುಖ ಕಾಣಲಿಲ್ಲ. ಆ ಹೆಣ್ಣು ಮೂರ್ತಿಯ ದೃಷ್ಟಿಪಥವನ್ನು ದಾಟಿ ಮುಂದೆ ನಡೆಯುತ್ತಿದ್ದಳು. ಅವನಿಗೆ ಕಂಡುದು ಆಕೆಯ ಹಿಂಭಾಗ ಮಾತ್ರ.

ಆಗ ಕಾಣಿಸಿದ ಆಕೆಯ ನೀಳ್ಗೂದಲ ದಪ್ಪ ಜಡೆ, ಜಡೆಯ ಅಗ್ರದಲ್ಲಿ ಮುಡಿದ ಹೆಣೆದ ಹೂವು, ದಟ್ಟ ಕೆಂಪು ಅಂಚಿನ ತೆಳು ಕೇಸರಿಯ ಬಣ್ಣದ ಸೀರೆಯುಡಿಯಲ್ಲೂ ಧೃಡವಾಗಿ ಕಾಣುವ ತೊಡೆಗಳ ನಡೆತಕ್ಕೆ ಏನೋ ಒಂದು ವಿಲಾಸವನ್ನೊದಗಿಸುವ ತುಂಬು ನಿತಂಬ – ಅವು ಆಕೆಯ ಅಂಗಲಾವಣ್ಯದ ಖಚಿತ ಸ್ವರೂಪವನ್ನು ನಿರ್ದಿಷ್ಟಪಡಿಸದಿದ್ದರೂ, ಕಾದಂಬರಿಯಲ್ಲಿ ಆಕಸ್ಮಿಕವಾಗಿ ಓದಿದ ಯಾವುದೋ ಒಂದು ರಸವತ್ತಾದ ಭಾಗ, ಪೂರ್ಣವಾಗಿ ಪುಸ್ತಕವನ್ನು ಓದದಿದ್ದರೂ, ವಾಚಕನ ಮನಸ್ಸಿನಲ್ಲಿ ಕಾದಂಬರಿ

ಸುಂದರವಾಗಿರಬೇಕು ಎಂಬ ನಿರೀಕ್ಷೆಯನ್ನು ಮೂಡಿಸಿ, ಪೂರ್ಣ ಗ್ರಂಥಾವಲೋಕನದ ಅಪೇಕ್ಷೆಯನ್ನು ಮೂಡಿಸುವಂತೆ, ಮೂರ್ತಿಯ ಮನಸ್ಸಿನಲ್ಲಿ 'ಆಕೆ ಅತಿ ಸೌಂದರ್ಯವತಿ ಅಹುದೋ ಅಲ್ಲವೋ ಅಂತೂ ಸಾಮಾನ್ಯವಾದ 'ಚಿಲ್ಲರೆ ವರ್ಗ'ದ ಹೆಣ್ಣಲ್ಲ' ಎಂಬ ಭಾವನೆಯನ್ನು ಮೂಡಿಸಿ, ಆ 'ಅಂದಾಜ'ನ್ನು ಖಚಿತಪಡಿಸಿಕೊಳ್ಳಲು ಆಕೆಯ ಮುಖವನ್ನು ಮತ್ತೊಮ್ಮೆ ನೋಡಬೇಕು ಎಂಬ ಅಭಿಲಾಷೆಯನ್ನು ಕೆರಳಿಸಿತು.

ಆ ಬಯಕೆಯನ್ನೇ ಹಿಂಬಾಲಿಸುವಂತೆ ಮೂರ್ತಿ, ತಾನೂ ಆ ಹೆಣ್ಣು ನಡೆದ, ರೈಲ್ವೆ ಬಂಡಿಗಳತ್ತ ನಡೆದ.

ಗಾಡಿಗಳಿಗೆ ಇನ್ನೂ ಎಂಜನ್ನನ್ನು ತಗಲಿಸಿರಲಿಲ್ಲವಾದುದರಿಂದ, ಇನ್ನೂ ಗಾಡಿಗಳಲ್ಲಿಯ ದೀಪ ಹೊತ್ತಿರದೆ ಕತ್ತಲೇ ತುಂಬಿತ್ತು. ಆದರೆ ಅಭ್ಯಾಸದಿಂದ ಪೋರ್ಟರ್‌ಗೆ ಎಲ್ಲಿ ನಿಂತಿರುವುದು ಎಲ್ಲಿಗೆ ಹೋಗುವ ಕ್ಯಾರೇಜ್ ಎಂದು ಗೊತ್ತಿದ್ದುದರಿಂದ, ಆ ಪ್ರಯಾಣಿಕರ ಸಾಮಾನನ್ನು ಬೆಂಗಳೂರಿಗೆ ಹೋಗುವ ಕ್ಯಾರೇಜ್‌ನಲ್ಲಿಟ್ಟು, ಹೊರಗೇ ನಿಂತಿದ್ದ ಹೆಂಗಸಿಗೆ—

"ನೀವು ಗಾಡೀಲಿ ಕೂತ್ಕೊಳ್ರಿ ಅಮ್ಮಾ"

—ಎಂದು ಹೇಳಿದ.

ಪೋರ್ಟರ್ ಗಾಡಿಯಲ್ಲಿ ಕುಳಿತುಕೊಳ್ಳಿ ಎಂದು ಹೇಳಿದರೂ ಆಕೆಗೇಕೊ ಗಾಡಿಯಲ್ಲಿ ಕುಳಿತುಕೊಳ್ಳುವ ಮನಸ್ಸಾಗಲಿಲ್ಲ.

"ಗಾಡೀಲಿ ದೀಪಾನೇ ಇಲ್ಲ"

—ಎಂದಳು ಮೆತುವಾದ ಧ್ವನಿಯಲ್ಲಿ.

"ಇನ್ನೇನು ಎಂಜನ್ ತಗುಲಿಸುತ್ತಿದ್ದ ಹಾಗೆ ದೀಪ ಬರ್ತದೆ. ಗಾಡೀಲಿ ಬ್ಯಾರೆ ಯಾರೂ ಇಲ್ಲ. ನೀವು ಕೂತ್ಕೊಂಡಿರ್ರಿ. ನಾನು ನಿಮ್ಮ ಹಾಸ್ಗೆ ತಗೊಂಡ್ಬಂದ್ಬಿಡ್ತೀನಿ."

—ಎಂದು ಹೇಳಿ ಪೋರ್ಟರ್ ಹಾಸಿಗೆಯನ್ನು ತೆಗೆದುಕೊಂಡುಬರಲು ಹೋದ. ಆದರೆ ಆಕೆ ಮಾತ್ರ ಗಾಡಿಯ ಒಳಗೆ ಹೋಗಿ ಕುಳಿತುಕೊಳ್ಳದೆ ಪೋರ್ಟರ್ ತಮ್ಮ ಸಾಮಾನಿಟ್ಟ ಗಾಡಿಯ ಬಳಿಯಲ್ಲೇ, ಗಾಡಿಗೆ ಒರಗಿಕೊಂಡು ನಿಂತಿದ್ದಳು.

ಪೋರ್ಟರ್ ಹಾಸಿಗೆಯನ್ನು ತರುವುದರೊಳಗಾಗೇ, ಆಕೆಯ ಜೊತೆಗೆ

ಬಂದ ಗಂಡಸು ಟಿಕೆಟ್ ತೆಗೆದುಕೊಂಡುಬಂದು, ಗಾಡಿಯ ಪಕ್ಕದಲ್ಲಿ ಸುಮ್ಮನೆ ನಿಂತ ಹೆಂಗಸನ್ನು ನೋಡಿ—

"ಇದ್ಯಾಕೆ ಇಲ್ಲಿ ನಿಂತಿದೀಯಾ, ಗಾಡೀಲೀ ಕೂತುಕೋಬಾರದಾಗಿತ್ತೆ?"

—ಎಂದು ಕೇಳಿದ.

"ಗಾಡೀಲಿ ದೀಪ ಇಲ್ಲ."

—ಆಕೆ ಪೋರ್ಟರ್‌ಗೆ ಕೊಟ್ಟ ಉತ್ತರವನ್ನೇ ಆತನಿಗೂ ಕೊಟ್ಟಳು.

"ಇಲ್ದೇಹೋದ್ರೇನಾಯ್ತು? ಅಲ್ಲೇನು ಮುತ್ತು ಪೋಣಿಸೋದಿತ್ತೇನು?"

—ಎಂದು ಒರಟಾಗಿ ಕೇಳಿದ.

"ಕತ್ಲಲ್ಲಿ ಒಬ್ಳೇ ಕೂತುಕೊಳ್ಳಲಿಕ್ಕೆ ಆಗಲಿಲ್ಲ."

"ಇಲ್ಲಿ ಮಾತ್ರ ದೀಪ, ಜೊತೆ ಎಲ್ಲಾ ಇದೆ ಅಲ್ವೇ?"

—ಎಂದು ಕಹಿಯಾದ ಧ್ವನಿಯಲ್ಲಿ ಕೇಳಿ, ತಟಕ್ಕನೆ ಅನತಿ ದೂರದಲ್ಲಿ ನಿಲ್ದಾಣದ ಕಂಭಕ್ಕೆ ಒರಗಿಕೊಂಡು ಸಿಗರೇಟು ಸೇದುತ್ತಾ ನಿಂತಿದ್ದ ಮೂರ್ತಿಯತ್ತ ನೋಡಿದ.

ಅದುವರೆಗೂ ಅವರಿಬ್ಬರ ಮಾತು ಕೇಳುತ್ತ ಅವರತ್ತಲೇ, ನೋಡುತ್ತ ನಿಂತಿದ್ದ ಮೂರ್ತಿ ತಟಕ್ಕನೆ ಬೇರೆ ಕಡೆ ನೋಡುತ್ತಾ ನಿಂತುಕೊಂಡ. ಅದನ್ನು ಕಂಡು ಆತನಿಗೆ ಏನು ಅನಿಸಿತೊ ಏನೊ—

"ಈ ಆಟ ಎಲ್ಲಾ ಬಿಟ್ಟು ಸುಮ್ಮನೆ ಗಾಡೀಲಿ ಕೂತ್ಕೋಹೋಗು. ನಾನಿಲ್ಲೇ ಇರ್ತೀನಿ. ದೀಪ ಇಲ್ದೇ ಹೋದ್ರೆ ಯಾವ ದೈಯ್ಯಾನೂ ಬರೋದಿಲ್ಲ."

—ಎಂದು ಗದರಿಸಿಕೊಂಡ.

ಆ ಮಾತನ್ನು ಕೇಳಿದ ಆಕೆ ಮರುಮಾತಾಡದೆ, ಚಾವಟಿಯ ಮೊನೆ ತೋರಿಸಿದ ದಾರಿಯಲ್ಲಿ ನಡೆಯುವ ಪಶುವಿನಂತೆ, ಸುಮ್ಮನೆ ಗಾಡಿಯಲ್ಲಿ ಹೋಗಿ ಕುಳಿತುಕೊಂಡಳು.

ತಾನು ಆಕೆಯಮೇಲೆ ಅಧಿಕಾರ ಚಲಾಯಿಸುವ ಒರಟಾದ ರೀತಿಯನ್ನು ಕಂಡು ಯಾರಾದರೂ ಬೇಸರಿಸಿಕೊಳ್ಳಬಹುದು, ಅಥವಾ ಬೇರೆ

ಯವರಿಗೆ ಕೇಳಿಸಬಹುದಾದಂಥ ಸನ್ನಿವೇಶದಲ್ಲಿ ಅಷ್ಟು ಅಸಭ್ಯವಾಗಿ ಮಾತ ನಾಡಿಸಿದರೆ ಎಂತಹ ಹೆಣ್ಣಿನ ಮನಸ್ಸಾದರೂ ನೋಯಬಹುದು ಎಂಬ ವಿಚಾರ, ವಿವೇಚನೆ, ಅಳುಕು ಯಾವುದೂ ಇಲ್ಲವೆ, ನಿಲ್ದಾಣ ತನ್ನ ಮನೆ ಎಂಬ ರೀತಿಯಲ್ಲಿ ವ್ಯವಹರಿಸುತ್ತಿದ್ದ ಆತನ ನಿರ್ಲಜ್ಜತನವನ್ನು ಕಂಡು ಮೂರ್ತಿಗೆ ಬೇಸರವಾಯಿತು. ಬೇಸರವೇ ಏನು— ತಾನೇ ಆ ಹೆಂಗಸಾಗಿದ್ದು, ತನ್ನನ್ನೇ ಅವನು ಹಾಗೆ ಮಾತನಾಡಿಸಿದ್ದರೆ, ಆಕೆಯ ಹಾಗೆ ಮೂಕ ಪಶುವಿನಂತೆ, ಅವನ ಹೇಳಿದ ಹಾಗೆ ನಡೆಯದೆ 'ಕಪಾಳಕ್ಕೆ ಬಿಗಿದು ಬುದ್ಧಿ ಕಲಿಸುತ್ತಿದ್ದೆ' ಎನಿಸಿತು. ಆ ಅನಿಸುವಿಕೆಯೊಂದಿಗೆ ಅವನ ಸಹಾನುಭೂತಿ ಎಲ್ಲವೂ ಸಾಧು ಪ್ರಾಣಿ ಕುರಿಯಂತೆ, ಅವನು ಹೇಳಿದಹಾಗೆ ಮಾಡುತ್ತಿದ್ದ ಆ ಹೆಣ್ಣಿನತ್ತ ತಿರುಗಿತು. ಅಸಹಾಯಕಳಾದ ಹೆಣ್ಣಿನಮೇಲೆ ಈ ಬಗೆಯ ನಿರ್ಲಜ್ಜ ದಬ್ಬಾಳಿಕೆ ನಡೆಸುವವರ ವಿರುದ್ಧ ತಾನು ಕತ್ತಿ ಎತ್ತಿ ನಿಲ್ಲಬೇಕು, ಹಾಗೇ ಹೋಗಿ ಆತನಿಗೆ ಒಂದೇಟು ಕೊಟ್ಟು 'ನೀಚ, ಆ ಹೆಣ್ಣು ನಿನ್ನ ಹೆಂಡತಿಯೇ ಇರಬಹುದು. ಆದರೆ ಇಷ್ಟು ಹಗುರವಾಗಿ, ಆಪಮಾನಕರವಾದ ರೀತಿಯಲ್ಲಿ ನಡೆಸಿಕೊಳ್ಳು ವುದು ನಿನಗಾಗಲಿ, ನೀನು ಪ್ರತಿನಿಧಿಸುವ ಪುರುಷ ಜಾತಿಗಾಗಲಿ ಮರ್ಯಾದೆ ಯಲ್ಲ. ಮುಂದೆ ಸರಿಯಾಗಿರು. ಇಲ್ಲವಾದರೆ ನಿನ್ನ ಗತಿ ನೆಟ್ಟಗಾಗಲಿಕ್ಕಿಲ್ಲ.' ಎಂದು ಹೇಳಬೇಕು ಎನಿಸಿತು.

ಅವನ ತಲೆಯಲ್ಲಿ ಆ ವಿಚಾರಗಳು ಸುತ್ತುತ್ತಿರುವಾಗಲೇ, ನಿಲ್ದಾಣದಲ್ಲಿ ಚಟುವಟಿಕೆ ಹೆಚ್ಚಾಗಿ, ಆ ವೇಳೆಗೆ ಆ ಪ್ರಯಾಣಿಕರ ಮತ್ತೊಂದು ಸಾಮಾನನ್ನು ಗಾಡಿಯಲ್ಲಿ ತಂದಿಟ್ಟ ಪೋರ್ಟರ್, ಅವಸರವಾಗಿ ಸ್ಟೇಷನ್ ರೂಮಿನ ಬಳಿಹೋಗಿ, ಗಂಟೆ ಹೊಡೆದು, ಬಾವುಟವನ್ನು ಕಂಕುಳಲ್ಲಿ ಸಿಕ್ಕಿಸಿಕೊಂಡು, ಹಸಿರು ಕೆಂಪು ಬೆಳಕಿನ ದೀಪವನ್ನು ಕೈಯಲ್ಲಿ ತೂಗಾಡಿಸುತ್ತ, ನಿಂತ ಕಡೆಯಿಂದ, ಫ್ಲಾಟ್ ಫಾರಂಗೆ ಬರಲು ಸಿದ್ಧನಾಗಿ ಬುಸುಗುಡುತ್ತಿದ್ದ ಎಂಜಿನ್‌ಗೆ ದಾರಿ ತೋರಿಸಲು ಓಡಿದ.

'ಝುಕ್ – ಜುಕ್, ಝುಕ್ – ಜುಕ್' ಎಂದು ನಿಧಾನವಾಗಿ ಹೊಗೆ ಯುಗುಳುತ್ತಾ ಬಂದ ಎಂಜಿನ್, ಫ್ಲಾಟ್‌ಫಾರಂನಲ್ಲಿ ನಿಂತಿದ್ದ ಗಾಡಿಗಳನ್ನು ತನ್ನ ಬಾಲಕ್ಕೆ ತಗುಲಿಸಿಕೊಂಡಿತು. ಗಾಡಿಗಳಿಗೆ ಎಂಜಿನ್ ಸೇರಿಕೊಳ್ಳುತ್ತಿದ್ದ ಹಾಗೇ, ವಿರಹದ ಕತ್ತಲಿಂದ ತುಂಬಿದ ಏಕಾಕಿನಿಯ ಬಾಳಿನಲ್ಲಿ, ನಲ್ಲನ

ಆಗಮನವಾಗುತ್ತಿದ್ದ ಹಾಗೇ ಹರ್ಷದ ಕಾಂತಿ ಮೂಡುವಂತೆ, ಅದುವರೆಗೂ ಕತ್ತಲು ತುಂಬಿ, ಕುರುಡುಗಣ್ಣುಗಳನ್ನು ಮಿಟುಕಿಸುತ್ತಿದ್ದ ಗಾಡಿಗಳಲ್ಲಿ ಬೆಳಕು ಬಂದಿತು.

ಆ ಬೆಳಕಿನಲ್ಲಿ ಮೂರ್ತಿ. ಆ ಹೆಣ್ಣು ಕುಳಿತ ಗಾಡಿಯತ್ತ ನೋಡಿದ.

ಗಾಡಿಯ ಪಕ್ಕದಲ್ಲಿ ನಿಂತ ಪ್ರಯಾಣಿಕನೂ ಮೂರ್ತಿಯತ್ತ ನೋಡಿದ.

ಅವನ ಬೆನ್ನ ಮರೆಯಿಂದ ಆಕೆಯ ಕಣ್ಣುಗಳೂ ಅವನತ್ತಲೇ ನೋಡುತ್ತಿದ್ದವು.

ತನ್ನತ್ತ ನೋಡುವ ಆ ಕಣ್ಣುಗಳು—

ಆ ಕಣ್ಣ ನೋಟ—

ಅದುವರೆಗೂ, ಯಾವ ಗಾಡಿಯಲ್ಲೂ ತನ್ನ ಸಾಮಾನನ್ನು ಹಾಕದೆ, 'ಬೆಳಕು ಬರಲಿ. ಎಲ್ಲಾ ಗಾಡಿಗಳೂ ಖಾಲಿ ಇವೆ. ಎಲ್ಲಾದರೂ ಒಂದು ಕಡೆ ಕುಳಿತರಾಯಿತು' ಎಂದುಕೊಂಡು, ಆ ವಿಷಯದಲ್ಲಿ ಯಾವ ನಿರ್ಧಾರವನ್ನೂ ಮಾಡದಿದ್ದ ಮೂರ್ತಿ, ತಟಕ್ಕನೆ ತಾನೂ ಅದೇ ಗಾಡಿಯಲ್ಲೇ ಹೋಗಿ ಕುಳಿತುಕೊಳ್ಳಲು ನಿರ್ಧರಿಸಿದ.

ತನ್ನ ಕೆಲಸ ಮುಗಿಸಿ ನಿಲ್ದಾಣದ ಮೇಲೆ ಟಲಾಯಿಸುತ್ತಿದ್ದ ಪೋರ್ಟರನ್ನು ಕರೆದು,—

"ನನ್ನ ಹೋಲ್ಡಾಲ್ ತಗೊಂಡು ಹೋಗಿ ಬೆಂಗಳೂರು ಗಾಡೀಲಿ ಇಡು."

—ಎಂದು ಅಪ್ಪಣೆ ಮಾಡಿದ.

ಅವನ ಅಪ್ಪಣೆಯಂತೆ ಪೋರ್ಟರ್, ಅವನ ಹೋಲ್ಡಾಲನ್ನು ತೆಗೆದುಕೊಂಡು ಹೋಗಿ, ಆ ಪ್ರಯಾಣಿಕರಿದ್ದ 'ಥ್ರೂ' ಕ್ಯಾರೇಜಿನಲ್ಲಿಟ್ಟ. ತನ್ನ ಸಾಮಾನನ್ನು ಹಿಂಬಾಲಿಸಿ, ಮೂರ್ತಿಯೂ ಹೋಗಿ ಗಾಡಿಯಲ್ಲಿ ಕುಳಿತ.

ಗಾಡಿಯ ಹೊರಗೆ, ಪಕ್ಕದಲ್ಲೇ ನಿಂತ ಆತನಿಗೂ ಮೂರ್ತಿ – ರೈಲು ಹೊರಡುವ ವೇಳೆಯಲ್ಲಿ ಮೂರ್ತಿ ಪೋರ್ಟರ್‌ಗೆ ಹೇಳಿದ ಮಾತುಗಳು ಕೇಳಿಸಿರಬೇಕು. ಎಂತಲೇ ಅವನ ಕಣ್ಣುಗಳು ಮೂರ್ತಿಯನ್ನೇ ದುರುಗುಟ್ಟಿ ನೋಡುತ್ತಿದ್ದವು. ತನ್ನತ್ತ ನೋಡುವ ಆತನ ಕಣ್ಣುಗಳಲ್ಲಿ ಏನೋ ಅಸಮಾಧಾನ, ಏನೋ ಸಂಶಯಗಳು ತುಂಬಿರುವಂತೆ, ಆತನ ಇದುರಿಗೇ ಹಾದು ಹೋದಾಗ ಮೂರ್ತಿಗೆ ಭಾಸವಾಯಿತು.

ಆದರೆ ಅದಾವುದೂ ಅರಿವಾಗದವನಂತೆ, ಮೂರ್ತಿ ತನ್ನ ಪಾಡಿಗೆ ತಾನು ಹೋಗಿ ಗಾಡಿಯಲ್ಲಿ ಕುಳಿತ.

ಆತನೂ ತಟ್ಟಕ್ಕನೆ ಮೂರ್ತಿಯನ್ನು ಹಿಂಬಾಲಿಸಿ, ಗಾಡಿಯೊಳಗೆ ಪ್ರವೇಶಿಸಿ, ಆ ಮೊದಲೇ ಅವನ ಜೊತೆಯಲ್ಲಿ ಬಂದ ಹೆಂಗಸು ಕುಳಿತಿದ್ದ ಸೀಟಿನ ಮೇಲೆ ಹೋಗಿ, ಆ ಸೀಟಿನ ಮೇಲೆ ಮತ್ತಾರೂ ಕುಳಿತುಕೊಳ್ಳಲು ಅವಕಾಶವಿರದಂತೆ, ಪದ್ಮಾಸನ ಹಾಕಿಕೊಂಡು, ಮೂರ್ತಿಯನ್ನೇ ದುರುಗುಟ್ಟಿ ನೋಡುತ್ತ ಕುಳಿತ.

ಆತ ಮೂರ್ತಿಯನ್ನು ಏನೊಂದೂ ಮಾತನಾಡಿಸಿರಲಿಲ್ಲ.

ಆದರೂ ಏಕೋ ಅವನಿಗೆ, ಮೂರ್ತಿ ಅದೇ ಗಾಡಿಯಲ್ಲಿ ಬಂದು ಕುಳಿತುಕೊಂಡುದು ಸಮಾಧಾನವಿದ್ದಂತಿರಲಿಲ್ಲ. ಮೂರ್ತಿಯತ್ತ ನೋಡು ತ್ತಿದ್ದ ಅವನ ಕಣ್ಣ ನೋಟದಲ್ಲಿ, ಸಹಪ್ರಯಾಣಿಕರನ್ನು ನೋಡುವ ನಿರಾಸಕ್ತಿ ಯಾಗಲಿ, ಕುರುಡು ಕುತೂಹಲವಾಗಲಿ ಇರದೆ, ತನ್ನ ಹಕ್ಕುಬಾಧ್ಯತೆಯ ಸ್ಥಾನವನ್ನು ಅಕ್ರಮಿಸಿ ಆಕ್ರಮಿಸಿಕೊಂಡ ಆಕ್ರಮಣಕಾರನನ್ನು ಅಟ್ಟಿ ಲಾಗದೆ, ಅಸಹಾಯಕ ಅಸಮಾಧಾನದಿಂದ ನೋಡುವ ಭಾವ ದುಮುದುಮಿ ಸುತ್ತಿತ್ತು. ಶತ್ರು ಸಮೀಪಗತನಾದ ವಾಸನೆ ಹಿಡಿದು, ತನ್ನ ಮೈಯ ಮುಳ್ಳುಗಳನ್ನೆಲ್ಲಾ ಕೆದರಿಕೊಂಡು, ಮೇಲೆ ಬೀಳಲು ಸಿದ್ಧವಾದ ಮುಳ್ಳು ಹಂದಿಯಂತೇ ಕಂಡುಬಂದ ಆತ.

ರೆಪ್ಪೆ ಹೊಡೆಯದೆ, ನೋಟ ಚಲಿಸದೆ ತನ್ನತ್ತಲೇ ನೋಡುತ್ತಾ ಕುಳಿತ ಅವನನ್ನು ಕಂಡು ಮೂರ್ತಿಗೆ ನಗಬೇಕೆನ್ನಿಸಿದರೂ, ಆ ನೋಟ ಎದೆಯಲ್ಲಿ ಮೂಡಿಸಿದ ಯಾವುದೋ ವಿಚಿತ್ರ ಭೀತಿಯ ಭಾವನೆಯಲ್ಲಿ ಸದ್ದಾಗದ ಕಿರುನಗೆ ನಗುವುದೂ ಸಾಧ್ಯವಾಗದೆ, ತಾನು ಅವರನ್ನು ನೋಡ ದಿದ್ದವನಂತೆ, ಪೋರ್ಟರ್ ಇಟ್ಟು ಹೋದ ಹಾಸಿಗೆಯನ್ನು, ಸೀಟಿನ ಮೇಲೆ ಒಂದು ಮೂಲೆಗೆ, ಜಾರದಂತೆ ಇಟ್ಟುಕೊಂಡು, ಸೀಟಿನ ಮೇಲೆ ಮೈಚಾಚಿ, ಓದುವುದರಲ್ಲಿ ಆಸಕ್ತನಾದವನಂತೆ ಪುಸ್ತಕವನ್ನು ಮುಖಕ್ಕೆ ಅಡ್ಡ ಹಿಡಿದು ಕೊಂಡ.

ತನ್ನ ನೋಟಕ್ಕೆ ಪುಸ್ತಕ ಅಡ್ಡವಾಗಿದ್ದರೂ, ತಾನು ಅವನ ಕಡೆ ನೋಡದಿದ್ದರೂ, ಆತನ ಕಣ್ಣುಗಳು ಮಾತ್ರ ಸುಡುನೋಟದಿಂದ ತನ್ನತ್ತಲೇ ನೋಡುತ್ತಿರುವಂತೆ ಭಾಸವಾಯಿತು ಮೂರ್ತಿಗೆ.

ಏನಾದರಾಗಲಿ ತಾನು, ಮಾತ್ರ ಮತ್ತೆ ಅವನ ಮುಖ ನೋಡಬಾರದು

ಎಂದು ನಿಶ್ಚಯಿಸಿ, ಮೂರ್ತಿ ಕಣ್ಣ ಎದುರಿಗಿದ್ದ ಪುಸ್ತಕವನ್ನು ಓದಲು ಯತ್ನಿಸಿದ.

ಆದರೆ ಅವನ ಕಣ್ಣುಗಳಿಗೆ ಓದುತ್ತಿದ್ದ ಪುಟದಲ್ಲಿಯ ವಿಚಾರವಾಗಲಿ, ಅಕ್ಷರವಾಗಲಿ ಕಾಣದೆ, ಆ ಪುಸ್ತಕದ ಹಿಂದೆ, ಆ ಮುಳ್ಳುಹಂದಿಯ ಉರಿಗಣ್ಣುಗಳ ಬೇಲಿಯ ಕುಳಿತ ಅಪರಿಚಿತೆಯೇ ಕಾಣುತ್ತಿದ್ದಳು – ಆ ಗಳಿಗೆಯಲ್ಲಿ, ಅವನ ಕಣ್ಣುಗಳಿಗೆ ಕಾಣುದುದನ್ನೂ ಕಾಣುವ ಶಕ್ತಿ ಬಂದಂತೆ.

ಪ್ಲಾಟ್‌ಫಾರಂನಲ್ಲಿ, ಪೋರ್ಟರು ಹೊಡೆದ ಗಂಟೆಯ ಸದ್ದಿನೊಂದಿಗೆ, ಗಾರ್ಡ್‌ನ 'ವ್ಹಿಷಲ್' ನ ಸೀಳುಧ್ವನಿಯೂ ಕೇಳಿ ಬಂದು, ಸುಮ್ಮನೆ ಕುಳಿತ ಬೇಸರವನ್ನು ಆಕಳಿಸಿ ತೀರಿಸಿಕೊಳ್ಳುವ ಸೋಮಾರಿಯಂತೆ, ನಿಂತು ನಿಂತು ಸಾಕಾದ ಬಳಲಿಕೆಯನ್ನು, ದೀರ್ಘವಾಗಿ, ಬುಸುಗುಟ್ಟಿ, ಮೈಮುರಿದು ತೀರಿಸಿಕೊಂಡು, ರೈಲು ಚಲಿಸಲಾರಂಭಿಸಿತು.

ಚಕ್ . . . . ಚಕ್, ಜಗ್ . . . . ಜಗ್ . . . .

ಮೊದಲು ನಿಧಾನವಾಗಿ ಹೆಜ್ಜೆ ಹಾಕಲಾರಂಭಿಸಿದ ರೈಲು, ಬರಬರುತ್ತ ವೇಗಗಳಿಸಿ, ರೈಲ್ವೆಯ ನಿಲ್ದಾಣ, ನಿಲ್ದಾಣದ ಕಟ್ಟೆಯ ಮೇಲೆ ನಿಂತ ಪೋರ್ಟರು, ಸ್ಟೇಷನ್ ಮಾಸ್ಟರು, ನಿಲ್ದಾಣದಲ್ಲಿ ತೂಗಾಡುತ್ತಿದ್ದ ದೀಪ – ಎಲ್ಲವನ್ನೂ ಹಿಂದೆ ಹಾಕಿ, ಕತ್ತಲೆಯಲ್ಲಿ ಕೇಕೆ ಹಾಕುತ್ತಾ ಹೊರಟಿತು.

ರೈಲು ಹೊರಡುವವರೆಗೂ, ಒಳಗೆ ಹೋಗಿ ಕುಳಿತುಕೊಳ್ಳಬೇಕೆಂಬ ಎಚ್ಚರಿಕೆಯೇ ಇಲ್ಲದೆ, ಏನೂ ಕೆಲಸವಿಲ್ಲದಿದ್ದರೂ, ಸುಮ್ಮನೆ, ಅಕ್ಕಪಕ್ಕದ ಗಾಡಿಯಲ್ಲಿ ಕುಳಿತ ಅವರಿವರನ್ನು ನೋಡುತ್ತಾ 'ಠಳಾಯಿಸು' ತ್ತಿದ್ದು, ರೈಲು ಹೊರಟ ಮೇಲೆ ಅವಸರವಸರವಾಗಿ ನುಗ್ಗುವ ಹೊಣೆಗೇಡಿ ಪ್ರಯಾಣಿಕನಂತೆ, ರೈಲು ನಿಲ್ದಾಣದಲ್ಲಿ ನಿಂತಾಗ ಗಾಡಿಯ ಹೊರಗೆ ಮಾತ್ರ ಸುಳಿಯುತ್ತಿದ್ದ ಇರುಳಗಾಳಿ, ರೈಲು ವೇಗವಾಗಿ ಓಡಲಾರಂಭಿಸಿದ ಕೂಡಲೇ, ತಾನೂ ವೇಗವಾಗಿ, ತೆರೆದ ಕಿಟಕಿಗಳಿಂದ ಗಾಡಿಯ ಒಳಗೆ ನುಗ್ಗಿತು.

ಕೈಯಲ್ಲಿ ಹಿಡಿದ ಪುಸ್ತಕದ ಪುಟಗಳು ಗಾಳಿಗೆ ಪಟಪಟ ಬಡಿದು ಸದ್ದು ಮಾಡುತ್ತಿದ್ದರಿಂದ, ತನ್ನ ವಾಚನಕ್ಕೆ ಭಂಗಬಂದವನಂತೆ, ಮೂರ್ತಿ ಪುಸ್ತಕವನ್ನು ಬದಿಗಿರಿಸಿ, ಕಿಟಕಿಯಿಂದಾಚೆಗೆ ಮುಖ ಹಾಕಿ ಹೊರಗೆ ನೋಡಿದ.

ಹೊರಗೆ ಕತ್ತಲೆ, ಏನೇನೂ ಕಾಣದಷ್ಟು ಕತ್ತಲೆ.

ಆ ಕತ್ತಲೆಯಲ್ಲಿ, ಎಂಜಿನ್ನು ಉಗುಳಿದ ಹೊಗೆಯಲ್ಲಿ ಕಿಡಿಗಳು ಉಲ್ಕೆಗಳಂತೆ ಹಾರುತ್ತಿದ್ದವು.

ಗಾಡಿಗಳ ಕಿಟಕಿಗಳಿಂದ ಬಿದ್ದ ಚೌಕಾಕಾರವಾದ ಬೆಳಕು ಮಾತ್ರ, ಗಾಡಿಯ ಪಕ್ಕದಲ್ಲಿ, ಗಾಡಿಯಷ್ಟೇ ವೇಗದಿಂದ ಓಡುತ್ತಿತ್ತು.

ಅಷ್ಟು ಹೊತ್ತು ಕಿಟಕಿಯ ಹೊರಗೆ ಮುಖ ಚಾಚಿ ನೋಡುತ್ತಿದ್ದ ಮೂರ್ತಿ, ಗಾಳಿಯ ಸುಯ್ಯಿರಿತವನ್ನು ತಾಳಲಾರದೆ, ಮುಖವನ್ನು ಒಳಗೆಳೆದು ಕೊಂಡು, ಗಾಳಿಗೆ ಅಡ್ಡವಾಗಿ 'ಪಟರ್' ಅನ್ನು ಎಳೆದು, ಹಾಗೇ ಒಮ್ಮೆ ಗಾಡಿಯಲ್ಲೆಲ್ಲಾ ಕಣ್ಣು ಹಾಯಿಸಿದ.

ಅವರು ಕುಳಿತಿದ್ದುದು ಮೂರನೆಯ ತರಗತಿಯ ಡಬ್ಬಿಯಾದರೂ 'ಕೂಪೆ' (Coupe) ಮಾದರಿಯ ಸಣ್ಣಗಾಡಿ. ಇದಿರುಬದಿರಾದ ಎರಡು ಸೀಟಿನ, ಗಾಡಿಯಲ್ಲಿ ಹಾಕಿದ ಬೋರ್ಡು ಹೇಳುವಂತೆ 'ಎಂಟು ಜನ ಕೂಡುವ' ಗಾಡಿ.

ಮೂರ್ತಿ ಒಂದುಕಡೆಯ ಸೀಟಿನಲ್ಲಿ ಕುಳಿತಿದ್ದ. ಆತನಿಗೆ ಇದಿರಾಗಿ ಆತ – ಆಕೆ.

ಆತ—

ಮೂರ್ತಿಯನ್ನು ಏನೋ ಅನುಮಾನ, ಏನೋ ಅಸಮಾಧಾನ ಬೆರೆತ ನೋಟದಿಂದ ನೋಡುತ್ತ ಸೀಟಿನ ಮೇಲೆ ಪದ್ಮಾಸನ ಹಾಕಿಕೊಂಡು ಕುಳಿತಿದ್ದ.

ಆಕೆ....

ಇದುರಿಗೆ ಕುಳಿತ ಪರಪುರುಷ ತನ್ನ ಮುಖವನ್ನು ನೋಡಬಾರ ದೆಂದೋ, ಅಥವಾ ಮತ್ಯಾವ ಕಾರಣಕ್ಕಾಗಿಯೋ – ಅಂತೂ ಕಿಟಕಿಯತ್ತ ಮುಖ ಮಾಡಿಕೊಂಡು ಕುಳಿತಿದ್ದಳು. ಹಾಗಾಗಿ ಮೂರ್ತಿಗೆ ಕಂಡದ್ದು ಆಕೆಯ 'ಅರೆ–ಮೊಗ' (Profile) ಮಾತ್ರ.

ಅದನ್ನು ನೋಡಿದುದೂ ಕೇವಲ ಒಂದು ಕ್ಷಣಕಾಲ ಮಾತ್ರ.

ಆ ಕ್ಷಣಕಾಲದ ಕಿಂಚಿತ್ – ದರ್ಶನ—

ನೋಡುತ್ತಿದ್ದ ಹಾಗೆ ಮೂರ್ತಿಗೆ ಏಕೋ, ಗಾಡಿಯೊಳಗೆ ಸುಳಿಯು

ತ್ತಿದ್ದ ಗಾಳಿಯಲ್ಲಿ, ಬಹು ನವಿರಾದ, ಮಧುರವಾದ ಪರಿಮಳದ ಎಳೆ ಸುಳಿದು ಮಾಯವಾಗಿ ಹೋದಂತಾಯಿತು.

ಒಂದು ಘಳಿಗೆ ನೋಡಿ ಮತ್ತೆ, ಬದಿಯಲ್ಲಿರಿಸಿದ ಪುಸ್ತಕವನ್ನು ಕೈಯಲ್ಲಿ ಹಿಡಿದ.

ಆದರೆ, ಕಣ್ಣೆದುರಿಗೆ ತೆರೆದ ಪುಟದ ಅಕ್ಷರಗಳು ಕಾಣಲಿಲ್ಲ. ಅದಕ್ಕೆ ಪ್ರತಿಯಾಗಿ—

ದೀರ್ಘವಾದ ಕಣ್ಣೆವೆಗಳು ಆಡುವ ಕಣ್ಣಕೊನೆಯಲ್ಲಿ ಹುಟ್ಟಿ, ತುಂಬು ಗಲ್ಲದತ್ತ ಮೃದುವಾಗಿ ಬಾಗಿದ, ಬಿಳುಪು ಹೆಚ್ಚಾದ ಗುಲಾಬಿಯ ಬಣ್ಣದ ಕೆನ್ನೆ. (ನಿಜ - ಅದು ಸ್ಪರ್ಶನಕ್ಕೆ ಆ ಹೂವಿನ ದಳದಷ್ಟೇ ಕೋಮಲವಾಗಿರಬೇಕೆಂದು, ಆ ಕೆನ್ನೆಯ ಮೃದುವಾದ ಹೊಳಪು ಹೇಳುತ್ತಿತ್ತು.) ಆ ಕೆನ್ನೆಯ ಒಂದು ಕೊನೆಯಲ್ಲಿ ತುಟಿಯ ಮೃದುಗೆಂಪು - ಮತ್ತೊಂದು ಬದಿಯಲ್ಲಿ, ಕೂದಲ ಕಮಾನಿನ ಅಡಿಯಲ್ಲಿ ಮಾಟವಾದ ಕಿವಿ. ಗಾಳಿಗೆ, ಆ ಕಿವಿ, ಕೆನ್ನೆಗಳ ಮೇಲಾಡುತ್ತಿರುವ ಕಪ್ಪು ಕುರುಳುಗಳು—

ಸೀರೆಯ ಸೆರಗನ್ನು, ಗಾಳಿಗೆ ಹೆದರಿಯೋ ಮತ್ತೇತಕ್ಕೋ, ಬಿಗಿಯಾಗಿ ಮೈಗೆ ಸುತ್ತಿದ್ದುದರಿಂದ, ಮುದುರಿ ಕುಳಿತ ಆಕೆಯ ಮೈಯ ಯಾವ ಭಾಗವೂ ಮೂರ್ತಿಗೆ ಕಾಣುತ್ತಿರಲಿಲ್ಲ.

ಆದರೆ, ತೆಳುವಾದ ಹತ್ತಿಯ ಸೀರೆ, ಆ ದೇಹವನ್ನು ಮರೆಮಾಡಿದರೂ, ಆ ಮೈಯ ಉಬ್ಬು ತಗ್ಗುಗಳ ರೇಖಾವಿನ್ಯಾಸವನ್ನು ಸಂಪೂರ್ಣವಾಗಿ ಮರೆ ಮಾಡುವ ಕಾರ್ಯದಲ್ಲಿ ವಿಫಲವಾಗಿತ್ತು.

ಕಾಣದ ಕಾಯವನ್ನೇ ಚಿಂತಿಸುತ್ತ ಮೂರ್ತಿಗೆ, ಕಾಲೇಜಿನಲ್ಲಿ ಓದಿದ ಕೀಟ್ಸ್ ಕವಿಯ ಕವನದ ಸಾಲೊಂದು ನೆನಪಾಯಿತು—

'Heard melodies are sweet, but those unheard are sweeter still (ಶ್ರುತಗಾನಮಭಿರಾಮಮಮೂದೋಡ ಶ್ರುತಗಾನಮಭಿರಾಮತರಂ !)'

ಎಷ್ಟು ನಿಜ ಆ ಕವಿಯ ಮಾತು !

ಮೂರ್ತಿ ಆಕೆಯ ದೇಹವನ್ನು ಕಂಡಿದ್ದರೆ, ಚಿನ್ನವನ್ನು ಒರೆಗಿಟ್ಟ ಚಿನಿವಾರನಂತೆ, ಇದರ ಬೆಲೆ ಇಷ್ಟೇ ಎನ್ನಬಹುದಾಗಿತ್ತು.

ಈಗ—

ಅರೆ ಬರೆ ಕಾಣುವ ಆ ಅಂಗಲಾವಣ್ಯಕ್ಕೆ, ಅವನ ಕಲ್ಪನೆಯ ಪರಿಮಿತಿಯೇ ಮಿತಿ.

ಅವನ ಕಣ್ಣು ತೆರೆದ ಪುಟವನ್ನು ನೋಡುತ್ತಿತ್ತು.

ಮನಸ್ಸು – ಕಿನ್ನರ ಕಥೆಯ ಸವಾರನಾಗಿ, ಕಾಣದ ಮೈಯ ಅಂಗ ಲಾವಣ್ಯದ ಶೋಧ ನಡೆಸಿತ್ತು.

ಆ ಕೆಲಸವೇನೋ ಮೂರ್ತಿಗೆ ಬಹು ಹಿತವಾಗಿತ್ತು. ಆದರೆ ಚಿರೋಟಿಯನ್ನಾದರೂ, ಎಷ್ಟು, ಎಷ್ಟು ದಿನ ತಿನ್ನುವುದು ಸಾಧ್ಯ? ಅದೂ ಕೊನೆಗೊಮ್ಮೆ ಬೇಸರ ಬರುವಂತೆ, ಮೂರ್ತಿಗೂ, ಅಷ್ಟು ಹೊತ್ತಾದ ಬಳಿಕ ಆ ಸವಿ ಚಿಂತೆ ಬೇಸರವಾಯಿತು.

ಚಿಂತೆ – ಬರೀ ಊಹೆ—

ಆ ಊಹೆಗೆ ಕಾರಣವಾದ ಮೂಲವಸ್ತು ಎದುರಿಗೇ ಕುಳಿತಿರುವಾಗ– ಎಷ್ಟು ಹೊತ್ತು ಬರೀ ಊಹೆ ?

ಊಹೆಯಲ್ಲಿ ಮೈಮರೆತ ಬುದ್ಧಿಯನ್ನು ಆ ಯೋಚನೆ ಮುಳ್ಳಿನಂತೆ ಇರಿಯಿತು. ಕಣ್ಣೆದುರಿಗೆ ತೆರೆದ ಪುಟದ ಅಚ್ಚಾದ ಅಕ್ಷರಗಳು, ಅವನ ಕಣ್ಣನ್ನು ಇರಿದಂತಾಗಿ, ಮುಂದೆ ಓದುವುದನ್ನು ನಟಿಸುವುದೂ ಸಾಧ್ಯವಾಗದೆ, ನಿಟ್ಟುಸಿರು ಬಿಟ್ಟು, ಪುಸ್ತಕವನ್ನು ಬದಿಗಿರಿಸಿ, ಮೂಲೆಯ ಹಲಗೆಗೆ ಬೆನ್ನು ಆನಿಸಿ, ಉದ್ದವಾದ ಸೀಟಿನ ಮೇಲೆ ಮೈ ಚಾಚಿದ.

'ಆತ' ಮಾತ್ರ ಏನೊಂದೂ ಮಾತಾಡದೆ, ಅನುಮಾನ, ಅಸಮಾಧಾನ ಬೆರೆತ ಉರಿಗಣ್ಣುಗಳಿಂದ ಮೂರ್ತಿಯನ್ನು ನುಂಗುವಂತೆ ನೋಡುತ್ತಲೇ ಇದ್ದ.

ಮೂರ್ತಿ ಕಾಣಬಯಸುತ್ತಿದ್ದುದು, ಅರೆಬರೆ ಕಾಣಿಸುತ್ತಿದ್ದ ಆ ಮುಖದ ಪೂರ್ಣದರ್ಶನವನ್ನು. ಆದರೆ ಅವನ ಕಣ್ಣು ಅತ್ತ ಹೊರಳಿದಾಗ, ಅನಿವಾರ್ಯವಾಗಿ ಅವನಿಗೆ ಕಾಣುತ್ತಿದ್ದುದು ಕಾಣಬಾರದು ಎಂದು ಹಾರೈಸುತ್ತಿದ್ದ ಆತನ ಉರಿಮುಖ.

ಅತ ಕುರೂಪಿಯೋ, ಸುರೂಪಿಯೋ ಎಂದು ಹೇಳುವುದು ಮೂರ್ತಿಗೆ ಸಾಧ್ಯವಿರಲಿಲ್ಲ. ಅವನಿಗೆ ಅರ್ಥವಾಗಿದ್ದುದಿಷ್ಟೇ – ಆ ಬೇಡವಾದ ಮುಖ,

ತಾನು ಕಾಣಬಯಸುವ ಮತ್ತೊಂದು ಮುಖವನ್ನು, ನಿರ್ಭಯವಾಗಿ, ನಿಸ್ಸಂಕೋಚವಾಗಿ ನೋಡಲು ಅಡ್ಡಿಯಾಗಿದೆ.

ಎಂತಲೇ—ಅದು, ಹೇಗಿದ್ದರೂ ಶನಿಮುಖ.

ಮೂರ್ತಿಗೆ ಆಕೆಯ ಮುಖವನ್ನು ನೋಡಲು ಎಷ್ಟು ಆಸೆಯಿತ್ತೋ, ಆಕೆಗೂ ಮೂರ್ತಿಯನ್ನು ನೋಡಲು ಅಷ್ಟೇ ಆಸೆ—ಇರಬೇಕು. (ಇರಬೇಕು, ಇರಲೇಬೇಕು ಎಂದೇ ಹೇಳಿತು ಮೂರ್ತಿಯ ಮನಸ್ಸು) ಆದರೆ ಆಕೆಯ ಇದ್ದಿರಬಹುದಾದ ಬಯಕೆಗೂ, ಈ ಮುಖ ಅಡ್ಡಿಯಾಗಿ, ಆಕೆ ಮುಖದಿರುಹಿ ಕೂಡುವಂತೆ ಮಾಡಿದೆ.

ಆತ ಮೂರ್ತಿಯೊಂದಿಗೆ ಒಂದೂ ಮಾತಾಡಿರಲಿಲ್ಲ. ಅವನ ಬಗ್ಗೆ ಸ್ನೇಹವನ್ನಾಗಲಿ, ಅಸ್ನೇಹವನ್ನಾಗಲಿ ವ್ಯಕ್ತಪಡಿಸಿರಲಿಲ್ಲ.

ಆದರೂ ಮೂರ್ತಿಗೆ ಆ ಮುಖದ ಬಗ್ಗೆ ಕ್ರೋಧ, ದ್ವೇಷ ಹುಟ್ಟಿತ್ತು.

'ಥತ್ - ನನ್ನ ಹಾಳು ಅದೃಷ್ಟಾನೇ ಇಷ್ಟು. ಯಾವತ್ತು, ಒಂದು ಲಕ್ಷಣವಾದ 'ಹಕ್ಕಿ' ಕಂಡರೂ, ಅದರ ಜೊತೆಯಲ್ಲಿ ಇಂಥದೊಂದು ಗ್ರಹಚಾರ - ಪಂಜರ ಇದ್ದೇ ಇರುತ್ತದೆ'

—ಎಂದು ತನ್ನ ಅದೃಷ್ಟವನ್ನು ಹಳಿದುಕೊಂಡ.

ಆ ಹೊತ್ತಿನಲ್ಲಿ, ಜಗತ್ತಿನಲ್ಲಿ, ತಾನೊಬ್ಬನು ಉಳಿದು, ಉಳಿದ ಗಂಡು ಪೀಳಿಗೆಯೆಲ್ಲಾ ನಾಶವಾಗಿ ಹೋಗಿದ್ದರೂ, ಮೂರ್ತಿಗೆ ಕೊಂಚವೂ ವ್ಯಸನ ವಾಗುತ್ತಿರಲಿಲ್ಲ. ಅದಕ್ಕೆ ಪ್ರತಿಯಾಗಿ ಸಂತೋಷವನ್ನೇ ಪಡುತ್ತಿದ್ದ. 'ನನಗಿದ್ದ ಸ್ಪರ್ಧೆ, ಆತಂಕಗಳೆಲ್ಲವನ್ನು ತೊಲಗಿಸಿಬಿಟ್ಟೆಯಲ್ಲಾ, ದಯಾಮಯ' ಎಂದು ಭಗವಂತನಿಗೆ ಅಭಿನಂದನೆಗಳನ್ನು ಅರ್ಪಿಸುತ್ತಿದ್ದ.

'ರೆ'—ಅದೆಲ್ಲಾ 'ರೆ' ರಾಜ್ಯದ ಮಾತು.

ಎಷ್ಟು, ಏನು ಕನಸು ಕಂಡು ಏನು ಉಪಯೋಗ; ಏನು ಬಯಸಿ ಏನು ಸಾರ್ಥಕ - ಕನಸುಗಳ ಹಕ್ಕಿಗಳನ್ನು ಮುರಿದು ಇಳೆಗೊರಗಿಸುವ ನಿರ್ದಯ ವಾಸ್ತವಿಕತೆಯ ವ್ಯಾಧನಂತೆ, ಆ ಮುಖ ತನ್ನನ್ನೇ ನೋಡುತ್ತಾ ಕುಳಿತಿರುವಾಗ.

'ಹಾಳಾದೋನು, ಇನ್ನೂ ಹಾಗೇ ಎಷ್ಟು ಹೊತ್ತು ನನ್ನನ್ನೇ

ನೋಡ್ತಾ ಇರ್ತಾನೋ ಏನೋ. ದಬಾಯಿಸಿ ಕೇಳಿ ಬಿಡಬೇಕು – ನನ್ನ ಮುಖ ಏನು, ದೊಂಬನ ಕೋತಿಯ ಅಖಾಡಾನೋ ಎಂದು '

—ಎಂದು ತನಗೆ ತಾನೇ ಹೇಳಿಕೊಂಡ ಮೂರ್ತಿ, ಮನಸ್ಸಿನ ದುಗುಡವನ್ನು ತಡೆಯಲಾರದೆ.

ಹಾಗೆಂದುಕೊಂಡು, ಕೈಯ ಗಡಿಯಾರವನ್ನು ನೋಡಿಕೊಂಡ—

ಹೊತ್ತು – ಎಂಟು ಇಪ್ಪತ್ತೈದಾಗಿತ್ತು.

ರೈಲು ಓಡಲಾರಂಭಿಸಿ ಹದಿನೈದು ನಿಮಿಷವಾಗಿತ್ತು.

ಹದಿನೈದು ನಿಮಿಷ–ಕೇವಲ ಹದಿನೈದು ನಿಮಿಷ–ಆದರೆ ಮೂರ್ತಿಯ ಪಾಲಿಗೆ ಆ ಅಲ್ಪ ಕಾಲ, ಹದಿನೈದು ವರ್ಷಗಳಷ್ಟು ದೀರ್ಘವಾದಂತಾಗಿತ್ತು – ಬೇಡವಾದ ಹೊರೆಯನ್ನು ಹೊತ್ತವರಿಗೆ, ಅಲ್ಪ ಭಾರವೂ ಹಿಮಾಲಯದಷ್ಟು ಭಯಂಕರ ಭಾರವಾದಂತೆ.

ಆಕೆಯ ಕಣ್ಣು ಸೆಳೆಯಲೆತ್ನಿಸಿದಂತೆ, ಒಮ್ಮೆ ಹಾಗೇ ತನ್ನ ತಲೆಗೂದಲುಗಳ ಮೇಲೆ ಕೈಯಾಡಿಸಿ, ಭಾರವಾದ ನಿಟ್ಟುಸಿರು ಬಿಟ್ಟು, ಕಣ್ಣು ಮುಚ್ಚಿಕೊಂಡ.

ಆದರೆ ಒತ್ತಾಯಕ್ಕೆ ಮುಚ್ಚಿಕೊಂಡ ಕಣ್ಣು—

ಮಲಗಿಸಿದ ಕೂಡಲೇ, ಧಡಕ್ಕನೆ ಎದ್ದು ಕುಳಿತುಕೊಳ್ಳುವ ಚೀನೀ ಗೊಂಬೆಯಂತೆ, ಮುಚ್ಚಿದಷ್ಟೇ ವೇಗವಾಗಿ ತೆರೆಯಿತು.

ಆತನ ಕಣ್ಣುಗಳು ಅವನನ್ನೇ ನೋಡುತ್ತಿದ್ದವು.

೬

ಹೊರಗೆ—

ವೇಗವಾಗಿ ಓಡುವ ರೈಲಿನ 'ಜುಗು ಜುಗು–ಚುಕು ಚುಕು' ಸದ್ದು.

ಎಂಜನ್ನನ್ನು ಹಿಂಬಾಲಿಸಿ ಓಡುವ ಡಬ್ಬಿಗಳ ಗಡಗಡ ಸದ್ದು.

ಆಗೊಮ್ಮೆ ಈಗೊಮ್ಮೆ, ಎಂಜಿನ್ನಿನ ಹೊಗೆ ಕೊಳವಿಯಿಂದೆದ್ದ ಹೊಗೆ, ನಕ್ಷತ್ರಖಚಿತವಾದ ಮುಗಿಲಿಗೆ ಒಂದು ಗಳಿಗೆ ತೆರೆ ಎಳೆದು, ಮರುಗಳಿಗೆಯೆ ಕರಗಿಹೋಗಿ, ಬಳಿಕ ಮುಗಿಲು, ಒರೆಸಿದ ಕನ್ನಡಿಯಂತಾಗಿ, ನಕ್ಷತ್ರಗಳು ಮತ್ತಷ್ಟು ಪ್ರಕಾಶವಾಗಿ ಹೊಳೆಯುತ್ತಿದ್ದವು.

ಕತ್ತಲಿನಲ್ಲಿ, ಅಷ್ಟೇ ಕಪ್ಪಾದ ಗಿಡಮರಗಳು, ನುಗ್ಗಿಬರುವ ರೈಲಿನ ಭೂತಾಟೋಪಕ್ಕೆ ಬೆದರಿದಂತೆ, ರೈಲು ಮುಂದೆ ನುಗ್ಗಿದಷ್ಟೇ ವೇಗವಾಗಿ, ಹಿಂದೆ ಸರಿಯುತ್ತಿದ್ದವು.

ಆಗೊಮ್ಮೆ ಈಗೊಮ್ಮೆ, ಆ ಕಪ್ಪಿನಲ್ಲಿ, ಎಂಜಿನ್ನಿನಿಂದ ಹಾರಿದ ಕಿಡಿಗಳು ಹೊಳೆವರೆ, ಒಮ್ಮೊಮ್ಮೆ ಕಪ್ಪು ಮಖಮಲ್ಲಿನಲ್ಲಿ ಹೊಳೆಯುವ ವಜ್ರದ ಹಸಿಗಳಂತೆ, ಮಿಣುಕು ಹುಳಗಳು ಮಿಣುಕಿ ಮಾಯವಾಗುತ್ತಿದ್ದವು.

ಹೊರಗಿನ ನಿಶಾನಿಸರ್ಗದ ಅನಂತ ಮೌನವನ್ನು ಮುರಿಯುವ ರೈಲಿನ 'ಚುಕು ಚುಕು – ಜುಗು ಜುಗು' ಸದ್ದಿಗೆ, ಜೀರುಂಡೆಗಳು ಶ್ರುತಿ ಗೂಡಿಸಿದುದೂ ಒಮ್ಮೊಮ್ಮೆ ಬಹು ಸ್ಪಷ್ಟವಾಗಿ ಕೇಳುತ್ತಿತ್ತು.

ಡಬ್ಬಿಯೊಳಗೆ—

ಹೊರಗಿನ ಎಲ್ಲ ಸದ್ದುಗಳೂ ಕೇಳಿಬರುತ್ತಿದ್ದರೂ, ಆ ಸದ್ದುಗಳ ಅಸುರರನ್ನು ಅರಗಿಸಿಕೊಂಡಂಥ ಅಗಸ್ತ್ಯ ಮೌನ ವ್ಯಾಪಿಸಿತ್ತು.

ಆ ಮೌನ—

ಗಾಳಿಯಾಡದ ಕೋಣೆಯೊಳಗೆ, ಹಬ್ಬಿದ ಘಾಟು ವಾಸನೆಯ ಹೊಗೆಯಂಥ ಮೌನ—

ಮೂರ್ತಿಯ ಎದೆಯನ್ನು ಒತ್ತಿ ತುಳಿಯುತ್ತಿತ್ತು.

ಗಳಿಗೆ ಗಳಿಗೆಗೂ ಆ ಮೌನ ಅಸಹ್ಯವಾಗುತ್ತಿತ್ತು, ದುರ್ಭರವಾಗುತ್ತಿತ್ತು ಮೂರ್ತಿಗೆ. ಹೇಗಾದರೂ ಮಾಡಿ, ತನ್ನ ಹೆಗಲನ್ನು, ಮೈಯನ್ನು, ಮಿದುಳನ್ನು ಹತ್ತಿ ಕುಳಿತ ಆ ಮೌನವನ್ನು ಮುರಿದುಬಿಡಬೇಕು ಎನಿಸುತ್ತಿತ್ತು.

ನಿಜ – ಮುರಿಯಬೇಕು—

ಆದರೆ ಹೇಗೆ ಮುರಿಯುವುದು ?

ಆ ಅಸಹ್ಯ ಮೌನವನ್ನು ಮುರಿಯುವಾಶೆಯಿಂದ, ಮೈಮುರಿದ, ಆಕಳಿಸಿದ—

ಆದರೆ ಅಷ್ಟರಿಂದ ಆ ಮೌನ ಮುರಿಯಲಿಲ್ಲ.

ಆ ಮೌನ ಮುರಿಯಲಿಲ್ಲ—

ಅದಕ್ಕೆ ಪ್ರತಿಯಾಗಿ, ಕಲಕಿದಾಗ ಸ್ವಲ್ಪ ಮುರಿದಂತೆ ಕಂಡು, ಮರುಗಳಿಗೆಯೇ ಮತ್ತಷ್ಟು ಬಲವಾಗಿ ಹೆಪ್ಪುಗಟ್ಟುವ ಹಿಮಾಲಯದ ಹಿಮದಂತೆ, ಅಲ್ಪಸ್ವಲ್ಪ ರಮಿಸುವಿಕೆಗೆ ಮರುಳಾಗದೆ, ಮತ್ತಷ್ಟು ಚಂಡಿ ಹಿಡಿಯುವ ಹಟಮಾರಿ ಮಗುವಿನಂತೆ, ಆ ಮೌನ – ಅವನ ಅಲ್ಪ ಪ್ರಯತ್ನಕ್ಕೆ ಸಗ್ಗದೆ, ಮತ್ತಷ್ಟು ದಟ್ಟವಾಯಿತು.

ಒಬ್ಬನಿಂದ ಆ ಮೌನವನ್ನು ಮುರಿಯುವುದು ಸಾಧ್ಯವಿರಲಿಲ್ಲ. ಅದಕ್ಕೆ ಮತ್ತೊಬ್ಬರ ಜೊತೆ ಬೇಕಾಗಿತ್ತು.

ಜೊತೆ—

ಮೂರ್ತಿಯ ಮೌನಭಂಗದ ಪ್ರಯತ್ನವನ್ನು ಸಫಲಗೊಳಿಸಲು ಜೊತೆ ನೀಡಬಲ್ಲ ಮತ್ತೊಬ್ಬರು ಅಲ್ಲಿದ್ದರು.

ಆದರೆ ಮೂರ್ತಿಗೆ ಆ ಮೌನ ಅಸಹ್ಯವಾದರೆ, ಅವರಿಗೆ ಮಾತ್ರ ಅದೇ ಏಕೋ ಬಹು ಪ್ರಿಯವಾದಂತೆ, ಉಳಿದವರಿಗೆ ಅಹಸ್ಯವಾದರೂ ತನ್ನ ಮದ್ಯ ತನಗೆ ಮಾತ್ರ ಬಹು ರುಚಿಯಾಗಿ, ಅದನ್ನೇ ಹೀರಿ ಮೈಮರೆಯುವ ಪಾನಪ್ರಿಯನಂತೆ, ಆ ಮೌನವನ್ನೇ ಸವಿಯುತ್ತಾ ಕುಳಿತಿದ್ದರು.

ಇದರಿಂದಾಗಿ ಮನುಷ್ಯರಿದ್ದೂ ಮಾತಿಲ್ಲದ ಆ ಡಬ್ಬಿಯಲ್ಲಿ, ಏನೋ ಒಂದು ಅಸಹಜ, ಅವಾಸ್ತವ ವಾತಾವರಣ ಮೂಡಿತ್ತು.

ಆ ಗ್ರಹಚಾರ ನಿವಾರಣೆಗೆ ಮೂರ್ತಿಗೆ ಏನೂ ಪರಿಹಾರೋಪಾಯ ಕಾಣಲಿಲ್ಲ.

ಪರಿಹಾರೋಪಾಯ – ಇರಲಿಲ್ಲವೇ ?

ಇತ್ತು.

ಅವನಾಗಿಯೇ, ಮೇಲೆ ಬಿದ್ದು, ಅವರಿಗೆ ಇಷ್ಟವಿರಲಿ ಇಲ್ಲದಿರಲಿ, ಇದುರ್ಗಿದ್ದವರನ್ನು ಮಾತನಾಡಿಸಿ, ಆ ಮೌನವನ್ನು ಮುರಿಯಬಹುದಾಗಿತ್ತು.

ಆ ದಾರಿಯೇನೋ ಇತ್ತು – ಆದರೆ ಇದುರಿಗೆ ಕುಳಿತವನ ಕಣ್ಣ ನೋಟ, ' ಬಾಯಿ ಬಿಟ್ಟರೆ ನಿನ್ನನ್ನು ಸುಟ್ಟು ಬಿಡುತ್ತೇನೆ ' ಎನ್ನುವಂತಿರುವಾಗ, ಆತನನ್ನು, ಆತನಾಗಿಯೇ ಪ್ರಯತ್ನ ಮಾಡದೆ, ಮಾತನಾಡಿಸುವುದು ಹೇಗೆ ?

ಆಕೆ—?

ಊಹೂ, ಆಕೆಯನ್ನು ಮಾತನಾಡಿಸುವುದಂತೂ ಸಾಧ್ಯವೇ ಇರಲಿಲ್ಲ.

ಇವನ ಕಣ್ಣು ಆಕೆಯತ್ತ ಚಲಿಸಿದರೂ, ಆತನ ನೋಟ, ಗಾಳಿಯ ಸುಳಿದಾಟಕ್ಕೂ ಸಿಟ್ಟಾಗಿ ಹೆಡೆ ಕೆದರುವ ಹಾವಿನಂತೆ ಕೆರಳುತ್ತಿತ್ತು.

ನೋಡುವುದೇ ಅಷ್ಟು ಕಷ್ಟವಾಗಿರುವಾಗ ಇನ್ನು ಮಾತನಾಡಿಸುವುದು ಸಾಧ್ಯವೇ ? ಊಹೂ. ಅದು ಆಗದ ಮಾತು.

ಇನ್ನು ಉಳಿದ ದಾರಿ—

ಅದೂ ಒಂದಿತ್ತು – ಅವನೊಂದಿಗೇ ಅವನು ಮಾತಾಡಿಕೊಳ್ಳಬಹುದಾಗಿತ್ತು ! ಮನೆಯಲ್ಲಿದ್ದಾಗ, ಬಚ್ಚಲು ಮನೆಯಲ್ಲಿ ಒಂಟಿಯಾಗಿ ಸ್ನಾನ ಮಾಡುತ್ತಿದ್ದಾಗ ಮಾಡುತ್ತಿದ್ದಂತೆ, ತನಗೆ ತಾನೇ, ತನಗೆ ಗೊತ್ತಿದ್ದ ಸಿನಿಮಾ ಹಾಡನ್ನು ಕುರುಕುತ್ತಿದ್ದಂತೆ ಈಗಲೂ ಮಾಡಬಹುದಾಗಿತ್ತು.

ನಿಜ – ಒಂಟಿಯಾಗಿದ್ದಾಗ ಹಾಗೆ ಮಾಡಬಹುದು.

ಆದರೆ – ಇದುರಿಗೆ ಮನುಷ್ಯರು ಕುಳಿತಿರುವಾಗ ಹಾಗೆ ಮಾಡಬಹುದೇ ? ಹಾಗೆ ಮಾಡಿದರೆ ಜನ ತನ್ನನ್ನು ಅಪಾಪೋಲಿ ಎನ್ನಬಹುದು, ಹುಚ್ಚ ಎನ್ನಬಹುದು—

ರೈಲಿನಲ್ಲಿ ಹಾಗೆ ಮಾಡಿದರೆ, ಇದುರಿಗಿದ್ದವರು ತಟಕ್ಕನೆ ' ಅಪಾಯದ ಸರಪಳಿ ' ಎಳೆದು, ತನ್ನನ್ನು ಹೊರಗೆ ಹಾಕಿಸಬಹುದು.

ಊಹೂ – ಅದೂ ಸಾಧ್ಯವಿಲ್ಲ, ಸಾಧ್ಯವಿಲ್ಲವೇನು – ಉಳಿದ ಎಲ್ಲದಕ್ಕಿಂತಲೂ ಅಸಾಧ್ಯವಾದದ್ದು ಆ ಕೆಲಸ.

ಹಾಗಾದರೆ—

ತಾನು ಅವರೊಂದಿಗೆ ಮಾತಾಡುವಂತಿಲ್ಲ – ಹೋಗಲಿ.

ಅವರು ತನ್ನೊಂದಿಗೆ ಮಾತಾಡಲು ಸಿದ್ಧರಿಲ್ಲ – ಹಾಳಾಗಿ ಹೋಗಲಿ.

ಆ ಪರಸ್ಪರ ಸಹಕಾರದ ಪ್ರಶ್ನೆ ಎಲ್ಲಾದರೂ ಉರಿಬಿದ್ದು ಹೋಗಲಿ, ಆ ಹಾಳಾದವರು, ತಮ್ಮಲ್ಲೇ ತಾವಾದರೂ ಮಾತಾಡಿಕೊಳ್ಳಬಾರದೆ? ಅದನ್ನಾದರೂ ಕೇಳಿಕೊಂಡು, ಈ ಮೌನವನ್ನು ಮುರಿಯಬಹುದು ಎಂದರೆ ಅವರಿಗೆ ಅವನ ವಿಷಯದಲ್ಲಿ ಅಷ್ಟೂ ದಾಕ್ಷಿಣ್ಯ, ಅಲ್ಪ ಕರುಣೆಯೂ ಇದ್ದಂತಿರಲಿಲ್ಲ.

ಆಕೆ ಕಿಟಕಿಯ ಕಡೆ ಮುಖ ತಿರುಗಿಸಿಕೊಂಡು, ಮುದುರಿ ಕುಳಿತಿದ್ದರೆ, ಆತ, ಎಲ್ಲ ಮಾತಿನ ಪ್ರಯತ್ನವನ್ನೂ ಕೊಲ್ಲುವಂತೆ, ದುರುಗುಟ್ಟಿ ನೋಡುತ್ತಾ ಕುಳಿತಿದಾನೆ.

ಹೀಗಿರುವಾಗ ಈ ಮೌನ ಹೇಗೆ ಮುರಿಯಬೇಕು? ತನ್ನ ನಾಲಗೆ ಹುಟ್ಟನ್ನು ಸಾರ್ಥಕಪಡಿಸಿಕೊಳ್ಳುವುದು ಹೇಗೆ?

ಚಿಂತಿಸುತ್ತಾ, ಚಿಂತಿಸುತ್ತಾ ಹಾಗೂ ಮತ್ತೊಂದು ಪರಿಹಾರೋಪಾಯ ಕಂಡಿತು.

ಮುಂದಿನ ನಿಲ್ದಾಣದಲ್ಲಿ ರೈಲು ನಿಂತಾಗ, ಬೇರೆ ಯಾರಾದರೂ ಪ್ರಯಾಣಿಕರು ಈ ಡಬ್ಬವನ್ನು ಹತ್ತಿದರೆ, ಅವರೊಂದಿಗೆ ಮಾತನಾಡಿ ಈ ನಾಲಗೆಯ ತೀಟೆಯನ್ನು ಕಳೆದುಕೊಳ್ಳಬಹುದು.

ಆದರೆ—

ಆ ಪರಿಹಾರೋಪಾಯ ಕಾಣುತ್ತಿದ್ದ ಹಾಗೇ, ಆಗಿನ ಪರಿಸ್ಥಿತಿಗಿಂತ ಪರಿಹಾರೋಪಾಯವೇ ಹೊಲಸಾಗಿ ಕಂಡು, ಆ ಯೋಚನೆಯನ್ನೇ ತಲೆಯಿಂದ ಕೊಡವಿ ಹಾಕಿದ ಮೂರ್ತಿ.

ಆಗಬಹುದಾದುದು ಬೇಡ—ಸಾಧ್ಯವಿಲ್ಲದಿದ್ದುದು ಆದರೆ ಆಗಬಹುದು. ಆದರೆ ಆ ಚಿಂತೆ ವಿಫಲ.

ಹಾಗಾದರೇನು ಮಾಡಬೇಕು?—

ಓದುವುದು ಸಾಧ್ಯವಿತ್ತು ; ಓದಲು ಪುಸ್ತಕವೂ ಇತ್ತು. ಆದರೆ, ಮುಂದಿನ ಪುಟಕ್ಕೆ ತಿರುಗುವುದಿಲ್ಲ ಎಂದು, ತೆರೆದ ಪುಟಕ್ಕೇ ಕಚ್ಚಿ ಕುಳಿತುಕೊಳ್ಳುವ ಪುಸ್ತಕವನ್ನು ಓದುವುದು ಹೇಗೆ ಸಾಧ್ಯ ?

ಅದಾವುದೂ ಸಾಧ್ಯವಿರಲಿಲ್ಲ. ಸಾಧ್ಯವಿದ್ದುದೊಂದೇ—ಸಿಗರೇಟು ಸೇದುವುದು.

ಸಿಗರೇಟು ಹೊತ್ತಿಸಿ, ಬಾಯಿ ತುಂಬಿದ ಹೊಗೆಯನ್ನು ನಿಧಾನವಾಗಿ ಉಗುಳಿ, ಮತ್ತೆ ಮೂಲೆಗೆ ಮೈಯೊರಗಿಸಿ ಕುಳಿತ ಮೂರ್ತಿ-

ಸಿಗರೇಟಿನ ಹೊಗೆ ಗಾಡಿಯಲ್ಲಿ ಎಳೆ ಎಳೆಯಾಗಿ ಹಬ್ಬಿ, ತೆರೆದ ಕಿಟಕಿಯ ಬಾಗಿಲಿನಿಂದಾಚೆಗೆ ವೇಗವಾಗಿ ಹೊರಗೆ ನುಗ್ಗಿ, ಕತ್ತಲಲ್ಲಿ ಮರೆಯಾಗಿ ಹೋಯಿತು.

ಸಿಗರೇಟು ಸೇದುತ್ತಾ, ಸೇದುತ್ತಾ ಯೋಚಿಸಲು ಬೇರೇನೂ ವಿಚಾರವಿಲ್ಲದ ಅವನ ಬುದ್ಧಿ ಮತ್ತೆ ಕನಸಿಗೆ ಶರಣುಹೋಯಿತು.

ಒಂದುವೇಳೆ—

ಜೀವನದಲ್ಲಿ ಹಾಗಾಗುವುದು ಸಾಧ್ಯವಿಲ್ಲ ಎನ್ನುತ್ತಾರೆ. ನಿಜ. ಹಾಗೇ ಇರಬಹುದು. ಆದರೆ ಕಾದಂಬರಿಗಳಲ್ಲಿ, ಚಲಚ್ಚಿತ್ರಗಳಲ್ಲಿ ಎಷ್ಟೋ ಲಕ್ಷಾಂತರ ಬಾರಿ ಹಾಗಾಗಿದೆಯಲ್ಲ. ಅಂಥದು ಜೀವನದಲ್ಲಿ ಒಂದು ಬಾರಿಯಾದರೂ ಆಗಬಾರದೇಕೆ—

ಒಂದುವೇಳೆ - ಹಾಗಾಗಿ—

ಆ ತರುಣಿ, ಆ ರಣಹದ್ದಿನ ಕಾವಲಿಲ್ಲದೆ, ಒಂಟಿಯಾಗಿ, ತನ್ನೊಂದಿಗೆ ರೈಲಿನಲ್ಲಿ ಪ್ರಯಾಣಮಾಡುತ್ತಿದ್ದರೆ, ಆಗ, ತಾನು ಹೀಗೆ ಬಾಯಿ ಸತ್ತ ಮೂಕನಂತೆ ಕುಳಿತುಕೊಳ್ಳುತ್ತಿದ್ದನೆ ?

ಆಕೆ - ಆಕೆಯಾದರೂ, ಹೀಗೆ, ಮುಖ ತೋರಿಸಬಾರದು ಎಂಬ ರೀತಿಯಲ್ಲಿ ಮುದುರಿಕೊಂಡು ಕುಳಿತುಕೊಳ್ಳುತ್ತಿದ್ದಳೆ ?

ಊಹೂ - ಹಾಗಾಗುವುದು ಸಾಧ್ಯವೇ ಇರಲಿಲ್ಲ.

ಈ ವೇಳೆಗೆ ಆಕೆಯೋ, ಅವನೋ, - ಯಾರಾದರೊಬ್ಬರು ಮುಂದೆ ಬಿದ್ದು ಮಾತನಾಡುತ್ತಿದ್ದರು. ಮಾತುಮಾತಿಗೆ ನಗೆಮಲ್ಲಿಗೆಯರಳಿ ಚೆಲ್ಲುತ್ತಿತ್ತು.

ಮಾತು ಮುಂದುವರಿದು, ಮಾತಿನ ಪರಿಮಳ ಬೀರಿದ ತುಟಿ ಹೂವುಗಳು ಅಷ್ಟು ದೂರ ಇರದೆ, ಬಳಿ ಸೇರಿ ಸಂಗಮವಾಗುತ್ತಿದ್ದವು. ನಿಜ - ಹಾಗಾಗುವುದಕ್ಕೆ ಏನು ಅಭ್ಯಂತರವಿತ್ತು.

ಮೂರ್ತಿಗಂತೂ ಏನೇನೂ ಅಭ್ಯಂತರವಿರಲಿಲ್ಲ.

ಆಕೆ—

ಆಕೆಯೂ ಅಸಮ್ಮತಿ ಸೂಚಿಸುತ್ತಿದ್ದಳೆಂದು ಮೂರ್ತಿಗೆ ಅನ್ನಿಸಲಿಲ್ಲ.

ನಿಜ - ತುಟಿಗಳ ಸಂಗಮವಾಗುತ್ತಿತು. ಮುತ್ತು - ಅದು ಪ್ರಣಯ ಯಾತ್ರೆಯ ಮೊದಲ ಮಜಲು. ಬಳಿಕ—

ಬಾಹುಬಂಧನ, ಚುಂಬನ - ಅವರ ಮುಂದಿನದು ಚಿಂತಿಸಿದರೂ ಮೈ ಬೆಚ್ಚಗಾಗುವಂಥ ರಸಮುಕ್ತಾಯ.

ಹಾಗಾಗಿ—

ರೈಲಿನ ನೀರಸ, ಯಾಂತ್ರಿಕ ಪ್ರಯಾಣ, ನಂದನವನ ವಿಹಾರವಾಗುತ್ತಿತ್ತು ; ರೈಲು ಡಬ್ಬಿ ಪ್ರೇಮಕಾಶ್ಮೀರವಾಗುತ್ತಿತ್ತು.

ಪ್ರೇಮ—

ನಿಜ - ಪ್ರೇಮವೇ. ಅದೂ ಅಪ್ಪಟ ಪ್ರೇಮ. ಪ್ರೇಮವಲ್ಲದೆ ಬೇರೇನೂ ಅಲ್ಲವೇ ಅಲ್ಲ. ಅಷ್ಟು ಅತ್ಯಲ್ಪ ಕಾಲಾವಧಿಯಲ್ಲಿ, ಮಾಂತ್ರಿಕ ಸ್ಪರ್ಶದಿಂದೆಂಬಂತೆ, ಅರಳಿ, ಹೂವಾಗಿ ಹಣ್ಣಾಗುವುದು ಪ್ರೇಮಕ್ಕಲ್ಲದೆ ಬೇರಾವುದಕ್ಕೆ ತಾನೇ ಸಾಧ್ಯ.

ಪ್ರೇಮದ ಹಾದಿಯೇ ಅದು—

ಮೊದಲು ದೃಷ್ಟಿಸಂಗಮ–ಎರಡನೆಯ ಹೆಜ್ಜೆಯೇ ದೇಹ ಸಮಾಗಮ !

ಶಕುಂತಲಾ-ದುಷ್ಯಂತ, ಲೈಲಾ-ಮಜುನು, ರೋಮಿಯೋ-ಜೂಲಿಯೆಟ್, ಷಿರಿನ್-ಫರ್‌ಹಾಡ್—ಜಗತ್ತಿನ ಪ್ರಖ್ಯಾತ ಪ್ರಣಯಗಳೆಲ್ಲವೂ, ಹೀಗೇ, ಪ್ರಥಮ ದೃಷ್ಟಿ ಸಂಗಮ ಸಂಜಾತವಾದವೇ.

ತಮ್ಮದೂ ಹಾಗೇ ಆಗಿ, ಆ ಅಮರ ಪ್ರೇಮಿಗಳ ಪಂಕ್ತಿಗೆ ಸೇರುತ್ತಿತ್ತು.

ಅದಕ್ಕೆ ಇಂಥ ಆಕಸ್ಮಿಕ ಭೇಟಿ ಎಂಥ ಸುಸಂದರ್ಭ.

ಈಗ ಸಂದರ್ಭ ಅದಕ್ಕೆ ಸರಿಯಾಗಿತ್ತು—ಆ ಹಾಳು ಗೂಬೆಯೊಂದು, ಅಪಶಕುನದ ಮೋರೆ ಹೊತ್ತು ಇದುರಿಗೆ ಕೂಡದಿದ್ದರೆ.

ಅವಸಿದ್ದುದರಿಂದ, ಇಲ್ಲದಿದ್ದರೆ ಏನಾಗಬಹುದಾಗಿತ್ತು ಎಂದು ಪರೀಕ್ಷಿಸುವ ಅವಕಾಶವೂ ಇರಲಿಲ್ಲ.

" ಅವಕಾಶವಿದ್ದಿದ್ದರೆ....ಇದ್ದಿದ್ದರೆ....

ರೈಲು ಬಂಡಿಯಲ್ಲಿ—

'ಸಾಯಂಕಾಲೇ ವನಾಂತೇ ಕುಸುಮಿತ ಸಮಯೇ ಸೈಕತೇ ಚಂದ್ರಿಕಾಯಾಂ'

....ಎಂದು ಏನೇನೋ ಕನಸು ಕಂಡು 'ಗೀತ ಗೋವಿಂದ'ದ ಕವಿ ಜಯದೇವನಿಗೆ, 'ಇದೂ ಸ್ವಲ್ಪ ಹಾಗೇ' ಎಂದು ಹೊಸ ಪಾಠ ಹೇಳಿ ಕೊಡಬಹುದಾಗಿತ್ತು.

ಏನೇನೋ ಆಗಬಹುದಿತ್ತು....

# ೭

ಮೂರ್ತಿ, ರೈಲುಡಬ್ಬಿಯಲ್ಲಿ ಕುಳಿತು ಸ್ವಪ್ನಲೋಕದ ಯಾತ್ರಿಕನಾಗಿದ್ದಾಗಲೇ, ಅವನೆಲ್ಲ ಕನಸುಗಳ ಪ್ರೇರೇಪಣೆಯಾದ 'ಆಕೆ,' ಅದುವರೆಗೂ ಕಿಟಕಿಯತ್ತಲೇ ಮುಖ ಮಾಡಿ ಕುಳಿತುಕೊಂಡಿದ್ದವಳು, ರೈಲಿನ ವಿಕಟ ಸದ್ದಿನಲ್ಲೂ ಸ್ಪಷ್ಟವಾಗಿ ಕೇಳುವಷ್ಟು ಭಾರವಾಗಿ ನಿಟ್ಟುಸಿರು ಬಿಟ್ಟು, ಮುಖವನ್ನು ತನ್ನ ಪಕ್ಕದಲ್ಲಿ ಕುಳಿತಿದ್ದವನ ಕಡೆ ತಿರುಹಿದಳು.

ಆ ಮುಖ—

ಆ ಕಡೆ ತಿರುಗಿ, ದಿಕ್ಕು ಬದಲಿಸುವಾಗ ಸವಿವರವಾಗಿ ಕಂಡ ಮುಖ—

ಅದನ್ನು ನೋಡುತ್ತಿದ್ದ ಹಾಗೇ ಮೂರ್ತಿಗೆ ತಟಕ್ಕನೆ ಕರುಳಿಗೆ ಕೊಳ್ಳಿ ಕೊಟ್ಟಂತಾಯಿತು.

ಆಕೆ—ಅಳುತ್ತಿದ್ದಳು !

ಅಷ್ಟು ಹೊತ್ತೂ ಆಕೆ ತನ್ನ ಮುಖವನ್ನು, ಕಾಣದಂತೆ ತಿರುಗಿಸಿಕೊಂಡದ್ದರಿಂದ, ಆಕೆ ಏನು ಮಾಡುತ್ತಿದ್ದಾಳೆಂಬುದು ಮೂರ್ತಿಗೆ ಕಂಡಿರಲಿಲ್ಲ.

ಆತನಿಗೂ ಕಂಡಿರಲಿಲ್ಲ.

ಆಕೆ ಹಾಗಿದ್ದಾಗ ಮೂರ್ತಿ, ತನ್ನತ್ತ ಮುಖ ತಿರುಗಿಸಿದರೆ, ಆತ ಏನನ್ನುತ್ತಾನೋ ಎಂಬ ಭಯಕ್ಕೆ ಕಟ್ಟು ಬಿದ್ದು, ಆಕೆ ಹಾಗೆ ಕುಳಿತಿದಾಳೇನೋ ಎಂದುಕೊಂಡಿದ್ದ.

ಆಗಿನ ಆ ವಿಚಿತ್ರ ಪರಿಸ್ಥಿತಿಯಲ್ಲಿ ಆಕೆ ಏನು ಯೋಚಿಸುತ್ತಿರಬಹುದು ಎಂದೂ ಯೋಚಿಸಿದ್ದ.

ಆದರೆ – ಇದು – ಈ ಕಂಬನಿ – ಅನಿರೀಕ್ಷಿತ !

ಕಂಬನಿ – ನಿಜ – ಅದು ಅಳುವಿನ ಕಣ್ಣೀರೇ. ಕಣ್ಣಿನಲ್ಲಿ ಅಕಸ್ಮಾತ್ತಾಗಿ ಧೂಳು ಬಿದ್ದರೂ ನೀರು ಬರುತ್ತದೆ. ಆದರೆ ಆಕೆಯ ಕಣ್ಣಂಚಿನಲ್ಲಿ ಥಳಥಳಿಸುತ್ತಾ, ಉರುಳಲು ಸಿದ್ಧವಾಗಿ ನಿಂತ ದಪ್ಪ ಹನಿ

ಆ ಜಾತಿಯದಲ್ಲ. ಎದೆಯಲ್ಲಿ ಅಪಾರ ವ್ಯಥೆ ಕುದಿಯುತ್ತಿರುವಾಗ ಮೂಡುವಂಥದು.

ಆ ಹನಿ – ಅದೂ ಒಂದು ಹಸಿಯಲ್ಲ. ಬಹಳ ಹೊತ್ತಿನಿಂದ, ರೈಲು ನಿಲ್ದಾಣವನ್ನು ಬಿಟ್ಟು ಚಲಿಸಿದ ಬಳಿಕ, ಆಕೆ ಕಿಟಕಿಯತ್ತ ಮುಖದಿರುಹಿಸಿ ಕುಳಿತುಕೊಂಡಾಗಿನಿಂದ ಹರಿಯುತ್ತಿದ್ದು, ಕೊನೆಗೆ ಅಶ್ರುಭಂಡಾರ ಬರಿದಾಗಿ ಉಳಿದ ಕೊನೆಯ ಹಸಿ ಕಣ್ಣೀರು.

ಕೆಂಪಗೆ, ದಪ್ಪನಾದ ಕಣ್ಣು, ಕಂಬನಿಯ ಕರೆ ಕಟ್ಟಿದ ಕಪೋಲ, ಏರಿಳಿವ ನಾಸಾಪುಟಗಳು – ಎಲ್ಲವೂ ದೀರ್ಘ ಶೋಕಕ್ಕೆ ಮೂಕ ಸಾಕ್ಷಿಗಳಾಗಿದ್ದವು.

ಏಕೆ, ಏಕೆ, ಏಕೆ? ಏಕೆ ಈ ಕಣ್ಣೀರು? ಯಾವ ವ್ಯಥೆ ಆ ಹೆಣ್ಣಿನ ಕೋಮಲ ಹೃದಯವನ್ನು ಹಿಂಡಿ, ಈ ಕಂಬನಿಯನ್ನು ಕರೆಸಿದೆ?

ದಿಗ್ಭ್ರಾಂತನಾಗಿ ಆಕೆಯತ್ತಲೇ ನೋಡಿದ ಮೂರ್ತಿ.

ನೋಡನೋಡುತ್ತ, ಅವನಿಗನಿಸಿತು – ನಿಜವಾಗಿಯೂ ಆಕೆ ಚೆಲುವೆ. ಶೋಕವೂ ಆ ಚೆಲುವನ್ನು ಕಂದಿಸದೆ, ಅದಕ್ಕೆ ಮಿರುಗಿಟ್ಟಿತ್ತು.

ದುಃಖದ ಕಾವಿನಲ್ಲಿ ಕೆಂಪೇರಿದ ಆ ಮುಖ, ವಿಲಕ್ಷಣ ರಮಣೀಯತೆಯನ್ನು ತಳೆದಿತ್ತು.

'ದುಃಖವಾಗಲಿ ಸುಖವಾಗಲಿ, ಕ್ರೋಧವಾಗಲಿ ಹರ್ಷವಾಗಲಿ – ಎಲ್ಲ ಬಗೆಯ ಭಾವಗಳಲ್ಲೂ ತನ್ನ ಮೂಲಭೂತ ಆಕರ್ಷಕತೆಯನ್ನು ಕಳೆದುಕೊಳ್ಳದೆ, ಭಾವಪರಿವರ್ತನೆಯಲ್ಲಿ ವಿನೂತನ ಕಾಂತಿಯನ್ನು ಪಡೆಯುವ ಏಕೈಕ ವಸ್ತು – ಹೆಣ್ಣಿನ ಮುಖ' ಎಂದು ಯಾರೋ ಎಲ್ಲೋ ಬರೆದುದನ್ನು ಮೂರ್ತಿ ಎಂದೋ ಒಂದು ದಿನ ಓದಿದ್ದ.

ಇಂದು ಆ ಹೆಣ್ಣಿನ ಶೋಕತಪ್ತ ಮುಖವನ್ನು ನೋಡಿದಾಗ ಮೂರ್ತಿಗೆ ಆ ಮಾತು ನಿಜ ಎನಿಸಿತು.

ಆಕೆ ಶೋಕಾರ್ತೆ – ಆದರೂ ರೂಪವತಿ!

ಎಂತಲೇ ಮೂರ್ತಿಗೆ ಆಕೆಯನ್ನು ಬರಸೆಳೆದು ತಬ್ಬಿ, ಕಂಬನಿಯಿಂದ ತೊಯ್ದ ಆಕೆಯ ಕಪೋಲಗಳನ್ನು ತನ್ನೆದೆಗೆ ಒತ್ತಿಕೊಂಡು, ಮುಂಗುರುಳನ್ನು ನೇವರಿಸಿ—

'ಅದೇನು ದುಃಖಹೇಳು. ನಿನಗೇನು ದುಃಖವಿದ್ದರೂ, ಕೊರಗಿದ್ದರೂ ನಾನು ಪರಿಹರಿಸುತ್ತೇನೆ. ಏನಾಗಬೇಕು ಹೇಳು – ಸಪ್ತ ಶೈಲಗಳನ್ನು ಹತ್ತಿ ಬರಲೆ? ಸಪ್ತ ಸಾಗರಗಳನ್ನು ಈಸಿ ಬರಲೆ? ಲವಣ ಸಮುದ್ರದ ನಡುವಣ ಯಕ್ಷ ನಗರಿಯ ರಾಕ್ಷಸನ ಗೃಹಾಂತರಾಳದಲ್ಲಿರುವ ಗಿಣಿಯ ಕತ್ತಿನಲ್ಲಿರುವ ಮುಕ್ತಾಹಾರವನ್ನು ತಂದಿತ್ತರೆ, ನಿನ್ನ ಮುಖದ ಮೇಲೆ ಮತ್ತೆ ಮಂದಹಾಸ ಮೂಡುವುದೇ? ಹೇಳು? ನಿನಗೇನಾಗಬೇಕು? ಬೇಕಾದದ್ದಾಗಲಿ – ನಿನ್ನ ದುಃಖ ತೀರಿಸುತ್ತೇನೆ.'

—ಎಂದು ಹೇಳಿ, ಆಕೆಯ ಕೆನ್ನೆಯ ಮೇಲಿನ ಕಣ್ಣೀರಿನ ಕರೆಯನ್ನು, ತನ್ನ ತುಟಿಗಳಿಂದ ಮೃದುವಾಗಿ ತೊಡೆಯಬೇಕು ಎನಿಸಿತು.

ಅನಿಸಿತು – ಹಾಗನಿಸಿ ಅವನ ಎದೆ ಉಬ್ಬಿತು. ಆದರೆ ಹಾಗವನು ಮಾಡುವುದು ಸಾಧ್ಯವಿರಲಿಲ್ಲ.

ಹಾಗೆ ಮಾಡುವುದು ಸಾಧ್ಯವಿದ್ದ ಆತ—

ಹಾಗೇನೂ ಮಾಡದೆ, ಮಾತೂ ಆಡದೆ, ತನ್ನ ಉರಿಗಣ್ಣುಗಳನ್ನು ಆಕೆಯತ್ತ ಹೊರಳಿಸಿದ್ದ.

ಆಕೆ, ಹಾಗೇ ಅವನತ್ತ ನೋಡಿ, ಮತ್ತೊಮ್ಮೆ ಎದೆ ಬಿರಿಯುವಂತೆ ನಿಟ್ಟುಸಿರಿಟ್ಟಳು. ಕಣ್ಣಂಚಿನಲ್ಲಿ ತೂಗಾಡುತ್ತಾ ನಿಂತಿದ್ದ ಕಂಬನಿಯು ಧುಮುಕಿ ಕೆನ್ನೆಯ ಮೇಲೆ ಹರಿಯಿತು.

ಕೆಳಗುರುಳಿದ ಕಣ್ಣೀರನ್ನು ನೋಡಿ ಅವನಿಗೆ ತನ್ನ ಕರ್ತವ್ಯ ನೆನಪಾಯಿತೇನೋ—

'ಅದ್ಯಾಕೆ?'

—ಎಂದು ಕೇಳಿದ.

ಎಷ್ಟು ಅರಸಿಕತನದ, ನೀರಸವಾದ ಪ್ರಶ್ನೆ. ಬೇರಾವ ರೀತಿಯಲ್ಲೂ ಸಂತೈಸುವ 'ರಸಿಕತೆ' ಇಲ್ಲವಾದರೆ ಹೋಗಲಿ, ಪ್ರಶ್ನೆ ಮಾಡುವದಾದರೂ ಹಾಗೆಯೇ? ಛಿ – ಶುದ್ಧ ಕಾಡುಪ್ರಾಣಿ!

ಅವನ ಪ್ರಶ್ನೆಗೆ ಉತ್ತರವಾಗಿ ಆಕೆ ಮತ್ತೊಮ್ಮೆ ನಿಟ್ಟುಸಿರಿಟ್ಟಳು.

ಆದರೆ ಈ ಬಾರಿ ಅವನು ಮತ್ತೆ ಪ್ರಶ್ನೆಯನ್ನು ಮಾಡಲಿಲ್ಲ. ಸುಮ್ಮನಿದ್ದ.

ಒಂದೆರಡು ಗಳಿಗೆ ಸುಮ್ಮನಿದ್ದು ಆಕೆಯೇ ತಡೆತಡೆದು, ಬಹು ಮೃದುವಾದ ಧ್ವನಿಯಲ್ಲಿ ಹೇಳಿದಳು—

"ಮನೇಲಿ ಎಷ್ಟು ಗೋಳಾಡ್ತಾರೊ ಏನೋ...."

ಜಗತ್ತಿನ ಚಿಂತೆ, ದುಃಖವನ್ನೆಲ್ಲಾ ಭಟ್ಟಿ ಇಳಿಸಿ, ಆ ನಾಲ್ಕು ಮಾತಾಗಿ ಮೂಡಿಸಿದಂತಿತ್ತು ಆಕೆಯ ಮಾತು.

ಅದನ್ನು ಕೇಳಿದ ಆತ, ಕಾಣದೆ ಕೆಂಡ ತುಳಿದವನಂತೆ ಬೆಚ್ಚಿಬಿದ್ದು, ಭಯ, ಸಂಶಯಗಳು ತುಂಬಿ ತುಳುಕುವ ನೋಟದಲ್ಲಿ, ತಟಕ್ಕನೆ ಡಬ್ಬಿಯಲ್ಲೆಲ್ಲಾ ಕಣ್ಣಾಡಿಸಿ, ತಮ್ಮಿಬ್ಬರನ್ನೂ ನೋಡುತ್ತಾ ಕುಳಿತಿದ್ದ ಮೂರ್ತಿಯನ್ನೂ ದಿಟ್ಟಿಸಿ ನೋಡಿದ.

"ಈಗ ಆ ಮಾತೆಲ್ಲಾ ಏಕೆ? ಸುಮ್ಮನಿರು"

—ಆಡಬಾರದ ಮಾತನ್ನಾಡಿದವರಿಗೆ ಕೆನ್ನೆಗೆ ಹೊಡೆದು 'ಹಾಗಾಡಬಾರದು' ಎಂದು ಹೇಳುವಂತೆ, ಒರಟಾಗಿ, ಪಿಸುಧ್ವನಿಯಲ್ಲಿ ಗದ್ದರಿಸಿದ ಆತ, ಆಕೆಯ ದೃಷ್ಟಿಯನ್ನೂ ತಮ್ಮಿಬ್ಬರ ಇದುರಿಗೆ ಕುಳಿತ ಮೂರ್ತಿಯತ್ತ ಸೆಳೆದು.

ಆಕೆಯೂ ಮೂರ್ತಿಯ ಕಡೆ ನೋಡಿದಳು. ನೋಡಿ ಏನು ಅನಿಸಿತೋ ಏನೋ—ಇದ್ದಕ್ಕಿದ್ದ ಹಾಗೇ ಆ ಮುಖದಲ್ಲಿದ್ದ ಬಣ್ಣ ಹಾರಿಹೋಗಿ ಬಿಳುಪೇರಿತು.

ಕಣ್ಣಲ್ಲಿ, ಕವಿದ ದುಃಖದ ಮರೆಯಿಂದ ಮೂಡಿ ಬಂದ ಭಯ ಮಿಂಚಿತು.

ಭಯ—ನಿಜ—ಭಯ.

ಆ ಕಣ್ಣುಗಳಲ್ಲಿ ಮೂಡಿ ಬಂದ ಭಾವ ಭಯವಲ್ಲದೆ ಬೇರೇನೂ ಅಲ್ಲವೇ ಅಲ್ಲ.

ಭಯ—ನಿಜ—ಭಯ. ಆದರೆ—ಏಕೆ?

ಆಕೆಯ ಕಣ್ಣಿನಲ್ಲಿ, ಬಣ್ಣ ಮಾಸಿದ ಕೆನ್ನೆಗಳಲ್ಲಿ, ಒಣಗಿ ವಿವರ್ಣವಾದ ತುಟಿಗಳಲ್ಲಿ—ಭಯ ತಾನೇ ತಾನಾಗಿ ತುಳುಕುತ್ತಿತ್ತು.

ಅವನ ಕಣ್ಣಿನಲ್ಲಿಯೂ—

ಸಂಶಯ, ಸಿಟ್ಟುಗಳ ತೆಳುತೆರೆಯ ಹಿಂದೆ ಭಯದ ಛಾಯೆ ಸ್ಪಷ್ಟ ವಾಗಿತ್ತು.

ಭಯ—ನಿಜ. ಆದರೆ ಏಕೆ ?

ಆಕೆ ಆಡಬಾರದ ಮಾತಾವುದನ್ನೂ ಆಡಿರಲಿಲ್ಲ. ಮಾಡಬಾರದ ಕೆಲಸವಾವುದನ್ನೂ ಮಾಡಿರಲಿಲ್ಲ. ಬಿಟ್ಟು ಬಂದ ಮನೆಯನ್ನು ನೆನೆದು ನೋವಾಗಿ, ತೌರಿನಿಂದ ಬಂದ ಹೆಣ್ಣು ಆಡಬಹುದಾದಂಥ ನೋವಿನ ಮಾತಾಡಿದ್ದಳು. ಅಷ್ಟಕ್ಕಿಂತ ಹೆಚ್ಚಾಗಿ ಯಾವ ರಹಸ್ಯವನ್ನೂ ಬಹಿರಂಗ ಪಡಿಸಿರಲಿಲ್ಲ.

ಹಾಗಿರುವಾಗ, ಆ ಮಾತಾಡಿದುದಕ್ಕೆ ಆಕೆಗೆ ಭಯವೇಕೆ ಆಗ ಬೇಕು ?

ಆಕೆ ಆ ಮಾತಾಡಿದುದನ್ನು ಕೇಳಿ ಅವನಿಗೇಕೆ ಭಯವಾಗಬೇಕು ?

ಭಯವಾಗುವಂತಹ ವಿಷಯ ಏನಿತ್ತು ಆ ಮಾತುಗಳಲ್ಲಿ........

ಏಕೋ, ಇದ್ದಕ್ಕಿದ್ದ ಹಾಗೇ ಮೂರ್ತಿಯ ಮನಸ್ಸಿನಲ್ಲಿದ್ದ, ಉಳಿದೆಲ್ಲ ಭಾವಗಳೂ ತಟಕ್ಕನೆ ತಲೆಮರೆಸಿಕೊಂಡು ಕುತೂಹಲವೊಂದು ತಾನೇ ತಾನಾಗಿ ನಿಮಿರಿ ನಿಂತಿತು.

ಆ ಕುತೂಹಲದಲ್ಲೇ ಅವರಿಬ್ಬರ ಮುಖವನ್ನೂ ದಿಟ್ಟಿಸಿ ನೋಡಿದ. ರೂಪ ಮುಗ್ಧತೆ ಅಳಿದ ಕುತೂಹಲದ ಹೊಸ ಕಣ್ಣುಗಳಿಂದ, ಆಗ ತಾನೇ ಅವರನ್ನು ಕಂಡವನಂತೆ ನೋಡಿದ.

# ೮

ಆಕೆ—

ತನ್ನತ್ತ ಭೀತ ನೇತ್ರಗಳನ್ನು ಅರಳಿಸಿ, ಏನೋ ಮಹಾಪರಾಧ ಮಾಡಿದವಳಂತೆ ಬೆದರಿ ನೋಡುತ್ತಿರುವ ಆಕೆ—

ಆಕೆಗೆ 'ಆಕೆ' ಎಂದು ಕರೆಸಿಕೊಳ್ಳುವಷ್ಟು ವಯಸ್ಸಾಗಿರಲಿಲ್ಲ. ಹದಿನೇಳು, ಹದಿನೆಂಟು ವರ್ಷ ವಯಸ್ಸಿರಬಹುದು. ಎಷ್ಟು ಹೆಚ್ಚೆಂದರೂ ಆಕೆಯ ವಯಸ್ಸು ಇಪ್ಪತ್ತರ ಗಡಿ ದಾಟಿರಲಿಲ್ಲ.

ರೈಲ್ವೆ ನಿಲ್ದಾಣದ ಅರೆಗತ್ತಲಿನಲ್ಲಿ, ಬಳಿಕ ರೈಲ್ವೆ ಡಬ್ಬಿಯಲ್ಲಿ ಅಸ್ಪಷ್ಟ ವಾಗಿ, ಮುಖಕ್ಕಿಂತ ಹೆಚ್ಚಾಗಿ ಮೈಯನ್ನೇ ನೋಡಿದಾಗ ಮೂರ್ತಿಗೆ, ಆಕೆಗೆ ಸಾಕಷ್ಟು ವಯಸ್ಸಾಗಿರಬೇಕು ಎನಿಸಿತ್ತು. ಏನಿಲ್ಲವೆಂದರೂ ಇಪ್ಪತ್ತೈದು, ಮೂವತ್ತಾದರೂ ಇರಬಹುದೆಂದು ಅಂದಾಜುಮಾಡಿದ್ದ.

ಈಗ—ಸ್ಪಷ್ಟವಾಗಿ ಮುಖವನ್ನು ನೋಡಿದ ಬಳಿಕ ಕಾಣುತ್ತಿದೆ—ಎಷ್ಟು ಹೆಚ್ಚೆಂದರೂ ಆಕೆಯ ವಯಸ್ಸು ಇಪ್ಪತ್ತರಾಚೆ ಹೋಗುವುದಿಲ್ಲ. ಇಪ್ಪತ್ತು ಎಂದರೂ 'ಸ್ವಲ್ಪ, ಒಂದೆರಡು ವರ್ಷ ಕಡಮೆ ಇದ್ದರೂ ಇರಬಹುದು' ಎಂದು ಹೇಳುವಂತಿದೆ ಆಕೆಯ ಮುಖ. ಆಕೆಯ ತುಂಬಿದ ಹೊಳಪುಗೆನ್ನೆ, ಉಬ್ಬಿದ ಗಲ್ಲ, ನಯವಾದ ಹಣೆ, ಕೊಂಚ ಅಶಾಂತವಾದ ಮುಗ್ಧನೇತ್ರಗಳು ಆ ಮಾತಿಗೆ ಸಾಕ್ಷಿಯಾಗಿದ್ದವು.

ಆಕೆಯ ಮುಖ ಸುಂದರವಾದುದು. ಯಾರೂ ಮತ್ತೆ ಮತ್ತೆ ನೋಡಬೇಕು ಎನಿಸುವಷ್ಟು ಸುಂದರವಾದುದು. ಆ ಸೌಂದರ್ಯ ಬರೀ ಕಣ್ಣಿಗಿಂಪಾದ ಬಣ್ಣದ್ದಷ್ಟೇ ಅಲ್ಲ – ಆ ಮುಖದ ಒಂದೊಂದು ಭಾಗವೂ ತಿದ್ದಿ ಕಡೆದಂತಿದೆ.

ಅಗಲವಾದ, ನುಣುಪಾದ ದಂತದಲ್ಲಿ ಮಾಡಿದಂಥ ಹಣೆ, ಹಣೆಯ ಕೆಳ ಅಂಚಿನಲ್ಲಿ, ತೆಳುವಾದ ಹೊಳಪುಗಪ್ಪಿನ ದೀರ್ಘವಾದ ಹುಬ್ಬುಗಳು, ಆ ಹುಬ್ಬುಗಳಡಿಯ, ನೀಳವಾದ ಎವೆಗೂದಲ ತೆರೆಯ ಮರೆಯಲ್ಲಿ ಮಿಂಚಿನಂತೆ ಆಡುವ ವಿಶಾಲ ನಯನಗಳು, ಆ ನಾಸಿಕ, ಆ ಅಧರೋಷ್ಠ

ಗಳು, ಕೆಂಪು ತುಟಿಗಳ ಬಿರುಕಿನಲ್ಲಿ ಮುತ್ತಿನಂತೆ ಹೊಳೆದು ಕಾಣಿಸುವ ದಂತಪಂಕ್ತಿ—

ಯಾವೂ, 'ಇದು ಆ ಸುಂದರವಾದ ಮುಖಕ್ಕೆ ಒಪ್ಪುವುದಿಲ್ಲ' ಎಂದು ತೆಗೆದುಹಾಕುವಂಥದಲ್ಲ. ಒಂದು ಸುಂದರವೆನಿಸಿದರೆ, ಮತ್ತೊಂದು ಅದಕ್ಕೆ ಮೆರುಗು ಕೊಡುತ್ತದೆ.

ಒಂದೊಂದೂ ತಾವೇ ಸುಂದರವಾಗಿದ್ದರೂ, ಎಲ್ಲವೂ ಒಟ್ಟಿಗೇ ಸೇರಿ, ಏಕಕಂಠದಲ್ಲಿ ಹೇಳುತ್ತವೆ—

'ಈಕೆ ಲಾವಣ್ಯವತಿ.'

ಆ ಮಾತಿಗೆ ಸಾಕ್ಷಿ ಹೇಳುವುದಕ್ಕೆಂದು ತಲೆ ಎತ್ತಿದಂತಿದೆ.—ಆಕೆಯ ಎದೆಯ ಮೇಲೆ, ಕೊಳದ ನೀರಿನ ಮೇಲೆ ಎದ್ದು ಕಾಣುವ ಕಮಲದ ಮೊಗ್ಗೆಗಳಂತಿರುವ ಸ್ತನದ್ವಯ.

ಆಕೆ ಲಾವಣ್ಯವತಿ – ಯಾವ ಅನುಮಾನಕ್ಕೂ ಆಸ್ಪದವಿಲ್ಲದಂಥ ಚೆಲುವೆ.

ಆದರೆ – ಆಕೆಯ ರೂಪ, ಪಟ್ಟಣದ ಕೃತಃ ಪ್ರಸಾಧನದಿಂದ ಪುಟ ಗೊಂಡ ನಾಗರಿಕ ಸೌಂದರ್ಯವಲ್ಲ. ; ಸ್ವಲ್ಪ ರೂಕ್ಷವೆಂದೇ ಕಂಡರೂ ಅಕೃತ್ರಿಮ, ನಿಸರ್ಗ ಸಹಜ ಸೊಬಗು.

ಅಷ್ಟೇ ಅಲ್ಲ—

ಈಗ, ಆ ರೂಪಿನ ಮೇಲೆ, ಏನೋ ದುಃಖದ, ಭಯದ ಮಬ್ಬು ತೆರೆ ಬಿದ್ದಿದ್ದರೂ, ಆ ಮುಖದಲ್ಲಿ, ಕಣ್ಣ ನೋಟದಲ್ಲಿ ನೋಡಿದ ಗಂಡಿನಲ್ಲಿ, ಮೋಹವನ್ನು ಉದ್ರೇಕಿಸುವ, ಪುರುಷತ್ವವನ್ನು ಕೆರಳಿಸುವ, ಎಲ್ಲ ಚೆಲುವೆಯ ರಲ್ಲಿಯೂ ಇರದ, ಆಕೆಗೆ ಮಾತ್ರ ವಿಶಿಷ್ಟವಾದ ಏನೋ ಒಂದು ತೀವ್ರ ಆಕರ್ಷಕ, ಉನ್ಮಾದಕ ಶಕ್ತಿಯಿದೆ.

ನೂರಾರು ಜನ ಚೆಲುವೆಯರನ್ನು ನೋಡಿದ್ದ ಮೂರ್ತಿ—

ಆದರೆ ಈಕೆಯಂಥ ಚೆಲುವೆಯನ್ನು ಕಂಡಿರಲಿಲ್ಲ.

ಆಕೆ ಅಂಥ ರೂಪವತಿ. ಆದರೆ ಆತ—

ಆ ಸೌಂದರ್ಯದ ಇದುರಿಗಿಟ್ಟ ದೃಷ್ಟಿದೋಷದ ಗೊಂಬೆಯಂತಿದ್ದ.

ಅವನದು ಸಾದಾ ಕಪ್ಪು ಬಣ್ಣದ ಮುಖ. ಬಣ್ಣ ಕಪ್ಪು ಎನ್ನುವುದಷ್ಟೇ ಅಲ್ಲ – ಆ ಮುಖವೂ ಏಕೋ ರಸ ಹೀರಿ ಬಿಸುಟ ಕಬ್ಬಿನ ಸಪ್ಪೆಯಂತಿತ್ತು.

ಎಂದೋ ಯೌವನವನ್ನು ಕಳೆದುಕೊಂಡು, ತೆಳುವಾಗಿ, ಗುಳಿ ಬೀಳಲು ಸಿದ್ಧವಾದ ಕೆನ್ನೆಗಳು, ಮೊನಚಾಗಿ ಮುಂದಕ್ಕೆ ಚಾಚಿದ ಮೂಗು, ತೆಳುವಾದ ಒಂದಕ್ಕೊಂದು ಹತ್ತಿಕೊಂಡ ತುಟಿಗಳು, ಕೆದರಿದ ಹುಬ್ಬು, ಅಂಚಿನಲ್ಲಿ ಹಳದಿಯಾಗಿ, ಅಲ್ಲಲ್ಲಿ ಕೆಂಪು ನರಗಳು ಕಾಣಿಸಿಕೊಂಡ ಕಣ್ಣುಗಳು, ಹೆಚ್ಚಾಗಿ ಕೊಬ್ಬರಿ ಎಣ್ಣೆ ಬಳಿದು, ಅನಾಕರ್ಷಕವಾಗಿ ಹೊಳೆಯುವ, ಭುಜದ ವರೆಗೂ ಇಳಿಬಿದ್ದು ಗುಂಗುರು ಸುತ್ತಿಕೊಂಡ ಒರಟು ತಲೆಗೂದಲು—

ಆ ಮುಖಕ್ಕೆ ತಕ್ಕಂಥ ಬಡಕಲು ಮೈ.

ಆಕೆ ಎಷ್ಟು ಆಕರ್ಷಕಳಾಗಿದ್ದಳೋ, ಅವನು ಅಷ್ಟೂ ಅನಾಕರ್ಷಕನಾಗಿದ್ದ.

ಆಕೆಯ ವಯಸ್ಸು ಹದಿನೇಳು ಹದಿನೆಂಟು ಎಂದರೆ, ಅವನದು ಮೂವತ್ತೈದನ್ನು ದಾಟಿದಂತಿತ್ತು.

ಅಂಥ ಆಕೆ – ಇಂಥ ಇವನು ! ಇಬ್ಬರಿಗೂ ಏನೇನೂ ಹೋಲಿಕೆ ಹೊಂದಿಕೆಗಳಿರಲಿಲ್ಲ.

'ಹಾಗಾದರೆ ಆಕೆ ಅವನಿಗೆ ಏನಾಗಬೇಕು ?'

—ಅವರಿಬ್ಬರ ಆಕಾರಗಳನ್ನು ಸ್ಪಷ್ಟವಾಗಿ ನೋಡಿದ ಬಳಿಕ ಮೂರ್ತಿಯ ಮನಸ್ಸಿನಲ್ಲಿ ಹೊಸದೊಂದು ಪ್ರಶ್ನೆ ಮೂಡಿತು.

ಅವರಿಬ್ಬರೂ ಬಸ್ಸಿನಿಂದ ಇಳಿದಾಗ, ಬಳಿಕ ತಾಳಗುಪ್ಪೆಯ ನಿಲ್ದಾಣದಲ್ಲಿ ಅವನು ಆಕೆಯ ಮೇಲೆ 'ಅಷ್ಟು ದರ್ಬಾರು' ಮಾಡಿದಾಗ ಮೂರ್ತಿ, ಅವರಿಬ್ಬರೂ ಗಂಡಹೆಂಡಿರಿರಬೇಕೆಂದು ಭಾವಿಸಿದ್ದ.

ಆದರೆ – ಈಗ—

ಬಹು ಸ್ಪಷ್ಟವಾಗಿ ಇಬ್ಬರನ್ನೂ ನೋಡಿದ ಬಳಿಕ ಅವನಿಗೆ ಏಕೋ ಹಾಗನಿಸಲಿಲ್ಲ.

'ಊಹೂ – ಇವರು ಗಂಡಹೆಂಡತಿ ಅಲ್ಲ.'

—ಎಂದೇ ತನಗೆ ತಾನು ಹೇಳಿಕೊಂಡ.

ಆ ಭಾವನೆಯನ್ನು ಖಚಿತಪಡಿಸಿಕೊಳ್ಳಲು ತನ್ನ ದೃಷ್ಟಿಯನ್ನು

ಆಕೆಯ ಕತ್ತಿನತ್ತ ಹಾಯಿಸಿದ. ಆಕೆಯ ನೀಳವಾದ, ಮಾಟವಾದ, ಕತ್ತಿನಲ್ಲಿ—

ಹೆಂಡತಿಯಾದ ಹೆಣ್ಣಿನ ಕತ್ತಿನಲ್ಲಿರಬೇಕಾದ ಕರಿಮಣಿಯ ಸರ ಕಾಣಲಿಲ್ಲ.

ಹಾಗಾದರೆ—

'ಈಕೆ ಅವನಿಗೆ ಏನಾಗಬೇಕು ? ಈಕೆ ಅವನ ಹೆಂಡತಿಯಲ್ಲ. ಯಾರ ಹೆಂಡತಿಯೂ ಅಲ್ಲ – ಅವಿವಾಹಿತೆ.'

ಅವಿವಾಹಿತೆ !

ಆ ಮಾತು ಅವನಿಗೆ ಏನೋ ಒಂದು ಬಗೆಯ ವಿಚಿತ್ರತೃಪ್ತಿಯನ್ನು ನೀಡಿತು. ಆದರೆ ಕುತೂಹಲ ಅತೃಪ್ತಿ ಬಹುಕಾಲ ಉಳಿಯಲು ಅವಕಾಶ ಕೊಡದೆ ಮತ್ತೊಂದು ಪ್ರಶ್ನೆಯನ್ನು ಅವನ ಮುಂದೆ ಒಡ್ಡಿತು.

'ಹೆಂಡತಿಯಲ್ಲ. ಹಾಗಾದರೆ ಮತ್ತೇನಾಗಬೇಕು ? ತಂದೆ – ಮಗಳೇ ? '

ಆ ಸಂಬಂಧ ಅಸಂಭವವಾಗಿರದಿದ್ದರೂ, ಮೂರ್ತಿಗೆ ಏಕೋ ಆ ಊಹೆ ಸರಿಯೆಂದು ತೋರಲಿಲ್ಲ.

'ಇಂಥ ಹುಡುಗಿ, ಅಂಥವನ ಮಗಳಾಗುವುದು, ಜಾಲಿಯ ಕೊರಡಿನಲ್ಲಿ ಜಾಜಿಯ ಹೂವು ಅರಳಿದಂತೆ—ಅಸಂಭವ. ಸಂಭವ ಎಂದರೂ ನಂಬಲಾಗದಂಥ ಪವಾಡ. ಹಾಗಿರಲಾರದು ? '

—ಎಂದೇ ಅವನ ಮನಸ್ಸು ಹೇಳಿತು.

ಹಾಗಾದರೆ ಇವರಿವರಿಗೇನು ಸಂಬಂಧ ?

ಎಷ್ಟೆಷ್ಟು ಯೋಚಿಸಿದರೂ, ಮೂರ್ತಿಯ ಆ ಪ್ರಶ್ನೆಗೆ ಸಮಾಧಾನಕರವಾದ ಉತ್ತರ ದೊರೆಯಲಿಲ್ಲ.

ಆ ಪ್ರಶ್ನೆ ಹಾಗಿರಲಿ—

ಆ ಹುಡುಗಿ—

'ಮನೇಲಿ ಎಷ್ಟು ಗೋಳಾಡ್ತಾರೋ ಏನೋ ? '

—ಎಂದದ್ದಕ್ಕೆ ಆತ ಅಷ್ಟೇಕೆ ಹೆದರಿದ ?

ಅಷ್ಟು ಹೊತ್ತು ದುಃಖ ತಲ್ಲೀನಳಾಗಿದ್ದ ಆಕೆಯೂ, ಮೂರ್ತಿಯನ್ನು ನೋಡಿ ಇದ್ದಕ್ಕಿದ್ದ ಹಾಗೇ ಭೀತಳಾದದ್ದೇಕೆ?

ಇವರಿಬ್ಬರಿಗೂ ಏನು ಸಂಬಂಧ? ಅವರಿಬ್ಬರ ಭೀತಿಗೆ ಏನು ಕಾರಣ?

ಅಭೇದ್ಯ ರಹಸ್ಯವೊಂದರ ಇದಿರು, ಅರ್ಥ ಅರಿವಾಗದವನಂತೆ, ಕುತೂಹಲದ ಕಣ್ಣರಳಿಸಿ, ಅವರಿಬ್ಬರೂ ತನ್ನನ್ನೇ ನೋಡುತ್ತಿರುವುದರ ಪರಿವೆಯೂ ಇಲ್ಲದೆ, ಅವರನ್ನೇ ನೋಡುತ್ತ ಕುಳಿತ ಮೂರ್ತಿ.

ಅವರೂ ಅವನ ಕಡೆಯೇ ನೋಡುತ್ತಿದ್ದರು.

ಇದ್ದಕ್ಕಿದ್ದ ಹಾಗೇ ಗಾಡಿಯಲ್ಲಿನ ವಾತಾವರಣ, ವೀಣೆಯ ತಂತಿಯಂತೆ ಬಿಗಿದಿತು.

೬

ಅಷ್ಟು ಹೊತ್ತು ಯಾರೊಬ್ಬರೂ ಮಾತನಾಡಲಿಲ್ಲ.

ಒಬ್ಬೊಬ್ಬರೂ ತಮ್ಮದೇ ಆದ ಯಾವುದೋ ವಿಚಿತ್ರ ಲೋಕದಲ್ಲಿ ಸುತ್ತುತ್ತಿರುವಂತಿತ್ತು.

ಮೂರ್ತಿ, ಗಾಡಿಯಲ್ಲಿ ಇರದಿದ್ದರೆ, ಅವರಿಬ್ಬರೂ ಏನು ಮಾತನಾಡಿಕೊಳ್ಳುತ್ತಿದ್ದರೋ ಏನೋ. ಆದರೆ ಅಪರಿಚಯಸ್ಥನಾದ ಅವನು ಎದುರಿಗಿದ್ದುದು ಅವರು ಸ್ವಾಭಾವಿಕವಾಗಿ, ತಮಗೆ ಬೇಕೆನಿಸಿದ ಮಾತುಕಥೆಗಳನ್ನು ಆಡಿಕೊಳ್ಳಲು ಅಡ್ಡಿಯಾಗಿತ್ತೆಂಬುದು, ಆತನ ಮುಖಭಾವದಿಂದ ಬಹು ಸ್ಪಷ್ಟವಾಗಿತ್ತು.

ಏನೋ ಯೋಚಿಸುತ್ತಾ ಒಂದೆರಡು ಬಾರಿ ಆತ ಮೂರ್ತಿಯತ್ತ ನೋಡಿದಾಗ, ಆ ನೋಟವೇ ಮೂರ್ತಿಗೆ—

'ನೀನೆಲ್ಲಿಯ ಹಾಳು ಶನಿ ನಮಗೆ ಗಂಟುಬಿದ್ದೆ.

—ಎಂದೇ ಹೇಳಿತು.

ಬಹುಶಃ ಆತನಿಗೆ ಸಾಧ್ಯವಿದ್ದಿದ್ದರೆ, ಮೂರ್ತಿಯನ್ನು—

'ಗಾಡಿ ಇಳಿದು, ಬೇರೆ ಗಾಡಿಗೆ ಹೋಗಿ.'

—ಎಂದೇ ಹೇಳುತ್ತಿದ್ದನೋ ಏನೋ.

ಆದರೆ ಅದು ಸಾಧ್ಯವಿರಲಿಲ್ಲ. ಆದುದರಿಂದ ಸುಮ್ಮನೆ ಯೋಚಿಸುತ್ತಾ ಕುಳಿತಿದ್ದ. ಆತನ ಕೆದರಿದ ಹುಬ್ಬುಗಳು ಒಂದಕ್ಕೊಂದು ಹೆಣೆದುಕೊಂಡು, ಆತನ ಹಣೆಯ ಮೇಲೆ ಒಂದೆರಡು ಬೆವರು ಹನಿ ಮೂಡಿದ್ದವು. ಒಂದೆರಡು ಗಳಿಗೆಯ ಕಾಲ ಆತನ ಕೈ ಬೆರಳುಗಳು ತೊಡೆಯ ಮೇಲೆ ತಬಲಾ ಬಾರಿಸುತ್ತಿದ್ದವು.

ಸ್ವಲ್ಪಹೊತ್ತು ಹಾಗಿದ್ದು, ಬಳಿಕ ಆತ—

'ಈಗ ಅದ್ಯಾವುದೂ ಯೋಚನೆ ಮಾಡಬೇಡ. ಸುಮ್ಮನೆ ಮಲಗಿಕೋ.'

—ಎಂದ, ಗಾಬರಿಗೊಂಡ ಎಳೆಯ ಮಗುವನ್ನು ಸಂತೈಸುವಂತೆ, ಆಕೆಯ ತೋಳನ್ನು ಮೃದುವಾಗಿ ತಟ್ಟಿ.

ಆತನ ಮಾತಿನ ವೈಖರಿಯೂ ಈ ಬಾರಿ ಬದಲಾಗಿತ್ತು.

ಮೊದಲಿನ ಗಡಸುತನವಾಗಲಿ, ದರ್ಪವಾಗಲಿ ಯಾವುದೂ ಇರಲಿಲ್ಲ. ತಾನು ಮೆತ್ತಗಾಗಿದ್ದುದಷ್ಟೆ ಅಲ್ಲ - ಆ ಮಾತಿನಲ್ಲಿ ಸಲಹೆ ಮಾತ್ರವಿರದೆ, ಏನೋ ಒಂದು ಬಗೆಯ ಯಾಚನೆಯಿತ್ತು ; 'ತನ್ನನ್ನು ಬದುಕಿಸುವುದಕ್ಕೆ ಹೀಗೆ ಮಾಡು' ಎಂದು ಬೇಡುವ ರೀತಿಯಿತ್ತು.

ಆದರೆ ತನ್ನ ಯೋಚನೆಯಲ್ಲೇ ತಲ್ಲೀನಳಾದ ಆಕೆಗೆ, ಆತನ ಮಾತಿನ ಹಿಂದಿನ ಭಾವ ಅರ್ಥವಾಗಲಿಲ್ಲವೆಂದೇ ಕಾಣುತ್ತದೆ. ಎಂತಲೇ—

'ಊಹೂ - ನನಗೆ ನಿದ್ರೆ ಬರೋದಿಲ್ಲ.'

—ಎಂದಳು, ಅಸಹಾಯಕತೆ ತುಂಬಿ ತುಳುಕುವ ಧ್ವನಿಯಲ್ಲಿ.

ಎಂಥವರ ಹೃದಯದಲ್ಲೂ ಆಕೆಯ ಬಗ್ಗೆ ಕನಿಕರ ಮೂಡಿಸುವಂತಿತ್ತು ಆಕೆಯ ಮಾತು. ಆದರೆ ಅವನಿಗೆ ಆಕೆಯ ಮಾತು ಕೇಳಿ ಕನಿಕರ ಮೂಡುವ ಬದಲು ಏಕೋ ವಿಪರೀತ ಸಿಟ್ಟು ಬಂದು, ಆತನ ಕಣ್ಣುಗಳು ಉರಿಗಾರಿದವು.

'ಸುಮ್ನೇ ಮಲಕ್ಕೋ ಅಂದ್ರೆ ಮಲಗಿಕೊಳ್ಳಬೇಕು. ಅದು ಬಿಟ್ಟು ನಿದ್ದೆ ಬರೋಲ್ಲಂತೆ. ನಿನಗ್ಯಾಕೆ ನಿದ್ದೇ ಬಂದೀತೇಳು. ನಿನ್ನ ಮಾತು ಕಟ್ಟಿಕೊಂಡು ಬಂದದ್ದಕ್ಕೆ, ನಾನು ಶೂಲಕ್ಕೆ ಹೋಗೋವರೆಗೂ ನಿನಗೆ ನಿದ್ದೆ ಬರೊಲ್ಲ.'

ಹೆಡೆ ತಳಿಸಿಕೊಂಡ ಹಾವಿನ ಫೂತ್ಕಾರದಂತಿತ್ತು ಆತನ ಮಾತು.

ಆತನ ಮಾತನ್ನು ಕೇಳಿ, ಕೆನ್ನೆಗೆ ಏಟು ಬಿದ್ದಂತೆ ಆಕೆಯ ಕಣ್ಣಲ್ಲಿ ಕಂಬನಿ ಮೂಡಿದವು. ಆಕೆಯ ಮುಖವೂ ಬೆಂಕಿಗೆ ಬಿದ್ದ ಹೂವಿನಂತೆ ಬಾಡಿತು.

ಆಕೆಯ ಮನಸ್ಸಿಗೂ ಆತನ ಮಾತಿನ ಇರಿತದಿಂದ ಸಾಕಷ್ಟು, ಮತ್ತೇನೂ ಮಾತಾಡಬಾರದು ಎಂಬಷ್ಟು ನೋವಾಗಿರಬೇಕು. ಎಂತಲೇ ಆತನ ಒರಟು ಮಾತಿಗೆ ಏನೂ ಉತ್ತರಕೊಡದೆ, ಸುಮ್ಮನೆ ಸೆರಗಿನಿಂದ ಮುಖ ಮರೆ ಮಾಡಿಕೊಂಡು ಮೂಲೆಯಲ್ಲಿ ಒರಗಿದಳು—ಪ್ರಾಣಾಂತಕ ಗಾಯವಾದ ಜಿಂಕೆಯಂತೆ.

ಅದನ್ನು ನೋಡಿ ಮೂರ್ತಿಗೆ ಕರುಳು ಚುರುಕ್ ಎಂದಿತು.

ಆಕೆ ಆಡಬಾರದ ಮಾತೇನನ್ನೂ ಆಡಿರಲಿಲ್ಲ. ಮಾಡಲಾಗದ ಯಾವುದನ್ನೂ ಮಾಡು ಎಂದೂ ಕೇಳಿರಲಿಲ್ಲ. ನೊಂದ ಹೃದಯದಿಂದ ಸಹಾನುಭೂತಿಯ ನೆರವನ್ನು ಬೇಡಿದಂದಿತ್ತು ಆಕೆಯ ಮಾತು.

ಅಂಥ ಮಾತಿಗೆ ಈತ ಏಕೆ ಇಷ್ಟು ಒರಟಾಗಿ ಉತ್ತರಕೊಟ್ಟ.

ಆಕೆಗೆ ನಿದ್ರೆ ಬಾರದೆ ಹೋದರೆ (ಚಿಂತೆ ಹೆಚ್ಚಿದಾಗ ನಿದ್ರೆ ಬರದಿರುವುದು ಸ್ವಾಭಾವಿಕ. ಅದನ್ನು ಬಾಯಿಬಿಟ್ಟು ಹೇಳಿದರೆ ತಪ್ಪೇನು ?) ಇವನು ತಲೆ ಹೋಗುವವನಂತೆ ಆಡಬೇಕೇಕೆ?

ಛಿ! ಛಿ! ಶುದ್ಧ ಹಯ <u>ಒರಲ್ಲ</u>! (ಅಲ್ಲ – ಇಂಥ ಸಂದರ್ಭಕ್ಕಾಗಿ 'ಗಾರ್ಧಭ ಒರಟ' ಎಂಬ ಶಬ್ದವನ್ನೇ ಸೃಷ್ಟಿ ಮಾಡಬೇಕೆಂದು ತೋರಿತು ಮೂರ್ತಿಗೆ)

ಆ ಭಾವನೆ ಬಂದು ಮೂರ್ತಿಗೆ, ಇದಿರು ಕುಳಿತಾತನಿಗೆ, ಆ ಅಸಭ್ಯತೆಗಾಗಿ ಕೆನ್ನೆಗೆ ಹೊಡೆಯಬೇಕು ಎನಿಸಿತು.

ಅದರೆ ಏನು ಅನಿಸಿದರೂ, ಅವನು ಏನೂ ಮಾಡುವಂತಿರಲಿಲ್ಲ.

ಸುಮ್ಮನೆ ನಿಟ್ಟುಸಿರುಬಿಟ್ಟು ಕುಳಿತ.

ಆತನೂ ಏಕೋ ಬಹು ಉದ್ರಿಕ್ತನಾದಂತಿದ್ದ. ಒಂದು ಗಳಿಗೆ, ಸೆರಗಿನಲ್ಲಿ ಮುಖ ಮುಚ್ಚಿ ಮಲಗಿದ ಹೆಂಗಸನ್ನೇ ನೋಡುತ್ತಿದ್ದು, ಮರುಗಳಿಗೆಯೇ ಏಕೋ ತಲೆ ಕೊಡವಿಕೊಂಡು, ಕೋಟಿನ ಜೋಬಿನಲ್ಲಿ ಹುಡುಕಾಡಿ, ಬೀಡಿ ಕಟ್ಟನ್ನು ಹೊರತೆಗೆದು, ಒಂದು ಬೀಡಿಯನ್ನು ಬಾಯಲ್ಲಿ ಕಚ್ಚಿಕೊಂಡು, ಮತ್ತೆ ಬೆಂಕಿಪೊಟ್ಟಣ ಹುಡುಕಿದ. ಕೋಟಿನಲ್ಲಿದ್ದ ಜೋಬುಗಳನ್ನೆಲ್ಲಾ ಹುಡುಕಿದರೂ ಬೆಂಕಿಪೊಟ್ಟಣ ಸಿಗಲಿಲ್ಲ.

ಅವನ ತಡಕಾಟವನ್ನು ಕಂಡು ಮೂರ್ತಿಗೆ ತಾನೇ ಅವನಿಗೆ ತನ್ನ ಬೆಂಕಿಯಪೊಟ್ಟಣ ತೆಗೆದುಕೊಡಬೇಕು ಎನಿಸಿದರೂ, 'ಇಂಥವನಿಗೆ ಏನೂ ಉಪಕಾರ ಮಾಡಬಾರದು. ಬೇಕಾದರೆ ಬಾಯಿ ಬಿಟ್ಟು ಕೇಳಲಿ' ಎಂದುಕೊಂಡು, ಮುಖವನ್ನು ಬೇರೆ ಕಡೆ ತಿರುಗಿಸಿಕೊಂಡು ಕುಳಿತುಕೊಂಡ.

ಕಡೆಗೆ, ಅನ್ಯದಾರಿಯಿಲ್ಲದೆ, ಆತನೇ ಮೂರ್ತಿಯನ್ನು ಮಾತನಾಡಿಸಿದ.

" ರೀ...."

ಆ ಕರೆ ಕೇಳದವನಂತೆ ಮೂರ್ತಿ ಸುಮ್ಮನಿದ್ದುದನ್ನು ಕಂಡು, ಆತನೇ ಮತ್ತೊಮ್ಮೆ ಕೂಗಿದ—

" ಸಾರ್...."

" ಏನು ? "

" ನಿಮ್ಮ ಹತ್ತಿರ ಬೆಂಕಿಕಡ್ಡಿ ಇದ್ದರೆ ಕೊಡಿ ಸಾರ್. ಈ ರೈಲು ಹತ್ತೋ ಗಲಾಟೇಲಿ, ಜೋಬಿನಲ್ಲಿ ಕಡ್ಡಿಪೊಟ್ಟಣ ಇದೆಯೋ ಇಲ್ಲವೋ ಅಂತ ಕೂಡಾ ನೋಡಿಕೊಳ್ಳಲಿಲ್ಲ."

—ತಾನು ಮೂರ್ತಿಯನ್ನು ಬೆಂಕಿಕಡ್ಡಿಯನ್ನು ಬೇಡಲೇಬೇಕಾಗಿ ಬಂದ ಕಾರಣವನ್ನು ವಿವರಿಸಿ, ಕೇಳಿದ ಆತ.

ಮೂರ್ತಿ ತನ್ನ ಜೇಬಿನಲ್ಲಿದ್ದ ಕಡ್ಡಿಪೊಟ್ಟಣವನ್ನು ತೆಗೆದುಕೊಟ್ಟ.

ಮೂರ್ತಿ ಕೊಟ್ಟ ಕಡ್ಡಿಪೊಟ್ಟಣದಿಂದ, ಆತ ಬೀಡಿಯನ್ನು ಹೊತ್ತಿಸಿಕೊಂಡು, ಹಾಗೇ ಪೊಟ್ಟಣವನ್ನು ತನ್ನ ಜೇಬಿನಲ್ಲಿಟ್ಟುಕೊಳ್ಳಲು ಹೋಗಿ, ತಟಕ್ಕನೆ ಅದು ತನ್ನದಲ್ಲ ಎಂಬುದನ್ನು ಜ್ಞಾಪಿಸಿಕೊಂಡು ನಗುತ್ತಾ—

" ಬೀಡಿ, ಸಿಗರೇಟ್ ಸೇದೋರಿಗೆ ಇದೊಂದು ದುರಭ್ಯಾಸ ನೋಡಿ ಸಾರ್ - ಪೊಟ್ಟಣ ತಮ್ಮದೋ ಬೇರೆಯವರದೋ ಅನ್ನೋ ಜ್ಞಾಪಕಾನೇ ಇರೋಲ್ಲ. ಹೊತ್ತಿಸಿಕೊಂಡದ್ದು ಆದ ತಕ್ಷಣ, ಪೊಟ್ಟಣ ಜೋಬಿಗೆ ಹೋಗಿ ಬಿಡುತ್ತೆ."

—ಎಂದ.

" ನಿಜ, ನಿಜ. ನನಗೂ ಕೆಲವು ಸಲ ಹಾಗೇ ಆಗಿದೆ "

—ಎಂದ ಮೂರ್ತಿ.

" ಎಲ್ಲಾ ಬೀಡೀಸೇದೋರೂ ಪಟ್ಟ ಪಾಡೇ ಅದು "

—ಎಂದು ಆತ, ಮೂರ್ತಿಯ ಕಡ್ಡಿಯಪೊಟ್ಟಣವನ್ನು ಅವನಿಗೆ ಹಿಂದಿರುಗಿಸಿ—

" ನೀವು ಯಾವ ಊರಿಗೆ ಹೊರಟಿದೀರಿ ಸಾರ್ ? "

—ಎಂದು ಕೇಳಿದ.

ಆ ಅಲ್ಪಸಂಪರ್ಕದಿಂದ, ಅದುವರೆಗೂ ಅವರಿರ್ವರ ನಡುವೆ ಹರಡಿದ್ದ ಮೌನದ ಹೆಪ್ಪು ಕರಗಿದಂತಾಗಿತ್ತು.

" ಬೆಂಗಳೂರಿಗೆ. ನೀವು........"

—ಆತ ಮಾತಿಗೆ ಕೊಟ್ಟ ಅವಕಾಶವನ್ನು ಉಪಯೋಗಿಸಿಕೊಂಡು, ಮೂರ್ತಿ ಮರುಪ್ರಶ್ನೆ ಮಾಡಿದ.

" ಮಂಗಳೂರಿಗೆ."

" ಮತ್ತೆ.....ಹೀಗೆ.....ಬೆಂಗಳೂರು ರೈಲಿನಲ್ಲಿ ಹೊರಟದಿಗಾ ?.....'

" ಅದೇ ನೋಡಿ ಸ್ವಾಮಿ – ನಮಗೆ ಬಂದಿರೋ ಗ್ರಹಚಾರ. ಉತ್ತರ ಕನ್ನಡಾ ಜಿಲ್ಲೆ, ದಕ್ಷಿಣ ಕನ್ನಡಾ ಜಿಲ್ಲೆ ಅಕ್ಕಪಕ್ಕದಲ್ಲೇ ಇದ್ದರೂ, ಈ ಕಡೆಯಿಂದ ಆ ಕಡೆಗೆ ಹೋಗಬೇಕು ಅಂದರೆ – ಕೊಂಕಣ ಸುತ್ತಿ ಮೈಲಾರಕ್ಕೆ ಹೋದ ಹಾಗೆ, ಎಲ್ಲೆಲ್ಲೋ ಸುತ್ತಿಕೊಂಡು ಹೋಗಬೇಕು. ಕಡೂರಿಗೆ ಹೋಗಿ, ಅಲ್ಲಿಂದ ಬಸ್ಸಿನಲ್ಲಿ ಚಾರ್ಮಾಡಿ ಘಾಟಿನ ಮೇಲೆ ಮಂಗಳೂರಿಗೆ ಹೋಗಬೇಕು. ಅದರಿಂದ ಜನಕ್ಕೆ ಎಷ್ಟು ತಾಪತ್ರಯ ಆಗಿದೇಂತೀರ ?...."

ಆದರೆ ಮೂರ್ತಿಗೆ ಆತನ ' ರಾಮಾಯಣ ' ವನ್ನೆಲ್ಲಾ ಕೇಳುವ ಇಷ್ಟವಿರಲಿಲ್ಲ. ಆದುದರಿಂದ ಅದಕ್ಕೆ ತುಂಡು ಹಾಕಲು—

" ಏಕೆ, ಮಂಗಳೂರಿಗೆ ಹೋಗಬೇಕು ಎಂದರೆ ಕಡೂರಿನ ಮೇಲೇ ಹೋಗಬೇಕೇ ? "

—ಎಂದು ಅಡ್ಡಪ್ರಶ್ನೆ ಮಾಡಿದ.

" ಹೂಂ."

ಅವನು ಹೇಳಿದುದನ್ನು ಕೇಳಿ ಮೂರ್ತಿಗೆ, ಆ ಮನುಷ್ಯ ತನ್ನನ್ನು ' ದಾರಿ ತಿಳಿಯದ ಕುರುಬ ' ಎಂದು ಭಾವಿಸಿದ್ದಾನೇನೋ ಅನ್ನಿಸಿ, ತನಗೆ ಆ ವಿಚಾರವೂ ಗೊತ್ತಿದೆ ಎಂದು ತೋರ್ಪಡಿಸಿಕೊಳ್ಳಲು—

" ಅದ್ಯಾಕೆ, ಬೇರೆ ದಾರಿ ಇದೆಯಲ್ಲಾ ? "

—ಎಂದ.

" ಯಾವುದು ? "

" ಬೇಕಾದರೆ ಸಾಗರದಲ್ಲೇ ಇಳಿದು, ಹುಲಿಕಲ್ ಘಾಟಿಯ ಮಾರ್ಗವಾಗಿ ಕುಂದಾಪುರಕ್ಕೆ ಹೋಗಿ, ಅಲ್ಲಿಂದ ಮಂಗಳೂರಿಗೆ ಹೋಗಬಹುದು.

ಆ ದಾರಿ ತೊಂದರೆ ಎಂದರೆ – ಶಿವಮೊಗ್ಗಾದಲ್ಲಿ ರಾತ್ರಿ ಇದ್ದು – ಬೆಳಗಿನ ಬಸ್ಸಿನಲ್ಲಿ, ಆಗುಂಬೆ, ಸೋಮೇಶ್ವರದ ಮಾರ್ಗವಾಗಿ ನೇರವಾಗಿ ಮಂಗಳೂರಿಗೆ ಹೋಗಬಹುದಲ್ಲಾ........"

—ಮಂಗಳೂರಿಗೆ ಹೋಗಬಹುದಾದ ಬೇರೆ ಬೇರೆ ಮಾರ್ಗಗಳನ್ನು ವಿವರಿಸಿ ಹೇಳಿದ.

ಮೂರ್ತಿ ಆ ಮಾತು ಹೇಳಿದುದನ್ನು ಕೇಳಿ ಆತ ಏಕೋ ಬೆಚ್ಚಿ ಬಿದ್ದು, ತನ್ನ ಪಕ್ಕದಲ್ಲಿ ಕುಳಿತ ಹೆಂಗಸಿನ ಕಡೆ ನೋಡಿದ. ಮೂರ್ತಿಯ ಮಾತು, ಆಕೆಯ ಕಿವಿಗೇನಾದರೂ ಬಿತ್ತೋ ಏನೋ ಎಂಬ ಶೋಧನೆಯ ಭಾವವಿತ್ತು ಆತನ ನೋಟದಲ್ಲಿ.

ಆದರೆ ಆಕೆ, ಯಾವ ಮಾತೂ ಕಿವಿಗೆ ಬೀಳದವಳಂತೆ, ಕೇಳುವ ಸ್ಥಿತಿಯಲ್ಲೂ ಇಲ್ಲದವಳಂತೆ, ಸುಮ್ಮನೆ ಮುಖ ಮುಚ್ಚಿಕೊಂಡು ಕುಳಿತಿದ್ದಳು.

ಮೂರ್ತಿಯ ಮಾತು ತನ್ನ ಕಿವಿಗೆ ಬಿದ್ದ ಯಾವ ಸೂಚನೆಯನ್ನು ಆಕೆ ತೋರದಿದ್ದುದು, ಆತನಿಗೆ ಏನೋ ಒಂದು ರೀತಿಯ ಸಮಾಧಾನ ವನ್ನುಂಟುಮಾಡಿದಂತೆ ಮೂರ್ತಿಗೆ ತೋರಿತು.

ಆ ಸಮಾಧಾನದ ನಿಟ್ಟುಸಿರಿಟ್ಟು—

" ಹಾಗೇ ಹೋಗಬಹುದಾಗಿತ್ತು. ಆದರೆ ನನಗೆ ಚಿಕ್ಕಮಗಳೂರಿನಲ್ಲಿ ಸ್ವಲ್ಪ ಕೆಲಸ ಇತ್ತು. ಅದನ್ನು ಮುಗಿಸಿಕೊಂಡು ಮಂಗಳೂರಿಗೆ ಹೋಗ ಬೇಕು. ಅದಕ್ಕೇ ಈ ದಾರೀಲಿ ಹೊರಟಿದೀನಿ."

—ಎಂದು, ಮೂರ್ತಿಯ ಪ್ರಶ್ನೆಗೆ ಅನಗತ್ಯವಾಗಿ ವಿವರಣೆ ಇತ್ತು ಹೇಳಿದ ಆತ.

ಆತ ಆ ಮಾತನ್ನು ತನಗೆ ಹೇಳುವುದಕ್ಕಿಂತ ಹೆಚ್ಚಾಗಿ, ತನ್ನ ಪಕ್ಕದಲ್ಲಿ ಕುಳಿತ ಹೆಂಗಸಿಗೆ ಹೇಳಿದಂತೇ ತೋರಿತು ಮೂರ್ತಿಗೆ.

" ಹಾಗಾದರೆ ಚಿಕ್ಕಮಗಳೂರಿಗೆ ಹೋಗಿ, ಮಂಗಳೂರಿಗೆ ಹೋಗ ಬೇಕು ಅನ್ನಿ........"

—ಮೂರ್ತಿ ಮತ್ತೆ ಪ್ರಶ್ನೆಮಾಡಿದ.

" ಹೂಂ........ನೀವೂ ತಾಳಗುಪ್ಪೇಲೇ ರೈಲು ಹತ್ತಿದಿರಿ........ ಅಲ್ಲವೇ ? "

—ತಟಕ್ಕನೆ ತಾನು ಆಡುತ್ತಿದ್ದ ಮಾತಿನ ಜಾಡು ಬದಲಿಸಿ ಕೇಳಿದ ಆತ.

"ಹೌದು."

"ಏನು ಜೋಗದ ಜಲಪಾತ ನೋಡಲಿಕ್ಕೆ ಬಂದಿದ್ದಿರಾ?"

"ಹೌದು."

"ಇದೇ ಮೊದಲ ಸಲಾನೋ?"

"ಹುಂ."

"ಹ್ಯಾಗಿದೆ ಸ್ವಾಮಿ, ಜೋಗದ ಜಲಪಾತ?"

"ಬಹಳ ಸುಂದರವಾಗಿದೆ. ನೀವು ನೋಡಿಲ್ಲವೇ?"

"ಊಹೂ........"

"ಅಂದರೆ........ನೀವು ಇತ್ತಕಡೆಯವರು ಅಲ್ಲವೇ? ನಿಮ್ಮ ಮಾತು ಕೇಳಿ ನೀವು ಈ ಪ್ರಾಂತದವರೇ ಅಂದುಕೊಂಡಿದ್ದೆ."

"ನಾನೂ ಇದೇ ಪ್ರಾಂತದವನೇ."

"ಹಾಗಿದ್ದೂ ನೀವು ಜೋಗವನ್ನು ನೋಡದಿರುವುದು ತುಂಬಾ ಆಶ್ಚರ್ಯ. ಜಗತ್ತಿನ ಎಷ್ಟೋ ದೇಶಗಳಿಂದ, ಲಕ್ಷಾಂತರ ಮೈಲಿಗಳಿಂದ ಜನ, ಗೇರುಸೊಪ್ಪೆ ನೋಡಬೇಕು ಅಂತ ಬರ್ತಾರೆ. ಹಾಗಿದ್ದೂ, ನೀವು ಈ ಪ್ರಾಂತದವರೇ ಆಗಿದ್ದೂ ನೋಡದಿರುವುದು ಆಶ್ಚರ್ಯ."

"ಅದು ಹಾಗೇ ಸ್ವಾಮಿ – ಹಿತ್ತಲು ಹೀರೆ ಮದ್ದಲ್ಲ. ನೀವು ಜೋಗ ನೋಡಲಿಕ್ಕೆ ಇಲ್ಲಿಗೆ ಬರ್ತೀರಿ. ನಾವು ಬೃಂದಾವನ ನೋಡೋಕೆ ಮೈಸೂರಿಗೆ ಹೋಗ್ತೀವಿ. ನೀವು ಏನೇ ಹೇಳಿ ಸಾರ್ – ನೂರು ಗೇರುಸೊಪ್ಪೆ ಹಾಕಿದರೆ ಒಂದು ಬೃಂದಾವನ. ಅದೇನು ದೀಪ, ಅದೇನು ಚಿಲುಮೆಗಳು – ನೀವು ಮೈಸೂರಿನ ಜನ ಪುಣ್ಯವಂತರು ಸ್ವಾಮಿ. ಅದೃಷ್ಟಮಾಡಿ ಆ ಸೀಮೇಲಿ ಹುಟ್ಟಿದೀರ. ಈ ಕೈ ಹೀಗಂದ್ರೆ ದೀಪ – ಆ ಕೈ ಹಾಗಂದ್ರೆ ನೀರು! ನಾನೂ ಬಹಳ ಊರು ಸುತ್ತಿದೀನಿ ಸಾರ್—ಆದರೆ ನೀವೇನೇ ಹೇಳಿ—ಬೆಂಗಳೂರು ಸಮಾನ ಇನ್ನಿಲ್ಲ. ನಮ್ಮ ಹಾಗೆ ಜಿನಿಜಿನಿ ಮಳೆ ಇಲ್ಲ, ಉರಿಉರಿ ಬಿಸಲಿಲ್ಲ. ಆ ಏರುಪೇರೆಲ್ಲಾ ನಮಗೇ – ಘಟ್ಟದ ಸೀಮೆಯವರಿಗೆ."

—ಎಂದು ಆತ ಮೈಸೂರು ಸೀಮೆಯ ಮಹಾಸೌಭಾಗ್ಯವನ್ನು ಮೂರ್ತಿಗೆ ವಿವರಿಸಿ ಹೇಳಿದ.

ಆತನ ಬಾಯಿ ಮಾತ್ರ ನುಡಿಯದೆ, ಆತನ ಕೈ, ಕಣ್ಣುಗಳೂ, ಆ ಮಾತಿಗನುಗುಣವಾಗಿ ಚಲಿಸುತ್ತಿದ್ದುವು.

ಆತ ಸಾಭಿನಯಪೂರ್ವಕವಾಗಿ ಹೇಳಿದುದನ್ನು ಕೇಳಿ ಮೂರ್ತಿಗೆ ನಗು ಬಂತು. ನಗುತ್ತಲೇ—

" ಪರವಾಯಿಲ್ಲ – ಮೈಸೂರಿನ ಕೀರ್ತಿಪ್ರಸಾರದ ಕೆಲಸಕ್ಕೆ ನೇಮಿಸಿದರೆ, ನೀವು ಆ ಕೆಲಸವನ್ನು ಬಹಳ ಅತ್ಯುತ್ತಮವಾಗಿ ನಿರ್ವಹಿಸುತ್ತೀರಿ...."

—ಎಂದು, ಏನೋ ಊಹೆಮಾಡಿ—

" ಅಂದಹಾಗೆ ನಿಮ್ಮ ವೃತ್ತಿ ಏನು ? "

—ಎಂದು ಕೇಳಿದ.

" ಏಕೆ ? "

—ಇದ್ದಕ್ಕಿದ್ದ ಹಾಗೇ ಮೂರ್ತಿ, ಆಗಿನ ಮಾತಿಗೆ ಏನೇನೂ ಸಂಬಂಧವಿಲ್ಲದ ಪ್ರಶ್ನೆಯನ್ನು ಕೇಳಿದ್ದನ್ನು ಕೇಳಿ, ಆತ ಚಕಿತನಾಗಿ ಮರು ಪ್ರಶ್ನೆ ಮಾಡಿದ—

" ಮತ್ತೇನೂ ಇಲ್ಲ – ನೀವು ಮಾತಾಡಿದ ರೀತಿಯನ್ನು ಕೇಳಿ ನೀವು ನಟರೇನೋ ಅನಿಸಿತು. ಅದಕ್ಕೇ ಕೇಳಿದೆ."

ಮೂರ್ತಿಯ ವಿವರಣೆಯನ್ನು ಕೇಳಿ ಆತನೂ ನಕ್ಕು—

" ಹೂ, ಸ್ವಾಮಿ, ಅದೇ ವೃತ್ತಿ "

—ಎಂದ.

" ಯಾವುದಾದರೂ ಕಂಪನೀಲಿ ಕೆಲಸ ಮಾಡ್ತಾ ಇದೀರಾ ?...."

" ಇದ್ದೆ.... ಈಗಿಲ್ಲ."

" ಅಂದರೆ........"

" ಅದೆಲ್ಲಾ ಹಳೆ ಕಥೆ ಆಗಿಹೋಯಿತು. ಹಿಂದೆ ಗುಬ್ಬಿ ಕಂಪನಿ, ಶಿರಹಟ್ಟಿ ಕಂಪನಿ, ಸಿ. ಬಿ. ಮಲ್ಲಪ್ಪನೋರ ಕಂಪನಿ, ಪೀರ್‌ಸಾಹೇಬರ ಕಂಪನಿ – ಎಲ್ಲಾ ಕಡೇಲೂ ಕೆಲಸ ಮಾಡಿದೇನೆ........"

" ಅಂದರೆ ಈಗ ಆ ವೃತ್ತಿ ಬಿಟ್ಟುಬಿಟ್ಟಿದ್ದೀರೋ ? "

" ಹೂ."

" ಏಕೆ ? "

" ಆ ವೃತ್ತೀನ ನಂಬಿಕೊಂಡು ಬದುಕೋಕೆ ಸಾಧ್ಯವಿಲ್ಲಾಂತ. ನಮ್ಮ ಸೀಮೇಲಿ ಕಲಾವಿದನಾಗಿ ಹುಟ್ಟೋನು, ಹಿಂದಿನ ಏಳೇಳು ಜನ್ಮದಲ್ಲಿ ಮಹಾಪಾಪ ಮಾಡಿರಬೇಕು. ಇಲ್ಲದಿದ್ದರೆ ಆ ಜನ್ಮ ಬರೋದಿಲ್ಲಾ."

" ಏಕೆ ? "

" ನಿಮಗೆ, ಆಡಿಟೋರಿಯಂನಲ್ಲಿ ಕೂತುಕೊಂಡು ನೋಡೋರಿಗೆ ತಿಳೀದು ಸ್ವಾಮಿ - ರಂಗದ ಮೇಲೆ ರಾಜ, ಜಗತ್ತಿನ ಪಾಲಿಗೆ ಹುಣಿಸೆ ಬೀಜ. ಬಣ್ಣ ಹಾಕಿಕೊಂಡಾಗ ಚಪ್ಪಾಳೆ ತಟ್ಟೋ ಜನ, ಬಣ್ಣ ಒರೆಸಿ ಕೊಂಡ ಮೇಲೆ, ಚಪ್ಪಾಳೆ ತಟ್ಟಿದ ಕೈಲೇ ಕಲ್ಲು ತಗೋತಾರೆ. ಅಷ್ಟುವರ್ಷ ಈ ಪಡಿಪಾಟಲು ಪಟ್ಟುಪಟ್ಟು ಸಾಕಾಗಿ ಕೊನೆಗೆ ' ಇದಲ್ಲಾ 'ಂತ ಹೇಳಿ ಕೈತೊಳೆದುಕೊಂಡುಬಿಟ್ಟೆ."

" ಹಾಗಾದ್ರೆ ಈಗ ಏನು ಮಾಡ್ತಾ ಇದೀರ ? "

—ಮೂರ್ತಿ ಕೇಳಿದ.

ಮೂರ್ತಿ ಕೇಳಿದ ಪ್ರಶ್ನೆಗೆ, ಆತ ಉಳಿದ ಪ್ರಶ್ನೆಗಳಿಗೆ ಕೊಟ್ಟಹಾಗೆ ಕೂಡಲೇ ಉತ್ತರ ಕೊಡಲಿಲ್ಲ. ಏಕೋ ಸುಮ್ಮನೆ ಯೋಚಿಸುತ್ತಾ ಕುಳಿತ.

ಆತ ಹಾಗೆ ಉತ್ತರ ಕೊಡದೆ ಯೋಚಿಸುತ್ತಾ ಕುಳಿತುದನ್ನು ಕಂಡು ಮೂರ್ತಿಗೆ ತಾನು ಆತನನ್ನು ಪ್ರಶ್ನೆಮಾಡಿದುದು ಅನುಚಿತವಾಯಿತೇನೋ ಎನಿಸಿ—

" ನಾನು ಆ ಪ್ರಶ್ನೆ ಕೇಳಿದ್ದು ತಪ್ಪಾಯಿತೇನೋ - ಕ್ಷಮಿಸಿ "

—ಎಂದ.

" ಛೆ....ಛೆ....ಛೆ....ಹಾಗೇನೂ ಇಲ್ಲ........"

—ಎಂದ ಆತ ಏನೋ ಒಂದು ವಿಧವಾಗಿ ಮಾತನ್ನು ಎಳೆಯುತ್ತ.

" ಮತ್ತೇನೂ ಇಲ್ಲ. ಅಪರಿಚಯಸ್ಥರು ತಮಗೆ ಸಂಬಂಧವಿಲ್ಲದ ಪ್ರಶ್ನೆಗಳನ್ನು ಕೇಳಿದರೆ, ಯಾರಿಗಾದರೂ ಬೇಸರವಾಗುವುದು ಸಹಜ. ಅದಕ್ಕೇ....ಹಾಗೇ....ನಿಮಗೂ ಬೇಸರವಾಗಿರಬಹುದು."

" ಊಹೂ....ಬೇಸರವೂ ಇಲ್ಲ. ಏನೂ ಇಲ್ಲ, ನಾಸೀಗ ಏಜೆಂಟ್ ಕೆಲಸ ಮಾಡ್ತಾ ಇದೀನಿ "

—ಎಂದ ಆತ.

" ಅಂದರೆ – ಇನ್ಷ್ಯೂರೆನ್ಸ್ ಏಜಂಟೇ ? "

" ಅಲ್ಲ."

" ಮತ್ತೆ ? "

" ನಾಟಕ ರಂಗದಲ್ಲಿ ಕೆಲಸ ಮಾಡ್ತಾ ಇದ್ದಾಗ, ನನಗೆ ಕೆಲವರು ಚಿತ್ರ ತಯಾರಕರ ಪರಿಚಯ ಆಯಿತು. ನಮ್ಮ ದೇಶದ ಜನ ಇದಾರೆ ನೋಡಿ ಸ್ವಾಮಿ – ಒಂದು ಸಿನಿಮಾದಲ್ಲಿ ಕಂಡ ಮುಖಾನ ಇನ್ನೊಂದು ಸಿನಿಮಾದಲ್ಲಿ ನೋಡಬೇಕು ಅಂದ್ರೆ ಮೂತಿ ಸೊಟ್ಟ ಮಾಡ್ತಾರೆ. ಚಿತ್ರ ಚಿತ್ರಕ್ಕೂ ' ಹೊಸಮುಖ ' ಇಲ್ಲ ಅಂತ ಬೊಬ್ಬೆ ಹಾಕ್ತಾರೆ – ಅಭಿನಯ, ಕಥೆ ನೋಡೋದು ಬಿಟ್ಟು ಮುಖಾನೇ ನೋಡೋಕೆ ಹೋಗೋರ ಹಾಗೆ. ಆದ್ರೆ – ನಮ್ಮ ಪ್ರೊಡ್ಯೂಸರ್ಸ್ ಎಷ್ಟೂಂತ ಹೊಸ ಮುಖ ತರೋಕೆ ಸಾಧ್ಯ ? ಎಲ್ಲಿಂದ ತರಬೇಕು ? ಇದೇ ಅವರಿಗೆ ದೊಡ್ಡ ತಲೆನೋವಾಗಿಹೋಗಿದೆ. ಆದ್ರೇನು ಮಾಡಬೇಕು - ಆ ' ಫೀಲ್ಡ್ 'ನಲ್ಲಿ ಇರಬೇಕು ಅಂದ್ರೆ ಆಟಕ್ಕೆ ತಕ್ಕ ಬಹುರೂಪ ಕಟ್ಟಲೇಬೇಕು....ಅದಕ್ಕೇ....ನನ್ನ ಸ್ನೇಹಿತರು ನನಗೆ ಗಂಟುಬಿದ್ದರು........"

" ಏತಕ್ಕೆ ? – ಅಭಿನಯಿಸುವುದಕ್ಕೇ ? "

" ಅಯ್ಯೋ ಅದಾಗಿದ್ರೆ ಭಾಳ ಸಲೀಸಾಗಿತ್ತು ಸ್ವಾಮಿ – ಆದ್ರೆ ಅದಕ್ಕೆ ನಾನು ಲಾಯಖ್ಖಿಲ್ಲಾಂದ್ರು...."

" ಏಕೆ ? "

" ಸ್ಟೇಜ್ ಮೇಲೆ ಕೆಲಸ ಮಾಡಿದೋರಿಗೆ, ಸಿನಿಮಾದಲ್ಲಿ ಕೆಲಸ ಮಾಡೋದು ಬರೋದಿಲ್ಲಾಂತ........"

" ಹಾಗಾದ್ರೆ........"

" ನಾಸೀಗ ಅವರಿಗೆ ಅಲ್ಲಿ, ಇಲ್ಲಿ, ಹೊಸ ಹೊಸ ನಟ-ನಟಿಯರನ್ನು ಪತ್ತೆಹಚ್ಚಿಕೊಡಬೇಕಾಗಿದೆ. ನಾನೂ ಹತ್ತಾರು ಊರು ತಿರುಗಿದೋನು. ಯಾವ ಊರು ಹೇಗೆ, ಎಲ್ಲಿ ಜನ ಹೇಗೆ ಅಂತ ಗೊತ್ತಿರುತ್ತೆ. ಹೇಗಾದ್ರೂ

ಮಾಡಿ, ನಾಲ್ಕುಜನ ಹೊಸ ಆಕ್ಟರು ಬೇಕು ಅಂದ್ರು – ಅದಕ್ಕೇ ನಮ್ಮ ಸೀಮೆಗೆ ಬಂದಿದ್ದೆ. ಈಗ ವಾಪಸು ಹೋಗ್ತಾ ಇದೀನಿ."

—ಎಂದ ಆತ ತನ್ನ ವ್ಯಾಪಾರ, ವ್ಯವಹಾರ ಎಲ್ಲವನ್ನೂ ಸವಿವರವಾಗಿ ವಿವರಿಸಿ.

ಆತ ಹೇಳಿದುದನ್ನು ಕೇಳಿ ಮೂರ್ತಿಗೆ ಮತ್ತೇನೋ ತೋಚಿ—

'ಈಕೆಯೂ ಅಭಿನಯಿಸುವುದಕ್ಕೆ ಬಂದಿರುವವಳೇ ?'

—ಎಂದು ಕೇಳಬೇಕು ಎನಿಸಿತು.

ಆದರೆ ಏಕೋ ಆ ಪ್ರಶ್ನೆಯನ್ನು ಕೇಳಲು ಬಾಯಿ ಬರಲಿಲ್ಲ.

"ಅಂತೂ ನಿಮ್ಮನ್ನು ಏನೇನೋ ಪ್ರಶ್ನೆ ಕೇಳಿಬಿಟ್ಟೆ. ಏನೂ ತಿಳಿದು ಕೊಳ್ಳಬೇಡಿ."

—ಎಂದ ಮಾತು ಮುಗಿಸುವವನಂತೆ.

"ಛೆ, ಛೆ, ಅದ್ರಲ್ಲೇನು ತಪ್ಪು – ಒಬ್ಬರ ವಿಷಯ ಒಬ್ಬರು ತಿಳಿದು ಕೊಳ್ಳೋದರಲ್ಲಿ ಏನೂ ತಪ್ಪಿಲ್ಲ ಸ್ವಾಮಿ. ಅವನ್ನೆಲ್ಲಾ ನಾನು ತಪ್ಪೂಂತ ತಿಳಿದುಕೊಳ್ಳೋಲ್ಲ."

—ಎಂದ ಆತ.

"ನೀವು ಏನಾದರೂ ಹೇಳಿ – ಕೆಲವು ಜನ ಹಾಗೆ ಪ್ರಶ್ನೆಮಾಡಿದರೆ, ಅಸಮಾಧಾನಪಟ್ಟುಕೊಳ್ಳುತ್ತಾರೆ. ಎಷ್ಟೋ ಜನಕ್ಕೆ ಹೊಸಬರೊಂದಿಗೆ ಮಾತನಾಡುವುದೆಂದರೇ ಬೇಸರ. ನೀವೂ ಅದೇ ಗುಂಪಿನವರೇನೋ ಅಂದು ಕೊಂಡಿದ್ದೆ . . . . ."

—ಮೂರ್ತಿ ಹೇಳಿದ.

"ಏಕೆ ?"

"ನೀವು ಗಾಡೀಲಿ ಕೂತಾಗ, ನಿಮ್ಮ ಮುಖ ನೋಡಿ, ನನಗೇಕೋ ನೀವು ತುಂಬಾ 'ರಿಸರ್ವ್' ಏನೋ ಅನ್ನಿಸ್ತು . . . ."

"ಛೆ . . . . ಛೆ . . . . ಹಾಗೇನೂ ಇಲ್ಲ ; ನನ್ನದೂ ಒಂದು ಥರಾ ಸ್ವಭಾವ. ಯಾರ್ನಾದ್ರೂ ಒಪ್ಪಿಕೊಂಡರೆ ಜೀವ ಕೊಡ್ತೀನಿ. ಇಲ್ಲದೆ ಹೋದ್ರೆ ಬಿಲ್‌ಕುಲ್ ಮಾತಾಡಿಸೋಕಿಲ್ಲ. ಹಾಗೇ ನಾನು ಇನ್ನೊಬ್ಬರ ವಿಷಯಕ್ಕೆ ತಲೆ ಹಾಕಿಕೊಂಡು ಹೋಗೋಲ್ಲ. ಇನ್ನೊಬ್ಬರು ನನ್ನ ವಿಷಯಕ್ಕೆ ತಲೆಹಾಕಿದ್ರೂ ಆಗೋದಿಲ್ಲ . . . . ."

" ಅದಕ್ಕೇ ನಾನು ಹೇಳಿದ್ದು – ನಾನು ನಿಮ್ಮ ವಿಷಯ ಏನೆಲ್ಲ ಕೇಳಿದ್ದು ಬೇಸರವಾಯಿತೇನೋ ಎಂತ . . . . . "

" ಹಾಗೇನೂ ಇಲ್ಲಾಂದ್ನಲ್ಲಾ. ನನಗೆ ಮನಸ್ಸಿಲ್ಲದಿದ್ದರೆ, ತುಟಿ ಎರಡು ಮಾಡ್ತಾ ಇರಲಿಲ್ಲ. ಆದ್ರೆ . . . . ನಿಮ್ಮನ್ನ ನೋಡಿದ್ರೆ ಯಾಕೋ ದೊಡ್ಡ ಮನುಷ್ಯರು, ವಿಶ್ವಾಸ ಮಾಡಬಹುದಾದವರು ಅನ್ನಿಸ್ತು. ಮಾತಾಡಿದೆ. ನೀವೂ ಅದನ್ನ ಉಳಿಸಿಕೊಳ್ಳಿ. ಅಷ್ಟೆ – ಆಗೋಯ್ತು."

—ಎಂದ ಆತ.

ಆತನ ಮಾತಿನಲ್ಲಿ, ತಾನು ಮೂರ್ತಿಯೊಂದಿಗೆ ಮನಬಿಚ್ಚಿ ಮಾತಾಡಿದುದರ ವಿವರಣೆ ಇದ್ದಂತೆಯೇ, ಅದರೊಂದಿಗೆ ' ಇಷ್ಟು ಮಾತಾಡಿದೆ ಅಂತ ಸಲಿಗೆ ತೆಗೆದುಕೊಳ್ಳಬೇಡಿ. ಹೆಚ್ಚು ದೂರ ಪ್ರವೇಶಿಸಬೇಡಿ ' ಎಂಬ ಎಚ್ಚರಿಕೆಯೂ ಇದ್ದಂತಿತ್ತು.

ಕಣ್ಣಿಗೆ ಕಾಣದಿದ್ದರೂ, ಅಷ್ಟು ದೂರಕ್ಕೇ ಬೆಂಕಿಯ ಝಳ ಬಡಿಯುವಂತೆ, ಮೂರ್ತಿಗೆ ಆ ಎಚ್ಚರಿಕೆಯ ಧ್ವನಿ ಸೋಕಿತು.

ಅದನ್ನು ಅರ್ಥ ಮಾಡಿಕೊಂಡು—

" ನೀವು ಹೇಳೋದು ಸರಿ. ಸಲಿಗೆ ಕೊಟ್ರೆ ಅಂಥ ಹೆಗಲ ಮೇಲೆ ಹತ್ತಿ ಕೂತುಕೊಳ್ಳೋರನ್ನ ಕಂಡರೆ ನನಗೂ ಆಗೋಲ್ಲ. ಅಂದಹಾಗೆ . . . . . . ಇಷ್ಟೆಲ್ಲಾ ಮಾತಾಡಿದಿವಿ – ನಿಮ್ಮ ಹೆಸರೇನೂಂತಲೇ ಕೇಳಲಿಲ್ಲ—"

—ಎಂದ ಮೂರ್ತಿ.

" ನನ್ನ ಹೆಸರೇ – ವ್ಯಾಸರಾಯ."

—ಎಂದು ಆತ ಮೂರ್ತಿಯ ಪ್ರಶ್ನೆಗೆ ಉತ್ತರ ಕೊಟ್ಟ.

ಅವರಿಬ್ಬರೂ ಅಷ್ಟು ಹೊತ್ತು, ಅಷ್ಟು ಮಾತಾಡುತ್ತಿದ್ದರೂ, ಮೂಲೆಯಲ್ಲಿ ಮುಖಕ್ಕೆ ಸೆರಗು ಹೊದ್ದು ಕುಳಿತಿದ್ದ ಆಕೆ ಮಾತ್ರ ಒಂದೂ ಮಾತಾಡಿರಲಿಲ್ಲ ; ಮುಖಕ್ಕೆ ಹೊದ್ದ ಸೆರಗನ್ನು ಒಮ್ಮೆಯೂ ಸರಿಸಿರಲಿಲ್ಲ.

ಹಾಗೆ ಕುಳಿತಿದ್ದರೂ, ಆಕೆಗೆ ನಿದ್ರೆ ಮಾತ್ರ ಬಂದಿರಲಿಲ್ಲವೆಂಬುದು, ಆಗಾಗ ಆಕೆ ಸೆರಗಿನ ಮರೆಯಲ್ಲಿ ಮಿಸುಕಾಡುತ್ತಿದ್ದುದರಿಂದ ಮೂರ್ತಿಗೆ ಅರ್ಥವಾಗಿತ್ತು.

' ನಿದ್ದೆ ಬರದಿದ್ದರೂ ಹೀಗೆ ಮುಸುಕು ಹೊದ್ದುಕೊಂಡು ಕುಳಿತು ಕೊಳ್ಳೋದು ಮಹಾಕಷ್ಟದ ಕೆಲಸ '

—ಎಂದು ತನಗೆ ತಾನೇ ಹೇಳಿಕೊಂಡ.

ಆಕೆ ತಮ್ಮೊಂದಿಗೆ ಮಾತಿನಲ್ಲಿ ಬೆರೆಯದಿದ್ದರೂ ಚಿಂತೆಯಿಲ್ಲ. ಆಗಾಗ ಮುಖವನ್ನಾದರೂ ತೋರಿಸಿದ್ದರೆ, ಮಾತುಕಥೆಗೆ ಮತ್ತಷ್ಟು ರುಚಿ ಬರುತ್ತಿತ್ತು ಎನಿಸಿತು ಮೂರ್ತಿಗೆ.

ಆದರೆ ಆ ವಿಷಯದಲ್ಲಿ ಅವನು ಅಸಹಾಯನಾಗಿದ್ದ.

ಆಕೆ ಅವರೊಂದಿಗೆ ಮಾತಾಡದಿದ್ದರೂ, ಅವರ ಕಡೆ ನೋಡದಿದ್ದರೂ, ಮಾತಿನ ನಡುವೆ ಮೂರ್ತಿಯ ಕಣ್ಣು ಆಗಾಗ ಆಕೆಯತ್ತ ಸುಳಿಯುತ್ತಿತ್ತು.

ತನ್ನ ಕಣ್ಣು ಆಕೆಯತ್ತ ತಿರುಗುವುದನ್ನು ಯಾರೂ ಕಾಣಿಸಲಿಲ್ಲ ಎಂದು ಕೊಂಡಿದ್ದ ಮೂರ್ತಿ.

ಆದರೆ – ವ್ಯಾಸರಾಯನ ಹದ್ದಿನ ಕಣ್ಣುಗಳಿಗೆ ಅದು ತಿಳಿಯದೆ ಹೋಗಲಿಲ್ಲ.

ಮೂರ್ತಿಯ ಕಣ್ಣು ಆಕೆಯತ್ತ ಸುಳಿದಾಗ, ಅವನ ಮನಸ್ಸೂ ಬೇರೇನೋ ಚಿಂತಿಸುತ್ತಿತ್ತು.

ಅವರು ಹೀಗೆ ಮಾತನಾಡುತ್ತಿರುವಾಗಲೇ ರೈಲು, ಸಾಗರದ ರೈಲ್ವೆ ನಿಲ್ದಾಣದಲ್ಲಿ ನಿಂತಿತು.

## ೧೦

ರೈಲು ನಿಲ್ದಾಣದಲ್ಲಿ ನಿಲ್ಲುತ್ತಿದ್ದ ಹಾಗೇ ವ್ಯಾಸರಾಯ ಮೂರ್ತಿಗೆ—

" ಗಾಡೀಲಿ ಯಾರಾದ್ರೂ ಜನ ನುಗ್ಗಿಬಿಟ್ಟಾರು ಸ್ವಲ್ಪ ನೋಡಿಕೊಂಡಿರಿ ಸಾರ್. ಹೋಟಲಿಗೆ ಹೋಗಿ ಕಾಫಿ - ತಿಂಡಿ ತರಲಿಕ್ಕೆ ಹೇಳಿ ಬರ್ತೀನಿ. ಮಧ್ಯಾಹ್ನದಿಂದ ತಿಂಡಿ ತೀರ್ಥ ಇಲ್ಲದೆ ಹೊಟ್ಟೆ ತಾಳ ಹಾಕ್ತಿದೆ."

—ಎಂದು ಹೇಳಿ, ಸೆರಗು ಹೊದ್ದು ಸುಮ್ಮನೆ ಕುಳಿತ ಆಕೆಯನ್ನು ತಟ್ಟಿ, ಎಚ್ಚರಿಸಿ—

" ನೀನು ಸೀಟಿನ ಮೇಲೆ ಹಾಯಾಗಿ ಕಾಲುಚಾಚಿ ಮಲಗಿಕೊಂಡು ಬಿಡು. ಆಮೇಲೆ ನೂಕುನುಗ್ಗಲಾದ್ರೆ - ಕೂತುಕೊಳ್ಳಲಿಕ್ಕೆ ಜಾಗ ಸಿಕ್ಕೋಲ್ಲ "

—ಎಂದು ಜಾಗವನ್ನು ಕಾಯ್ದಿರಿಸಿಕೊಳ್ಳುವ ಉಪಾಯವನ್ನು ಸೂಚಿಸಿ, ಗಾಡಿಯಿಂದ ಕೆಳಗೆ ಇಳಿದು, ಏನೋ ಜ್ಞಾಪಿಸಿಕೊಂಡು—

" ಅಂದ್ಹಾಗೆ - ನಿಮಗೂ ತಿನ್ನಲಿಕ್ಕೆ ಏನಾದ್ರೂ ತೆಗೆಸಿಕೊಂಡು ಬರಲೇ ಸಾರ್ ? "

—ಎಂದು ಮೂರ್ತಿಯನ್ನು ಕೇಳಿದ.

ಆತನ ಪ್ರಶ್ನೆಯನ್ನು ಕೇಳಿ, ಅದುವರೆಗೂ ಮರೆತುಹೋಗಿದ್ದ ಮೂರ್ತಿಯ ಹಸಿವೂ ಜಾಗ್ರತವಾಯಿತು. ಜೋಗದಿಂದ ಅವಸರವಸರವಾಗಿ ತಾಳಗುಪ್ಪೆಗೆ ಹೊರಟ ಮೂರ್ತಿ ಜೋಗದಲ್ಲಿ ಊಟ ತಿಂಡಿ ಮಾಡಿರಲಿಲ್ಲ. ಏನೋ ಉದ್ರೇಕದಲ್ಲಿ ಇದ್ದಕ್ಕಿದ್ದ ಹಾಗೇ ಜೋಗದಿಂದ ಪಯಣ ಬೆಳೆಸಿದ ಆವನಿಗೆ, ದಾರಿಯಲ್ಲಿ ಹೊಟ್ಟೆಯ ನೆನಪಾಗಿ, 'ತಾಳಗುಪ್ಪೆಯಲ್ಲಿ ತಿಂಡಿ ತಿಂದರಾಯಿತು' ಎಂದುಕೊಂಡಿದ್ದ.

ಆದರೆ ತಾಳಗುಪ್ಪೆಯಲ್ಲಿದ್ದ ಹೋಟಲಿಗೆ ತಿಂಡಿಗೆಂದು ಹೋಗಿ, ಮಾಣಿ ತಂದಿರಿಸಿದ ಉಪ್ಪಿಟ್ಟನ್ನು, ಒಂದು ಗುಕ್ಕು ತಿಂದಾಗ ಆ ಉಪಹಾರಕ್ಕಿಂತ ಉಪವಾಸವೇ ಲೇಸು ಎನಿಸಿ, ತಿಂಡಿಯನ್ನು ಹಾಗೇ ಬಿಟ್ಟು, ಹೊಟ್ಟೆಯ ಆತುರ ತಣಿಸಲು, ಕುಡಿಯಲಾಗದ ಕಾಫಿಯನ್ನು ಪ್ರಯತ್ನಪಟ್ಟು ಗುಟುಕರಿಸಿದ್ದ.

ಅಲ್ಲಿ ಅವನು ಯಾರನ್ನೊ,—

' ಈ ಊರಿನಲ್ಲಿ ಬೇರೆ, ಒಳ್ಳೆ ಹೋಟೆಲಿಲ್ಲವೇ ? '

—ಎಂದು ಪ್ರಶ್ನಿಸಿದಾಗ, ಅವರು—

' ಇಲ್ಲಿ ಒಳ್ಳೆ ಊಟ ತಿಂಡಿ ಯಾವುದೂ ಸಿಗೋಲ್ಲ. ಸಾಗರದ ಸ್ಟೇಷನ್ ಹೋಟೆಲಿನಲ್ಲಿ ಸೊಗಸಾದ ತಿಂಡಿ, ಊಟ ಸಿಗುತ್ತೆ. ರೈಲೂ ಅಲ್ಲಿ ಭಾಳ ಹೊತ್ತು ನಿಲ್ಲುತ್ತೆ '

—ಎಂದು ಉತ್ತರ ಹೇಳಿದ್ದರು.

ಆಗ ಮೂರ್ತಿ, ಸಾಗರದಲ್ಲಿ ಚೆನ್ನಾಗಿ ತಿಂಡಿ ತಿನ್ನಬೇಕು ಎಂದುಕೊಂಡಿದ್ದ. ಆ ಬಳಿಕ ಉಳಿದ ವಿಚಾರದಲ್ಲಿ, ಆ ಮಾತು ಮರೆತುಹೋಗಿತ್ತು.

ಈಗ ವ್ಯಾಸರಾಯನ ಪ್ರಶ್ನೆಯಿಂದ ಅದು ಮತ್ತೆ ನೆನಪಾಗಿ—

" ನನಗೂ ಬೆಳಗಿನಿಂದ ಊಟವಿಲ್ಲ. ನಿಮಗೆ ತೊಂದರೆಯಾಗದಿದ್ದರೆ, ಒಳ್ಳೆ ತಿಂಡಿ ಏನಾದರೂ ಇದ್ದರೆ, ನನಗೂ ಅಷ್ಟು ಕಟ್ಟಿಸಿಕೊಂಡುಬನ್ನಿ "

—ಎಂದು ಹೇಳಿ, ತನ್ನ ಜೇಬಿನಲ್ಲಿದ್ದ ' ಪರ್ಸ್ ' ತೆಗೆದು, ಅದರಿಂದ ಐದು ರೂಪಾಯಿನ ನೋಟೊಂದನ್ನು ವ್ಯಾಸರಾಯನಿಗೆ ಕೊಡಲು ಹೋದ.

ಮೂರ್ತಿ ತನ್ನ ಪರ್ಸ್ ಬಿಚ್ಚಿದಾಗ, ವ್ಯಾಸರಾಯನ ಕಣ್ಣೂ ಅದನ್ನು ನೋಡಿತು.

ಮೂರ್ತಿಯ ಪರ್ಸ್ ಸಾಕಷ್ಟು ದಪ್ಪಗಿತ್ತು.

ಅದನ್ನು ನೋಡಿಯೂ ನೋಡದವನಂತೆ ವ್ಯಾಸರಾಯ, ಮೂರ್ತಿ ತನಗೆ ಕೊಡಬಂದ ಹಣವನ್ನು ನಿರಾಕರಿಸಿ—

" ನಿಮ್ಮ ಹತ್ರಾನೇ ಇರಲಿ ಸಾರ್. ನಾನು ತಿಂಡಿ ಕಾಫಿ ತೆಗಸಿಕೊಂಡು ಬರ್‍ತೀನಿ. ಎಷ್ಟಾಗುತ್ತೋ ನೀವೇ ಕೊಡುವಿರಂತೆ."

—ಎಂದು ಹೇಳಿ—

" ನೀನು ಸೀಟಿನ ಮೇಲೆ ಮಲಗಿಕೊಂಡುಬಿಡು. ಖಾಲಿ ಕಂಡ್ರೆ ಜನ ನುಗ್ತಾರೆ."

—ಎಂದು ಮತ್ತೆ ಆಕೆಗೆ ಎಚ್ಚರಿಕೆ ಹೇಳಿ ಹೋದ.

ಗಾಡಿ ಖಾಲಿ ಕಂಡರೆ, ಆ ಗಾಡಿಗೆ ಜನ ನುಗ್ಗುತ್ತಾರೆ ಎಂಬ ವ್ಯಾಸರಾಯನ ಭಯ ವಾಸ್ತವವಾದುದಾದರೂ, ಆ ದಿನ ಮಾತ್ರ ಆ ಭಯ ಸತ್ಯವಾಗಲಿಲ್ಲ.

ಸಾಗರದ ನಿಲ್ದಾಣದಲ್ಲೂ ಹೆಚ್ಚು ಜನವಿರಲಿಲ್ಲ. ನಿಲ್ದಾಣದ ಕಟ್ಟೆಯ ಮೇಲಿದ್ದ ಮೂರು-ಮತ್ತೊಂದು ಜನಕ್ಕೂ ಗಾಡಿಯಲ್ಲಿ ಹತ್ತುವ ಆತುರ ವಿದ್ದಂತಿರಲಿಲ್ಲ.

ಆದರೆ, ಸಾಗರ ಆ ಮಾರ್ಗದಲ್ಲಿ ಪ್ರಯಾಣಮಾಡುವ ಪ್ರಯಾಣಿಕರಿಗಷ್ಟೇ ಅಲ್ಲ, ರೈಲಿಗೂ 'ಹೊಟ್ಟೆ ತುಂಬಿಸಿಕೊಳ್ಳುವ ಸ್ಥಳ' ವಾದುದರಿಂದ, ಅಲ್ಲಿ ರೈಲು ಸಾಕಷ್ಟು ಹೊತ್ತು ನಿಲ್ಲುತ್ತಿತ್ತು. ಆದುದರಿಂದ, ರೈಲು ಹೊರಡುವ ವೇಳೆಗೆ, ಜನ ಬಂದು ಗಾಡಿಯಲ್ಲಿ ತುಂಬಿಕೊಳ್ಳಬಹುದು, ಎಂದು ಊಹಿಸಿ, ಮೂರ್ತಿ, ಪೋರ್ಟರ್ ಮೇಲುಹಲಗೆಯ ಮೇಲಿರಿಸಿದ ತನ್ನ ಹೋಲ್ಡಾಲನ್ನು ಕೆಳಗಿಳಿಸಿ, ಸೀಟಿನ ಮೇಲೆ ಬಿಚ್ಚಿ ಹಾಸಿದ.

ವ್ಯಾಸರಾಯ ಕಾಫಿ-ತಿಂಡಿ ತೆಗೆಸಿಕೊಂಡು ಬರಲು ಹೋದ ಬಳಿಕ, ಆಕೆ, ಮುಖದ ಮೇಲಿದ್ದ ಸೆರಗನ್ನು ಸರಿಸಿ—

"ಇದು ಯಾವ ಊರು ?"

—ಎಂದು ಕೇಳಿದಳು-ಬಹು ತಗ್ಗಿದ ಧ್ವನಿಯಲ್ಲಿ.

ಆದುವರೆಗೂ, ಯಾವ ಮಾತೂ ಆಡದಿದ್ದ ಆಕೆ ತನ್ನನ್ನು ಪ್ರಶ್ನಿಸಿದು ದನ್ನು ಕೇಳಿ, ತನ್ನ ಹಾಸಿಗೆ ಹಾಸಿಕೊಳ್ಳುವುದರಲ್ಲಿ ನಿರತನಾಗಿದ್ದ ಮೂರ್ತಿ, ಚಕಿತನಾಗಿ ಆಕೆಯತ್ತ ತಿರುಗಿ ನೋಡಿ, ಆಕೆಯ ಮಾತೇ ಕಿವಿಗೆ ಬೀಳದವನಂತೆ—

"ಏನು ?"

—ಎಂದು ಕೇಳಿದ.

"ಇದು ಯಾವ ಊರು ?"

—ಮೊದಲಿಗಿಂತಲೂ ಮತ್ತಷ್ಟು ಭಾರವಾದ, ಸಿಟ್ಟಿಸಿರಿನಷ್ಟು ಮೃದುವಾದ ಧ್ವನಿಯಲ್ಲಿ ಆಕೆ ಕೇಳಿದಳು.

"ಸಾಗರ."

ಆತನ ಉತ್ತರವನ್ನು ಕೇಳಿ ಆಕೆ, ಒಮ್ಮೆ ನಿಲ್ದಾಣದತ್ತ ದೃಷ್ಟಿಹಾಯಿಸಿ ನೋಡಿದಳು.

ಮೂರ್ತಿಯೂ ಆಕೆಯ ಮುಖವನ್ನೇ ನೋಡಿದ.

ಆಕೆಯ ಮುಖವೇಕೋ ಬೆಂಕಿಯಲ್ಲಿ ಬಿದ್ದಷ್ಟು ಬಾಡಿತ್ತು. ತಲೆಯ

ಮೇಲೆ ಮುಸುಗು ಹೊದ್ದದರಿಂದ ಕೆದರಿದ ತಲೆಗೂದಲ ಸುರುಳಿಗಳು, ಹಣೆಯ ಮೇಲೆ, ಕೆನ್ನೆಯ ಮೇಲೆ ಹರಡಿ, ಒಂದು ಎಳೆ ಆಕೆಯ ತುಟಿಗಳಿಗೆ ಹತ್ತಿತ್ತು. ಬಿಳಚಿಕೊಂಡು ವಿವರ್ಣವಾದ ಆಕೆಯ ಮುಖದಲ್ಲಿ, ಕಪ್ಪುಗೂದಲು ಮತ್ತಷ್ಟು ಕಪ್ಪಾಗಿ ಕಾಣುತ್ತಿತ್ತು. ಕೂದಲ ಎಳೆ ಹತ್ತಿಕೊಂಡ ಆಕೆಯ ಕೆಂದುಟಿಯೂ, ಬೂದಿ ಹಚ್ಚಿದಂತೆ ವಿವರ್ಣವಾಗಿತ್ತು. ಕಣ್ಣಾಲಿಗಳಲ್ಲೂ ಹೊಳಪಿರದೆ, ಅವೂ ಯಾವುದೋ ದುಃಖಭಾರದಿಂದ ಬಳಲಿ ಬಾಗಿದ್ದವು. ಆಕೆಯ ಮುಖದ ಅಂಗ ಅಂಗವೂ, ತೀವ್ರ ದುಃಖದ ತಪ್ತಮುದ್ರೆಯಿಂದ ಅಂಕಿತವಾದಂತೆ ತೋರಿತು ಮೂರ್ತಿಗೆ. ಹಾಗೇ ಆಕೆ ನಿಲ್ದಾಣವನ್ನು, ಸುತ್ತಲ ಬರಿದಾದ ಗಾಡಿಯನ್ನು ನೋಡಿದ ರೀತಿಯಲ್ಲಿ ಪಂಜರಬದ್ಧ ಪಕ್ಷಿಯ ಭಾವವಿತ್ತು.

ಆಕೆ ಬಾಯಿಬಿಟ್ಟು ಏನೊಂದನ್ನು ಹೇಳದಿದ್ದರೂ, ಮೂರ್ತಿಗೆ, ಆಕೆಯ ನೋವು ಅರಿವಾಗಿ—

‘ ಅದೇನು ಯಾತನೆ ಹೇಳಿ. ಏನಿದ್ದರೂ ನಾನು ತೀರಿಸುತ್ತೇನೆ. ಮೂಕ ವ್ಯಥೆಯಲ್ಲಿ ನೀವು ಬಳಲುವುದನ್ನು ನೋಡಲಾರೆ.’

—ಎಂದು ಹೇಳಬೇಕೆನಿಸಿ, ಆ ಸಹಾನುಭೂತಿಯ ಮಾತು ನಾಲಿಗೆಯ ತುದಿಯವರೆಗೂ ಉಕ್ಕಿಬಂದಿತು.

ಆದರೆ, ನಾಲಗೆಯ ತುದಿಯವರೆಗೆ ಬಂದ ಮಾತನ್ನು ಆಡಲಾಗದೆ, ಮೂರ್ತಿ ಆಕೆಯತ್ತ ಸಹಾನುಭೂತಿ ತುಂಬಿದ ನೋಟದಲ್ಲಿ ನೋಡಿ, ಸುಮ್ಮನೆ ನಿಟ್ಟುಸಿರುಬಿಟ್ಟು ಕುಳಿತ.

ಆಕೆಯೂ ಮತ್ತೆ ಮಾತಾಡಲಿಲ್ಲ. ಅದೊಂದು ಪ್ರಶ್ನೆ ಕೇಳಿ, ವ್ಯಾಸ ರಾಯನ ಮಾತಿನಂತೆ, ಸೀಟಿನ ಮೇಲೆ ಮೈಚಾಚಿ, ತೋಳನ್ನು ತಲೆ ದಿಂಬಾಗಿಟ್ಟುಕೊಂಡು, ಮೂರ್ತಿಯತ್ತ ಬೆನ್ನುಮಾಡಿ ಮಲಗಿದಳು.

ಆಕೆ ಮಲಗಿದ ರೀತಿಯಲ್ಲಿ, ಆಕೆಗೆ, ತನಗೆ ಮುಖ ತೋರಿಸುವ, ತನ್ನತ್ತ ನೋಡುವ ಇಷ್ಟವಿಲ್ಲವೆಂಬುದು ಮೂರ್ತಿಗೆ ಅರಿವಾಗಿ, ತಾನೂ ಆಕೆಯ ಕಡೆ ನೋಡಬಾರದು ಎಂದುಕೊಂಡ.

ಆದರೆ ಹಾಗೆ ಮಾಡುವುದು ಮಾತ್ರ ಆಗಲಿಲ್ಲ.

ಅವನ ಇದಿರು ನೀಳವಾಗಿ ಚಾಚಿದ ಆಕೆಯ ದೇಹ ಅವನ ಕಣ್ಣನ್ನು ಅಯಸ್ಕಾಂತದಂತೆ ಸೆಳೆಯುತ್ತಿತ್ತು.

ನೋಡದಿರಲಾಗದೆ ನೋಡಿದ—

ಗಾಡಿಯಲ್ಲಿದ್ದ ವಿದ್ಯುತ್ - ದೀಪದ ಕ್ಷೀಣ ಪೀತಕಾಂತಿಯಲ್ಲಿ—

ನಿಲ್ದಾಣದಲ್ಲಿ ನಿಂತ ಗಾಡಿಯ, ಸ್ವಪ್ನವೆನಿಸುವಂಥ ವಾತಾವರಣದಲ್ಲಿ—

ತನ್ನಿದುರು ನೀಳವಾಗಿ ಚಾಚಿದ ಹೆಣ್ಣುದೇಹ—

ನೀಳ, ಸಧೃಡ ನುಣ್ದೊಡೆಗಳು, ಎದ್ದು ಕಾಣುವ ನಿತಂಬದ್ವಯ, ಕೊಂಚ ಬಾಗಿದ ಅಗಲವಾದ ಬೆನ್ನು. ಸೀಟಿನ ಮೇಲೆ, ಸುರುಳಿ ಸುತ್ತಿದ ಜಡೆ, ತಲೆಯ ಕೆಳಗಿನ, ತಲೆಗೆ ಆಧಾರವಾದ ಕೈಯ ನೀಳವಾದ, ತಲೆಯಭಾರಕ್ಕೆ ನಸುಬಾಗಿದ ಬೆರಳುಗಳು, ಆ ಬೆರಳುಗಳ ಮರೆಯಲ್ಲಿ ಕಾಣಿಸುವ ಮೃದುವಾದ ಕೆಂಪು ಅಂಗೈ—

ಉಸಿರೆಳತಕ್ಕೆ, ಆ ಬೆನ್ನು ಬಹು ಮಂದವಾಗಿ ಏರಿಳಿಯುತ್ತಿತ್ತು.

ಆ ಬೆನ್ನಹಿಂದೆ ಮರೆಯಾದ ಮುಖವನ್ನು ಮೂರ್ತಿ ನೋಡಿದ್ದ ; ನೋಡಿ ಮೆಚ್ಚಿಕೊಂಡಿದ್ದ – ದುಃಖ ಕಲಂಕಿತವಾದರೂ ಸುಂದರ ಮುಖ ಅದು.

ಆ ಮುಖದ ಮೇಲೆ ತನ್ನ ಮುದ್ರೆಯನ್ನೆತ್ತಿದ್ದ ದುಃಖ, ಕಾರಣ ತಿಳಿಯದ ದುಃಖ, ಆ ಮುಖದ ಸೌಂದರ್ಯಕ್ಕೆ, ರಹಸ್ಯದ ಮೆರುಗು ಕೊಟ್ಟು ಅದರ ಆಕರ್ಷತೆಯನ್ನು ಮತ್ತಷ್ಟು ಹೆಚ್ಚಿಸಿತ್ತು.

ಈ ಹೆಣ್ಣು ಯಾರಿರಬಹುದು, ಈಕೆಯ ದುಃಖವೇನು ?

ಈಕೆ–ಆತನ ಹೆಂಡತಿಯಲ್ಲ. ಆತ, ಆತನೇ ಹೇಳಿಕೊಂಡಂತೆ–ಯಾರೋ ಚಲಚ್ಚಿತ್ರ ತಯಾರಕರ ಏಜಂಟು. ಹಾಗಾದರೆ ಈಕೆ ಚಲಚ್ಚಿತ್ರ ತಾರೆಯಾಗಲು ಹೊರಟವಳೇ ?

ಹಾಗಿದ್ದರೆ ಈ ದುಃಖವೇಕೆ ?

ಚಲಚ್ಚಿತ್ರಕ್ಕೆ ಸೇರುವ ಅವಕಾಶ ತಮಗೆ ಸಿಕ್ಕೀತೇ ಎಂದು ಹಾತೊರೆಯುತ್ತಾ, ಆ ಅವಕಾಶ ಸಿಗದಿದ್ದರೂ, ಆ ತಾರೆಯರ ಹಾಗೆ ಉಡಿಗೆ-ತೊಡಿಗೆ ಧರಿಸಿ, ತಮ್ಮ ಬಯಕೆಯನ್ನು ತೀರಿಸಿಕೊಳ್ಳುವ ಬೆಡಗುಗಾತಿ ಹುಡುಗಿಯರನ್ನು ಎಷ್ಟೋ ಮಂದಿಯನ್ನು ಮೂರ್ತಿ ಬೆಂಗಳೂರಿನಲ್ಲಿ ನೋಡಿದ್ದ. ಅವನ ಕಾಲೇಜಿನ ವಾತಾವರಣವೆಲ್ಲಾ ಚಲಚ್ಚಿತ್ರದ ಗಂಧದಿಂದ ಇಡುಗಿತ್ತು. ಅವನಿಗೆ ತಿಳಿಯದೇ ?

ತಾವು ಸ್ವತಃ ಚಲಚ್ಚಿತ್ರ ನಟರಾಗುವುದಿರಲಿ, ಆ ರಂಗದ ನಟನಟಿಯರ ಮುಖದರ್ಶನದಿಂದಲೇ, ಹಸ್ತಾಕ್ಷರ ಸ್ಪರ್ಶದಿಂದಲೇ ಬದುಕು ಸಾರ್ಥಕವಾಯಿತೆಂದು ಭಾವಿಸುವವರನ್ನೂ ಅವನು ಕಂಡಿದ್ದ–ಎಷ್ಟೋ ಶತಸಹಸ್ರ ಸಂಖ್ಯೆಯಲ್ಲಿ.

ಹಾಗಿರುವಾಗ ಈಕೆಗೆ, ಚಲಚ್ಚಿತ್ರದಲ್ಲಿ ಅಭಿನಯಿಸುವ ಭವ್ಯ ಅವಕಾಶ ಪಡೆದಿರುವ ಈಕೆಗೆ – ಏನು ದುಃಖ ?

ಮನೆಬಿಟ್ಟು ಬಂದದ್ದಕ್ಕೇ ?

ಇರಬಹುದು – ಆದರೆ ಈಕೆಯ ದುಃಖ ಅದಕ್ಕೂ ಆಳವಾಗಿತ್ತು. ಅದಕ್ಕಿಂತಲೂ ಹೆಚ್ಚಾಗಿ, ಆಕೆಯ ದುಃಖದೊಂದಿಗೆ ಏನೋ ಭಯವೂ ಬೆರತಿತ್ತು.

ಅಂಥ ದುಃಖ, ಅಂಥ ಭಯ—ಏನಿರಬಹುದು ?

ಮೂರ್ತಿ ಈ ಯೋಚನೆಯಲ್ಲಿರುವಾಗಲೇ, ಡಬ್ಬಿಯ ಪಕ್ಕದಲ್ಲಿ ಹುಡುಗನೊಬ್ಬ—

“ ಬೀಡಾ, ಬೀಡಿ, ಸಿಗರೇಟ್ ”

—ಎಂದು ಕೂಗಿಕೊಂಡು ಬರುತ್ತಿರುವುದು ಕೇಳಿಸಿ, ಗಾಡಿಯ ಹೊರಗೆ ಇಣುಕಿಹಾಕಿ, ತೂಗುಪೆಟ್ಟಿಗೆಯ ವ್ಯಾಪಾರಿಯನ್ನು ಕರೆದು, ತನಗೆ ಬೇಕಾದ ಸಿಗರೇಟು ಪೊಟ್ಟಣವನ್ನು ಕೊಂಡುಕೊಂಡ.

ಅದರೊಂದಿಗೆ, ಆ ಹುಡುಗನ ಬಳಿ ಇದ್ದ ಕಿತ್ತಳೆಹಣ್ಣನ್ನು ತೆಗೆದುಕೊಂಡ – ತಿಂಡಿಯ ಜೊತೆಗೆ ತಿನ್ನಲು ಇರಲಿ ಎಂದು.

ಅವನು ಹುಡುಗನೊಂದಿಗೆ ಹಣ್ಣು – ಸಿಗರೇಟಿನ ವ್ಯಾಪಾರ ಮಾಡುತ್ತಿದ್ದಾಗ, ಅದುವರೆಗೂ ಅವನ ಕಡೆ ಬೆನ್ನುಮಾಡಿ ಮಲಗಿದ ಆಕೆ, ಅವನ ಕಡೆ ಮುಖ ತಿರುಗಿಸಿ, ಅವನು ವ್ಯಾಪಾರ ಮಾಡುವುದನ್ನೇ ನೋಡುತ್ತಾ ಮಲಗಿದ್ದಳು.

ಆ ವೇಳೆಗೆ ಆಕೆಯ ದುಃಖವೂ ಸ್ವಲ್ಪ ಸ್ಥಿಮಿತಕ್ಕೆ ಬಂದಿತ್ತೆಂದು ಕಾಣುತ್ತದೆ. ಎಂತಲೇ ಮುಖದ ಮೇಲಿದ್ದ ದುಃಖದ ತೀವ್ರತೆ ಮಾಯವಾಗಿ, ಆಕೆಯ ಮುಖ, ಕಣ್ಣುಗಳಲ್ಲಿ ದುಃಖಾನಂತರದ ಜಡತೆ ಒಡಮೂಡಿತ್ತು.

ನಿರಾಸಕ್ತನೇತ್ರಗಳಿಂದ ತನ್ನತ್ತಲೇ ನೋಡುತ್ತಿದ್ದ ಆಕೆಯನ್ನು ಮೂರ್ತಿಯೂ ನೋಡಿದ. ನೋಡಿದ ಬಳಿಕ ಮಾತನಾಡಿಸಬೇಕು ಎನಿಸಿತು.

ಅಪರಿಚಿತನಾದ ತಾನು ಮಾತನಾಡಿಸಿದರೆ, ಆಕೆ ಏನು ತಿಳಿದುಕೊಳ್ಳುತ್ತಾಳೋ ಏನೋ ಎಂಬ ಆತಂಕವಿದ್ದರೂ, ಮನದಲ್ಲಿ ಮೂಡಿದ ಬಯಕೆಯನ್ನು ಹತ್ತಿಕ್ಕಲಾರದೆ—

" ತೆಗೆದುಕೊಳ್ಳಿ "

—ಎಂದು ಹೇಳಿ ಎರಡು ಕಿತ್ತಲೆಹಣ್ಣನ್ನು, ಆಕೆ ಸೀಟಿನ ಉದ್ದಕ್ಕು ಮಲಗಿದ್ದುದರಿಂದ, ಅಲ್ಲಿಡಲು ಸ್ಥಳ ಕಾಣದೆ, ಕೈಯಲ್ಲೇ ಹಿಡಿದು ಕೈಯನ್ನು ಆಕೆಯತ್ತ ಚಾಚಿದ.

ಆಕೆ ಆ ಹಣ್ಣನ್ನು ತೆಗೆದುಕೊಳ್ಳಲಿಲ್ಲ. ಅದಕ್ಕೆ ಪ್ರತಿಯಾಗಿ ಸುಮ್ಮನೆ ಅವನ ಮುಖವನ್ನು ನೋಡಿದಳು.

" ಏಕೆ – ಹಣ್ಣು ತಿನ್ನೋಲ್ಲವೇ ? "

—ಎಂದು ಮತ್ತೆ ಪ್ರಶ್ನೆಮಾಡಿದ ಮೂರ್ತಿ.

ಏಕೋ ಅಷ್ಟು ಮಾತನಾಡಿದುದಕ್ಕೇ ಅವನ ಹೃದಯದ ವೇಗ ಹೆಚ್ಚಾಗಿ ಧಡಧಡಿಸುತ್ತಿತ್ತು.

ಅವನ ಮಾತಿಗೆ ಉತ್ತರವಾಗಿ ಆಕೆ ಕಿಟಕಿಯಿಂದಾಚೆಗೆ ನೋಡಿದಳು.

ಆಕೆಯ ದೃಷ್ಟಿಯನ್ನೇ ಹಿಂಬಾಲಿಸಿ ಮೂರ್ತಿಯೂ ನೋಡಿದ – ಹೊರಗೆಲ್ಲೂ ವ್ಯಾಸರಾಯ ಬರುತ್ತಿರುವುದು ಕಾಣಲಿಲ್ಲ.

" ಅವರು . . . . . ಅವರು . . . . . ಏನಾದ್ರೂ . . . . . ಅಂದ್ಕೋತಾರೆ . . . . . "

—ಮೂರ್ತಿಯ ಮಾತಿಗೆ ಆಕೆ ತಡೆ ತಡೆದು ಉತ್ತರ ಕೊಟ್ಟಳು. ಆ ಮಾತನ್ನು ಆಡುವಾಗ, ಆ ಮಾತಾಡಿದ ಆಯಾಸಕ್ಕೋ ಎಂಬಂತೆ ಆಕೆಯ ಉಸಿರ ಗತಿ ತೀವ್ರವಾಗಿ ಮುಖ ಕೆಂಪೇರಿತು.

ಹಾಗೆ ಕೆಂಪೇರಿದ ಮುಖ ಮತ್ತಷ್ಟು ಚೆಲುವಾಗಿ ಕಾಣಿಸಿ, ಮೂರ್ತಿಗೆ ಆ ಕೆಂಪೇರಿದ ಕೆನ್ನೆಗಳನ್ನು ನೇವರಿಸಬೇಕು ಎನಿಸಿತು. ಹಾಗೇ ತನ್ನ ಪ್ರಶ್ನೆಗೆ ಆಕೆ ಕೊಟ್ಟ ಸರಳವಾದ ಉತ್ತರ ಕೇಳಿ, ಏಕೋ ಅವನ ಹೃದಯ ತುಂಬಿ ಬಂದಿತು. ಅದರೊಂದಿಗೆ ಆಕೆ ಅವನ ವಿಷಯದಲ್ಲಿಟ್ಟುಕೊಂಡ ಭಯವನ್ನು ಕಂಡು ಮರುಕವೂ ಮೂಡಿತು.

' ನಾನಿರುವಾಗ ಅವನದೇನು ಭಯ – ಬಿಡು.'

—ಎಂದು ಅಭಯ ನುಡಿಯಬೇಕು ಎಂದು ತೋರಿತು. ಆದರೆ ಹಾಗೆ ಹೇಳಲು ತಾನಾರು ?

ತಾನು ಆಕೆಗೆ ಯಾರೂ ಅಲ್ಲ. ನಿಜ. ಆತ—? ಆತ ಈಕೆಗೆ ಏನಾಗ ಬೇಕು ? ಬರೀ ವೃತ್ತಿ ಸಂಬಂಧವೇ ? ಅಥವಾ—?

ಮತ್ತೆ ಮೂರ್ತಿಯ ಮನಸ್ಸು, ಅದುವರೆಗೂ ಮರೆತ ಅವರೀರ್ವರ ಸಂಬಂಧದ ವಿಷಯವನ್ನು ಚಿಂತಿಸತೊಡಗಿತು.

" ಸರಿ– ನಿಮಗಷ್ಟು ಸಂಕೋಚವಾದರೆ ಅವರೇ ಬರಲಿ."

—ಎಂದು ಹಣ್ಣನ್ನು ತನ್ನ ಪಕ್ಕದಲ್ಲೇ ಇಟ್ಟುಕೊಂಡು, ಮನದಲ್ಲಿ ಮೂಡಿದ ಪ್ರಶ್ನೆಯನ್ನು ಮೆಲಕುಹಾಕುತ್ತಾ, ಸಿಗರೇಟು ಹೊತ್ತಿಸಿ ಕುಳಿತುಕೊಂಡ.

ಈಕೆ ಅವನ ಪತ್ನಿಯಲ್ಲ – ಅವನು ಚಲಚಿತ್ರ ತಯಾರಕರ 'ಏಜಂಟು.' ಹಾಗಾದರೆ ಇವರಿವರ ಸಂಬಂಧವೇನು ?

ಏನೂ ಸಂಬಂಧವಿಲ್ಲದೆ, ಈ ಹೆಣ್ಣು ಒಂಟಿಯಾಗಿ ಅವನೊಂದಿಗೆ ಪ್ರಯಾಣ ಹೊರಟಿರುವಳೇ ?

ಕೇವಲ ಅಪರಿಚಿತನೊಂದಿಗೆ ಯಾವ ಹೆಣ್ಣೂ ಹೀಗೆ ಒಂಟಿಯಾಗಿ ಪ್ರಯಾಣ ಮಾಡಲಾರಳು. ಇವರಿವರದು ಕೇವಲ ವೃತ್ತಿ ಸಂಬಂಧವಾಗಿದ್ದರೆ, ಆಕೆಯ ಮನೆಯವರು ಯಾರಾದರೂ ಜೊತೆಗೆ ಬರುತ್ತಿದ್ದರು.

ಆದರೆ ಈಗ ಆಕೆಯ ಜೊತೆಗೆ ಬೇರೆ ಯಾರೂ ಇಲ್ಲ – ಇಬ್ಬರೇ. ಆ ಇಬ್ಬರೂ ಏಕೋ ಭೀತರು. ಏಕೆ—?

ಆ ಸಮಸ್ಯೆಯನ್ನೇ ಚಿಂತಿಸಿದಷ್ಟೂ ಮೂರ್ತಿಯಲ್ಲಿ ಏನೋ ಅನುಮಾನ. ಏನೋ ಕುತೂಹಲ ಬೆಳೆದು, ಅವನ ಮಿದುಳನ್ನು ಕೆಣಕಲು ಆರಂಭಿಸಿತು.

ತಲೆ ಚಿಂತಿಸುತ್ತಿತ್ತು. ಬಾಯಿ, ರೈಲ್ವೆ ಎಂಜಿನ್ನಿನ ಚಿಮಣಿಯಂತೆ ಸಿಗರೇಟಿನ ಹೊಗೆಯನ್ನು ಉಗುಳುತ್ತಿತ್ತು.

ಗಾಡಿಯೊಳಗೆ ಮೂರ್ತಿಯ ಮುಖದಿಂದ ಧಾರಾಕಾರವಾಗಿ ಹೊರ ಹೊಮ್ಮುತ್ತಿದ್ದ ಹೊಗೆ ದಟ್ಟವಾಗಿ ವ್ಯಾಪಿಸಿತ್ತು. ಆ ಹೊಗೆಯ ಘಾಟು ತಡೆಯಲಾರದೆಯೋ ಏನೋ, ಆಕೆ ಮುಖವನ್ನು ಸೂಕ್ಷ್ಮವಾಗಿ ಸಿಂಡರಿಸಿ,

ತನ್ನ ಮುಖಕ್ಕೆ ಮುತ್ತಿಗೆ ಹಾಕಿದ್ದ ಹೊಗೆಯನ್ನು ಓಡಿಸಲು, ಕೈಯನ್ನೇ ಬೀಸಣಿಗೆಯಂತೆ ಬೀಸಿಕೊಂಡಳು.

ಅದನ್ನು ನೋಡಿ ಮೂರ್ತಿಗೆ ತನ್ನ ಅಸಭ್ಯತೆಯ ಅರಿವಾಗಿ—

" ನಾನು ಸಿಗರೇಟು ಸೇದುವುದರಿಂದ ನಿಮಗೆ ತೊಂದರೆಯಾಗುತ್ತಿದ್ದರೆ ಹೇಳಿ, ಆರಿಸಿಬಿಡುತ್ತೇನೆ."

—ಎಂದ.

" ಊಹೂ."

— ಎಂದು ಆಕೆ ತಲೆಯಾಡಿಸಿದಳು.

ಆಕೆ ತಲೆಯಾಡಿಸಿದಾಗ, ಗಾಡಿಯ ದೀಪದ ಬೆಳಕು, ಆಕೆಯ ಕಿವಿಯಲ್ಲಿದ್ದ ಕೆಂಪು ಹರಳಿನ ಓಲೆಯ ಮೇಲೆ ಬಿದ್ದು, ಅದು ಚಮಕಿಸಿತು.

ಎಂಥ ಸುಂದರವಾದ ಕಿವಿಗಳು ಆಕೆಯವು.

ಆಕೆಯಲ್ಲದೆ, ಬೇರೆಯವರಾಗಿದ್ದರೆ, ಮೂರ್ತಿ, ಆಕೆ ತನ್ನ ಕಿವಿಯ ಸೌಂದರ್ಯವನ್ನು ತೋರಿಸುವ ಸಲುವಾಗಿಯೇ ತನ್ನ ಕತ್ತನ್ನು ಹಾಗೆ ಹೊರಳಿಸಿದಳು ಎಂದೇ ಹೇಳುತ್ತಿದ್ದ.

ಆದರೆ ಆಕೆ–ಅಂಥ ಬೆಡಗುಗಾತಿಯಾಗಿರಲಿಲ್ಲ. ಆಕೆಯ ಸೌಂದರ್ಯದಲ್ಲಿ ವೈಯಾರದ ಸೆಳಕಿರಲಿಲ್ಲ; ಸರಳತೆಯ ಸೊಗಡಿತ್ತು. ಹಾಗೆ ನೋಡಿದರೆ, ಆಕೆಯ ನಿರಾಡಂಬರ ಸರಳತೆಯೇ ಆಕೆಯ ಚೆಲುವಿಕೆಯ ರಹಸ್ಯವಾಗಿತ್ತು.

ಆ ಮುಗ್ಧಲಾವಣ್ಯಕ್ಕೆ ಮನಸೋತು ಮೂರ್ತಿ ಆಕೆಯನ್ನೇ ನೋಡ ತೊಡಗಿದ.

ಅವನು ತನ್ನನ್ನು ಹಾಗೆ ನೋಡುತ್ತಿರುವುದನ್ನು ಕಂಡು, ಆಕೆಯ ದುಃಖ ವಿವರ್ಣವಾದ ಮುಖದಲ್ಲೂ ಕೆಂಪು ಸುಳಿಯಿತು.

ಅ ಕೆಂಪು – ಕೆಂಪು ದ್ರಾಕ್ಷಾರಸದಷ್ಟು ಮಾದಕವಾಗಿತ್ತು.

ಆಕೆ – ಬೇರೊಬ್ಬನ ಜೊತೆಗಾತಿಯಾಗಿ ತನ್ನ ಕಣ್ಣಿಗೆ ಕಾಣಿಸಿಕೊಳ್ಳದೆ, ತನ್ನ ಜೊತೆಗಾತಿಯಾಗೇ ಬಂದಿದ್ದರೆ . . . . . .

ಆಕೆ – ಬೇರೊಬ್ಬನ ಜೊತೆಗಾತಿ—

ಆ ಭಾವನೆ ಮನಸ್ಸಿನಲ್ಲಿ ಸುಳಿದು, ಮೂರ್ತಿಯ ಹೃದಯದಲ್ಲಿ ವ್ಯಾಸರಾಯನ·ಬಗ್ಗೆ ಅಸೂಯೆ ಕುದಿದು ಉಕ್ಕಿತು.

ಎಂಥ ಜೊತೆಗಾರ !

ಅವನು ಪಶು—ಈಕೆ ಕುಸುಮ.

ಆ ಪಶು, ಈ ಕುಸುಮದ ಸಂಗಾತಿಯಾಗಿದ್ದಾನೆ—ತಾನು ಆಘ್ರಾಣಿಸುವುದಕ್ಕೂ ಅಲ್ಲ ; ಮತ್ತಾರೋ ಚಿತ್ರ ತಯಾರಿಕರಿಗೆ ಈಕೆಯನ್ನು ಒಪ್ಪಿಸುವುದಕ್ಕಾಗಿ.

ನಿಜ, ನಿಜ, ಯಾರೋ ಚಲಚ್ಚಿತ್ರ ನಿರ್ಮಾಪಕನ ಶಯ್ಯಾಸುಖಕ್ಕಾಗಿ ರವಾನೆಯಾಗುತ್ತಿದ್ದಾಳೆ ಈಕೆ. ಅಷ್ಟಲ್ಲದೆ ಮತ್ತೇನು ? ಆ ಮಾತು ಅನಿಸಿದಾಗ ಮೂರ್ತಿಗೆ, ತಾನು ಕೇಳಿದ ಚಲಚ್ಚಿತ್ರ ನಿರ್ಮಾಪಕರ ಕಥೆಗಳು ನೆರವಾದವು.

ಶಯ್ಯಾಗೃಹವೇ ತಾರಾಪಟ್ಟಕ್ಕೆ ಹೆಬ್ಬಾಗಿಲು ಎಂಬ ಮಾತನ್ನು ಎಷ್ಟೋ ಜನಗಳಿಂದ ಕೇಳಿದ್ದ ಮೂರ್ತಿ. ಚಲನಚಿತ್ರ ತಯಾರಕನೊಬ್ಬ, ದಿನಕ್ಕೊಬ್ಬ ಹುಡುಗಿಯ ಜೊತೆ ಬೃಂದಾವನ ಯಾತ್ರೆ ಮಾಡುವುದನ್ನು ಕೇಳಿ, ಹೊಟ್ಟೆ ಉರಿಸಿಕೊಂಡಿದ್ದ.

ಆದರೆ ಆಗಿನ ಅಸೂಯೆಯಲ್ಲಿ, ಇಂದು ಅವನ ಮನಸ್ಸಿನಲ್ಲಿ ಮೂಡಿದ ಅಸೂಯೆಯ ತೀವ್ರತೆ ಇರಲಿಲ್ಲ.

ಅದೆಲ್ಲಾ ಕೇಳಿಕೆಯ ಮಾತು—ಈಗ, ಎಂದಾದರೊಂದು ದಿನ ಒಬ್ಬ ನಿರ್ಮಾಪಕ ಹೆಗಲಮೇಲೆ ಕೈಹಾಕಿ ಸುಖಿಸಬಹುದಾದ ಹೆಣ್ಣು ಅವನ ಇದುರಿನಲ್ಲೇ ಇದೆ—

ಅವನಲ್ಲೂ ಉತ್ಕಟ ಬಯಕೆಗಳನ್ನು ಕೆರಳಿಸುತ್ತಾ.

ಯಾರಿಗೋ ಆಗಬಹುದಾದ ವಸ್ತು—ತನಗೇ ಆಗಬಾರದೇಕೆ ?

ಇನ್ನಾರಿಗೂ ಆಕೆಯನ್ನು ಒಪ್ಪಿಸಲು ಕರೆದೊಯ್ಯುತಿದಾನೆ ವ್ಯಾಸರಾಯ—ಅಲ್ಪ ಲಾಭದಪೇಕ್ಷೆಗೆ. ನಿಜ—ಅದಕ್ಕಿಂತ ಹೆಚ್ಚಿನ ಆಸಕ್ತಿ, ಈಕೆಯಲ್ಲಿ ಅವನಿಗೆ ಏನಿರಲು ತಾನೇ ಸಾಧ್ಯ ?

ಅವನಿಗಿರುವುದು ಲಾಭಾಪೇಕ್ಷೆ—

ಹಾಗಿದ್ದರೆ, ತಾನೇ ಅವನಿಗೆ ಲಾಭ ಕೊಡಲು ತಯಾರಾದರೆ—

'ರೆ'ಯ ರೆಕ್ಕೆಗಳ ಮೇಲೆ ಕುಳಿತು ಅವನ ಮನಸ್ಸು, ಯಾವ ಯಾವೋ ಬಯಕೆಗಳ ಲೋಕದಲ್ಲಿ ಸುತ್ತಿ ಬಂತು. ಹಾಗೇ ಸುತ್ತಿ ಮತ್ತೆ ನೆಲಕ್ಕಿಳಿದಾಗ, ಅವನಿಗನಿಸಿತು—

ಅದು ಸಾಧ್ಯವಿಲ್ಲ.

ವ್ಯಾಸರಾಯನ ಬಗ್ಗೆ ತಾನು ಊಹಿಸಿದುದೆಲ್ಲಾ ನಿಜವಿದ್ದರೂ, ಆ ಮಾತನ್ನು, ತಾನು, ಆತನನ್ನು ಬಾಯಿಬಿಟ್ಟು ಕೇಳುವುದು ಸಾಧ್ಯವೇ ? ಹಾಗೆ ಕೇಳಿದರೆ ತನ್ನ ಮರ್ಯಾದೆ ಉಳಿದೀತೇ ?

ಈ ಬಯಕೆ—ಮರ್ಯಾದೆಗಳ ಹೋರಾಟದಲ್ಲಿ ಬಳಲಿ ಮೂರ್ತಿ, 'ಏನಾದರಾಗಲಿ, ಈ ಹುಡುಗಿಯ ವಿಷಯ ಅವನಿಂದ ಆದಷ್ಟು ತಿಳಿದುಕೊಳ್ಳಬೇಕು' ಎಂಬ ತೀರ್ಮಾನಕ್ಕೆ ಬಂದ.

೧೧

‘ ನಿಜ, ನಿಜ, ಅವನ ಬಾಯಿ ಬಿಡಿಸಬೇಕು.’

ಮೂರ್ತಿ ಈ ಮಾತನ್ನು ಅಂದುಕೊಳ್ಳುತ್ತಿರುವಾಗಲೇ, ತಿಂಡಿ ತೆಗೆಸಿಕೊಂಡು ಬರಲು ಹೋದ ವ್ಯಾಸರಾಯ, ಹೋಟಲು ಹುಡುಗನೊಂದಿಗೆ ಮೂರು ಜನಕ್ಕೆ ಆಗುವಷ್ಟು ತಿಂಡಿ ಕಾಫಿ ತೆಗೆಸಿಕೊಂಡು ಬಂದ.

ಗಾಡಿಯೊಳಗೆ ಬಂದವನೇ ವ್ಯಾಸರಾಯ, ಹಣೆಯ ಮೇಲಿನ ಬೆವರು ಹನಿಗಳನ್ನು, ಹೆಗಲ ಮೇಲಿದ್ದ ಉತ್ತರೀಯದ ತುದಿಯಿಂದ ಒರಸಿಕೊಳ್ಳುತ್ತಾ–

“ ಥರ್ಡ್‌ಕ್ಲಾಸು ಜನ ಅಂದ್ರೆ, ರೈಲಿನೋರ ದೃಷ್ಟೀಲಿ ಥೇಟ್ ಬೇವಾರ್ಸಿಗಳು.”

—ಎಂದ ಅಸಮಾಧಾನ ತುಂಬಿದ ಧ್ವನಿಯಲ್ಲಿ.

“ ಏಕೆ ಹಾಗನ್ತೀರಾ ”

“ ಅಷ್ಟಲ್ಲದೆ ಮತ್ತೇನು ಸಾರ್. ಹೋಟಲಲ್ಲಿ ಎರಡಾಣೆ ಒಗೆದರೆ ಕೂತ ಹತ್ತಿರ ಕಾಫೀ ತರೋರು ಕೂಡಾ, ಇಲ್ಲಿ, ನಾವು ಕಾಸಲ್ಲ, ಕಲ್ಲು ಕೊಡೋರ ಹಾಗೆ, ದುಡ್ಡೂ ತಗೊಂಡು ಇದ್ದ ಹತ್ರಾನೇ ಬಾಂತ ಅಂತಾರೆ. ನಮುಗೂ ಇದ್ದ ಹತ್ತಿರಕ್ಕೇ ತಿಂಡಿ ಸಪ್ಲಿ ಮಾಡಿದರೆ, ನಾವೂ ಫಸ್ಟ್‌ಕ್ಲಾಸ್ನೋರು ಕೊಡೋ ದುಡ್ಡು ಕೊಡೋದಿಲ್ಲಾಂತೀವೇ ? ನೀವೇನಾದ್ರೂ ಹೇಳಿ ಸಾರ್ – ಅವಮರ್ಯಾದೆ ಮಾಡಿಸಿಕೋಬೇಕು ಅಂತಿದ್ರೆ—ಈ ದರಬೇಶಿ ಥರ್ಡ್‌ಕ್ಲಾಸ್‌ನಲ್ಲಿ ಬರಬೇಕು ”

—ಎಂದು ತಿಂಡಿ – ತೀರ್ಥಗಳನ್ನು ತಂದ ಮಾಣಿಗೆ—

“ ಅಲ್ಲಿಡಯ್ಯಾ ”

—ಎಂದು ಅಪ್ಪಣೆ ಮಾಡಿದ.

ವ್ಯಾಸರಾಯ ಗಾಡಿಯೊಳಗೆ ಬರುತ್ತಿದ್ದ ಹಾಗೇ ಆತನಿಗೆ ಸ್ಥಳ ಕೊಡಲು ಸರಿದಿದ್ದ ಆಕೆ, ಈಗ ಮಾಣಿ ತಿಂಡಿಯನ್ನಿಡಲು ಸ್ಥಳ ಮಾಡಲು ಮತ್ತಷ್ಟು ಮೂಲೆಗೆ ಸರಿದಳು.

ಅದನ್ನು ಕಂಡ ಮೂರ್ತಿ ವ್ಯಾಸರಾಯನಿಗೆ—

" ನೀವಿಲ್ಲೇ ಬನ್ನಿ—ಅಲ್ಲಿ ಬಹಳ ಕಿಷ್ಕಿಂಧ ಆಗುತ್ತೆ "

—ಎಂದ, ತನ್ನ ಪಕ್ಕದಲ್ಲಿ ಜಾಗ ತೋರಿಸಿ.

" ಹಾಸಿಗೆ ಹಾಸಿದೀರಾ . . . . "

" ಚಿಂತೆಯಿಲ್ಲ. ಅದಕ್ಕೇನಂತೆ. ನೀವು ಕೂತರೆ ಹಾಸಿಗೆ ಮೈಲಿಗೆ ಯಾಗೋದಿಲ್ಲ."

ಮೂರ್ತಿ ಹೇಳಿದುದನ್ನು ಕೇಳಿ, ಆತ ಒಮ್ಮೆ ಮೂರ್ತಿಯ ಮುಖವನ್ನೂ, ಮತ್ತೊಮ್ಮೆ ಆಕೆಯ ಮುಖವನ್ನೂ ಮಿಕಮಿಕ ನೋಡಿ—

" ನೀವೇನೂ ತಿಳಿದುಕೊಳ್ಳದಿದ್ದರೆ ಸರಿ ಸಾರ್ "

—ಎಂದು ಮೂರ್ತಿಯ ಹಾಸಿಗೆಯ ಮೇಲೆ ಕುಳಿತುಕೊಂಡ.

" ಬೇಗ ತಿಂಡಿ ಕಾಫಿ ಮುಗಿಸಿ ಕೊಡಿ ಸಾರ್ – ರೈಲು ಹೊರಟು ಬಿಡುತ್ತೆ."

—ಎಂದು ಮಾತಿನಲ್ಲಿ ಹೊತ್ತುಕಳೆಯುತ್ತಿದ್ದ ಅವರನ್ನು ಹೋಟಲು ಮಾಣಿ ಎಚ್ಚರಿಸಿದ.

ಮಾಣಿ ತಂದಿದ್ದ ತಿಂಡಿಯನ್ನು ಅವರಿಬ್ಬರೂ ತೆಗೆದುಕೊಂಡು, ಆಕೆಗೂ ಕೊಟ್ಟರು. ಆದರೆ ಆಕೆ ಮುಟ್ಟಲಿಲ್ಲ. ವ್ಯಾಸರಾಯ ಒಲವಂತ ಮಾಡಿದರೂ –

" ನನಗೆ ಹಸಿವಿಲ್ಲ. ಕಾಫಿ ಕುಡಿತೀನಿ "

—ಎಂದಳು.

ಅದರ ಮೇಲೆ ಏನು ಹೇಳಿದರೂ ಆಕೆ ತಿಂಡಿ ಮುಟ್ಟಲಿಲ್ಲ.

" ನಿನಗೇಂತ ಏನೇನೋ ಕಟ್ಟಿಸಿಕೊಂಡು ಬಂದೆ. ಹೋಗ್ಲಿ ಬಿಡು – ನಿನಗೇ ತಿನ್ನೋ ಪುಣ್ಯವಿಲ್ಲ "

—ಎಂದು ವ್ಯಾಸರಾಯ, ನಿರ್ಯೋಚನೆಯಾಗಿ ತಿಂಡಿ ತಿನ್ನತೊಡಗಿದ.

ಆತ ಮೂರು ಜನಕ್ಕೆ ಎಂದು ಆರು ಜನಕ್ಕೆ ಆಗುವಷ್ಟು ತಿಂಡಿ ಕಟ್ಟಿಸಿ ಕೊಂಡು ತಂದಿದ್ದ. ಜಿಲೇಬಿ, ಬಾದೂಷಾ, ವಡೆ, ಪೂರಿ, ಉಪ್ಪಿಟ್ಟು—ಇದರ ಮೇಲೆ ಡಬ್ಬಲ್ ಡೋಸ್ ಕಾಫಿ, ಬೀಡಾ ಇಷ್ಟಿತ್ತು ಪರಿಕರ.

ಆದಷ್ಟರಲ್ಲಿ ಇಬ್ಬರ ಪಾಲಿನದನ್ನೂ ಒಬ್ಬನೇ ತಿಂದು ಮುಗಿಸಿ ವ್ಯಾಸ ರಾಯ—

" ಪ್ರಯಾಣದಲ್ಲಿ ಹೊಟ್ಟೆಗೆ ಮಾತ್ರ ಸಂಕೋಚ ಮಾಡಿಕೊಳ್ಳಬಾರದು

ಸಾರ್. ಸಿಕ್ಕಾಗ ತಿನ್ನದೆಹೋದ್ರೆ ಎಷ್ಟೋ ಸಲ, ಆಮೇಲೆ ಉಪವಾಸ ಬರಗೋ ಹೊತ್ತು ಬರುತ್ತೆ. ಆದ್ದರಿಂದ ಅವಕಾಶ ಸಿಕ್ಕಾಗ ಒಂದು ತುತ್ತು ಹೆಚ್ಚಿಗೇನೇ ಹೊಟ್ಟೆಗೆ ಹಾಕಬೇಕು "

—ಎಂದ.

" ಅದೆಲ್ಲಾ ನನಗೇನು ಗೊತ್ತು ಹೇಳಿ, ನಾನು ನಿಮ್ಮಷ್ಟು ಪ್ರಯಾಣ ದಲ್ಲಿ ಪಳಗಿದವನಲ್ಲ "

—ಎಂದ ಮೂರ್ತಿ.

" ಪ್ರಯಾಣದಲ್ಲಿ ಪಳಗಿದರೇ ಸಾಲದು ಸಾರ್, ನಾಟಕದ ಕಂಪನೀಲಿ ಪಳಗಬೇಕು. ಅಲ್ಲಿ ಎರಡು ತಿಂಗಳು ಕಾಲ ಹಾಕಿದರೆ, ಅನ್ನದ ಮಹತ್ವ ಏನೂಂತ ಅರ್ಥವಾಗುತ್ತೆ. 'ಅನ್ನವೇ ಬ್ರಹ್ಮ' ಅಂತ ಯಾರೋ ಋಷಿ ಬರೆದಿದಾನಂತಲ್ಲಾ ಸಾರ್, ಆ ಪುಣ್ಯಾತ್ಮ ನಾಟಕದ ಕಂಪನೀಲಿ ಇದ್ದು ಅನುಭವ ತಗೊಂಡೇ ಆ ಮಾತು ಬರೆದಿದಾನೇಂತ ಗ್ಯಾರಂಟಿಯಾಗಿ ಹೇಳ್ತೀನಿ."

—ಎಂದ ವ್ಯಾಸರಾಯ.

ಅವನ ಮಾತು ಕೇಳಿ ಮೂರ್ತಿಗೆ ನಗು ಬಂತು.

ಅವರಿಬ್ಬರೂ ತಿಂಡಿ ಮುಗಿಸಿ ಸರಸಸಲ್ಲಾಪದಲ್ಲಿ ತೊಡಗಿದುದನ್ನು ಕಂಡ, ಹೋಟಲು ಮಾಣಿ—

" ಬಿಲ್ ದುಡ್ಡು ಕೊಡಿ ಸಾರ್, ಹೊತ್ತಾಯ್ತು."

—ಎಂದ, ತನ್ನ ತಟ್ಟೆ ಬಟ್ಟಲುಗಳನ್ನು ಜೋಡಿಸಿಕೊಂಡು.

" ನಾಲ್ಕು ರೂಪಾಯಿ ಹತ್ತಾಣೆ."

—ಎಂದ ಮಾಣಿ.

" ಅದ್ಹ್ಯಾಗಯ್ಯಾ ಅಷ್ಟಾಯ್ತು – ಅಷ್ಟು ದುಡ್ಡಿಗೆ ಮೂರು ಜನಕ್ಕೆ ಊಟಾನೇ ಆಗ್ತಿತ್ತಲ್ಲ."

—ವ್ಯಾಸರಾಯ ಗೊಣಗಿದ.

" ಊಟ ಆಗಿತ್ತು ಆದರೆ ಈಗ ಸಮಾರಾಧನೇನೆ ಆಯ್ತಲ್ಲ."

—ಎಂದ ಮಾಣಿ, ಮಾತಿಗೆ ಮಾತು ಮುಟ್ಟಿಸಿ.

" ಹೂಂ – ನೀನೂ ಪರವಾಗಿಲ್ಲಾ ಕಣೋ ಮರಿ – ಮಾತು ಕಲಿತಿ ದೀಯ. ನೀನೂ ಕಂಪನೀಲಿ ಸರ್ವೀಸ್ ಮಾಡಿದೀಯೋ ? "

" ಅವೆಲ್ಲಾ ಯಾಕೆ ಸಾರ್ ದುಡ್ಡು ಕೊಡಿ. ಹೊತ್ತಾಯಿತು. ಸಾಹುಕಾರ್‍ರು ರೇಗ್ತಾರೆ."

—ಮಾಣಿ ಮಾತು ಮುರಿದ.

" ಅಷ್ಟು ದುಡ್ಡು ತಗೋತೀಯಾ – ನಗನಗ್ತಾ ಮಾತು ಕೂಡ ಆಡೋದಿಲ್ವಲ್ಲೋ ಮಂಕೆ."

—ಎಂದು ವ್ಯಾಸರಾಯ ದುಡ್ಡು ಕೊಡಲು ಜೋಬಿನಲ್ಲಿ ತಡಕಾಡ ತೊಡಗಿದ.

ಆದರೆ ಮೂರ್ತಿ, ವ್ಯಾಸರಾಯ ತನ್ನ ಜೇಬಿನಿಂದ ದುಡ್ಡು ತೆಗೆಯುವುದಕ್ಕೆ ಅವಕಾಶವನ್ನೇ ಕೊಡದೆ, ತಾನೇ ಪರ್ಸು ತೆಗೆದು ಐದು ರೂಪಾಯಿನ ನೋಟನ್ನು ಮಾಣಿಗೆ ಕೊಟ್ಟ.

" ಚಿಲ್ಲರೆ ಇಲ್ಲವಲ್ಲಾ ಸಾರ್ . . . . "

—ಎಂದ ಮಾಣಿ.

" ಬೇಡ ನೀನೇ ಇಟ್ಕೊಕೋ."

—ಎಂದ ಮೂರ್ತಿ.

ಆ ಮಾತು ಕೇಳಿ ಮಾಣಿ ಮಂದಸ್ಮಿತನಾಗಿ ' ಸೆಲ್ಯೂಟ್ ' ಹೊಡೆದು ತಟ್ಟೆ ಬಟ್ಟಲು ಸಾಗಿಸಿಕೊಂಡು ಕೆಳಗಿಳಿದ.

" ಹೂ, ಬೆಳಿಗ್ಗೆ ಎದ್ದು ಬೆಕ್ಕಿನ ಮುಖ ನೋಡಿದ್ದಾಂತ ಕಾಣುತ್ತೆ. ಅಲ್ಲಾ . . . . ಸಾರ್ . . . . ನೀವು ಹೀಗೆ ಮಾಡೋದೇ ? "

—ಎಂದ ವ್ಯಾಸರಾಯ ತುಂಬಾ ಅಸಮಾಧಾನವಾದವನಂತೆ.

" ಏಕೆ ? "

" ಎಲ್ಲಾರ ದುಡ್ಡೂ ನೀವೇ ಕೊಟ್ಬುಬಿಡೋದೇ . . . . "

" ಅದರಲ್ಲೇನು ತಪ್ಪು ? "

" ತಪ್ಪಲ್ಲ . . . . "

" ಸರಿ ಮತ್ತೆ – ಜೊತೇಲಿ ಪ್ರಯಾಣ ಮಾಡೋರು – ಯಾರು ಕೊಟ್ಟರೇನು ? ಅಷ್ಟರಲ್ಲಿ ಏನು ಸಂಪತ್ತು ಕೊಳ್ಳೆ ಹೋಗೋದು. ಇರಲಿ ಬಿಡಿ— ಇದು ತಗೊಳ್ಳಿ—ಹಚ್ಚಿ "

—ಎಂದು ಮೂರ್ತಿ, ವ್ಯಾಸರಾಯನಿಗೆ ಸಿಗರೇಟು ಪ್ಯಾಕೆಟ್ ಕೊಟ್ಟ

ವ್ಯಾಸರಾಯ ಮೂರ್ತಿ ಕೊಟ್ಟ ಸಿಗರೇಟ್ ಪ್ಯಾಕೆಟ್ಟನ್ನು ಹಿಂದೆ ಮುಂದೆ ತಿರುಗಿಸಿ ಕೇಳಿದ.

" ಪ್ಲೇಯರ್ಸ್ (Players). ಈಗೆಷ್ಟಿದೆ ಸಾರ್ ಇದು ಪ್ಯಾಕೆಟ್ಟಿಗೆ."

" ಹದಿಮೂರುವರಾಣೆ."

" ಭಾಳ ದುಬಾರಿ ಆಗ್ಹೋಯ್ತು. ಒಂದಕ್ಕೆ ಒಂದೂವರಾಣೆ ಬೀಳುತ್ತೆ ಅಲ್ವೇ ? "

" ಹೂ."

" ಬಡವರಿಗೆ ಒಪ್ಪತ್ತಿನ ಊಟ ಆಗುತ್ತೆ—ನೀವು ಐದು ನಿಮಿಷದಲ್ಲಿ ಸುಟ್ಟುಹಾಕೋದು."

—ಎಂದು ಮೂರ್ತಿಯ ದುಂದುಗಾರಿಕೆಯನ್ನು ಟೀಕಿಸುತ್ತಲೇ, ವ್ಯಾಸ ರಾಯ ಸಿಗರೇಟ್ ತೆಗೆದು ಹೊತ್ತಿಸಿ, ಬೀಡಾ ಬಾಯಿಗೆ ಹಾಕಿಕೊಂಡು ಜಗಿಯುತ್ತಾ, ಆಕೆಗೆ—

" ಬೀಡಾನಾದ್ರೂ ಹಾಕಿಕೋ "

—ಎಂದ.

ಆಕೆ ಅದೂ ತನಗೆ ಬೇಡವೆಂದು ತಲೆಯಾಡಿಸಿದಳು

" ನಿಮ್ಮ ಮನೆಯವರು ತುಂಬಾ ಸಂಕೋಚದ ಸ್ವಭಾವದವರೂಂತ ಕಾಣುತ್ತೆ. ಏನೂ ಮುಟ್ಟಲೇ ಇಲ್ಲ. ಹೋಗಲಿ—ಅವರಿಗೆ ಈ ಹಣ್ಣಾದರೂ ಕೊಡಿ "

—ಎಂದು ಮೂರ್ತಿ, ತಾನು ಕೊಂಡ ಕಿತ್ತಲೆ ಹಣ್ಣುಗಳಲ್ಲಿ ಎರಡನ್ನು ತೆಗೆದು ವ್ಯಾಸರಾಯನ ಕೈಗೆ ಕೊಟ್ಟ.

" ಇದು ಬೇರೆ ಇತ್ತೇ . . . . "

—ಎಂದು ವ್ಯಾಸರಾಯ ಕಿತ್ತಲೆ ಹಣ್ಣನ್ನು ಕೈಯಲ್ಲಿ ಆಡಿಸುತ್ತಾ ಮೂರ್ತಿಯ ಮುಖವನ್ನು ಸೂಕ್ಷ್ಮವಾಗಿ ನೋಡಿ, ಆಕೆಯತ್ತ ಹಣ್ಣಿದ್ದ ಕೈಯನ್ನು ಚಾಚಿ—

" ತಗೋ—"

—ಎಂದ.

ಆಕೆ ಈಗಲಾದರೂ ಹಣ್ಣು ತೆಗೆದುಕೊಳ್ಳುತ್ತಾಳೋ ಇಲ್ಲವೋ ನೋಡ

ಬೇಕೆಂದು ಮೂರ್ತಿ ಆಕೆಯನ್ನೇ ನೋಡುತ್ತಿದ್ದ. ಆಕೆಯೂ ಅವನ ಕಡೆ ನೋಡಿ, ಮಿಂಚಿನ ವೇಗದಲ್ಲಿ ದೃಷ್ಟಿಯನ್ನು ವ್ಯಾಸರಾಯನತ್ತ ಹೊರಳಿಸಿ—

" ಬೇಡ "

—ಎಂದು ತಲೆ ಅಲ್ಲಾಡಿಸಿದಳು.

" ಛೆ, ಛೆ, ಹಾಗನ್ಬಾರ್ದು. ಯಾರೇ ಆಗ್ಲಿ—ಹಣ್ಣು, ಹಾಲು ವಿಶ್ವಾಸದಿಂದ ಕೊಟ್ರೆ ಬೇಡ ಅನ್ನಬಾರದು. ಎಷ್ಟು ವಿಶ್ವಾಸದಿಂದ ಕೊಡ್ತಾರೋ, ಅಷ್ಟೇ ವಿಶ್ವಾಸದಿಂದ ತಗೋಬೇಕು. 'ಅನ್ನ ಕೊಟ್ಟೋನು ಚಿನ್ನ ಕೊಟ್ಟ, ಹಣ್ಣು ಕೊಟ್ಟೋನು ಹೃದಯ ಕೊಟ್ಟ' ಅಂತ ನಮ್ಮ ಕಂಪನಿ ನಾಟಕ ಬರೆಯೋ ಶಾಸ್ತ್ರಿಗಳು ಹೇಳ್ತಾ ಇದ್ರು ಸಾರ್. ಹೆಂಗಸ್ರಿಗೆ ಅದೆಲ್ಲಾ ಏನು ಗೊತ್ತು ಹೇಳಿ ? ತಗೋ . . . . ತಗೋ . . . . ಬೇಡಾನ್ನಬಾರದು—ಬೇಕಾದ್ರೆ ಈಗ್ಲೇ ತಿನ್ನಿ. ಇಲ್ದೇಹೋದ್ರೆ ಹತ್ತಿರ ಇಟ್ಟುಕೊಂಡಿದ್ದು ಬೇಕಾದಾಗ ತಿನ್ನಿ "

—ಎಂದು ಎಳೆಯ ಮಕ್ಕಳನ್ನು ಪುಸಲಾಯಿಸುವವನಂತೆ ಹೇಳಿದ ವ್ಯಾಸರಾಯ.

ಆತನ ಮಾತು ಕೇಳಿ ಮೂರ್ತಿಗೆ ನಗು ಬಂದಂತೆಯೇ ಆಕೆಯ ಮುಖದ ಮೇಲೂ ಮಂದಹಾಸ ಸುಳಿಯಿತು.

ಆಕೆಯ ಮುಖದ ಮೇಲೆ ಮಂದಹಾಸ ಮಿನುಗಿದಾಗ, ಕತ್ತಲಲ್ಲಿ ಕರಗಿದ್ದುದು, ಮಿಂಚು ಹೊಳೆದಾಗ ಚಕ್ಕನೆ ಕಂಡು ಮಾಯವಾಗುವಂತೆ, ಆ ಮಂದಹಾಸದ ಕಾಂತಿಯಲ್ಲಿ, ಅದುವರೆಗೂ ದುಃಖದ ಮೋಡದಡಿಯಲ್ಲಿ ಹುದುಗಿದ, ಆಕೆಯ ಮುಖದ ಸಹಜಲಾವಣ್ಯ ಹೊರಚಿಮ್ಮಿ, ಕಣ್ಣು ಕೋರೈಸಿ, ಮೂರ್ತಿಯ ಹೃದಯವನ್ನು ಒತ್ತಿ ಹಿಡಿದಂತಾಯಿತು.

ಆ ನಗು—

ಆಕೆಯ ಮುಖ ಸೌಂದರ್ಯದ ಉಜ್ವಲತೆಗೆ ಮಿಂಚಿನ ಹೊಳಪು ಕೊಡುವ ನಗು—

ಆಕೆಯ ಕನ್ನಡಿ ಕಪೋಲದಲ್ಲಿ ಸಣ್ಣ ಗುಳಿ ಬೀಳಿಸಿ, ಕಣ್ಣನ್ನು ಕೆರಳಿಸುವ ನಗು—

ಆ ನಗುವಿಗಾಗಿ, ಹಣ್ಣನ್ನೇ ಅಲ್ಲ, ಜಗತ್ತನ್ನೇ ಬೇಕಾದರೂ ಕೊಡಬಹುದು ಎನಿಸಿತು ಮೂರ್ತಿಗೆ.

ಆ ಮುಖದಲ್ಲಿ, ಆ ನಗು ಮಿನುಗಿದಾಗ, ಆಕೆ, ಅಪರಿಚಿತಳಂತೆ ದೂರ ಕುಳಿತಿರದೆ, ತನ್ನ ತೋಳೊಳಗೆ ಇದ್ದಿದ್ದರೆ—

ಮೂರ್ತಿಯ ಮೈಯ ರಕ್ತ ಇದ್ದಕ್ಕಿದ್ದಂತೇ ಕಾವೇರಿ, ವೇಗವಾಗಿ ಹರಿಯಲಾರಂಭಿಸಿ, ರಕ್ತದ ವೇಗಕ್ಕೆ ಮಿಡಿಯುವ ಹೃದಯದ ಮಿಡಿತ ಪಕ್ಕದಲ್ಲಿ ಕುಳಿತಾತನಿಗೂ ಕೇಳಿಸಿತೇನೋ ಎನಿಸಿತು ಮೂರ್ತಿಗೆ.

ವ್ಯಾಸರಾಯನು ಆ ಭಾವನೆಯನ್ನು ಬಲಿಸುವಂತೇ ಮೂರ್ತಿಯ ಮುಖ ವನ್ನು ನೋಡುತ್ತಿದ್ದ. ಹಾಗೇ ನೋಡನೋಡುತ್ತಾ ಆತನ ಮುಖ ಗಂಭೀರ ವಾಯಿತು.

ಒಂದು ಗಳಿಗೆ ಏನೋ ಚಿಂತಿಸುತ್ತಾ ಹಣ್ಣನ್ನು ಕೈಯಲ್ಲೇ ಆಡಿಸುತ್ತಿದ್ದು, ಬಳಿಕ ಏನೋ ನಿರ್ಧಾರಕ್ಕೆ ಬಂದಂತೆ—

" ಹೂ, ತಗೋ."

—ಎಂದು ಕಿತ್ತಲೆ ಹಣ್ಣುಗಳನ್ನು ಆಕೆಯ ತೊಡೆಗಳ ಮೇಲಿಟ್ಟ.

ಹಣ್ಣನ್ನು ಅವನು ಹಾಗೆ ಇಟ್ಟ ರೀತಿಯಲ್ಲೂ ಏನೋ ಉದ್ದೇಶ ವಿದ್ದಂತಿತ್ತು. ಅಲ್ಲದೆ, ಹಣ್ಣನ್ನಿಡುವಾಗ, ಆತ ಆಕೆಯ ತೊಡೆಯನ್ನು ಚಿಗುಟಿದನೋ ಏನೋ—ಆಕೆ ಸಿಟ್ಟುಬಿದ್ದಳು.

" ಹಣ್ಣಿಡಬಾರದು, ಹೂ ಬಾಡಿಸಬಾರದು—ತಗೋ ಇಂದಿರಾ. ಒಂದು ತೊಳೇನಾದ್ರೂ ತಿಂದು ಅವರಿಗೆ, ಕೊಟ್ಟದ್ದು ಸಾರ್ಥಕ ಆಯ್ತು ಅನಿಸು "

—ಎಂದ ವ್ಯಾಸರಾಯ ನಗುತ್ತಾ.

ಆತನ ನಗುವಿನಲ್ಲಿ ಬರೀ ಹಾಸ್ಯವೇ ಅಲ್ಲದೆ, ಮತ್ತೇನೋ ಇತ್ತು. ಆಕೆ ಏನೂ ಮಾತಾಡದೆ, ಯಾಂತ್ರಿಕವಾಗಿ ಹಣ್ಣನ್ನು ಸುಲಿದು ಒಂದು ತೊಳೆ ಬಾಯಿಗೆ ಹಾಕಿಕೊಂಡಳು.

ಆ ಹಣ್ಣೂ ಬಹು ಕಷ್ಟದಿಂದ ಆಕೆಯ ಗಂಟಲೊಳಗೆ ಇಳಿದಂತೆ ತೋರಿತು.

ಆಕೆ ಆ ತೊಳೆಯನ್ನು ತಿನ್ನುತ್ತಿರುವಾಗಲೇ, ರೈಲು ಗಟ್ಟಿಯಾಗಿ ಸಿಳ್ಳು ಹಾಕಿ, ಹೊರಡುವ ಸೂಚನೆ ಕೊಟ್ಟು ಜಗ್ಗೆಂದು ಗಾಡಿಯನ್ನು ಹಿಂದಕ್ಕೆ ಒತ್ತಿ ಮುಂದಕ್ಕೆ ಎಳೆಯಿತು.

ಆ ತುಯ್ಯಾಟದಲ್ಲಿ, ಆಕೆಯ ತೊಡೆಯ ಮೇಲಿದ್ದ ಒಂದು ಹಣ್ಣು

ಕೆಳಗುರುಳಿತು. ಆಕೆ ಅದು ಕೆಳಗೆ ಉರುಳಿದುದೂ ಅರಿವಿಲ್ಲದಂತೆ ಸುಮ್ಮನೆ ಕುಳಿತಿದ್ದಳು.

ರೈಲು ಮುಂದಕ್ಕೆ ಹೊರಟಿತು.

ಈ ಕೆಳಗೆ ಬಿದ್ದ ಹಣ್ಣು ಅಲ್ಲೇ ಇತ್ತು—

ವ್ಯಾಸರಾಯ ಅದನ್ನು ನೋಡಿದರೂ ನೋಡದವನಂತೆ ಕುಳಿತಿದ್ದ.

ಅದನ್ನು ನೋಡಿ ಮೂರ್ತಿಯೇ ಧೈರ್ಯ ಮಾಡಿ—

" ಹಣ್ಣು ಕೆಳಗೆ ಬಿತ್ತು ನೋಡಿ "

—ಎಂದು, ಕೆಳಗೆ ಬಿದ್ದ ಹಣ್ಣನ್ನು ಎತ್ತಿ ಆಕೆಗೆ ಕೊಟ್ಟ.

ಆಕೆಯೂ ಯಾಂತ್ರಿಕವಾಗಿ ಹಣ್ಣಿನತ್ತ ಕೈ ಚಾಚಿದಳು.

ರೈಲಿನ ಕುಲುಕಾಟದಲ್ಲಿ, ಹಣ್ಣು ಕೊಡುವಾಗ ಇಬ್ಬರ ಕೈಯೂ ಸೋಕಿತು. ಮೂರ್ತಿಯ ಮೈಯಲ್ಲಿ ಬಳ್ಳಿ ಮಿಂಚು ಚಿಮ್ಮಿತು.

ತಮ್ಮಿಬ್ಬರ ಕೈ ಸೋಕಿದುದನ್ನು ವ್ಯಾಸರಾಯ ನೋಡಿದನೇನೋ ಎಂದು ಮೂರ್ತಿ, ತಟಕ್ಕನೆ ಆತನತ್ತ ತಿರುಗಿ ನೋಡಿದ.

ವ್ಯಾಸರಾಯ ಯಾವುದನ್ನೂ ನೋಡದವನಂತೆ ಸಿಗರೇಟು ಎಳೆಯುತ್ತಿದ್ದ.

# ೧೨

ಇಂದಿರಾ !

ಮೊಟ್ಟ ಮೊದಲ ಬಾರಿಗೆ ವ್ಯಾಸರಾಯ ಬಾಯಲ್ಲಿ ಆಕೆಯ ಹೆಸರನ್ನು ಕೇಳಿ ಮೂರ್ತಿಗೆ, ನಿರ್ಗಂಧ ವಾತಾವರಣದಲ್ಲಿ ಇದ್ದಕ್ಕಿದ್ದ ಹಾಗೇ ಎಲ್ಲೋ ನವಿರಾದ ಪರಿಮಳದ ಎಳೆ ಸುಳಿದಂತೆ ಭಾಸವಾಯಿತು.

ಆ ಹೆಸರು ಕೇಳಿದ ಬಳಿಕ, ಮತ್ತೊಮ್ಮೆ ಆಕೆಯ ಮುಖ ನೋಡಿದ— ಅದುವರೆಗೂ ಆಕೆಯ ಮುಖವನ್ನೇ ನೋಡದವನಂತೆ.

ಇಂದಿರಾ—

ಎಷ್ಟು ಸುಂದರವಾದ ಹೆಸರು—ಆ ಮುಖಕ್ಕೆ ತಕ್ಕ ಹೆಸರು.

ಆದರೆ ಆ ಹೆಸರು, ಮುಖದ ಹಿಂದಿದ್ದ ಹೃದಯ ಮಾತ್ರ ಮೂರ್ತಿಗೆ ಇನ್ನೂ ಅಪರಿಚಿತವಾಗೇ ಉಳಿದಿತ್ತು. ಆ ಪರಿಚಯಕ್ಕಾಗಿ ಮೂರ್ತಿಯ ಹೃದಯ ಹಾರೈಸುತ್ತಿತ್ತು.

ನನಗೆ ಆ ಬಯಕೆ ಇತ್ತು—

ಆಕೆಗೆ—?

ತನಗೆ ಆಕೆಯೊಂದಿಗೆ ಮಾತನಾಡಬೇಕು, ಆಕೆಯ ಹೃದಯದ ಪರಿಚಯ ಮಾಡಿಕೊಳ್ಳಬೇಕು ಎಂಬ ಬಯಕೆ ಇರುವಂತೆ, ಆಕೆಗೂ ಆ ಬಯಕೆ ಇದೆಯೇ ?

ಪರಸ್ಪರ ಸಾಮೀಪ್ಯಕ್ಕಾಗಿ, ಆಕೆಯ ಹೃದಯವೂ ತನ್ನ ಹೃದಯದಷ್ಟೇ ಕಾತರಿಸುತ್ತಿದೆಯೇ ?

ಅವರೀರ್ವರ ನಡುವೆ ಇದ್ದುದು, ಕೇವಲ ಎರಡು ಸೀಟುಗಳ ನಡುವಿನ ಅಂತರ ಮಾತ್ರ. ಅಷ್ಟೇ ದೂರ— ಆದರೂ ಎಷ್ಟು ದೂರ !

ಅಷ್ಟೇ ದೂರದ ಇಬ್ಬದಿಯಲ್ಲಿ, ಆ ದೂರವನ್ನು ಇಬ್ಬರಲ್ಲಿ ಒಬ್ಬರೂ ಅತಿಕ್ರಮಿಸದಂತೆ, ಆ ದೂರವನ್ನು ಹೆಚ್ಚಿಸಲಾಗದ ಪರಿಸ್ಥಿತಿಯಲ್ಲಿ ಕುಳಿತಿದ್ದರು. ಆಕೆಗೆ ಹೇಗೋ—ಆದರೆ ಅವನ ಪಾಲಿಗೆ ಮಾತ್ರ ಆ ಸೀಟುಗಳ ನಡುವಿನ ಅಂತರ, ಲಕ್ಷ್ಮಣ, ರಾವಣನಿಗೆ ಅಡ್ಡಿಯಾಗಿ, ಸೀತಾದೇವಿಯ ಇದಿರು ಎಳೆದ ರಕ್ಷಾರೇಖೆಯಂತಿತ್ತು.

ಹಾಗೆ ಕುಳಿತ ಅವರೀರ್ವರ ನಡುವೆ ಏನೋ ಒಂದು ಬಗೆಯ ವಿದ್ಯುತ್ —ವಾತಾವರಣ ಮೂಡಿ, ಮೂರ್ತಿಯನ್ನು ಆ ರೇಖೆಯಾಚೆ ಸೆಳೆಯುತ್ತಿತ್ತು.

ಅವನ ಮೈಯೊಳಗಿನ ಯೌವ್ವನದ ಉನ್ಮತ್ತ ಕೆಚ್ಚು, ಗಳಿಗೆಗಳಿಗೆಗೂ ಮತ್ತಷ್ಟು ಉದ್ಧಟವಾಗಿ—

'ದಾಟು, ಈ ಕಾವಲುಗೆರೆಯನ್ನು ದಾಟು.'

—ಎನ್ನುತ್ತಿತ್ತು.

ಅವನು – ನಾಟಕದ ಕಂಪನಿಗಳಲ್ಲಿ ಪಳಗಿದ ಸಿನಿಮಾ ತಯಾರಿಕರ ಏಜಂಟು. ಆಕೆ – ಸಿನಿಮಾ ಸೇರಲು ಹೋಗುತ್ತಿರುವಾಕೆ.

ಆಕೆಗೂ, ಆತನಿಗೂ ಏನೋ ಸಂಬಂಧವಿರಬಹುದು – ಗಂಡಹೆಂಡಿರ ಸಂಬಂಧವಂತೂ ಇಲ್ಲ (ಕರಿಮಣಿಯ ಸರವಿಲ್ಲದ ಆಕೆಯ ಕತ್ತೇ ಆ ಮಾತಿಗೆ ಸಾಕ್ಷಿಯಾಗಿತ್ತು.)

ಎಲ್ಲಕ್ಕಿಂತ ಹೆಚ್ಚಾಗಿ, ಆಕೆ ಯಾರೂ ಬಯಸುವಂಥ ರೂಪವತಿ.

ಯಾರಾದರೂ ಬಯಸಬಹುದಾದರೆ, ತಾನು ಆಕೆಯನ್ನು ಬಯಸುವುದರಲ್ಲಿ ತಪ್ಪೇನು ?

'ಆದರೆ . . . . ಆದರೆ . . . .'

ಅವರೊಳಗಿನ ವಿವೇಚನೆ ಅವನಿಗೆ ಬುದ್ಧಿ ಹೇಳಿತು—

'ಇದು ನೀನು ಅಪರಿಚಿತ ಸ್ತ್ರೀಯ ವಿಷಯವಾಗಿ ಮಾಡಬಹುದಾದ ಯೋಚನೆಯಲ್ಲ. ಪರಸ್ತ್ರೀಯರನ್ನು ಶಯ್ಯಾಲಂಕಾರದಂತೆ ಕಾಣುವುದು ತಪ್ಪು.'

'ನಿಜ – ಆದರೆ ಈ ಸಂದರ್ಭದಲ್ಲಿ ಅದು ತಪ್ಪೇ ? '

—ಅವನ ಯೌವ್ವನ ವಿವೇಚನೆಗೆ ಸವಾಲು ಹಾಕಿ ಕೇಳಿತು.

ಆಕೆ ವಿವಾಹಿತೆಯಲ್ಲ; ವಿವಾಹವೇದಿಕೆಗೆ ತೆರಳುತ್ತಿರುವ ಕನ್ಯೆಯೂ ಅಲ್ಲ – ತನಗೇ ತಿಳಿದಂತೆ, ನೂರಕ್ಕೆ ತೊಂಭತ್ತೊಂಭತ್ತು ವೇಳೆ ಕಲೆಯ ಹೆಸರಿನಲ್ಲಿ ಕಾಮದ ಮಾರುಕಟ್ಟೆಯಾದ ಚಿತ್ರರಂಗಕ್ಕೆ ಹೋಗುತ್ತಿರುವಾಕೆ—

ಹೂ – ಹೀಗೂ ಹೇಳಬಹುದು – ಮಾರಾಟದ ವಸ್ತು. ಅಲ್ಲ ಎಂದು ಯಾರು ತಾನೇ ಹೇಳಲು ಸಾಧ್ಯ ?

ಹಾಗಿರುವಾಗ ಈಕೆಯನ್ನು ತಾನು ಬಯಸುವುದು ತಪ್ಪೇ,

ಅಸಹಜವೇ ? – ಅಲ್ಲವೆಂದೇ ತೋರಿತು, ಕಾಮುದ ಕಾವಳ ಕವಿಯುತ್ತಿದ್ದ ಮೂರ್ತಿಯ ಕಣ್ಣುಗಳಿಗೆ.

ಆಕೆ – ಇಂದಿರಾ – ಆ ಮೃದು ಮಧುರ ಹೆಸರಿನ, ಅಷ್ಟೇ ಸುಂದರ ದೇಹದ ಒಡತಿ —

ಆಕೆ ಯಾರ ಪಾಲೋ ಆಗುವುದರ ಬದಲು, ತನ್ನವಳಾದರೆ—(ಆಗ ಬಾರದೇಕೆ, ಅದಕ್ಕೇನು ಅಭ್ಯಂತರ ?)

ಆಕೆಗಾಗಿ ತನ್ನ ಪ್ರಾಣವನ್ನೂ ಒಪ್ಪಿಸಬಹುದು ಎಂದು ತೋರಿತು ಮೂರ್ತಿಗೆ. ನಿಜ – ಎಂಥ ಬಲಿದಾನವನ್ನೂ ಸಾರ್ಥಕಗೊಳಿಸುವಂಥದು ಆಕೆಯ ರೂಪ.

ಆದರೆ ತನಗೆ ಆಕೆಯನ್ನು ಪ್ರೀತಿಸಲಾಗಲಿ, ಆಕೆಗಾಗಿ ಏನಾದರೂ ಮಾಡುವುದಕ್ಕಾಗಲಿ ಅವಕಾಶ ಸಿಕ್ಕೀತೇ ? ಸಿಗಬಾರದು ಎಂದೇನೂ ಅಲ್ಲ— ಆದರೆ ಸಿಕ್ಕಬಹುದೇ ?

ಅಂಥ ಅವಕಾಶ ಸಿಕ್ಕಿದರೆ—

ನುರಾರು ಬಯಕೆಗಳ ಹೂಗಳ ಮಾಲೆಕಟ್ಟಿತು ಮೂರ್ತಿಯ ಮನಸ್ಸು —

ಆ ಬಯಕೆಗಳು ಬೆಳೆದಂತೆ, ಅವನಿಗೆ ಇದಿರು ಕುಳಿತ ಹೆಣ್ಣು, ಅವನ ಬಾಳಿನ ಬಹು ದೊಡ್ಡ ಸವಾಲಿನಂತೆ ತೋರಿದಳು.

ಜೀವನದಲ್ಲಿ ಎಷ್ಟೋ ಚೆಲುವೆಯರನ್ನು ಕಂಡು ಮೂರ್ತಿ 'ಅವರು ತನ್ನವರಾಗಬಾರದೇ ?' ಎಂದು ಬಯಸಿದ್ದ. ಅವರು ಅವನವರಾಗದೆ ವಿಫಲತೆಯ ನಿಟ್ಟುಸಿರಿಟ್ಟಿದ್ದ.

ಅವನ ಜೀವನದಲ್ಲಿ ಎಷ್ಟೋಬಾರಿ ಅವನಿಗೆ ಆ ಬಯಕೆ - ವಿಫಲತೆಯ ಅನುಭವವಾಗಿತ್ತು. ಅಂದು – ಇಂದು ಎನ್ನುವುದೇನು – ಆ ದಿನ ಮಧ್ಯಾಹ್ನವೂ ಜೋಗದಲ್ಲಿ ರೂಪವತಿಯೊಬ್ಬಳನ್ನು ಕಂಡಾಗ ಅವನಿಗೆ ಅದೇ ಅನುಭವ ವಾಗಿತ್ತು.

ಅವನ ಕಣ್ಣು ಬಯಸಿದವರಾರೂ ಅವನವರಾಗಿರಲಿಲ್ಲ. ಆಗುವುದು ಸಾಧ್ಯವೂ ಇರಲಿಲ್ಲ – ಅವನಿಗಿಂತ ಮುಂಚೆಯೇ ಮತ್ತೆ ಯಾರಾದರೊಬ್ಬರು ಆ ರೂಪದ ಯಜಮಾನರಾಗಿರುತ್ತಿದ್ದರು.

ಇಲ್ಲವೇ—

ಬಯಸಿದ ಹೆಣ್ಣು ತನ್ನದಾಗಬಹುದು ಎನಿಸಿದ ಸಂದರ್ಭದಲ್ಲೂ–ಅವನಿಗೆ ಮಾತ್ರ ಲಭ್ಯವಾಗುತ್ತಿದ್ದುದು ವಿಫಲತೆಯೇ.

ಅವನ ಕಾಲೇಜಿನ ಸಹಪಾಠಿ ಅಲಕನಂದೆಯ ಸಂದರ್ಭದಲ್ಲಿ – ಆದಾದುದೇ ಹಾಗೆ.

*　　*　　*　　*

ಅಲಕನಂದಾ—

ಮೂರ್ತಿ ಇಂಟರ್‌ಮೀಡಿಯಟ್ ಪರೀಕ್ಷೆಯನ್ನು ಮುಗಿಸಿಕೊಂಡು – ಕಾಲೇಜಿನಲ್ಲಿ ಬಿ.ಎ. ತರಗತಿಗೆ ಕಾಲಿಟ್ಟಾಗ, ಕಷ್ಟಪಟ್ಟು ಇಂಟರ್ ಪರೀಕ್ಷೆ ಪಾಸು ಮಾಡಿ, ಬಿ.ಎ. ಗೆ ಸೇರಿದುದು ಸಾರ್ಥಕವಾಯಿತು ಎನಿಸಿದಹುಡುಗಿ – ಅಲಕನಂದಾ !

ಅವಳು ರೂಪವತಿಯೋ ಅಲ್ಲವೋ, ಯಾರಿಗೂ ತಿಳಿಯದು —

ದಿನಕ್ಕೊಂದು ಬಗೆಯ ಬೆಡಗಿನ ಅಲಂಕಾರ ಮಾಡಿಕೊಂಡು, ತಲೆಗೆ ಪೂಸಿದ ಪರಿಮಳ ತೈಲದ ವಾಸನೆಯನ್ನು ಸೂಸುತ್ತಾ ಕಣ್ಣೆದಿರು ಸುಳಿದಾಗ, ಕಂಡವರ ಕಣ್ಣಿಗೆ ಕತ್ತಲು ಕವಿದಂತಾಗುತ್ತಿತ್ತು.

ಆಕೆಯ ಮುಖ—

ಅದನ್ನು ನೋಡಬೇಕು ಎನ್ನಿಸುತ್ತಿರಲಿಲ್ಲ – ನೋಡುತ್ತಿದ್ದ ಹಾಗೇ ಕಣ್ಣು, ಅವಳ ಅರೆತೆರೆದ ಸೆರಗಿನ ಮರೆಯಿಂದ, ತೀರಾ ಕೆಳಗೆ ಕತ್ತರಿಸಿದ ಬ್ಲೌಸಿನ ಇಣಕು ಗಂಡಿಯಿಂದ, ಉಬ್ಬಿ ಕಾಣುತ್ತಿದ್ದ ಸ್ತನದ್ವಯದಲ್ಲಿ ಕೇಂದ್ರೀಕೃತವಾಗುತ್ತಿತ್ತು.

ಆಕೆಗೂ, ತನ್ನ ಸ್ತನಸೌಭಾಗ್ಯವೇ, ತನ್ನ ಸೌಂದರ್ಯಸೌಧದ ಸ್ವರ್ಣ ಕಲಶವೆಂಬ ಅರಿವಿತ್ತೇನೋ – ಕುಳಿತಾಗ ಅವು ಎದ್ದು ಕಾಣಿಸುವಂತೆ, ಕುಳಿತು ಕೊಳ್ಳುತ್ತಿದ್ದಳು. ನಡೆಯುವಾಗ ಅವು, ಹಾರಲು ಸಿದ್ಧವಾಗಿ ಸೆಳೆದು ಹಿಡಿದ ಬಾಣದಂತೆ ಕಾಣುವಂತೆ, ತೊಡೆಗಳನ್ನು ವೈಯಾರದಿಂದ ಬಳುಕಿಸುತ್ತ ನಡೆಯುತ್ತಿದ್ದಳು.

ಅವಳು ನಡೆಯುವಾಗ, ಕುಳಿತಾಗ, ಅವಳನ್ನು ನೋಡಿದ ಮೂರ್ತಿಯ ಹೃದಯದಲ್ಲಿ ಉರಿ ಹೊತ್ತಿಸಿದಂತಾಗಿ, ತುಟಿ, ನಾಲಗೆಗಳು ಒಣಗುತ್ತಿದ್ದವು.

ಲೆಕ್ಚರರ್ ಹೇಳುತ್ತಿದ್ದ ಪಾಠದ ಟಿಪ್ಪಣಿ ಬರೆದುಕೊಳ್ಳುವುದನ್ನು ಬಿಟ್ಟು ಮೂರ್ತಿ, ತನ್ನ ಪುಸ್ತಕದಲ್ಲಿ ಅಲಕನಂದೆಯ ಹೆಸರನ್ನು, ಬರೆಯುತ್ತಾ, ಅವಳ ಅಂಗಲಾವಣ್ಯವನ್ನು ತನಗೆ ಬಂದ ಹಾಗೆ ಚಿತ್ರಿಸುತ್ತಾ ಕುಳಿತುಕೊಳ್ಳುತ್ತಿದ್ದ.

ಆದರೆ, ನಾಮಪಾರಾಯಣದಿಂದ, ಚಿತ್ರಲೇಖನದಿಂದ ಅವನ ಬಯಕೆ ತೀರಿರಲಿಲ್ಲ. ಅದು ತೀರಲು ಅವನಿಗೆ ಅವಳೇ ಬೇಕಾಗಿತ್ತು.

ಅವಳಿಗೆ ಅವನು?

ಎತ್ತರವಾದ ಹಿಮ್ಮಡಿಯ ಬೂಟು ಧರಿಸಿ—

(ಅಂಥ ಬೂಟು, ಹೆಣ್ಣಿನ ದೇಹದ ವಕ್ರವಿನ್ಯಾಸವನ್ನು ಬಹು ಸ್ಪಷ್ಟಗೊಳಿಸುತ್ತದೆ ಎಂಬ ಆಧುನಿಕ ಸೌಂದರ್ಯ ಶಾಸ್ತ್ರಜ್ಞರ ಹೇಳಿಕೆಯಲ್ಲಿ ಸ್ವಲ್ಪವೂ ಸುಳ್ಳಿಲ್ಲ ಎಂದು ಮೂರ್ತಿಗೆ ಮನವರಿಕೆಯಾದದ್ದು ಎತ್ತರವಾದ ಹಿಮ್ಮಡಿಯ ಬೂಟು ಧರಿಸಿದ ಅಲಕನಂದೆಯನ್ನು ನೋಡಿದಾಗಲೇ. ಆಕೆಯನ್ನು ನೋಡಿದಾಗ ಮೂರ್ತಿ) ನಡೆಯುವ ಪ್ರತಿಕ್ಷಣವೂ ತನ್ನ ದೇಹದ ಸಮತೋಲ (Equilibrium) ದ ಎಚ್ಚರಪಿಟ್ಟುಕೊಂಡು ನಡೆಯುವಂತೆ ಮಾಡುವ ಆ ಎತ್ತರವಾದ ಹಿಮ್ಮಡಿಗಳ ಬೂಟು (High Heeld Shoes) ಆಧುನಿಕ ಸೌಂದರ್ಯಪೋಷಕ ವಸ್ತುನಿರ್ಮಾಪಕರು ಸೃಷ್ಟಿಸಿದ ಅಸಮಾನ ಶಿಲ್ಪ ಎಂದುಕೊಂಡದ್ದೇ ಅಲ್ಲದೆ, ಅದನ್ನು ಮೊಟ್ಟಮೊದಲಬಾರಿಗೆ ತಯಾರಿಸಿದವನನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದ್ದ. ಅವನು ತಯಾರಿಸದಿದ್ದಲ್ಲಿ, ಅವನು ತಯಾರಿಸಿದುದನ್ನು ಚಲಚ್ಚಿತ್ರ ತಾರೆಯರು ತೊಟ್ಟು ಮೆರೆಯದಿದ್ದಲ್ಲಿ, ಅಲಕನಂದೆ ಅವನ ಕಣ್ಣುಗಳೆದಿರು ಹಾಗೆ ನಡೆಯುವುದು ಸಾಧ್ಯವಿತ್ತೆ? ಮೂರ್ಖರು – ಬರೆಯಲಾಗದ ಕಗ್ಗವನ್ನು ಸಾಹಿತ್ಯವೆಂದು ಬರೆದವರಿಗೆ, ಅರ್ಥವಾಗದ ಏನೋ ವೈಜ್ಞಾನಿಕ ಸಂಶೋಧನೆ ಮಾಡಿದವರಿಗೆ 'ನೋಬೆಲ್' (Noble) ಪಾರಿತೋಷಕ ಕೊಡುತ್ತಾರೆ. ನಿಜವಾಗಿಯೂ ಆ ಪಾರಿತೋಷಕ– ಅದು ಸಾರ್ಥಕವಾಗಬೇಕೆಂದಿದ್ದರೆ – ಹೆಣ್ಣಿನ ದೇಹಲಾವಣ್ಯಕ್ಕೆ ಕಳಶವಿಟ್ಟ, ಈ ಎತ್ತರ ಹಿಮ್ಮಡಿಯ ಬೂಟುಗಳನ್ನು ಸೃಷ್ಟಿಸಿದಾತನಿಗೇ ಸಲ್ಲಬೇಕಾಗಿತ್ತು! ಆದರೇನು ಮಾಡುವುದು – ಇದು ನೂರಕ್ಕೆ ತೊಂಭತ್ತು ಮಂದಿ ಮೂರ್ಖರಿರುವ ಜಗತ್ತು! ಇಲ್ಲಿ ಅಪಾತ್ರರಿಗೇ ಸನ್ಮಾನ!!)

'ಆ' ಎತ್ತರವಾದ ಹಿಮ್ಮಡಿಯ ಬೂಟುಗಳನ್ನು ಧರಿಸಿ, ಒಳಗೆ ಧರಿಸಿದ

ಕಾಮಾಸ್ತ್ರಹತವಾದ ಹೃದಯಗಳ ಕಸೂತಿಯ ಸಾಲುಚಿತ್ರವಿದ್ದ ಲಂಗ (Petticoat)ವೂ ಕಾಣುವಷ್ಟು ನವಿರಾದ ರೇಶಿಮೆಯ ಸೀರೆಯನ್ನು ಮೈಗೆ ಹತ್ತುವಂತೆ ಉಟ್ಟು, ಚೀನಾ ಬೀಸಣಿಗೆಯಂತೆ ಬಿಚ್ಚಿದ ಸೆರಗನ್ನು, ಕೆಂಪು ಉಗುರು ರಂಗು ಬಳಿದ ಬೆರಳುಗುರುಗಳು ತೋಳಿಯುವಂತೆ ಮುಂಗೈಯ ಮೇಲೆ ಧರಿಸಿ, ಆ ಕಂಕುಳಲ್ಲೇ ಪುಸ್ತಕಗಳನ್ನು ತಬ್ಬಿಕೊಂಡು, ಮುಡಿಯ ಹೂವು, ಮೈಗೆ ಲೇಪಿಸಿದ ಪರಿಮಳದ ಗಂಧವನ್ನು ಗಾಳಿಗೆ ಹಂಚುತ್ತಾ, ತುಟಿರಂಗಿನಿಂದ ರಂಗೇರಿದ ತುಟಿಗಳ ಮೇಲೆ ಮಂದಹಾಸ ತುಳುಕಿಸುತ್ತಾ, ಮಾಟವಾಗಿ ಕತ್ತರಿಸಿ, ಕಪ್ಪು ಹಚ್ಚಿಸಿದ ಹುಬ್ಬಿನ ಚೆಲುವು ಇಮ್ಮಡಿಯಾಗುವಂತೆ ಅತ್ತಿತ್ತ ಕಣ್ಣಾಲಿಗಳನ್ನು ಚಮುಕಿಸುತ್ತಾ—

ಅಲಕನಂದಾ—

ಅವನ ಇದುರಿಗೆ 'ಕಾರಿಡಾರ್'ನಲ್ಲಿ ನಡೆದಾಗ, ಮಾಟವಾದ ಕತ್ತನ್ನು ಮಣಿಸಿ ಸುತ್ತಲೂ ನೋಡಿಯೂ ನೋಡದಂತೆ ನೋಡಿ, ವೈಯಾರದಿಂದ ತರಗತಿಯಲ್ಲಿ ಕುಳಿತಾಗ, —

ಮೂರ್ತಿ ಎಷ್ಟೋ ಬಾರಿ, ಎಷ್ಟೋ ಸಾವಿರ ಬಾರಿ ತನ್ನ ಮೈ ಆ ಕಾರಿಡಾರ್‌ನ ನೆಲವಾಗಬಾರದಾಗಿತ್ತೆ, ತನ್ನ ತೋಡೆಯೇ ಅವಳು ಕುಳಿತು ಪುನೀತಗೊಳಿಸುವ ಸ್ಟೂಲಾಗಬಾರದಿತ್ತೆ ಎಂದು ನಿಟ್ಟುಸಿರುಗರೆದಿದ್ದ.

ಉಳಿದುದೆಲ್ಲವನ್ನು ಮರೆತು ಅವಳನ್ನೇ ದಿಟ್ಟಿಸಿ ನೋಡುತ್ತಾ ಕಾಲ ಕಳೆದಿದ್ದ.

ಹಾಗೆ ಅವನು ಅವಳನ್ನು ನೋಡುತ್ತಿದ್ದುದನ್ನು ಕಂಡಾಗ, ಒಮ್ಮೆ ಅವನ ಕನ್ನಡದ ಪ್ರೊಫೇಸರು, ಅವನನ್ನು ತಮ್ಮ ರೂಮಿಗೆ ಕರೆಸಿಕೊಂಡು ಛೀಮಾರಿ ಮಾಡಿದ್ದರು.

"ಸಹಾಪಾಠಿಯಾದ ಹೆಣ್ಣನ್ನು ಹಾಗೆ ಕಣ್ಣು ಕೆಕ್ಕರಿಸಿ ನೋಡುವುದು ಅಸಭ್ಯತೆಯ ಪರಮಾವಧಿ."

—ಎಂದು ಅವನನ್ನು ಹಳಿದಿದ್ದರು.

"ಹತ್ತಾರು ಬಾರಿ ನೀನು ಆಕೆಯನ್ನೇ ನೋಡುವುದನ್ನು, ಎಷ್ಟೋ ಬಾರಿ ನೀನಾಕೆಯನ್ನು ಹಿಂಬಾಲಿಸುವುದನ್ನು ನಾನು ನೋಡಿದೇನೆ. ಇದು ಕೀಳು ಮನೋವೃತ್ತಿ, ಬಿಡು."

—ಎಂದು ಗದರಿಸಿಕೊಂಡಿದ್ದರು.

ಅವರು ಹಾಗೆ ಹೇಳಿದಾಗ ಮೂರ್ತಿ ಅವರಿಗೆ ಇದಿರಾಡದೆ, ಸುಮ್ಮನೆ ತಲೆಬಾಗಿಸಿ ನಿಂತಿದ್ದು ಹೊರಗೆ ಬಂದಿದ್ದ.

(ಅವರು ಹೇಳಿದ ನೀತಿಯ ಮಾತು ಮನವರಿಕೆಯಾಗಿಯಲ್ಲ; ಇದಿರಾಡಿದರೆ, ಮತ್ತೆರಡು ವರ್ಷ ಅದೇ ಕ್ಲಾಸಿನಲ್ಲೇ ಕೊಳೆಯಬೇಕಾದೀತೆಂದು ಅಂಜಿ. ಆ ಅಂಜಿಕೆ – ತಾನು ಅದೇ ಕ್ಲಾಸಿನಲ್ಲಿ ಉಳಿಯಬೇಕಾಗುವುದೆಂಬ ಅಂಜಿಕೆಯೂ ಅಲ್ಲ. ತಾನು ಅಲ್ಲೇ ಉಳಿದು, ಅವಳು ಮುಂದೆ ಹೋಗಿ, ಅಲಕನಂದೆಯ ನಿತ್ಯದರ್ಶನದ ಭಾಗ್ಯ ತಪ್ಪುವುದಲ್ಲಾ ಎಂಬ ಅಂಜಿಕೆ. ಅವಳು ಅದೇ ತರಗತಿಯಲ್ಲಿ ಉಳಿಯುವುದಾದರೆ, ಮೂರ್ತಿ, ಸಾಯುವವರೆಗೂ ತಾನೂ ಅದೇ ತರಗತಿಯಲ್ಲಿ ಓದಲು ಸಿದ್ಧನಾಗಿದ್ದ.)

ಪ್ರೊಫೆಸರರು ಗದರಿಸಿದಾಗ ಮೂರ್ತಿ—

"I am sorry Sir. (ನನ್ನ ನಡತೆಗಾಗಿ ನಾನು ವ್ಯಸನ ಪಡುತ್ತೇನೆ.)"

—ಎಂದು ಹೇಳಿದ್ದ.

ಆದರೆ ನಿಜವಾಗಿಯೂ ಅವನಿಗೆ ವ್ಯಸನವಾಗಿರಲಿಲ್ಲ. ವ್ಯಸನವಾಗುವುದಕ್ಕೆ ಅವರ ಮಾತು ನಿಜ ಎನಿಸಿದ್ದರೆ ತಾನೇ.

(ಅವರು ಹೇಳಿದುದು ಶುದ್ಧ ಸುಳ್ಳು, ಹಸೀ ಸುಳ್ಳು! ಅಸಭ್ಯತೆ – ಕೀಳು ಪ್ರವೃತ್ತಿ!! ಹೂ. ಅವು ಸತ್ಯವಾಕ್ಯಗಳಲ್ಲ. ಆಧುನಿಕ ಪ್ರಗತಿಗೆ ಅಂಜಿ ದೂರ ಕುಳಿತ ಪುರಾಣಕಾಲದ ಅಂಧಶ್ರದ್ಧೆಯ ಹೇಡಿನುಡಿ. ಅಷ್ಟಲ್ಲದೆ ಮತ್ತೇನು? ತನ್ನ ರೀತಿ ಅಸಭ್ಯತೆಯಾದರೆ, ಕೀಳುವೃತ್ತಿಯಾದರೆ, ಜಗತ್ತೇ ವಿರುದ್ಧ ಗತಿಯಲ್ಲಿ ಚಲಿಸುತ್ತಿರಬೇಕು.

ಹೆಣ್ಣಿನ ಮೈಯ್ಯನ್ನು ತಾನು ಆರೀತಿ ನೋಡುವುದು ತಪ್ಪಾದರೆ—

ಹೆಣ್ಣು ಆರೀತಿ ಮೈ ಕಾಣುವಂತೆ ಉಡುಪು ಧರಿಸುವುದು – ಅದು ಸರಿಯೇ?

ದಿನಕ್ಕೊಂದು ಬಗೆ, ಗಳಿಗೆಗೊಂದು ಅಂಥ ಬಗೆಯ ಬಟ್ಟೆಗಳನ್ನು, ವಸ್ತ್ರದ ಮಾದರಿಗಳನ್ನು, ನೂರಾರು ಜನ ತಯಾರಿಕೆಗಾರರು ತಯಾರಿಸುತ್ತಿರುವುದು ಸರಿಯೇ?

ಹೆಣ್ಣಿನ ಮೈಯನ್ನು ತಾನು ನೋಡುವುದು ತಪ್ಪಾದರೆ—

ಆಕೆಯ ಒಂದೊಂದು ಅಂಗದ ಲಾವಣ್ಯವೂ ಎದ್ದು ಕಾಣುವಂತೆ ಮಾಡುವ, ಬಗೆಬಗೆಯ ಅಂಗರಾಗಗಳ ತಯಾರಿ—

ಎತ್ತೋ ಇದ್ದ ಕಣ್ಣನ್ನು ಹೆಣ್ಣಿನತ್ತ ಸೆಳೆಯುವ ಪರಿಮಳಗಳ ತಯಾರಿ —

ಕುರೂಪಿಯನ್ನು ಸುರೂಪಿಯಂತೆ ಮೆರೆಸುವ ನೂರಾರು ಬಗೆಯ ಪ್ರಸಾಧನ ವಸ್ತುಗಳ ತಯಾರಿ—

—ಅದೆಲ್ಲವೂ ತಪ್ಪೇ ?

ತಪ್ಪಾದರೆ ಜನ ಆ 'ತಯಾರಿಕೆ'ಗಳನ್ನು ಧರಿಸುತ್ತಿದ್ದರೆ ? ಅದನ್ನು ಧರಿಸದಿದ್ದ ಬಾಳೇ ಅಸಫಲ ಎಂದು ವೃತ್ತಪತ್ರಿಕೆಗಳು ಜಾಹಿರಾತು ಮಾಡುತ್ತಿದ್ದವೇ ? ಅದನ್ನು ಧರಿಸುವ ವಿಧಾನವನ್ನು ಸಿನಿಮಾ ತಾರೆಯರು ಅಷ್ಟು ಬಹಿರಂಗವಾಗಿ ತಾವೇ ಧರಿಸಿ ಘೋಷಿಸುತ್ತಿದ್ದರೇ ?

ಅದೆಲ್ಲಾ ಎಲ್ಲಿಯಾದರೂ ಹೋಗಲಿ—ತಪ್ಪಾದರೆ—

ಅಂಥ ಸರಕುಗಳ ಬಹಿರಂಗ ಮಾರಾಟಕ್ಕೆ, ಸರಕಾರ ಒಪ್ಪಿಗೆ ಕೊಡುತಿತ್ತೆ—ಸರಕಾರ ಕುರುಡಾಗಿ ಒಪ್ಪಿಗೆ ಕೊಟ್ಟರೂ, ತಂದೆ ತಾಯಿಗಳು ತಮ್ಮ ಮಕ್ಕಳು ಅಂಥವನ್ನು ಕೊಂಡು ಉಪಯೋಗಿಸಲು ಒಪ್ಪಿಕೊಳ್ಳುತ್ತಿದ್ದರೇ ?

[ಹೇಳಲಿ—ಆ ಮೂರ್ಖ ಪ್ರೊಫೆಸರ್ ಈ ಸಾಲು ಸವಾಲಿಗೆ ಏನು ಉತ್ತರ ಹೇಳುತ್ತಾನೋ !]

ರುಚಿಯಾದ ತಿಂಡಿ ಇಟ್ಟು 'ತಿನ್ನಬೇಡ' ಎನ್ನುವುದು, ಆಕರ್ಷಕವಾದ ವಸ್ತುವನ್ನಿಟ್ಟು 'ನೋಡಬೇಡ' ಎನ್ನುವುದು, ಕಿವಿಗಿಂಪಾದುದನ್ನು ಹಾಡುತ್ತಾ 'ಕೇಳಬೇಡ' ಎನ್ನುವುದು—ಇದು ಸಭ್ಯತೆಯೇ, ಉತ್ತಮ ಲಕ್ಷಣವೇ ?

ಊಹೂ—ಅದು ಅನಾಗರೀಕತೆಯ ಪರಮಾವಧಿ. ಜಗತ್ತಿನೊಂದಿಗೆ ಓಡಲಾಗದ ಹೆಳವನ ಅಸೂಯೆಯ ಅಬ್ಬರ—ಅಷ್ಟೆ !

ಜಗತ್ತಿನಂತೆ, ಅದು ತೋರಿಸಿದ ಜಾಡಿನಲ್ಲಿ ನಡೆಯುತ್ತಿರುವ ತನ್ನ ನಡತೆ ತಪ್ಪಲ್ಲ. ಹಾಗೆ ಕಂಡರೆ ಅದು ಪ್ರೊಫೆಸರರ ದೃಷ್ಟಿ ಮಾಂದ್ಯ. ಅಷ್ಟೇ ಅಲ್ಲ—

ಪ್ರಮತ್ತ ಯೌವನದ ಉತ್ಸಾಹವನ್ನು ಸ್ವತಃ ಅನುಭವಿಸಲಾಗದ ಸಡಿಲು ನರಗಳ ಸೋಲಿನ ಗುಟುರಿ. ಅಷ್ಟೆ.]

ಅವನಿಗೆ ಪ್ರೊಫೆಸರ್ ಮಾತನ್ನು ಕೇಳಿ ವ್ಯಸನವಾಗಿರಲಿಲ್ಲ. ' ಪಾಪ ! ಹಣ್ಣು ಎಟುಕದ ನರಿ ! ! ' ಎಂದು ಅವರ ಬಗ್ಗೆ ತನ್ನೊಳಗೇ ಮರುಕವನ್ನು ವ್ಯಕ್ತಗೊಳಿಸಿ, ಅವರ ಕೋಣೆಯಿಂದ ಹೊರಬಂದಿದ್ದ.

ಆ ಮರುಕದೊಂದಿಗೇ ಅಲಕನಂದೆಯನ್ನು ಹೇಗಾದರೂ ಪಡೆಯುವ ತನ್ನ ಬಯಕೆಯನ್ನು ಹುರಿ ಮಾಡಿಕೊಳ್ಳುತ್ತಾ.

ಅಲಕನಂದ – ಅವರು ಅಲಭ್ಯಳೇನೂ ಅಲ್ಲ. ಹಾಗೆಂದು ಮೂರ್ತಿ ತನ್ನ ಕೆಲಜನ ಸಹಪಾಟಿಗಳ ಬಾಯಿಂದ ಕೇಳಿದ್ದ.

' ನೀನು ಪ್ರಯತ್ನ ಮಾಡಿದರೆ, ಅವಳು ಅಸಾಧ್ಯಳೇನೂ ಅಲ್ಲ '

—ಎಂದು ಅವನ ಬಯಕೆಗೆ ಬೆನ್ನು ತಟ್ಟಿದ್ದರು (ನಿಜ—ಅವನ ವೆಚ್ಚದಲ್ಲಿ ' ಯೂನಿರ್ಯ ರೆಸ್ಟುರಾ 'ದಲ್ಲಿ ಕಾಫಿ ಕುಡಿಯುವಾಗ)

ಅವನಿಗೂ ಅವರ ಮಾತು ಸುಳ್ಳು ಎನಿಸಿರಲಿಲ್ಲ.

(ಅಲ್ಲವೇ ? ಅಷ್ಟುಜನ ಯುವಕರ ಹೃದಯದಲ್ಲಿ ಕಾಮದ ಕುಡಿ ಹೊತ್ತಿಸುತ್ತಾ ಪ್ರಣಯದ ಪಂಜಿನಂತೆ ಓಡಾಡುವ ಅವಳ ಹೃದಯದಲ್ಲೇ ಪುರುಷ ದಾಹದ ಜ್ವಾಲೆ ಇಲ್ಲದಿರುವುದೇ ? ತಾನು ಉರಿದರೆ ತಾನೇ ಮತ್ತೊಂದಕ್ಕೆ ಉರಿ ಹೊತ್ತಿಸುವುದು ಸಾಧ್ಯ ?—[ಸಿಂಪಲ್ ಲಾಜಿಕ್ (Simpli Logic] ಅವಳಿಗೆ ' ಬೇಕು ' ಎನ್ನುವುದು ಇರುವುದಾದರೆ, ಇನ್ನಾರ ಬಗ್ಗೆ ಆಬಗ್ಗೆ ಆಭಾವನೆ ಇರುವುದು ಸಾಧ್ಯ – ತಾನು ಬಿಟ್ಟು. ಅವಳಲ್ಲಿ ಇರುವ ಆ ' ಅದು ' (It) – [ಆಧುನಿಕ ಶಬ್ದ ಸೃಷ್ಟಿಯ ಪವಾಡ ಕೃತಿ ಆ ಶಬ್ದ] – ಅದನಲ್ಲೂ ಇದೆ. ಹಾಗೆಂದು ಅವನ ಗಂಡು ಗೆಳೆಯರೇ ಹೇಳಿದಾರೆ, ಅವನೊಟ್ಟಿಗೆ ಸಿಗರೇಟು ಸೇದುತ್ತಾ. ಹಾಗಿರುವಾಗ—)

' ತನಗೆ, ' ತ–ನ–ಗೆ '—

ಅಲಕನಂದಾ ಅಲಭ್ಯಳೇನೂ ಅಲ್ಲ.

ಹಾಗೆಂದುಕೊಂಡೇ ಮೂರ್ತಿ ಅವಳನ್ನು ಪಡೆಯುವ ಪ್ರಯತ್ನಮಾಡಿದ್ದ ಅವಳ ಹಾಗೇ ನವನವೀನ ಉಡುಪು (ಅದರಲ್ಲಿ ಅವನ ' ಪ್ರಯತ್ನ 'ವೇನೂ ಇರಲಿಲ್ಲ ಕೇವಲ ಇತ್ತೀಚಿನ ಹಾಲಿವುಡ್ ನಟನ ಉಡುಪಿನ ಅನುಕರಣೆ.

ಅದು ಅವನ ತಪ್ಪೂ ಅಲ್ಲ. ಎಲ್ಲರೂ ಮಾಡುವುದು ಹಾಗೇ. ಅನುಕರಣೆಯೇ ಆಧುನಿಕತೆಯ ಜೀವಾಳವಲ್ಲವೇ ?) ಇತ್ತೀಚಿನ ರೀತಿಯ ಕ್ರಾಪು, ಮೀಸೆಯ ಕಟ್, ಟೈ, ಬ್ರಿಲಿಯಂಟೈನ್, ಕರ್ಚಿಫ್, ಅದರ ಪರಿಮಳ (ಎಲ್ಲವೂ ಅತ್ಯುತ್ತಮ, ಅತ್ಯಾಧುನಿಕ ಎಂಬುದಕ್ಕೆ ಹಾಲಿವುಡ್ ನಟರೇ ಸಾಕ್ಷಿ!)ವನ್ನು ಧರಿಸಿ ಅವಳು ಅವನ ಕಣ್ಣು ಸೆಳೆದಿದ್ದಂತೆಯೇ, ಇವನೂ ಅವಳ ಕಣ್ಣು ಸೆಳೆಯಲು, ಹೃದಯವನ್ನು ಕೆರಳಿಸಲು ಯತ್ನಿಸಿದ್ದ.

ಯತ್ನಿಸಿದ್ದನೇನು – ಅಷ್ಟಿಷ್ಟು ಸಫಲನೂ ಆಗಿದ್ದ—

ಏಕೆ—ಎಷ್ಟೋ ಬಾರಿ ಅವಳು ಅವನ ಕಡೆ ತಿರುಗಿ ನೋಡಿರಲಿಲ್ಲವೇ ? ಒಮ್ಮೆ, ಕೆಳಗೆ ಜಾರಿ ಬಿದ್ದ ತನ್ನ ಪುಸ್ತಕವನ್ನು ಎತ್ತಿಕೊಡುವ ' ಮಹದವಕಾಶ 'ವನ್ನು ಒದಗಿಸಿಕೊಟ್ಟು, ಮಂದಹಾಸದ ಮಿನುಗಿನಿಂದ ಥಳಥಳಿಸುವ ದಂತ ಪ್ರದರ್ಶನ ಮಾಡಿ (" If you use—tooth paste, you need not feel shy to SMILE—ಈ ದಂತಧಾವನವನ್ನು ಉಪಯೋಗಿಸಿದರೆ ನೀವು **ನಗಲು** ನಾಚಬೇಕಾದದ್ದಿಲ್ಲ " ಎಂದು ಜಾಹಿರಾತು ಭರವಸೆ ಕೊಟ್ಟಿತ್ತಲ್ಲ.) ' ಥ್ಯಾಂಕ್ ' ಎಂದು ಸಹಾ ಹೇಳಿದ್ದಳು.

[' ಥ್ಯಾಂಕ್ಸ್ ' ಇಂಗ್ಲಿಷ್ ಭಾಷೆಯ ಅಪೂರ್ವ ಶಬ್ದ. ಆ ಎರಡು ಅಕ್ಷರಗಳ ಉಚ್ಚಾರಣೆಯಿಂದ ಏನು ಭಾವ ಬೇಕಾದರೂ ವ್ಯಕ್ತಪಡಿಸಬಹುದು— ಪ್ರಣಯವನ್ನೂ. ' ಸಾರಿ ' (Sorry) ಈ ಶಬ್ದದ ಸೋದರಿ. ಈ ಎರಡು ಶಬ್ದಗಳಿಗಾಗಿ ಜಗತ್ತೇ ಆಂಗ್ಲ ಭಾಷೆಗೆ ಕೃತಜ್ಞವಾಗಿರಬೇಕು !)

ಅಲಕನಂದಾ ಅವನಿದುರು ಮಂದಹಾಸವನ್ನು ಮಿನುಗಿಸಿದಾಗ, ಮೂರ್ತಿಗೆ ಅವಳು ಅಲಭ್ಯಳಲ್ಲವೆಂಬ ನಂಬಿಕೆ ಮೂಡಿತ್ತು.

ಆ ನಂಬಿಕೆಯ ತಳಹದಿಯ ಮೇಲೆ ಅವನು ತನ್ನ ಭಾವೀ ಪ್ರಣಯ ಜೀವನದ ಭವ್ಯ ಸೌಧವನ್ನು ನಿರ್ಮಿಸಿದ್ದ.

(ನಿಜ—ಆ ಕಾಲದಲ್ಲವನು ಅವಳ ಬಗ್ಗೆ ಕೆಲವು ಕವನಗಳನ್ನೂ ಬರೆದಿದ್ದ !)

ಅವಳನ್ನು ಸಂಧಿಸುವ, ಅವಳಲ್ಲಿ ತನ್ನ ಪ್ರಣಯ ನಿವೇದನೆ ಮಾಡುವ, ಅವಳ ಪ್ರಣಯ ಯಾಚನೆಯನ್ನು ಸ್ವೀಕರಿಸುವ, ಬಗೆ ಬಗೆಯ ಸಂದರ್ಭ

ಗಳನ್ನು ಕಲ್ಪಿಸಿಕೊಂಡು—(ನಿಜ, ಕಾದಂಬರಿ, ಚಲಚ್ಚಿತ್ರಗಳ ಆಧಾರದ ಮೇಲೆ, ಮಾದರಿಯಲ್ಲಿ) ಅವಳೊಂದಿಗೆ ಸುಖಿಸಿದ್ದ—

ಅಲಕನಂದಾ ಅಲಭ್ಯಳಲ್ಲ.

ಮೂರ್ತಿ ಹೀಗೆ ಕನಸಿನಲ್ಲಿ ಅಲಕನಂದೆಯೊಂದಿಗೆ ವಿಹರಿಸುತ್ತಿರುವಾಗಲೇ ಅವನ ಕಿವಿಗೆ ಸುದ್ದಿ ಬಿತ್ತು—

'ಅಲಕನಂದಾ, ನಾಲ್ಕು ಮಕ್ಕಳ ತಂದೆಯಾದ ಇಂಗ್ಲಿಷ್ ಪ್ರೊಫೆಸರರ ಪ್ರಣಯಿನಿಯಾಗಿ, ಅವರ ಜೊತೆ ಆಗಾಗ ಕಾರಿನಲ್ಲಿ ಅಡ್ಡಾಡುತ್ತಾಳೆ' ಎಂದು.

ಆ ವರ್ಷ ಅಲಕನಂದಾ ಇಂಗ್ಲೀಷ್‌ನಲ್ಲಿ 'ರ್‍ಯಾಂಕ್' ಗಳಿಸಿ, ಆ ಊಹೆಯನ್ನು ಪುಷ್ಟೀಕರಿಸಿದಳು.

ಮೂರ್ತಿ ಅಲ್ಲಿಗೆ ಅವಳ ಆಸೆ ಬಿಟ್ಟ—

ಆಸೆ ಬಿಟ್ಟ—ಅಲಕನಂದಾ ಅಲಭ್ಯಳೆಂದಲ್ಲ. ಅವಳ ಸುತ್ತ ಓಡಾಡಿದರೆ, ಇಂಗ್ಲೀಷ್ ಪ್ರೊಫೆಸರರ ಕೆಂಡಗಣ್ಣು ತನ್ನತ್ತ ತಿರುಗಿ, ಫೇಲಿನ ಶಾಪ ದೊರೆತು, ಮನೆಯಲ್ಲಿ ತಲೆ ಬಗ್ಗಿಸಬೇಕಾಗುವುದೆಂದು, ('ಕಣ್ಣಿಡುವುದರಲ್ಲಿ ಆ ಪ್ರೊಫೆಸರ್ ಎಷ್ಟಾದರೂ ಪ್ರಖ್ಯಾತರು!)

ಆಗಲೂ ಅವನ ದೃಷ್ಟಿಯಲ್ಲಿ ಅಲಕನಂದಾ ಅಪರಾಧಿಯಲ್ಲ.

"ಮನೇಲಿ ನಾಲ್ಕು ಮಕ್ಕಳಿಟ್ಟುಕೊಂಡು ಆ - ಮಗ ಹೀಗೆ ಮಾಡ್ತಾನಲ್ಲಾ—"

—ಎಂದಿದ್ದ ಪ್ರೊಫೆಸರ ನೀತಿಯ ಬಗ್ಗೆ ತೀರ್ಪು ಕೊಡುತ್ತಾ.

"ಮನೇಲಿ ನಾಲ್ಕು ಮಕ್ಕಳಿದ್ದರೆ, ಹೊರಗೊಬ್ಬ ಪ್ರಣಯಿನಿ ಇರಬಾರದು ಅಂತ ಯಾವ ಶಾಸ್ತ್ರ ಹೇಳಿದೆ? ಫ್ರಾನ್ಸಿನಲ್ಲಿ ಹೆಂಡತಿ 'ಕಟ್ಟಿಕೊಂಡವ'ನಿಗಿಂತ ಪ್ರಣಯಿನಿಯನ್ನು 'ಇಟ್ಟುಕೊಂಡವ'ನಿಗೇ ಮರ್ಯಾದೆ ಹೆಚ್ಚಂತೆ. ಇಲ್ಲದ ಓಬಿರಾಯನ ಕಾಲದ ಮಾತೆಲ್ಲಾ ಒದರಬ್ಯಾಡ. 'ಗಟ್ಸ್' (Guts) ಇದ್ದರೆ, ಈಗಲೂ ಒಂದು ಕೈ ನೋಡು. ಒಬ್ಬನಿಗಾದವಳು, ಇಬ್ಬರಿಗೂ ಆಗಬಹುದು"

—ಎಂದು ಅವನ ಮಿತ್ರರು (ಆಗಲೂ ಅವನ ಸಿಗರೇಟನ್ನೇ ಸೇದುತ್ತಾ) ಅವನ ಬೆನ್ನು ತಟ್ಟಿದ್ದರು.

ಆಗಲೂ ಅಲಕನಂದಾ ಅವನ ಕಡೆ ಕಣ್ಣು ತಿರುಗಿಸುತ್ತಿದ್ದಳು.

"'ಛಾನ್ಸ್' ಇತ್ತು. ಆದರೆ 'ಗಟ್ಸ್' ಇರಲಿಲ್ಲ."

ಅಲಕನಂದಾ ಜಾರಿಹೋದಳು.

* * * *

ಅಲಕನಂದಾ ಜಾರಿಹೋದಳು ; ಗೌರಿ ಹಾರಿಹೋದಳು.

ಅಲಕನಂದಾ ಅವನ ಕಾಲೇಜು ಸಹಪಾಠಿ, ಗೌರಿ ಅವನ ನೆರೆಮನೆಯ ಹುಡುಗಿ. ನೆರೆಮನೆಯ ಹುಡುಗಿ ಗೌರಿ ಒಳ್ಳೇ ಮಾಗಿದ ಹಣ್ಣು! ಗೌರಿ ಮೂರ್ತಿಯ ಮನೆಯ ಪಕ್ಕದಲ್ಲೇ ವಾಸವಾಗಿದ್ದ ಶಂಕರಯ್ಯನವರ ಮಗಳು. ಅವರ ಹತ್ತು ಜನ ಮಕ್ಕಳಲ್ಲಿ—ಆ ಹತ್ತರಲ್ಲಿ ಆರು ಹೆಣ್ಣು, ನಾಲ್ಕು ಗಂಡು—ನಾಲ್ಕನೆಯವಳು. ಅವಳಿಗಿಂತ ದೊಡ್ಡವರಲ್ಲಿ ಎರಡು ಹೆಣ್ಣು, ಒಂದು ಗಂಡು.

ಶಂಕರಯ್ಯ 'ಲಾಲ್ ಕಮಲ್' ಚಲಚ್ಚಿತ್ರ ಹಂಚಿಕೆಗಾರರಲ್ಲಿ ಗುಮಾಸ್ತನಾಗಿದ್ದ. ಅವನಿಗೆ ಕೆಲಸದಿಂದ ಬರುತ್ತಿದ್ದ ಆದಾಯ ತಿಂಗಳಿಗೆ ಮೂವತ್ತೈದು ರೂಪಾಯಿ.

ಅದನ್ನು ಅವನ ಹನ್ನೆರಡು ತಲೆಯ – ಅದನ್ನು ಹೆಡೆ ಎಂತಲೂ ಕರೆಯ ಬಹುದಾಗಿತ್ತು – ಸಂಸಾರವನ್ನು, ಬೆಂಗಳೂರಿನಂಥ ಶ್ರೀಮಂತ ನಗರದಲ್ಲಿ ಸಾಕಲು 'ಉಪ್ಪು – ಹುಳಿ'ಗೂ ಸಾಲದು ಎನ್ನುವುದು ಶಂಕರಯ್ಯನಿಗೆ ತಿಳಿದಿದ್ದಂತೇ, ಅವನ 'ಯಜಮಾನ'ರಿಗೂ ತಿಳಿದಿತ್ತೆಂದು ಕಾಣುತ್ತದೆ. ಅದುದರಿಂದ, ಅವರು, ಅವನು ಸಂಸಾರದ ತಾಪತ್ರಯವನ್ನು ಮರೆಯಲು, ಅವನ ಮನೆಯವರು ಗಂಡನ ದುಡಿಮೆಯ ಬಡತನವನ್ನು ಮರೆಯಲು, ನಗರದಲ್ಲಿ, ತಮ್ಮ ಹಂಚಿಕೆಯ ಚಿತ್ರಗಳು ಪ್ರದರ್ಶನಕ್ಕೆ ಬಂದಾಗ, ಅದನ್ನು ನೋಡಲು 'ಧಾರಾಳ'ವಾಗಿ ಫ್ರೀ ಪಾಸ್ ಕೊಡುತ್ತಿದ್ದರು.

ತನ್ನ ಯಜಮಾನನ ಈ 'ಫ್ರೀ ಪಾಸ್'ನ ಔದಾರ್ಯ, ವರವಲ್ಲ ಶಾಪವೆನ್ನುವುದು, ಫ್ರೀ ಪಾಸಿನ ಬಲದ ಮೇಲೆ ಸಿನಿಮಾ ನೋಡಲು ಹೋಗುತ್ತಿದ್ದ ತನ್ನ ಪ್ರಾಯಕ್ಕೆ ಬಂದ ದೊಡ್ಡ ಮಗಳು ಜಾನಕಿ, ಆಗಾಗ ತನ್ನ ಯಜಮಾನರ ಮಗನ ಕಾರಿನಲ್ಲಿ ತಿರುಗುತ್ತಾಳೆ ಎಂದು ಕೇರಿಯ ಜನ ಆಡಿಕೊಳ್ಳಲು ಆರಂಭಿಸಿದಾಗ, ಶಂಕರಯ್ಯನಿಗೆ ಮನವರಿಕೆಯಾಯಿತು.

ಅದರೊಂದಿಗೆ ಬಡತನದಲ್ಲಿ ಸಂಸಾರ ನಿರ್ವಹಿಸುವುದು ಹೇಗೆ ಎಂಬ

ಚಿಂತೆಯಲ್ಲಿ ಮುಳುಗಿದ ಆತನಿಗೆ, ಪ್ರಾಯಕ್ಕೆ ಬಂದ ಮಗಳಿಗೆ ಮದುವೆ ಮಾಡಬೇಕು ಎಂಬ ಮಾತೂ ನೆನಪಾಯಿತು.

ಆದರೆ ಹೊಣೆಗಾರಿಕೆಯನ್ನು ನೆನಪಿಸಿಕೊಳ್ಳುವಷ್ಟೇ, ಅದನ್ನು ತೀರಿಸುವ ಕೆಲಸ ಸುಲಭವಾಗಿರಲಿಲ್ಲ. ಆದರೂ ಇನ್ನು ಹೀಗೇ ಬಿಟ್ಟರೆ ಬೀದಿಯಲ್ಲಿ ತಲೆ ಎತ್ತಿಕೊಂಡು ತಿರುಗಲಾಗದಂಥ ಪರಿಸ್ಥಿತಿ ಪ್ರಾಪ್ತವಾಗಬಹುದೆಂದು ಬೆದರಿ, ಯಾರ ಯಾರದೋ ಕಾಲುಕಟ್ಟಿ, ಹಣ ಸಿಗಬಹುದಾದ ಕಡೆಯಲ್ಲೆಲ್ಲಾ ಜೋಡಿಸಿ, ಸಾಲ ಸಿಕ್ಕಷ್ಟು ಕೂಡಿಸಿ, ಅಂತೂ ಮೊದಲ ಮಗಳ ಮದುವೆ ಮಾಡಿ ಮುಗಿಸಿದ.

ಒಂದು ಗಂಡಾತರ ತಪ್ಪಿತು ಎಂದು ಆತ್ಮ ನೆಮ್ಮದಿಯ ನಿಟ್ಟುಸಿರು ಬಿಡುವವೇಳೆಗೆ, ಇನ್ನೊಬ್ಬ ಮಗಳು—ಎರಡನೆಯವಳು, ಸರಸ್ವತಿ—ಆತನ ಎದೆಯುದ್ದಕ್ಕೂ ಬೆಳೆದು ನಿಂತಿದ್ದಳು.

ಇನ್ನೂ ಈ ಹುಡುಗಿಯ ವಿಷಯಕ್ಕೂ ಎಲ್ಲಿ ಕೆಟ್ಟಮಾತು ಕೇಳ ಬೇಕಾಗುವುದೋ ಎಂದು ಹೆದರಿ, ಶಂಕರಯ್ಯ, ಸಾಹುಕಾರರ ಮಂಡಿಗಳಿಗೆ ಅಲೆದಂತೆಯೇ ಪಠಾಣರ ಮನೆಗಳಿಗೂ ಅಲೆದು, ಸಾಲದ ಮೇಲೆ ಸಾಲಮಾಡಿ, ಆ ಮಗಳದೂ 'ಮದುವೆ' ಎಂತ ಶಾಸ್ತ್ರ ಮುಗಿಸಿದ.

ಅಷ್ಟಕ್ಕೇ ಶಂಕರಯ್ಯ ಹತ್ತು ಅಶ್ವಮೇಧಯಾಗ ಮಾಡಿದಷ್ಟು ದಣಿದು, 'ಮದುವೆ' ಎಂಬ ಹೆಸರು ಕೇಳಿದರೆ ಸಾಕು, ಚೀರಿ, ಮೆಟ್ಟಿ ಬೀಳುವ ಹಾಗಾದ.

ಈಗ ಅವನಿಗೆ ಜೀವನದಲ್ಲಿದ್ದ ಸಮಸ್ಯೆ—ಸಂಸಾರ ನಿರ್ವಹಣೆಯದಲ್ಲ. ಆಫೀಸಿಗೆ, ಮನೆಗೆ ಅವನನ್ನು ಹುಡುಕಿಕೊಂಡು ಅಲೆಯುತ್ತಿದ್ದ ಪಠಾಣರಿಂದ ಮುಖ ತಪ್ಪಿಸಿಕೊಂಡು ಬದುಕುವುದು ಹೇಗೆ ಎಂಬುದು.

ಆ ಚಿಂತೆಯಲ್ಲಿ ಮಗ್ನನಾದ ಶಂಕರಯ್ಯ ತನ್ನ ಸಂಸಾರದ ಚಿಂತೆಯನ್ನು ಭಗವಂತನಿಗೇ ಒಪ್ಪಿಸಿದ್ದ.

ಶಂಕರಯ್ಯನಿಗೆ ಹಾಗಾದರೆ, ಶಂಕರಯ್ಯನ ಹೆಂಡತಿ ಮೀನಾಕ್ಷಮ್ಮನಿಗೆ, ಸರದಿ ತಪ್ಪದಂತೆ ಮೂರು ವರ್ಷಕ್ಕೊಮ್ಮೆ ಜನಿಸುವ ಮಕ್ಕಳಿಗೆ ಏನು ಹೆಸರಿಡ ಬೇಕೆಂಬುದೇ ದೊಡ್ಡ ಚಿಂತೆಯಾದಂತಿತ್ತು.

ಒಂದು ಮಗು ಎರಡು ವರ್ಷದ್ದಾಗಿ, ಪರವಾ ಇಲ್ಲ, ಇದು ಕೈಬಿಟ್ಟು

ಆಡಿಕೊಳ್ಳುತ್ತದೆ ಎನ್ನುತ್ತಿರುವಾಗಲೇ ಆಕೆಗೆ ಮತ್ತೊಂದು ಮಗುವಿನ ಬಯಕೆ ಬೇನೆ ಆರಂಭವಾಗುತ್ತಿತ್ತು.

ಹೀಗೆ ಒಂದು ಕಡೆ ಬೆಳೆಯುವ ಮಕ್ಕಳ, ಮತ್ತೊಂದು ಕಡೆ, ಹುಟ್ಟುವ ಮಕ್ಕಳ ಚಿಂತೆಯ ಸುಳಿಗೆ ಸಿಕ್ಕ ಬಡಪಾಯಿ ಮೀನಾಕ್ಷಮ್ಮನಿಗೆ, ಜೀವನದಲ್ಲಿ ಉಸಿರಾಡಿಸಿಕೊಳ್ಳುವಷ್ಟು ವ್ಯವಧಾನವಿಲ್ಲದಿದ್ದಾಗ, ಆಕೆಗೆ ಮೂರನೆಯ ಮಗಳಿಗೂ ಮದುವೆಯ ವಯಸ್ಸು ಬಂತೆಂಬುದೂ ನೆನಪಿರಲಿಲ್ಲ; ನೆನಪುಳಿಯುವುದು ಸಾಧ್ಯವೂ ಇರಲಿಲ್ಲ.

ಆದರೆ ಅವರು ಮರೆತರೆ ಕಾಲ ಮರೆಯಬೇಕಲ್ಲ—ಅವರು ಮರೆತರೂ ಗೌರಿ, ಬೆಳೆದು ದೊಡ್ಡವಳಾದಳು.

ಅವಳ ಹಿಂದೆ ಹುಟ್ಟುವವರು ಹುಟ್ಟುತ್ತಲೇ ಇದ್ದರು, ಬೆಳೆಯುವರು ಬೆಳೆಯುತ್ತಲೇ ಇದ್ದರು.

ಮನೆಯನ್ನು ತುಂಬಿ ಚಿಲಿಪಿಲಿಗುಟ್ಟುತ್ತಿದ್ದ ಮಕ್ಕಳ ನಡುವೆ ಗೌರಿಗೆ ವಿಶೇಷ ಗಮನ ಕೊಡುವವರು ಯಾರು?

ಬೆಳೆದ ಗೌರಿಗೆ, ಮೀನಾಕ್ಷಮ್ಮ ವಿದ್ಯಾ ಬುದ್ಧಿ ಏನನ್ನೂ ಕಲಿಸದೆ ಮನೆಗೆಲಸವನ್ನು ಮಾತ್ರ ಕಲಿಸಿದ್ದಳು. ಇಂಥ ವಾತಾವರಣದಲ್ಲೂ ಗೌರಿ, ತಾನೇ ಒಂದು ವಿದ್ಯೆಯನ್ನು ಆರ್ಜಿಸಿಕೊಂಡಿದ್ದಳು—

ಆಗಾಗ ನೋಡುತ್ತಿದ್ದ ಸಿನಿಮಾದ ಹಾಡುಗಳನ್ನು ಅನುಕರಿಸಲು.

ಉಳಿದಾವ ಸಂಪತ್ತನ್ನೂ ಗೌರಿಗೆ ಕೊಡದ ದೇವರು, ಆಕೆಗೆ ಕಂಚಿನಂಥ ಕಂಠವನ್ನು ಕೊಟ್ಟಿದ್ದ. ಅದರೊಂದಿಗೆ ಎಂಥದೇ ಹಾಡಾದರೂ, ಒಮ್ಮೆ ಕೇಳಿದರೂ ಸಾಕೂ, ಚಾಚೂ ತಪ್ಪದಂತೆ ಅನುಕರಿಸಬಲ್ಲ ಶಕ್ತಿಯನ್ನು ಕೊಟ್ಟಿದ್ದ.

ಅವಳಲ್ಲಿಯ ಈ ವಿಶೇಷ ಶಕ್ತಿ, ಅವಳಿಗೆ, ಅಕ್ಕಪಕ್ಕದ ಮನೆಯವರ ಸ್ನೇಹಕ್ಕೆ ಅವಕಾಶ ಕಲ್ಪಿಸಿಕೊಟ್ಟಿತ್ತು ಎಲ್ಲಕ್ಕಿಂತ ಹೆಚ್ಚಾಗಿ ಮನೆಯಲ್ಲಿ ಊಟಕ್ಕೇ ತಾಪತ್ರಯವಾದ ಗೌರಿಗೆ, ಆಗಾಗ, ಅಕ್ಕಪಕ್ಕದ ಮನೆಗಳಲ್ಲಿ ರುಚಿ ಕಟ್ಟಿದ ತಿಂಡಿಯನ್ನು ತಿನ್ನುವ ಸೌಲಭ್ಯ ದೊರಕಿತ್ತು. ಕಂಡವರ ಮನೆಯ ತಿಂಡಿಯ ರುಚಿ ನಾಲಿಗೆಗೆ ಇಳಿದ ಮೇಲೆ ಅವಳು ಅಕ್ಕಪಕ್ಕದ ಮನೆಗಳಲ್ಲಿ ಓಡಾಡುವುದೂ ಹೆಚ್ಚಾಯಿತು. ಅವರು ಕರೆಯದಿದ್ದರೂ ಇವಳೇ ಹೋಗು

ತ್ತಿದ್ದಳು—ಹಾಡುವ ಕೆಲಸ ಇಲ್ಲದಾಗ, ಅವರ ಮನೆಗೆಲಸದಲ್ಲಿ ನೆರವು ನೀಡುವ ನೆಪಮಾಡಿಕೊಂಡು.

ಅವಳ ಈ ವೃತ್ತಿ ಮೀನಾಕ್ಷಮ್ಮನಿಗೂ ಅಪ್ರಿಯವಾಗಿರಲಿಲ್ಲ. 'ಸದ್ಯ, ಇದರಿಂದ ಮನೆಯಲ್ಲಿ ಅಷ್ಟು ಗದ್ದಲವಾದರೂ ತಪ್ಪಲಿ' ಎಂದು ತಮ್ಮ ಕೈಕೂಸನ್ನೂ ಗೌರಿಯ ಹೆಗಲಿಗೆ ಏರಿಸಿ, ತಾನೇ 'ಎಲ್ಲಾದರೂ ಈ ಹಾಳಾದ್ದನ್ನು ಕಟ್ಟಿಕೊಂಡು ಹೋಗು' ಎಂದು ಹೇಳಿ ಕಳಿಸಿಬಿಡುತ್ತಿದ್ದಳು.

ಈ ಕಾರಣದಿಂದಾಗಿ ಗೌರಿ ಎಷ್ಟು ತಡವಾಗಿ ಮನೆಗೆ ಬಂದರೆ, ಮೀನಾಕ್ಷಮ್ಮನಿಗೆ ಅಷ್ಟು ಹಾಯಿ ಅನ್ನಿಸುತ್ತಿತ್ತು.

ಹೀಗೆ ಗೌರಿ 'ಏಳು ಮನೆಯ ಚೀಲಿ' ಯಾಗಿ ಬೆಳೆದಳು.

ಗೌರಿ ಆಗಾಗ ಹೋಗಿ ಬರುತ್ತಿದ್ದ ಮನೆಗಳಲ್ಲಿ ಮೂರ್ತಿಯ ಮನೆಯೂ ಒಂದು.

ಮೂರ್ತಿಯ ಮನೆ ಶಂಕರಯ್ಯನ ಮನೆಯ ಎದುರು ಸಾಲಿನಲ್ಲಿ, ಎರಡು ಮನೆ ಆಚೆಗೆ ಇತ್ತು.

ಮೂರ್ತಿಯ ತಂದೆ ವಾಸುದೇವರಾಯರು ಶ್ರೀಮಂತರಲ್ಲವಾದರೂ ಬಡವರಲ್ಲ. ಕಂಟೋನ್ಮೆಂಟಿನಲ್ಲಿದ್ದ ದೊಡ್ಡ ಬ್ಯಾಂಕಿನಲ್ಲಿ ಗೋಡ್‌ನ್ಸ್ (Godowns) ಕ್ಲಾರ್ಕ್ ಆಗಿದ್ದರು. ಅವರಿಗೆ ಬರುತ್ತಿದ್ದ ಸಂಬಳ ನೂರೈವತ್ತಾದರೂ, ಮೇಲುತ್ಪತ್ತಿ ಕಡೆಯಪಕ್ಷ ಅದರ ಎರಡರಷ್ಟಾದರೂ ಇತ್ತೆಂದು ಜನ ಆಡಿಕೊಳ್ಳುತ್ತಿದ್ದರು.

ಬೆಂಗಳೂರಿನ ನೂರಾರು ಮಂದಿ ವರ್ತಕರ, ದೊಡ್ಡ ದೊಡ್ಡ ವ್ಯಾಪಾರಿಗಳ ಭಾಗ್ಯದ 'ಬೀಗದ ಕೈ' ಅವರ ಬಳಿ ಇದ್ದುದರಿಂದ, ವಾಸುದೇವರಾಯರಿಗೆ, ಅವರ ಪರಿಚಯವಿತ್ತಷ್ಟೇ ಅಲ್ಲ, ಅವನ ಸಂಸಾರಕ್ಕೆ ಬೇಕಾದ ಸಾಮಾನುಗಳೆಲ್ಲವೂ, ಬಹು ವೇಳೆ 'ಬಿಟ್ಟಿ'ಯಾಗಿ, ಅನೇಕ ವೇಳೆ, ಬೇರೆ ಯಾರಿಗೂ ದೊರಕದಷ್ಟು ಅಗ್ಗದ ದರದಲ್ಲಿ ಸಿಗುತ್ತಿತ್ತು.

ಅದರೊಂದಿಗೆ ಮೂರ್ತಿಯ ತಾಯಿ ಅನಸೂಯಮ್ಮ ಸಂಸಾರದಲ್ಲಿ ಬಹಳ ವಿಚಕ್ಷಣಸ್ಥೆ. ಚಿಕ್ಕ ಕಾಸೂ ಪೋಲಾಗಲು ಅವಕಾಶ ಕೊಡುತ್ತಿರಲಿಲ್ಲ. ಮನೆಗೆ ಖರ್ಚಾಗಿ ಉಳಿದದ್ದು ಏನಿದ್ದರೂ ಅದು ಬ್ಯಾಂಕಿನಲ್ಲಿ ಹಣವಾಗಿರಬೇಕು,

ಇಲ್ಲವೇ ಮೈಮೇಲೆ ಬಂಗಾರವಾಗಿರಬೇಕು ಎಂಬುದು ಆಕೆಯ ಸಂಸಾರ ಧರ್ಮದ ಸಿದ್ಧಾಂತವಾಗಿತ್ತು.

ಅನಸೂಯಮ್ಮ ಸಂಸಾರ ಮಾಡಲು ಕಾಲಿಟ್ಟ ದಿನವೇ ತನ್ನ ಸಂಸಾರ ಹೀಗೇ ನಡೆಯಬೇಕು ಎಂದು ನಿರ್ಧರಿಸಿಕೊಂಡು ಬಂದಿದ್ದಳು. ಮದುವೆಯಾದ ಎರಡನೆಯ ವರ್ಷ ಹೆಣ್ಣು ಮಗುವನ್ನು ಹಡೆದ ಆಕೆ, ಬಳಿಕ ಯಾರೇನು ಹೇಳಿದರೂ ಕಿವಿಗೆ ಹಾಕಿಕೊಳ್ಳದೆ, ಹತ್ತು ವರ್ಷ ಕಾಲ ಮತ್ತೆ ಮಕ್ಕಳನ್ನು ಹೆರಲಿಲ್ಲ.

ಆ ಹತ್ತು ವರ್ಷದಮೇಲೆ ಹುಟ್ಟಿದವನು ಮೂರ್ತಿ.

ಈ ಹತ್ತು ವರ್ಷಗಳ ಅವಧಿಯಲ್ಲಿ ಅನಸೂಯಮ್ಮ ಮಗಳ ಭವಿಷ್ಯಕ್ಕೆ ಬೇಕಾದಷ್ಟನ್ನು ಕಾದಿರಿಸಿ, ಮಗಳಿಗೆ ಹದಿನಾಲ್ಕು ವರ್ಷವಾಗುತ್ತಿದ್ದ ಹಾಗೇ ಅವಳ ವಿವಾಹವನ್ನು ಮುಗಿಸಿದ್ದಳು. ಮಗಳು – ಶ್ರೀಮತಿ – ತಾಯಿಯ ಮನೆಯಿಂದ ಯಾವುದಕ್ಕೂ ಅಪೇಕ್ಷೆ ಪಡದಂಥ ಗಂಡನ ಮನೆ ಸೇರಿದ್ದಳು.

ಮಗಳ ಚಿಂತೆ ಹೀಗೆ ಸುಮುಖವಾಗಿ ಬಗೆಹರಿದ ಬಳಿಕ, ಆಕೆಗೆ ಉಳಿದುದೆಲ್ಲಾ ಇದ್ದೊಬ್ಬ ಮಗನನ್ನು 'ಹತ್ತು ಜನ ಮೆಚ್ಚಿಕೊಳ್ಳುವ ಹಾಗೆ' ಸಾಕಿ ಬೆಳೆಸುವ ಚಿಂತೆಯೊಂದೆ.

ಮೂರ್ತಿಯಾದಮೇಲೆ ಆಕೆಗೆ ದೈವಾನುಗ್ರಹದಿಂದ (ದಂಡಿನ ಡಾಕ್ಟರ ಅನುಗ್ರಹದಿಂದ ಎಂದೂ ಕೆಲವರು ಹೇಳುತ್ತಿದ್ದರು) ಮತ್ತೆ ಮಕ್ಕಳಾಗಲಿಲ್ಲ.

ಈ ಮಗ ದೊಡ್ಡವನಾಗಿ ಮನೆಗೆ ಸೊಸೆ, ಬರುವ ವೇಳೆಗೆ ಹೇಗಾದರೂ ಮಾಡಿ ಸ್ವಂತ ಮನೆ ಮಾಡಲೇಬೇಕು ಎಂಬ ಹಟದಿಂದ ಅನಸೂಯಮ್ಮ, ತನ್ನ ಸ್ವಂತ ಮನೆ ಮಾಡುವ ಬಯಕೆಯನ್ನು ಗಂಡನ ಕಿವಿಯಲ್ಲಿ, ಎರೆದು ಮೂರ್ತಿ ಹದಿನಾರು ವರ್ಷದವನಾಗುವ ವೇಳೆಗೆ ಆ ಬಯಕೆಯನ್ನು ಸಫಲ ಗೊಳಿಸಿ ಕೊಂಡಿದ್ದಳು

ಹಾಗೆ ಆಕೆ ಕೊಂಡ ಮನೆಯೇ ಶಂಕರಯ್ಯನ ಮನೆಯ ಎದುರಿಗಿದ್ದುದು.

ಅನಸೂಯಮ್ಮನಿಗೆ ಎಲ್ಲಕ್ಕೂ ಅನುಕೂಲವಿದ್ದರೂ, ಹೆಚ್ಚು ಮಕ್ಕಳಿರ ಲಿಲ್ಲವಾದುದರಿಂದ, ಮನೆಯಲ್ಲಿ ಹೊತ್ತು ಕಳೆಯುವ ಚಿಂತೆಯೊಂದು ಮಾತ್ರ ಇತ್ತು.

ಸಂಸಾರ ವಿಷಯದಲ್ಲಿ ಬಹು ಜಾಣೆಯಾದ ಆಕೆ, ಹೆಚ್ಚಾಗಿ ನೆರೆಮನೆ

ಗಳಿಗೆ ಹೋಗುತ್ತಿರಲಿಲ್ಲ. ಅನಾವಶ್ಯಕವಾಗಿ ಅವರೂ ತನ್ನ ಮನೆಗೆ ಹರಟೆ ಹೊಡೆಯಲು ಬರಲು ಅವಕಾಶ ಕೊಡುತ್ತಿರಲಿಲ್ಲ. ಹೆಚ್ಚು ಜನ ಸ್ನೇಹಿತ ರಿದ್ದಷ್ಟೂ, ಸ್ನೇಹ ಅತಿಯಾದಷ್ಟೂ, ಅವರಿಂದ ಅನುಕೂಲಕ್ಕಿಂತ ಅನಾನು ಕೂಲವೇ ಹೆಚ್ಚೆಂದು ಆಕೆ ತೀರ್ಮಾನಕ್ಕೆ ಬಂದಿದ್ದಳು.

ಹೀಗಾಗಿ ಆಕೆಗೆ ನೆರೆಹೊರೆಯಲ್ಲಿ ಹೆಚ್ಚು ಬಳಕೆಯಿರಲಿಲ್ಲ. ಗಂಡ ಬೆಳಗ್ಗೆ ಒಂಬತ್ತೂವರೆಗೆ ಊಟ ಮಾಡಿ ಮನೆ ಬಿಟ್ಟರೆ, ಮತ್ತೆ ಮನೆ ಸೇರು ತ್ತಿದ್ದುದು ಸಂಜೆಗೇ. ಮಗನೂ ಸ್ಕೂಲಿಗೆ ಹೋಗುತ್ತಿದ್ದ. ಹೀಗಾಗಿ ಆಕೆಗೆ ಮನೆಯಲ್ಲಿ ಹೊತ್ತು ಕಳೆಯಲು ಯಾರೂ ಜೊತೆ ಇರಲಿಲ್ಲ.

ಅನಸೂಯಮ್ಮನ ಈ ಜೊತೆಯ ಅರಕೆಯನ್ನು ತೀರಿಸಿದವಳು—ಗೌರಿ.

ಆ ಸ್ನೇಹಕ್ಕಾಗಿ ಅನಸೂಯಮ್ಮ ಹೆಚ್ಚೇನೂ ಕಷ್ಟಪಡಬೇಕಾಗಿರಲಿಲ್ಲ. ಆ ಹುಡುಗಿ ಮನೆಗೆ ಬಂದಾಗ, ಮಗನಿಗೆಂದು ಮಾಡಿದ ಒಂದು ಚೂರು ತಿಂಡಿಯನ್ನೋ, ಅಥವಾ ಬೆಳಗಿನ ಊಟದಲ್ಲಿ ಮಿಕ್ಕ ಅನ್ನದಲ್ಲಿ ಒಂದು ತುತ್ತು ಹುಳಿಯಲ್ಲೋ, ಉಪ್ಪಿನಕಾಯಲ್ಲೋ ಕಲಸಿ ಕೊಟ್ಟರೆ ಅಷ್ಟನ್ನು ತಿಂದು ಆ ಹುಡುಗಿ, ಆಕೆಗೆ ಬೇಕಾದಾಗ ಹಾಡು ಹೇಳಿ, ತನ್ನಿಂದಾದ ಕೆಲಸದಲ್ಲಿ ಆಕೆಗೆ ನೆರವಾಗಿ, ಆಕೆಗೆ ' ಜೊತೆ ' ಕೊಡುತ್ತಿದ್ದಳು. ಬೆಳಗ್ಗೆ ಊಟ ಮುಗಿಸಿ ಬಂದ ಹುಡುಗಿ ಮತ್ತೆ ಸಂಜೆಯಾಗಿ, ಅನಸೂಯಮ್ಮನೇ ' ಹೊತ್ತಾಯಿತು, ಮನೆಗೆ ಹೋಗು ' ಎಂದು ಹೇಳುವವರೆಗೂ ಹೋಗುತ್ತಿರಲಿಲ್ಲ.

ಗೌರಿಯ ವಿಷಯದಲ್ಲಿ ಅನಸೂಯಮ್ಮನಿಗೆ ಇದ್ದ ಪ್ರಬಲವಾದ ಆಕರ್ಷಣೆ ಇದಾದರೆ, ಗೌರಿಗೆ ಆ ಮನೆಯಲ್ಲಿ ಇದ್ದ ಪ್ರಬಲವಾದ ಆಕರ್ಷಣೆ—ಅವರ ಮನೆಯಲ್ಲಿದ್ದ ರೇಡಿಯೋ.

' ಹೆಂಡತಿ ಮನೆಯಲ್ಲಿ ಒಬ್ಬಳೇ ಕಾಲ ಕಳೆಯಬೇಕು ಬೇಸರವಾದರೆ ಅದನ್ನು ಕಳೆದುಕೊಳ್ಳಲು ಇರಲಿ ' ಎಂದು ವಾಸುದೇವಯ್ಯ ಮನೆಗೆ ರೇಡಿಯೋ ತಂದಿದ್ದರು.

ಆ ರೇಡಿಯೋದಲ್ಲಿ ತನಗೆ ಬೇಕಾದಷ್ಟು ಸಿನಿಮಾ ಹಾಡು ಕೇಳಬಹುದು ಎಂಬ ಚಪಲದಿಂದ ಗೌರಿ ಆ ಮನೆಗೆ ಬಂದರೆ, ಅನಸೂಯಮ್ಮ ಆವಳ ಕೈಲೇ ಹಾಡಿಸಿ, ರೇಡಿಯೋ ಖರ್ಚಿನಲ್ಲಿ ಅಷ್ಟು ಉಳಿತಾಯ ಮಾಡಿದ್ದರು.

ಅಂತೂ ಇಂತೂ—ಯಾರಿಂದ ಯಾರಿಗೆ ಉಪಕಾರವಾಗಿಯೋ, ಅವರಲ್ಲಿ ಗೆಳತನ ಕಲೆತಿತ್ತು.

ಅನಸೂಯಮ್ಮನಿಗೆ ಗೌರಿಯ ಪರಿಚಯವಾಗಿ, ಅವಳು ಆಕೆಯ ಮನೆಯಲ್ಲಿ ಓಡಾಡಲು ಆರಂಭಿಸಿದಾಗ ಗೌರಿಗೆ ಹದಿಮೂರು—ಹದಿನಾಲ್ಕು ವರ್ಷದ ಪ್ರಾಯ.

ಆ ವಯಸ್ಸಿನ ಉಳಿದ ಹುಡುಗಿಯರು ಸೀರೆ ಉಡುತ್ತಿದ್ದರೂ, ಗೌರಿ ಮಾತ್ರ, ಇನ್ನು ಪರಿಕಾರವನ್ನೇ ತೊಡುತ್ತಿದ್ದಳು.

(ಹೆಂಡತಿಗೆ ಸಾಕಷ್ಟು ಸೀರೆ ಕೊಟ್ಟ ಮೇಲೆ ಅಲ್ಲವೇ ಮಗಳಿಗೆ ತರುವ ಚಿಂತೆ. ಮಗಳಿಗೆ ಸೀರೆ ತರುವುದಿರಲಿ, ಅವಳ ವಯಸ್ಸಿಗೆ ತಕ್ಕಂಥ ಲಂಗ ಹೊಲಿಸುವುದೂ ಶಂಕರಯ್ಯನಿಗೆ ಕೈಮೀರಿದ ಮಾತಾಗಿತ್ತು. ಹಾಗಾಗಿ ಆತ, ಅನುಕೂಲವಾದಾಗ, ಅದಕ್ಕಿಂತ ಹೆಚ್ಚಾಗಿ ಅನಿವಾರ್ಯವಾದಾಗ ಸರದಿ ಪ್ರಕಾರ ಬಟ್ಟೆ ಹೊಲಿಸುತ್ತಿದ್ದ. ಆತ ಲಂಗ ಹೊಲಿಸಲಿಲ್ಲವೆಂದು, ಆ ಹುಡುಗಿಯ ಮೈ ಬೆಳೆಯದಿರಲು ಸಾಧ್ಯವೇ? ಹೀಗಾಗಿ ಬಹುವೇಳೆ, ಗೌರಿಯ ಅಂಗಕ್ಕಿಂತ ಲಂಗ ಕಿರಿದಾಗೇ ಇರುತ್ತಿತ್ತು ಅವಳ ಪಾಲಿಗೆ ಸೊಂಟದ ಬಳಿ ಹಿಂಜದಿದ್ದ ಲಂಗ, ಕಂಕುಳಿಗೆ ಬಿಗಿಯಾಗದಿದ್ದ ಲಂಗವೇ ಹೊಚ್ಚ ಹೊಸ ಲಂಗವಾಗಿತ್ತು. ಎಂದೂ ಅಷ್ಟೆ—ಗೌರಿಯ ಲಂಗ ಮರ್ಯಾದೆ ಮುಚ್ಚುತ್ತಿತ್ತೇ ಹೊರತು, ಮೈ ಮುಚ್ಚುತ್ತಿರಲಿಲ್ಲ. ಅಂಥ ಲಂಗವನ್ನೇ ಅವಳು ತೊಡುತ್ತಿದ್ದುದು.—

ಆ ವಯಸ್ಸಿನಲ್ಲಿ, ಆ ಅವಸ್ಥೆಯಲ್ಲಿ ಗೌರಿ ಮೂರ್ತಿಯ ಕಣ್ಣಿಗೆ ಬಿದ್ದಳು. (ಅವಳು ಕಣ್ಣಿಗೆ ಬಿದ್ದಳು ಎನ್ನುವುದಕ್ಕಿಂತ, ಅವಳ ವಯಸ್ಸಿಗನುಗುಣವಾಗಿ ಬೆಳೆದ ಮೈ ಮೂರ್ತಿಗೆ ಕಂಡಿತು ಎನ್ನುವುದು ಸತ್ಯಕ್ಕೆ ಹೆಚ್ಚು ಸಮೀಪ.)

ಗೌರಿಯ ಪರಿಚಯವಾದಾಗ ಮೂರ್ತಿಗೆ ಹದಿನೇಳರ ಪ್ರಾಯ; ಹೈಸ್ಕೂಲಿನಲ್ಲಿ ಓದುತ್ತಿದ್ದ. ಆ ವೇಳೆಗೆ ಕಾದಂಬರಿಗಳ ಮೂಲಕ ಹೆಣ್ಣೆಂದರೆ ಏನು ಎಂಬುದು ಅರ್ಥವಾಗಿತ್ತು. ಶಾಲೆಯ ಗೋಡೆ, ಬೆಂಚುಗಳ ಮೇಲಿನ ಮಾತುಗಳು, ಜ್ಞಾನಕ್ಕಿಂತ ಕುತೂಹಲವೇ ಹೆಚ್ಚಾದ ಆ ವಯಸ್ಸಿಗೆ ಸ್ತ್ರೀ-ಪುರುಷ ಸಂಬಂಧವೆಂದರೆ ಏನೆಂಬುದರ ಅರಿವನ್ನು ಮೂಡಿಸಿತ್ತು. ಅಲ್ಲದೆ ಅವನು ಆಗಾಗ ನೋಡುತ್ತಿದ್ದ ಸಿನಿಮಾ, ಹೆಣ್ಣು ಗಂಡಿನ ಚೆಲ್ಲಾಟದ ಕ್ರಮವನ್ನು ಅವನಿಗೆ ತೋರಿಸಿ ಕೊಟ್ಟಿತ್ತು.

ಆದರೆ ಆ ಮೊದಲು ಅವನಿಗೆ ಪ್ರಯೋಗಕ್ಕೆ ಮಾತ್ರ ಅವಕಾಶ ದೊರೆತಿರಲಿಲ್ಲ.

ಕೇವಲ ಓದಿ, ಕೇಳಿ, ನೋಡಿ, ಕುತೂಹಲವನ್ನು ಬೆಳೆಸಿಕೊಂಡ ಮೂರ್ತಿಯ ಕಣ್ಣುಗಳಿಗೆ, ಆಗಿನ್ನೂ ಅಪ್ರಬುದ್ಧೆಯಾದ ಗೌರಿ, ಪ್ರಬುದ್ಧ ಹೆಣ್ಣಿನಂತೆಯೇ ಕಾಣುತ್ತಿದ್ದಳು.

ಅವಳನ್ನು ನೋಡಿದಾಗ, ಅವನೊಂದಿಗೆ ಅವಳು ಮಾತಾಡಿದಾಗ ಮೂರ್ತಿಗೆ ತನ್ನೊಳಗೆ ಹುದುಗಿದ ಯಾವುದೋ ಗುಪ್ತ ಆಕಾಂಕ್ಷೆಯನ್ನು ಎಚ್ಚರಿಸಿದಂತಾಗಿ, ಅವನ ಕೈ ಅವಳನ್ನು ಸೋಕಲು ಧಾವಿಸುತ್ತಿದ್ದವು.

ಅವಳನ್ನು ನೋಡಿದಾಗ ಅವನಲ್ಲಿ ಮೂಡುತ್ತಿದ್ದ ಬಯಕೆಯನ್ನು, ಅಲ್ಲಲ್ಲಿ ಹರಿದು ಹಿಂಜಿದ ಲಂಗದೊಳಗಿನಿಂದ ಕಾಣಿಸುವ ಗೌರಿಯ ಮೈಯ ಭಾಗಗಳು ಮತ್ತಷ್ಟು ಕೆರಳಿಸುತ್ತಿದ್ದವು.

ಹೀಗಾಗಿ ದಿನ ದಿನವೂ ಅವಳನ್ನು ನೋಡಿದಂತೆ, ಮನಸ್ಸಿನಲ್ಲಿ, ಅವಳನ್ನು ಈಗಾಗಲೇ ನಿಮ್ನೋನ್ನತ ಭಾಗಗಳು ಸ್ಪಷ್ಟವಾಗುತ್ತಿದ್ದ ಅವಳಮೈಯನ್ನು ಮುಟ್ಟಬೇಕು ಎಂಬ ಬಯಕೆ ಬೆಳೆಯುತ್ತಿತ್ತು.

ಮೂರ್ತಿ ಅವಳನ್ನು ಸೋಕಲು ಅವಕಾಶವೂ ಇಲ್ಲದಿರಲಿಲ್ಲ.

ತಿಂಡಿ, ರೇಡಿಯೋ ಕೇಳುವ ಆಸೆಗಾಗಿ ಮನೆಗೆ ಬರುತ್ತಿದ್ದ ಗೌರಿಯನ್ನು, ತಮ್ಮ ಕೆಲಸಗಳಿಗೆ ಉಪಯೋಗಿಸಿಕೊಳ್ಳುತ್ತಿದ್ದ ಅನಸೂಯಮ್ಮ ಮಧ್ಯಾಹ್ನ ಮನೆಗೆ ಬಂದ ಮೂರ್ತಿಗೆ ಕಾಫಿ, ತಿಂಡಿ ಕೊಡುವ ಕೆಲಸವನ್ನು ಅವಳಿಗೇ ಒಪ್ಪಿಸಿದ್ದಳು. ಎಷ್ಟೋ ವೇಳೆ, ಅನಸೂಯಮ್ಮ ' ಅವನು ಮನೆಗೆ ಬಂದರೆ ಈ ಹುಡುಗಿ ತಿಂಡಿ ಕೊಟ್ಟು ಕಳಿಸುತ್ತಾಳೆ ' ಎಂದು, ಮನೆಗೆಲಸ ಹೆಚ್ಚಾದ ದಿನ, ತಮ್ಮ ಮಧ್ಯಾಹ್ನದ ನಿದ್ರೆಯ ಹೊತ್ತನ್ನು ಮತ್ತಷ್ಟು ಮುಂದುವರಿಸುತ್ತಿದ್ದರು.

ಹಾಗಾದ ದಿನ ಮೂರ್ತಿಗೆ ಗೌರಿಯನ್ನು ಒಂಟಿಯಾಗಿ ಕಲೆಯಲು ಅವಕಾಶ ದೊರೆಯುತ್ತಿತ್ತು. ಅಂಥ ಅವಕಾಶ ದೊರೆಯುವ ದಿನಗಳೂ ಅಪರೂಪವೂ ಆಗಿರಲಿಲ್ಲ.

ಹಾಗೆ ಅವಕಾಶ ದೊರೆತ ಒಂದು ದಿನ—

ತನ್ನ ಕೋಣೆಗೇ ಗೌರಿ, ತಿಂಡಿಯನ್ನು ತಂದು ಕೊಟ್ಟಾಗ, ಮೂರ್ತಿ,

ತನ್ನ ಮುಂದೆ ತಿಂಡಿಯ ತಟ್ಟೆಯನ್ನು ಚಾಚಿದ ಗೌರಿಯ ತೋಳನ್ನು ಹಿಡಿದು ಮೆತ್ತಗೆ ಅವಳನ್ನು ತನ್ನ ಬಳಿ ಎಳೆದುಕೊಂಡ.

ಅನಿರೀಕ್ಷಿತವಾದ ಅವನ ವರ್ತನೆಯನ್ನು ಕಂಡು, ಗೌರಿಯ ಮುಖದ ಮೇಲೆ, ಭೀತಿ ಮೂಡಿ, ಅವಳು ಏನೋ ಹೇಳಲೆತ್ನಿಸಿದಾಗ, ಮೂರ್ತಿ, ಅವಳು ಮಾತಾಡದಂತೆ, ಅವಳ ಬಾಯಲ್ಲಿ ಒಂದು ಚೂರು ತಿಂಡಿಯನ್ನಿಟ್ಟು—

"ಸುಮ್ನಿರು ಏನು ಮಾಡೋಲ್ಲ. ನೀನು ಸುಮ್ನಿದ್ರೆ ನಾಳೆ ನಿನಗೆ ಚಾಕೊಲೇಟ್ ತಂದು ಕೊಡ್ತೀನಿ"

—ಎಂದು ಪಿಸುಧನಿಯಲ್ಲಿ ಆಸೆ ತೋರಿಸಿದ

ಆ ಆಸೆ ಗೌರಿಯ ಬಾಯಿ ಕಟ್ಟಿಸಿತು. ಸದ್ದು ಮಾಡದೆ ಅವನ ಬಳಿ ಸರಿದು ನಿಂತಳು. ಬೆವರಿಡುತ್ತಿದ್ದ ಕೈಗಳಿಂದ ಮೂರ್ತಿ, ಪರಿಕಾರದ ಹರುಕಿನಿಂದ ಹೊರಗೆ ಕಾಣುತ್ತಿದ್ದ ಗೌರಿಯ ಮೈಯನ್ನು ನೇವರಿಸಿದ.

ಅವಳ ದೇಹವನ್ನು ಸ್ಪರ್ಶಿಸಿದಾಗ, ಅವನ ಮೈ ಕೈ ಬೆವರುತ್ತಿದ್ದಂತೆಯೇ ಗೌರಿಯ ಹಣೆಯ ಮೇಲೂ ಬೆವರಹನಿಗಳು ಮೂಡಿದವು.

ಏಕೆಂದು ಅರಿವಾಗದೆ ಅವಳೂ ಅವನ ಮೈಯನ್ನು ಒತ್ತಿ ನಿಂತಳು.

ಆ ದಿನ ಹಾಗೆ ಆರಂಭವಾದ ಅಭ್ಯಾಸ, ಹಾಗೇ ಮುಂದುವರಿಯಿತು. ಅವಕಾಶ ದೊರೆತಾಗಲೆಲ್ಲಾ ಮೂರ್ತಿ ಅವಳ ದೇಹವನ್ನು ಸ್ಪರ್ಶಿಸುತ್ತಿದ್ದ. ಅವಳನ್ನು ತನ್ನ ತೊಡೆಯ ಮೇಲೆ ಕೂಡಿಸಿಕೊಂಡು, ಅವಳ ಕೆನ್ನೆಗಳಿಗೆ ಮುತ್ತಿಡುತ್ತಿದ್ದ.

ಅವಳಿಗೂ ಅದು ಅಪ್ರಿಯವಾಗಿರಲಿಲ್ಲ. ಮೊದಮೊದಲು ಮೂರ್ತಿಯ ಕೈ ತನ್ನ ದೇಹವನ್ನು ಸೋಕಿದಾಗ ಗೌರಿ ನಾಚಿ ಕೆಂಪೇರುತ್ತಿದ್ದಳು. ಆದರೆ ಬರಬರುತ್ತಾ ಆ ನಾಚಿಕೆಗಿಂತ ಪ್ರತ್ಯೇಕವಾದ, ಮತ್ತಾವುದೋ ಭಾವ ಅವಳ ಮೈಯಲ್ಲಿ ಸಂಚಾರಮಾಡತೊಡಗಿತು. ಅವನನ್ನು ನೋಡುತ್ತಿದ್ದ ಹಾಗೇ ಅವಳ ಮೈ, ಅವನ ಆಹ್ವಾನಕ್ಕಾಗಿ ಕಾಯದೆ, ತಾನಾಗಿಅವನ ಬಳಿ ಸರಿಯುತ್ತಿತ್ತು—ಹಣ್ಣಿನ ಭಾರದಿಂದ ತಾನಾಗಿಯೇ ಬಾಗುವ ಬಳ್ಳಿಯಂತೆ.

ಹೀಗೇ ನಡೆದಿತ್ತು—

ಒಮ್ಮೆ—ದಿನವೂ ಮನೆಗೆ ಬರುತ್ತಿದ್ದ ಗೌರಿ, ಒಂದು ವಾರ ಕಳೆದರೂ ಮನೆಗೆ ಬರಲಿಲ್ಲ.

ಹದಿನೈದು ದಿನವಾಯಿತು ಅವಳ ಸುಳಿವಿಲ್ಲ.

ದಿನ ದಿನವೂ ಅವಳಿಗಾಗಿ ಕಾದು ಬೇಸತ್ತ ಮೂರ್ತಿ.

ಕೊನೆಗೆ ಹದಿನಾರನೆಯ ದಿನ ರಾತ್ರಿ, ಅನಸೂಯಮ್ಮ ಯಾರ ಮನೆಗೋ ಅರಿಶಿಣ ಕುಂಕುಮಕ್ಕೆ ಹೋಗಿದ್ದಾಗ ಮೂರ್ತಿಗೆ ತಿಳಿಯಿತು—

ಅನಸೂಯಮ್ಮ ಹೋದುದು – ಮೀನಾಕ್ಷಮ್ಮನ ಮನೆಗೆ; ಮೈ ನೆರೆತ ಗೌರಿಗೆ ನಡೆದ ಹದಿನಾರನೆಯ ದಿನದ ಆರತಿಗೆ.

ಅನಸೂಯಮ್ಮನಿಂದ ಆ ಮಾತು ಕೇಳಿ ಮೂರ್ತಿಗೆ ಒಂದು ಗಳಿಗೆ ಹೇಗೋ ಆಯಿತು.

'ಗೌರಿ – ಮೈ ನೆರೆತಳು."

ಆ ಮಾತು ಕೇಳುತ್ತಿದ್ದ ಹಾಗೇ ಅವನಿಗೆ, ಅಂದಿನವರೆಗಿನ ತಮ್ಮ ಪ್ರಣಯ ಜೀವನ ದಿಕ್ಕು ಬದಲಿಸಿದಂತೆ ತೋರಿತು. ಅಂದಿನವರೆಗಿನದು— ಅರ್ಥಹೀನ, ಅಪರಿಣಾಮಕಾರಿ.

ಮುಂದೆ—?

ಮುಂದಿನದು ಎಷ್ಟು ಅರ್ಥಪೂರ್ಣವೋ, ಅಷ್ಟೇ ಪರಿಣಾಮಪೂರ್ಣ; ಎಷ್ಟು ಆಕರ್ಷಕವೋ, ಅಷ್ಟೇ ಹೊರೆಯಾದದ್ದು. ಏನಾದರೂ ಹೆಚ್ಚು ಕಡಮೆ ಯಾದರೆ —? ಆ ಭಾವನೆಯೇ ಅವನ ಮೈಯನ್ನು ನಡುಗಿಸಿತು.

'ಛಿ! ಅವಳು ದೊಡ್ಡವಳಾಗಬಾರದಾಗಿತ್ತು.'

—ಎಂದುಕೊಂಡ.

ಆದರೆ ಅದರಿಂದ ಏನು ಉಪಯೋಗ? ನಿಸರ್ಗ ತನ್ನ ಕಾರ್ಯವನ್ನು ನೆರವೇರಿಸಿತ್ತು. ಮೊಗ್ಗು ಅರಳಾಗುವುದು ನಿಸರ್ಗ ನಿಯಮ. ಇಲ್ಲಿ ನಿಸರ್ಗ ದೊಂದಿಗೆ, ಬಯಕೆಯ ಕಾವೂ ಮೊಗ್ಗು ಬೇಗ ಹೂವಾಗಲೂ ಸಹಕರಿಸಿತ್ತು.

ಹೂವು ಅರಳಿತ್ತು–ಆದರೆ ದುಂಬಿಗೆ? ಮೊಗ್ಗು ಎಷ್ಟು ಪ್ರಿಯವಾಗಿತ್ತೋ, ಹೂವು ಅಷ್ಟೇ ಭಯಾವಹವಾಗಿತ್ತು.

ಹದಿನಾರು ದಿನಗಳ ಗಡುವು ಕಳೆದುಕೊಂಡು ಗೌರಿ ಮತ್ತೆ ಆಗಾಗ ಮೂರ್ತಿಯ ಮನೆಯಲ್ಲಿ ಕಾಣಿಸಿಕೊಳ್ಳತೊಡಗಿದಳು.

ಈಗ ಅವಳಲ್ಲಿ ಏನೋ ವಿಚಿತ್ರ ಪರಿವರ್ತನೆಯಾಗಿತ್ತು.

ತನ್ನ ತಾಯಿಯ ಹಳೆಯ ಸೀರೆಯನ್ನು ಉಟ್ಟುಕೊಂಡು ಬಂದ ಗೌರಿ,

ಮೂರ್ತಿಯ ಆಹ್ವಾನಕ್ಕಾಗಿ ಕಾಯುತ್ತಿರಲಿಲ್ಲ, ಅವನ ಹೆಜ್ಜೆ ಸಪ್ಪಳ ಕೇಳಿದರೂ ಸಾಕು – ಅವಳ ಕಣ್ಣು ಅರಳಿ, ತಾವೇ ಅವನನ್ನು ಕರೆಯುತ್ತಿದ್ದವು.

ಅವಳು ಈಗ ಏಕೋ ಮೊದಲಿಗಿಂತ ಆಕರ್ಷಕಳಾಗಿ ಕಾಣುತ್ತಿದ್ದಳು. ಅವಳ ಕಣ್ಣನೋಟದಲ್ಲೇನೋ ವಿನೂತನ ಅಯಸ್ಕಾಂತ ಶಕ್ತಿಯಿತ್ತು. ಅವನನ್ನು ನೋಡಿದಾಗ ಅವಳ ಮೈಯ ಅಂಗಅಂಗವೂ ಅವನನ್ನು ಆಹ್ವಾನಿಸಿ, ಅವನಲ್ಲಿ ಅದಮ್ಯ ಬಯಕೆಯನ್ನು ಮೂಡಿಸುತ್ತಿದ್ದವು.

ಈಗ ಮೂರ್ತಿ ಅವಳಿಗಾಗಿ ಕಾಯಬೇಕಾಗಿರಲಿಲ್ಲ. ಮನೆಯಲ್ಲಿ ಕಾಲಿಟ್ಟ ಗಳಿಗೆಯಿಂದ ಅವಳ ಕಣ್ಣುಗಳೇ ಅವನನ್ನು ಹುಡುಕಿಕೊಂಡು ಅಲೆಯುತ್ತಿದ್ದವು.

ಆದರೆ ಮೂರ್ತಿಯೋ,—ಆ ಕಣ್ಣುಗಳನ್ನು ನೋಡಿದಾಗ, ಪೋಲೀಸರನ್ನು ಕಂಡ ಕಳ್ಳನಂತೆ ಅಂಜಲಾರಂಭಿಸಿದ್ದ. ಆದಷ್ಟು ಮಟ್ಟಿಗೆ ಅವಳ ಕಣ್ಣು ತಪ್ಪಿಸುತ್ತಿದ್ದ. ಅವಳು ಮನೆಯಲ್ಲಿದ್ದಾಗ ತಾನೇ ಅಲ್ಲಿರದೆ, ಹೊರಗೆ ಹೋಗುತ್ತಿದ್ದ.

ಹಾಗೆಂದು ಅವನಲ್ಲಿ ಬಯಕೆ ಇರಲಿಲ್ಲವೆಂದಲ್ಲ – ಬಯಕೆ ಇತ್ತು ; ಮೊದಲಿಗಿಂತಲೂ ಉಗ್ರವಾದ ಬಯಕೆಯಿತ್ತು. ಆದರೆ ಬಯಕೆಯೊಂದಿಗೆ ಭಯವೂ ಅವನನ್ನು ಕಾಡಿಸತೊಡಗಿತ್ತು—

ಏನಾದರೂ ಆದರೆ—?

ಗೌರಿ ದೊಡ್ಡವಳಾದ ಬಳಿಕ, ಅವಳು ಮೂರ್ತಿಯೊಂದಿಗೆ ಸಲಿಗೆಯಾಗಿ, ಓಡಾಡುವ ವಿಷಯದಲ್ಲಿ ಅವನಿಗಿದ್ದ ಭಯವೇ ಅವನ ತಾಯಿಗೂ ಇತ್ತು ಎಂತಲೇ ಆಕೆಯೂ ಅವರು ಒಂಟಿಯಾಗಿರಲು ಅವಕಾಶ ಕೊಡುತ್ತಿರಲಿಲ್ಲ.

ಹಾಗಿದ್ದೂ ಒಂದು ದಿನ, ತನ್ನ ಮನೆಯಲ್ಲೇ ಮೂರ್ತಿ ಒಂಟಿಯಾಗಿ ಗೌರಿಗೆ ಸಿಕ್ಕ.

ಆ ದಿನ ಮಧ್ಯಾಹ್ನದ ಶಾಲೆ ಮುಗಿಸಿಕೊಂಡು, ಮೂರ್ತಿ ಕಾಫಿ ತಿಂಡಿಗೆಂದು ಬಂದಾಗ, ಅನಸೂಯಮ್ಮ ಮನೆಯಲ್ಲಿರಲಿಲ್ಲ. ' ಹಾಲ್ ' ನಲ್ಲಿ ಗೌರಿ ಒಬ್ಬಳೇ ಕುಳಿತಿದ್ದಳು.

ಅವಳು ಇದುರಿಗೆ ಕುಳಿತಿದ್ದರೂ ನೋಡದವನಂತೆ ಮೂರ್ತಿ—

" ಅಮ್ಮಾ "

—ಎಂದು ಕೂಗಿದ.

" ಅನಸೂಯಮ್ಮ ಮನೇಲಿಲ್ಲ."

—ಮೂರ್ತಿಯ ಪ್ರಶ್ನೆಗೆ ಗೌರಿಯೇ ಉತ್ತರ ಕೊಟ್ಟಳು.

ಅವಳ ಉತ್ತರವನ್ನು ಕೇಳಿಯೇ ಏಕೋ ಮೂರ್ತಿಗೆ ಬೆವರಿಟ್ಟಿತು. ತನ್ನ ಕೂಗಿಗೆ ಉತ್ತರ ಕೊಟ್ಟು, ತನ್ನನ್ನೇ ದಿಟ್ಟಿಸಿ ನೋಡುತ್ತಿದ್ದ ಗೌರಿಯ ಮುಖವನ್ನು ನೋಡಲು ಕೂಡಾ ಅವನಿಗೆ ಶಕ್ತಿ ಇದ್ದಂತಿರಲಿಲ್ಲ. ತಲೆಯನ್ನು ತಗ್ಗಿಸಿ ಕೇಳಿದ—

" ಎಲ್ಹೋದ್ರು."

" ಆಚೆಮನೆ ಸಂಜೀವರಾಯರು ತೀರಿಕೊಂಡ್ರು. ಅದಕ್ಕೇ ಅಲ್ಲಿಗೆ ಹೋಗಿದಾರೆ."

" ಎಷ್ಟೊತ್ತಾಯ್ತು ಹೋಗಿ ? "

" ಈಗ ಹತ್ನಿಮಿಷ ಆಯ್ತು. ನೀವು ಬಂದ್ರೆ ' ನಾನು ಬರೋದು ಎಷ್ಟು ಹೊತ್ತಾಗುತ್ತೋ. ಅಡಿಗೆಮನೇಲಿ, ಒಲೆ ಮೇಲೆ ಕಾಫಿ ತಿಂಡಿ ಇದೆ, ತಗೊಂತ ಹೇಳು. ' ಅಂದು, ಆ ಮಾತು ಹೇಳಿ ನಿಮಗೆ ಹೇಳೋಕೆ ನನ್ನಿಲ್ಲಿ ಕೂಡಿಸಿ ಹೋದ್ರು."

—ಆ ಮಾತು ಹೇಳಹೇಳುತ್ತಾ ಗೌರಿಯ ಕಣ್ಣುಗಳು ಏಕೋ ಹೊಳೆದವು.

ಆ ಕಣ್ಣುಗಳನ್ನು ನೋಡಿಯೂ ನೋಡದವನಂತೆ ಮೂರ್ತಿ—

" ಸರಿ."

— ಎಂದು, ಕೈಯಲಿದ್ದ ಪುಸ್ತಕಗಳನ್ನು ಹಾಲಿನಲ್ಲಿ ರೇಡಿಯೋ ಇಟ್ಟಿದ್ದ ಮೇಜಿನ ಮೇಲಿಟ್ಟು, ಕೋಟು ಬಿಚ್ಚಿ ಹಾಕಿ, ತಾನೇ ತಿಂಡಿ ತೆಗೆದುಕೊಳ್ಳಲು ಅಡಿಗೆಮನೆಗೆ ಹೋದ.

ಮನೆಯಲ್ಲಿ ನೀರವತೆ ವ್ಯಾಪಿಸಿತ್ತು. ಆ ನೀರವತೆ ಅವನಿಗೇನೂ ಹೊಸದಲ್ಲ. ಆದರೆ ಅಂದಿನ ನೀರವತೆಯಲ್ಲಿ ಏನೋ ಹೊಸದು, ಉದ್ರೇಕವನ್ನು ಮೂಡಿಸುವಂಥ ವಿಶೇಷವಿದ್ದಂತಿತ್ತು.

ಒಲೆಯ ಮೇಲಿದ್ದ ತಿಂಡಿಯನ್ನು ತಟ್ಟೆಗೆ ಹಾಕಿಕೊಳ್ಳುತ್ತಿದ್ದ ಮೂರ್ತಿಯ ಕೈಗಳು ನಡುಗುತ್ತಿದ್ದವು. ಅವನ ಎದೆ ಢಡಢಡಿಸುತ್ತಿತ್ತು.

ಅವನು ತಿಂಡಿ ಬಡಿಸಿಕೊಳ್ಳಲೆಂದು ಬಗ್ಗಿರುವಾಗಲೇ, ಅವನ ಬೆನ್ನ ಹಿಂದೆ ಬಹು ಮೃದುವಾದ ಹೆಜ್ಜೆಯ ಸದ್ದು ಕೇಳಿಸಿದರೂ, ಮೂರ್ತಿಗೆ ಆಕಡೆ ತಿರುಗಿ ನೋಡುವುದು ಸಾಧ್ಯವಾಗದೆ, ಕೈಯ ನಡುಕ ಹೆಚ್ಚಾಗಿ, ಕೈಯಲ್ಲಿ ಹಿಡಿದ ಸೌಟಿನಲ್ಲಿದ್ದ ತಿಂಡಿ ನೆಲಕ್ಕೆ ಬಿದ್ದಿತು. ಅದೂ ಮೂರ್ತಿಗೆ ಎಚ್ಚರ ವಿರಲಿಲ್ಲ. ಅವನ ಮೈಯ ನರನರವೂ ಜಗಿದು, ಕಾಲ್ಬೆರಳು ಕಂಪಿಸುತ್ತಿದ್ದವು.

ಬಾಗಿಸಿದ ದೇಹವನ್ನು ಮೇಲಕ್ಕೆತ್ತಲೂ ಆಗದೆ, ಮೂರ್ತಿ ನಿಂತಿರು ವಾಗಲೇ, ಮೃದುವಾದ ತೋಳುಗಳೆರಡು, ಅವನ ಬೆನ್ನನ್ನು ಬಿಗಿದು, ತಮ್ಮತ್ತ ಎಳೆದುಕೊಂಡವು. ಅವನ ಕತ್ತಿನ ಮೇಲೆ ಬಿಸಿಯಾದ ತುಟಿಗಳು ಮುದ್ರೆ ಯೊತ್ತಿದವು. ಆಗಲೂ ಮೂರ್ತಿಗೆ ತನ್ನನ್ನು ಅಪ್ಪಿದವರನ್ನು ನೋಡುವುದೂ ಸಾಧ್ಯವಾಗಲಿಲ್ಲ.

ಕಡೆಗೆ ಗೌರಿಯೇ ಬಲವಂತವಾಗಿ ಅವನ ಮುಖವನ್ನು ತನ್ನತ್ತ ತಿರುಗಿಸಿಕೊಂಡು—

" ನನ್ನ ಮೇಲೆ ಸಿಟ್ಟೇ ? "

—ಎಂದು ಪಿಸುಧ್ವನಿಯಲ್ಲಿ ಕೇಳಿದಳು.

" ಏಕೆ ? "

" ಇಲ್ಲಿಗೆ ಭಾಳ ದಿನ ಬರ್ಲಿಲ್ಲಾಂತ . . . ನಾನೇನು ಮಾಡಲಿ . . . ನನಗೂ ಬರಬೇಕೂಂತ ಆಸೆ ಇತ್ತು . . . ಮನೇಲಿ ಬಿಡಲಿಲ್ಲ . . . "

" ಹೂ."

" ಈಗ ನಿಮಗೆ ಸಂತೋಷ ಆಯ್ತೊ . . . ? "

ಆ ಪ್ರಶ್ನೆಗೆ ಮೂರ್ತಿ ಉತ್ತರ ಕೊಡಲಿಲ್ಲ.

" ಮತ್ತೆ . . . ಮತ್ತೆ . . . . ನಾನು ದೊಡ್ಡವಳಾದೇಂತ . . . . ಬೇಜಾರೇ . . . . "

—ಗೌರಿಯೇ ಮತ್ತೆ ಪ್ರಶ್ನೆ ಮಾಡಿದಳು.

" ಊಹೂ . . . "

" ಮತ್ತೆ ಹೀಗ್ಯಾಕಿದೀರ . . . . ನನ್ನ ಕಂದ್ರೆ . . . . ಮೊದಲಿನ ಹಾಗೆ . . . . "

—ಅವನನ್ನು ತನ್ನೆದೆಗೆ ತಬ್ಬಿಕೊಂಡು ಕಕ್ಕುಲತೆಯಿಂದ ಕೇಳಿದಳು ಗೌರಿ.

ಅವಳ ತೊಳಿತಕ್ಕೆ ಅವನಿಗೆ ಹಿತವಾಗಿತ್ತು. ಆದರೂ ಏಕೋ ಉರಿ ಪಂಜರದಂತಿದ್ದು, ಆದಷ್ಟು ಬೇಗ ಅದರಿಂದ ಹಾರಿಹೋಗಬೇಕು ಎನ್ನಿಸುತ್ತಿತ್ತು ಮೂರ್ತಿಗೆ.

" ನನ್ನ ಕೈಲಿ ಮಾತಾಡೊಲ್ವೇ ? . . . "

" ಮಾತಾಡ್ತೀನಿ. ಈಗ ಬೇಡ. ಇನ್ಯಾವಾಗಲಾದ್ರೂ . . . "

" ಈಗ ಏಕೆ ಬೇಡ . . . "

" ಅಮ್ಮಾ ಬರ್‍ತಾಳೋ ಏನೋ . . . "

" ಊಹೂಂ, ಅವರಿಷ್ಟು ಜಾಗ್ರತೆ ಬರೊಲ್ಲ ನಂಗೆ ಗೊತ್ತು . . . . ಅದಕ್ಕೇ ನನಗೀವತ್ತು ಭಾಳ ಸಂತೋಷ ಆಗಿತ್ತು . . . "

" ಏಕೆ ? "

" ನಾವಿಬ್ರೇ . . . . . "

—ಆ ಮಾತು ಆಡುತ್ತಿದ್ದ ಹಾಗೇ ಗೌರಿಯ ಮುಖ ಕೆಂಪೇರಿ, ಅವಳ ಕಣ್ಣುಗಳು ಥಳಥಳಿಸಿ, ಅವಳ ತುಟಿ ಅವನ ತುಟಿಯನ್ನು ತಬ್ಬಿ—

" ಇದಕ್ಕೆ."

—ಎಂದಳು.

ಮಾತಾಡುವಾಗಲೂ ಅವಳ ನೋಟ ಅವನನ್ನು ಬಿಗಿಯುತ್ತಿದ್ದವು. ಅವಳ ಕಣ್ಣಲ್ಲಿ ಬಯಕೆ ತಿದಿಯೊತ್ತಿದ ಕುಲುಮೆಯ ಉರಿಯಂತೆ ಉರಿಯುತ್ತಿತ್ತು. ಅದೇ ಬಯಕೆ, ಅದೇ ಕಾತರ ಮೂರ್ತಿಯ ನರನರದಲ್ಲೂ ಹುಚ್ಚಾಗಿ ಹರಿಯುತ್ತಿತ್ತು.

ಆದರೆ ಅವನ ಮೆದುಳಿಗೆ ಮಾತ್ರ ಭಯದ ಕುಳಿರು ಹಿಡಿದಿತ್ತು.

" ಏನಾದರೂ ಆದರೆ—? "

ಆ ಭಯಕ್ಕೆ ಸೋತು ಮೂರ್ತಿ, ತನ್ನನ್ನು ಬಿಗಿದಪ್ಪಿದ ಅವಳನ್ನು ತಬ್ಬಲೂ ಆಗದೆ ನಿಂತಿದ್ದ. ಗಳಿಗೆಗಳಿಗೆಗೆ ಅವಳ ಉದ್ರೇಕ ಹೆಚ್ಚುತ್ತಿತ್ತು . . .

ಆದರೆ ಅವಳೇನು ಮಾಡಿದರೂ ಮೂರ್ತಿಯ ಮೈ ಮಾರುತ್ತರ ಕೊಡಲಿಲ್ಲ. ಇದ್ದಕ್ಕಿದ್ದ ಹಾಗೇ ತಟಕ್ಕನೆ ಅವಳ ಕಣ್ಣಲ್ಲಿ ನೀರು ತುಂಬಿತು.

" ಬೇಡವೇ."

— ಮೈಯೆಲ್ಲಾ ಬೇಡಿಕೆಯಾಗಿ ಕೇಳಿದಳು ಗೌರಿ.

" ಈಗ . . . ಇವತ್ತು . . . ಸ್ಕೂಲಿಗೆ ಹೊತ್ತಾಗಿ ಹೋಯ್ತು."

—ಎಂದು ಬಲವಂತವಾಗಿ ಅವಳ ತೋಳಬಂಧನದಿಂದ ಬಿಡಿಸಿಕೊಂಡು, ' ಹಾಲ್ ' ಗೆ ಹೋಗಿ ಅವಸರವಸರವಾಗಿ ಕೋಟು ಧರಿಸಿದ ಮೂರ್ತಿ.

ಸ್ಕೂಲಿಗೆ ಹೋಗಲು ಸಿದ್ಧನಾಗಿ, ಪುಸ್ತಕ ಹಿಡಿದು, ಮೂರ್ತಿ ಹಿಂದಿರುಗಿ ನೋಡಿದ—

ಅವನನ್ನು ಹಿಂಬಾಲಿಸಿ, ಅಡಿಗೆಯ ಮನೆಯ ಬಾಗಿಲಿಗೆ ಬಂದು ನಿಂತ ಗೌರಿಯ ಎದೆಯ ಮೇಲಿನ ಸೆರಗು ಸರಿದಿತ್ತು.

ಅವಳ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯುತ್ತಿತ್ತು.

ಮೂರ್ತಿ, ತಟಕ್ಕನೆ ತಲೆ ತಗ್ಗಿಸಿ, ಅಟ್ಟಬಂದ ಹುಲಿಯಿಂದ ತಪ್ಪಿಸಿಕೊಳ್ಳುವವನಂತೆ ವೇಗವಾಗಿ ಮನೆ ಬಿಟ್ಟು ಹೊರಟ.

ಅಂದಿನಿಂದ ಮೂರ್ತಿ ಮಧ್ಯಾಹ್ನ ಮನೆಗೆ ತಿಂಡಿಗೆ ಬರುವುದನ್ನು ತಪ್ಪಿಸಿದ—ಆ ಹೊತ್ತಿನಲ್ಲಿ ಬಂದರೆ ಮತ್ತೆಲ್ಲಿ ಏಕಾಂಗಿಯಾಗಿ ಗೌರಿಯನ್ನು ಎದುರಿಸಬೇಕಾಗುವುದೋ ಎಂದು.

ಆದರೂ ದಿನವೂ ಒಮ್ಮೆಯಾದರೂ ಗೌರಿ ಅವನ ಕಣ್ಣ ಇದುರಿನಲ್ಲಿ ಸುಳಿಯುತ್ತಿದ್ದಳು.

ಅವಳ ಬಯಕೆಗಣ್ಣುಗಳ ಉರಿ, ಅವನ ನರವನ್ನು ಉದ್ರೇಕಿಸಿ, ಮಿದುಳಿಗೆ ಕಳೆರು ಹಿಡಿಸುತ್ತಿತ್ತು. ಅದರ ಜಾಲದಿಂದ ತಪ್ಪಿಸಿಕೊಂಡು ಮೂರ್ತಿ ದೂರ ಓಡುತ್ತಿದ್ದ.

ಆದರೆ ದಿನದಿನವೂ ನಡೆಯುತ್ತಿದ್ದ ಈ ಅಗ್ನಿಪರೀಕ್ಷೆಯಲ್ಲಿ ಮೂರ್ತಿ ತತ್ತರಿಸಿಹೋದ.

" ಇದರಿಂದ ಹೇಗೆ ಪಾರಾಗುವುದು ? "

—ದಿನದಿನವೂ, ಗಳಿಗೆಗಳಿಗೆಯೂ ಅವನ ಮಿದುಳು ಅದನ್ನೇ ಚಿಂತಿಸುತ್ತಿತ್ತು.

ಒಮ್ಮೊಮ್ಮೆ ಬಯಕೆ ಬಲಿದು, ಗೌರಿಯ ಬಳಿ ಹೋಗಬೇಕು ಎನಿಸುವುದು. ಮರುಗಳಿಗೆಯೇ ಭೀತಿ ಹಬ್ಬಿ ಎಲ್ಲಾದರೂ ಆ ಕಣ್ಣುಗಳಿಗೆ ಬೀಳದಂತೆ ದೂರ ಹೋಗಬೇಕು ಎನಿಸುವುದು.

**ಬಯಕೆ – ಭೀತಿ—**

ಭೀತಿ – ಬಯಕೆ.

ಅವನು ಅವಳಲ್ಲಿ ಬಯಕೆಯನ್ನು ಕೆರಳಿಸಿದ್ದ, ನಿರೀಕ್ಷೆಯನ್ನು ಮೂಡಿಸಿದ್ದ – ಆಗ.

ಈಗ – ಅವನಲ್ಲೂ ಬಯಕೆ ಇತ್ತು, ನಿರೀಕ್ಷೆಯಿತ್ತು – ತೃಪ್ತಿಪಡಿಸಲು ಅವಳೂ ಆತುರವಾಗಿದ್ದಳು. ಆದರೆ – ಭಯ.

ಭಯ – ಆ ದಿನ ಹೇಗೋ ತಪ್ಪಿಸಿಕೊಂಡಿದ್ದ. ಇನ್ನೊಂದು ದಿನ ಹಾಗಾದರೆ—

ಆ ಭಯಕ್ಕೆ ಸೋತು, ಮೂರ್ತಿ ಪರೀಕ್ಷೆ ಮುಗಿಯುತ್ತಿದ್ದ ಹಾಗೇ, ತನ್ನ ಅಕ್ಕನನ್ನು ನೋಡಿಕೊಂಡು ಬರುವ ನೆಪ ಹಾಕಿಕೊಂಡು ನಂಜನಗೂಡಿಗೆ ಹೊರಟುಹೋದ.

ಹೋದವನು ಮತ್ತೆ ಮೂರು ತಿಂಗಳ ಕಾಲ ಬೆಂಗಳೂರಿಗೆ ಬರಲಿಲ್ಲ.

ಗೌರಿಯ ಸಾಮೀಪ್ಯಕ್ಕೆ ಹೆದರಿ, ನಂಜನಗೂಡಿಗೆ ಹೋಗಿ ಗೌರಿಯನ್ನು ಮರೆಯಬಹುದು ಎಂದುಕೊಂಡಿದ್ದ ಮೂರ್ತಿ – ಆದರೆ ಗೌರಿಯನ್ನು ಮರೆಯಲಾಗಲಿಲ್ಲ.

ಆ ದೂರದಲ್ಲಿ – ಅವಳ ಮೈಯ ನೆನಪು ಅವನ ಮಿದುಳನ್ನು ಭೂತದಂತೆ ಹಿಡಿದಿತ್ತು.

ಏನಾದರಾಗಲಿ – ಸುಖಪಟ್ಟು ಬಿಡುವುದು, ಬಂದದ್ದು ಬರಲಿ ಎಂದು, ರಜ ಮುಗಿಯುವುದನ್ನೇ ಕಾದಿದ್ದು ಬೆಂಗಳೂರಿಗೆ ಹಿಂತಿರುಗಿದ. ಹಿಂದಿರುವಾಗ ಗೌರಿಯೂ ತನ್ನ ಬರುವಿಕೆಯನ್ನೇ ಕಾಯುತ್ತಿರಬಹುದು ಎಂದುಕೊಂಡಿದ್ದ.

ಅವನು ಹಿಂದಿರುಗಿದ – ಆದರೆ ಗೌರಿ ಅವನಿಗಾಗಿ ಕಾಯುತ್ತಿರಲಿಲ್ಲ.

ಅವನು ಬೆಂಗಳೂರಿಗೆ ಹಿಂದಿರುಗಿದ ದಿನವೇ ಅನಸೂಯಮ್ಮ ಅಚ್ಚರಿಯ ಸುದ್ದಿಯನ್ನು ಹೇಳುವಂತೆ ಮಗನಿಗೆ ಹೇಳಿದರು—

" ಕೇಳ್ದೇನೋ ಮೂರ್ತಿ ? "

" ಏನಮ್ಮ ? "

" ಆ ಹುಡುಗಿ ಗೌರಿ ಇದ್ಲಲ್ಲಾ . . . ದಿನಾ ನಮ್ಮನೆಗೆ ಬರ್ತಿದ್ಲು. ನಾನು ಅವಳು ಭಾಳ ಒಳ್ಳೇಳೂಂತಾಲೇ ಇದ್ದೆ. ಅಂಥ ಹುಡುಗಿಗೆ ಅದೇನು ಕೇಡುಗಾಲಕ್ಕೆ ಅಂಥ ವಿಪರೀತ ಬುದ್ಧಿ ಬಂತೋ ಏನೋ – ನಾವ್ಯಾರೂ ಕನಸುಮನಸಿನಲ್ಲೂ ಊಹಿಸದೆ ಇದ್ದಂಥ ಕೆಲಸ ಮಾಡಿಬಿಟ್ಲು."

" ಏನು ? ಏನು ಮಾಡಿದಳು ? "

—ಆತುರವಾಗಿ ಕೇಳಿದ ಮೂರ್ತಿ.

" ನೀನು ಆ ಮೂಲೇಮನೆ ಮೊದಲಿಯಾರ್ರ ಮಗನ್ನ ನೋಡಿದ್ದಲ್ಲ . . ಕರ್ರಗೆ ಚಂದನದ ಗೊಂಬೆ ಹಾಗಿದ್ನಲ್ಲೋ . . . ಆ ಪೋಕರಿ . . . "

" ಹೂ . . . ಹೂ . . . ಸಾಂಬಶಿವಾಂತ . . . "

" ಅವನೇ – ಆ ಪೋಕರೀನ ಕಟ್ಟಿಕೊಂಡು ಊರು ಬಿಟ್ಟು ಓಡಿ ಹೋದ್ಲು . . . "

" ಯಾವಾಗ ? "

" ಹದಿನೈದು ದಿನ ಆಯ್ತು."

—ಎಂದಳು ಅನಸೂಯಮ್ಮ.

" ಮತ್ತೆ – ಈಗ ? "

" ಈಗಿನ್ನೇನು ? "

" ವಾಪಸು ಬಂದ್ಲೆ ? "

" ಊಹೂ – ಇನ್ನೆಲ್ಲಿ ಬರ್ತಾಳೆ. ಬಂದ್ರೆ ಪೊರಕೆ ಏಟು ಕಾದಿಲ್ವೆ ? "

—ತಾತ್ಸಾರ ತುಂಬಿದ ಧ್ವನಿಯಲ್ಲಿ ಹೇಳಿದಳು ಅನಸೂಯಮ್ಮ.

" ಅವರಪ್ಪ ಸುಮ್ನಿದ್ನೆ ? "

" ಯಾರಪ್ಪ ? "

" ಗೌರಿ ಅಪ್ಪ – ಶಂಕರಯ್ಯ."

" ಸುಮ್ನಿರದೆ ಏನ್ಮಾಡ್ತಾನೆ – ಅವಳಿದ್ದಿದ್ರೆ ಇವನಿಗೇ ಮದ್ವೆ, ಪ್ರಸ್ತಾಂತ ಗಂಡಾಂತರ ಕಾದಿತ್ತು. ಸದ್ಯ ಹೋದ್ಳೇ ಒಳ್ಳೇದಾಯ್ತು ಅಂತ ಥಣ್ಣಗೆ ಜಿಲ್ಲ ಬಡಿದ ಕಲ್ಲಿನ ಹಾಗೆ ಕೂತಿದಾನೆ . . . ಅಲ್ಲ . . . ಚೋಟುದ್ದದೋಳು – ಅವಳಿಗಷ್ಟು ಧೈರ್ಯ ಹ್ಯಾಗೆ ಬಂತೂಂತ – ಇಂಥ ಕೆಲಸ ಮಾಡೋಕೆ ? ಆ ಪೋಲಿ ಭಡವ ಏನು ಮಾಡಿ, ಏನು ಹೇಳಿ ಅವಳ ತಲೆ ಕೆಡಿಸಿದನೋ ಏನೋ ? "

—ಅನಸೂಯಮ್ಮ ಮೂಗಿನ ಮೇಲೆ ಬೆರಳಿಟ್ಟುಕೊಂಡು ಹೇಳಿದಳು.

ಮೂರ್ತಿ ಆಕೆಯ ಪ್ರಶ್ನೆಗೆ ಏನೂ ಉತ್ತರ ಕೊಡಲಿಲ್ಲ. ಉತ್ತರ

ಕೊಡುವ ಸ್ಥಿತಿಯಲ್ಲೂ ಅವನಿರಲಿಲ್ಲ. ಅವನ ಮನಸ್ಸೂ ಗೌರಿಯ ಧೈರ್ಯದ ವಿಷಯವನ್ನೇ ಕುರಿತು ಚಿಂತಿಸುತ್ತಿತ್ತು.

" ಎಂಥ ಗಟ್ಟಿಗಿತ್ತಿ ಗೌರಿ ! "

ಗೌರಿಗೆ ಧೈರ್ಯವಿತ್ತು. ಇಡೀ ಜಗತ್ತನ್ನೇ ಅಚ್ಚರಿಗೊಳ್ಳುವಂತೆ ಎದುರಿಸಿ ತನ್ನ ಬಯಕೆಯನ್ನು ಪೂರ್ಣಗೊಳಿಸಿಕೊಳ್ಳುವ ಧೈರ್ಯವಿತ್ತು.

ಆದರೆ ತನಗೆ—

ಅವಳನ್ನು ಕಂಡು, ಬಯಸಿ, ಅವಳಲ್ಲೂ ಬಯಕೆಯನ್ನು ಕೆರಳಿಸಿದ ತನಗೆ— ಊಹೂ.

— ಗೌರಿ ಗಟ್ಟಿಗಿತ್ತಿ – ನಾನು ಹೇಡಿ !

ಬಯಸಿದುದು ತೋಳ ಬಳಿ ಬಂದಾಗಲೂ ಅನುಭವಿಸಲು ಹೆದರಿದ ಹೇಡಿ. ಹೇಡಿಯಷ್ಟೇನೇ—

ಗೌರಿ ಓಡಿಹೋಗಿದ್ದಳು – ಬಯಕೆಯನ್ನು ತೀರಿಸಿಕೊಳ್ಳಲು.

ಅವಳಲ್ಲಿ ಆ ಬಯಕೆಯನ್ನು ಕೆರಳಿಸಿದವರು ಯಾರು ?

ನಿಸರ್ಗ ಅವಳ ದೇಹವನ್ನು ಪುರುಷಸ್ಪರ್ಶಕ್ಕೆ ಸಿದ್ಧಮಾಡುವ ಮುನ್ನವೇ, ಆ ದೇಹದ ಮೇಲೆ ತನ್ನ ಬಯಕೆಯ ಕೈಯಾಡಿಸಿ, ಆ ದೇಹದಲ್ಲಿ ಕಾಮಾಕಾಂಕ್ಷೆಯ ಅದಮ್ಯ ದಾಹವನ್ನು ಮೂಡಿಸಿ—

ಅದು, ನಿರೀಕ್ಷೆಯನ್ನು ಮೂಡಿಸಿದ ತನ್ನಿಂದಲೇ ತೃಪ್ತಿಯ ಪ್ರತಿಫಲವನ್ನು ಬೇಡಿದಾಗ—

ಹಿಂಜರಿದಿದ್ದ—

ನಿಜ – ಹಿಂಜರಿದಿದ್ದ. ಅದು ಮಾಡಬಾರದ ಕೆಲಸವೆಂಬ ನೀತಿ ಮೂಲವಾದ ಸಂಕೋಚದಿಂದಲ್ಲ ; ಆ ಕೃತ್ಯದ ಹೊಣೆಗಾರಿಕೆಯನ್ನು ಹೊರಲಾಗದ ಭಯದಿಂದ.

ಇಂದು ಗೌರಿ – ಯಾವನನ್ನೋ ಕಟ್ಟಿಕೊಂಡು ಓಡಿಹೋದ ಲಜ್ಜಾಹೀನ ಅಪರಾಧಿ.

ತಾನು —

ಅವಳನ್ನು ಅದಮ್ಯ ಆಕಾಂಕ್ಷೆಯ ಸುಳಿಗೆ ಸಿಕ್ಕಿಸಿ ಈ ಬಗೆಯ ದುಸ್ಸಾಹಸಕ್ಕೆ ಪ್ರೇರೇಪಿಸಿದ ತಾನು – (ಅವನೇನು ಸಮಾಧಾನ ಕಲ್ಪಿಸಿ

ಕೊಂಡರೂ ಅವನ ಅಂತರಾತ್ಮ, ಅಪರಾಧ ಮೂಲ ನಿನ್ನದೇ ಎಂದೇ ಹೇಳುತ್ತಿತ್ತು.)

ಅವಳು ಅಪರಾಧಿ – ಇವನು ಸಾಕ್ಷ್ಯಸ್ಥ.

ಅವಳು ಗಟ್ಟಿಗಿತ್ತಿ – ತಾನು—?

—ಹೇಡಿ, ಹೇಡಿ, ಹೇಡಿ.

ಅವನ ಹೃದಯ ಹುಯ್ಯಲಿಟ್ಟು ಹೇಳಿತು – 'ನೀನು ಹೇಡಿ. ನೀನು ಅಪರಾಧಿ.'

ಆ ಆಪಾದನೆಯ ತೋರುಬೆರಳಿನಿದುರು ಮೂರ್ತಿ ತತ್ತರಿಸಿ, ತಲೆ ಬಾಗಿಸಿ, ತನಗೆ ತಾನೇ ಹೇಳಿಕೊಂಡ—

"ಆ ಹುಡುಗಿಗಿದ್ದಷ್ಟು ಧೈರ್ಯ ನನಗಿರಲಿಲ್ಲ. ಇದ್ದಿದ್ದರೆ—

ತಾನೇ ಕೆರಳಿಸಿದ ಬಯಕೆಗೆ ತೃಪ್ತಿಯನ್ನು ನೀಡುವ ಧೈರ್ಯ ಇದ್ದಿದ್ದರೆ–

ತಾನು ಮಾಡಿದ ಕೆಲಸದ ಹೊಣೆಗಾರಿಕೆ ಹೊರುವ ಪುರುಷತ್ವ ತನ್ನಲ್ಲಿ ಇದ್ದಿದ್ದರೆ—

ಇಂದು ಗೌರಿ – ಅಪರಾಧಿಯಾಗಿರಬೇಕಾಗಿರಲಿಲ್ಲ. ನಾಚಿಕೆಗೇಡಿಯಾಗ ಬೇಕಾಗಿರಲಿಲ್ಲ.

ತಾನೂ – ಬಯಸಿದುದನ್ನು ಕಳೆದುಕೊಂಡೂ, ತನ್ನ ಅಂತರಾತ್ಮನಿದಿರು ಅಪರಾಧಿಯಾಗಿ ತಲೆ ಬಾಗಿಸಬೇಕಾಗಿರಲಿಲ್ಲ.

'ನನಗಷ್ಟು ಧೈರ್ಯವಿದ್ದಿದ್ದರೆ—'

ಹತ್ತಾರು ಬಾರಿ, ಕೆನ್ನೆಗೆ ಹೊಡೆದುಕೊಳ್ಳುವಂತೆ ಆ ಮಾತನ್ನು ಮೂರ್ತಿ ತನಗೆ ತಾನೇ ಹೇಳಿಕೊಂಡ. ಆದರೇನು ಉಪಯೋಗ—

ಗೌರಿ ಹಾರಿಹೋಗಿದ್ದಳು.

'ಸಲ್ಲದು, ನನಗೆ ಇಂಥ ಭಯ ಸಲ್ಲದು.'

—ಎಂದೂ ಹೇಳಿಕೊಂಡ ಆದರೇನು ಫಲ—

ಗೌರಿ ಹಾರಿಹೋಗಿದ್ದಳು.

'ಮುಂದೆ – ಇಂಥ ಸಂದರ್ಭದಲ್ಲಿ ಎಂದೂ ನಾನು ಹೆದರಿ ಹೇಡಿಯಾಗು ವುದಿಲ್ಲ. ಬಯಸಿದುದನ್ನು ಪಡೆಯುತ್ತೇನೆ. ಬಂದದ್ದನ್ನು ಅನುಭವಿಸುತ್ತೇನೆ.'

ಹಾಗೆಂದು ಆಣೆಯಿಟ್ಟುಕೊಂಡ. ಆದರೇನು ಪ್ರಯೋಜನ—

ಗೌರಿ ಹಾರಿ ಹೋಗಿದ್ದಳು.

ಭಯ ಅವನನ್ನು ಬಿಡಲಿಲ್ಲ ; ನಿಟ್ಟುಸಿರೂ ಅವನ ಪಾಲಿಗೆ ತಪ್ಪಲಿಲ್ಲ.

* * * *

ಭಯ ಅವನನ್ನು ಬಿಡಲಿಲ್ಲ.

' ಭಯ ಬಿಡಬೇಕು. ಹೆದರಿ ಹೆಡಿಯಾಗಬಾರದು. ಬಯಸಿದುದನ್ನು ಪಡೆಯಬೇಕು, ಬಂದದ್ದನ್ನು ಅನುಭವಿಸಬೇಕು. ಅದೇ ಪುರುಷ ಲಕ್ಷಣ. ಅದೇ ಬಾಳ ಗುರಿ.'

—ಎಂದು ತನಗೆ ತಾನೇ ಹೇಳಿಕೊಂಡಿದ್ದ ಮೂರ್ತಿ.

ಹಾಗೆಂದುಕೊಂಡು, ' ಕಳ್ಳ ಇಲ್ಲ, ದೆವ್ವ ಇಲ್ಲ ' ಎಂದು ತನಗೆತಾನೇ ಹೇಳಿಕೊಂಡು ಭೀತಿಯನ್ನು ಮರೆಯಲೆತ್ನಿಸಿ, ತಾನು ಇಲ್ಲ ಎಂದ ಬಳಿಕ ಅದು ಇಲ್ಲವೇ ಇಲ್ಲ ಎಂದು ನಂಬಿ ಮಲಗುವ ಮಗುವಿನಂತೆ, ಮೂರ್ತಿ, ತಾನು ' ಭಯವನ್ನು ಬಿಟ್ಟೆ ' ಎಂದು ಹೇಳಿದಾಗ, ಭಯ ತನ್ನ ಹೃದಯದಿಂದ ತೊಲಗಿ ಹೋಯಿತೆಂದೇ ನಂಬಿದ್ದ.

ಅವನೇನೋ ' ನಾನು ಭಯವನ್ನು ಬಿಟ್ಟೆ ' ಎಂದುಕೊಂಡ. ಆದರೆ ಅವನನ್ನು ಭಯ ಬಿಡಲಿಲ್ಲ

ಹೆಜ್ಜೆಹೆಜ್ಜೆಗೂ ಅವನ ಬಾಳ ಬಯಕೆಯನ್ನು ವಿಫಲಗೊಳಿಸುವ ಭಯ, ಹಗಲಾಗುತ್ತಲೂ ಕಣ್ಣಿಗೆ ಮರೆಯಾಗಿ ಅಡಗಿಕೊಳ್ಳುವ ಗೂಬೆಯಂತೆ, ಎಲ್ಲೋ ಅವನ ಹೃದಯ ಗಹ್ವರದಲ್ಲಿ ಅವಿತುಕೊಂಡಿತ್ತು—

ಅವನು ನಿರೀಕ್ಷಿಸಿದಂತೆ ತೊಲಗಿ ಹೋಗಿರಲಿಲ್ಲ.

ಹಗಲಿನಲ್ಲಿ ಎಲ್ಲೋ ತಲೆಮರೆಸಿ ಅವಿತುಕೊಂಡ ಗೂಬೆ, ಮತ್ತೆ ಕತ್ತಲಾಗುತ್ತಲೇ ಗರಿಗೆದರಿ, ' ಘೂ ' ಕ್ಕೆಂದು, ತನ್ನ ರಂಜಕ ನೇತ್ರಗಳನ್ನು ಹೊಳಿಸುತ್ತ ಹಾಜರಾಗುವಂತೆ—

ಮತ್ತೆ – ಅವನ ಪುರುಷತ್ವದ ಪರೀಕ್ಷೆಯ ಸಂದರ್ಭದಲ್ಲಿ ಭಯ, ಅವನು ತನ್ನಿಂದ ತೊಲಗಿ ಹೋಗಿದೆ ಎಂದುಕೊಂಡ ಭಯ – ಮತ್ತೆ ಪ್ರತ್ಯಕ್ಷವಾಯಿತು.

* * * *

ಮತ್ತೆ ಭಯ ಪ್ರತ್ಯಕ್ಷವಾಯಿತು —

ಅವನು ಕಾಲೇಜಿಗೆ ಕಾಲಿಟ್ಟ ವರುಷ.

ಮೂರ್ತಿ ತನ್ನ ಹೈಸ್ಕೂಲು ವಿದ್ಯಾಭ್ಯಾಸವನ್ನು ಮುಗಿಸಿ, ಇಂಟರ್ ಮೀಡಿಯೆಟ್ ಕಾಲೇಜಿಗೆ ಕಾಲಿಟ್ಟ ವರುಷ – ಆ ವರ್ಷ, ಅವನ ಜೀವನದಲ್ಲಿ ಹೇಗೋ ಹಾಗೇ, ದೇಶದ ಇತಿಹಾಸದಲ್ಲೂ ಶಾಶ್ವತ ಸ್ಮೃತಿಯಾಗಿ ಉಳಿದ ಸಂವತ್ಸರ – ಸಾವಿರದ ಒಂಭೈನೂರ ನಲವತ್ತೆರಡು.

೧೯೪೨ —

ಮೂರ್ತಿ, ವಿವಾಹವೇದಿಕೆಯನ್ನೇರುವ ಮದುವಣಗಿತ್ತಿಯಂತೆ, ಮೊಟ್ಟ ಮೊದಲ ಉಲ್ಲನ್‌ಸೂಟು, ಟೈಗಳನ್ನು ಧರಿಸಿ, ಕಾಲೇಜಿಗೆ ಕಾಲಿಟ್ಟ ಎರಡೇ ತಿಂಗಳಲ್ಲಿ, ಇದ್ದಕ್ಕಿದ್ದಂತೆಯೇ ಬಿರುಗಾಳಿ ಬೀಸಿತು—

೧೯೪೨ ರ ಆಗಸ್ಟ್ ಹದಿನೈದರಂದು.

ಆ ದಿನ, ಅಷ್ಟು ದಿನ ಗಾಂಧೀಜೀಯ ಶಾಂತಿಘೋಷಕ್ಕೆ ತಲೆಬಾಗಿ, ಹಿಂದೂಸ್ಥಾನದ ಹೃದಯದಲ್ಲಿ ಸುಪ್ತವಾಗಿದ್ದ ಕ್ರಾಂತಿಯ ಜ್ವಾಲಾಮುಖಿ ಇದ್ದಕ್ಕಿದ್ದ ಹಾಗೇ ಆಸ್ಫೋಟನವಾಯಿತು.

ಆಗಸ್ಟ್ ೧೪ ರ ಮಧ್ಯರಾತ್ರಿ, ಹಿಂದೂಸ್ತಾನದ ಹೃದಯ, ಕಣ್ಣುಗಳಾದ ಗಾಂಧೀಜೀ, ಜವಹರಲಾಲ ನೆಹರೂರನ್ನು ಕಳ್ಳತನದಲ್ಲಿ ದಸ್ತಗಿರಿ ಮಾಡಿ, ಗೊತ್ತಿಲ್ಲದ ಕಡೆಗೆ ಸಾಗಿಸಿ, ಬ್ರಿಟಿಷ್ ಸರಕಾರ, ಭಾರತೀಯರ ಹೃದಯದಲ್ಲಿದ್ದ ಅತೃಪ್ತಿಯ ಮದ್ದಿನ ಮನೆಗೆ ಕೊಳ್ಳಿ ಕೊಟ್ಟಿತು.

ಅದರ ಪರಿಣಾಮವಾಗಿ ಮೂಡಿದ ಆಸ್ಫೋಟನದ ಅಬ್ಬರಕ್ಕೆ ಜಗತ್ತಿಗೆ ಜಗತ್ತೇ ನಡುಗಿತು.

" ಬ್ರಿಟೀಷರೇ ಭಾರತವನ್ನು ಬಿಟ್ಟು ತೊಲಗಿ "

ಭಾರತದ ಮೂವತ್ತುಮೂರು ಕೋಟಿ ಕಂಠಗಳು, ಒಕ್ಕೊರಳಾಗಿ ಕೂಗಿದವು, ಕೋಟಿಕೋಟಿ ಶತಘ್ನಿಗಳ ಮೊಳಗಿನಂತೆ—

" ಬ್ರಿಟೀಷರೇ ಭಾರತವನ್ನು ಬಿಟ್ಟು ತೊಲಗಿ."

ಆ ಕೂಗು, ಬರಿ ಕೂಗಾಗಿಯೇ ಗಾಳಿಯಲ್ಲಿ ಕರಗಲಿಲ್ಲ. ಗಾಂಧೀಜೀ ಸೆರೆ ಸೇರುವ ಮುನ್ನ ದೇಶಕ್ಕೆ ಸಂದೇಶವಿತ್ತಿದ್ದರು—

" ದುಡಿಯಿರಿ ಇಲ್ಲವೇ ಮಡಿಯಿರಿ " (Do or Die)

ಒಕ್ಕೊರಲಿನಲ್ಲಿ ಘೋಷಣೆಯನ್ನು ಕೂಗಿದ ದೇಶ, ಒಂದು ತೋಳಾಗಿ ಗಾಂಧೀಜೀಯವರ ಅಮರ ಸಂದೇಶವನ್ನು ಪಾಲಿಸಲು ಎದ್ದು ನಿಂತಿತು.

ಮನೆ ಮನೆಯೂ ರಣಾಂಗಣವಾಯಿತು ; ಜನ ಜನವೂ ಯೋಧರಾಗಿ, ತೊಡೆ ತೋಳು ತಟ್ಟಿ, ಹೆಡೆಬಿಚ್ಚಿದ ಹಾವಿನಂತೆ ನಿಂತಿತು—ಸಾಮ್ರಾಜ್ಯಶಾಹಿಯ ಹುಟ್ಟಡಗಿಸಲು.

ಬಾಂಬು, ಬಂದೂಕ, ಬಾಯೊನೆಟ್ – ಸಾಮ್ರಾಜ್ಯಶಾಹಿ ತನ್ನೆಲ್ಲ ಅಸ್ತ್ರಗಳನ್ನೂ ಉಪಯೋಗಿಸಿತು; ಪ್ರಚಂಡ ರಕ್ತವರ್ಷದಲ್ಲಿ ಸ್ವಾತಂತ್ರ್ಯದ ಬಯಕೆಯ ಮಹಾಜ್ವಾಲೆಯನ್ನು ನಂದಿಸಲು ಯತ್ನಿಸಿತು.

ಬೀದಿಯಲ್ಲಿ ನೆತ್ತರಗೆಸರು ತುಂಬಿ, ಕಾರಾಗೃಹಗಳು ಕಿಕ್ಕಿರಿದವು. ಆದರೆ ಭಾರತೀಯರು ಬೆದರಲಿಲ್ಲ.

ಹಾದಿಬೀದಿಯಲ್ಲಿ ತಮ್ಮ ರಕ್ತದ ಕಾಲುವೆ ಹರಿದಾಗಲೂ ಹರ್ಷದಿಂದ ಹಾಡಿದರು—

" ರಕ್ತ ಗುಲಾಲಸೆ ಭರಲೆ ಜೋಲಿ
ಆಜ್ ಹಮಾರೆ ಹೋಲಿ."

ಬಂದೂಕಗಳು ಬೊಬ್ಬಿರಿದು, ಸಿಡಿಮದ್ದಿನ ಘಾಟು ಹೊಗೆ ಕತ್ತಲಂತೆ ಕವಿದಾಗ ಹೆಮ್ಮೆಯಿಂದ ಎದೆ ಸೆಟೆಸಿ ಉತ್ತರ ಕೊಟ್ಟರು—

" ಗಾಲಿ ಗೋಲಿ ಲಾಠಿ ಜೇಲ್
ಜಾಲಿಂಕಾ ಹೈ ಅಂತಿಮ್ ಖೇಲ್
ಇಂಕಿಲಾಬ್ ಜಿಂದಾಬಾದ್ !
ಇಂಕಿಲಾಬ್ ಜಿಂದಾಬಾದ್."

ದಿಕ್ಕು ಮಾರ್ಮೊಳಗುವಂತೆ, ಮುಗಿಲು ಬಿರಿವಂತೆ, ಕಡಲುಬ್ಬಿ ಹರಿವಂತೆ, ಹಬ್ಬಿತು ಹಿಂದೂಸ್ತಾನದ ರಣಘೋಷ—

" ಚಲೇಜಾವ್ ಬ್ರಿಟಿಷ್ ಸೈತಾನ್
ಛೋಡ್‌ದೇ ಹಮಾರಾ ಹಿಂದೂಸ್ತಾನ್."

ಬೊಂಬಾಯಿನ ಚೌಪಾತಿಯ ಮರಳುದಂಡೆಯಲ್ಲಿ ಹುಟ್ಟಿ, ದೇಶಾದ್ಯಂತ ವ್ಯಾಪಿಸಿದ ಕ್ರಾಂತಿಯ ಬಿರುಗಾಳಿ, ವಿದ್ಯುದ್ವೇಗದಿಂದ ಬೆಂಗಳೂರಿಗೂ

ವ್ಯಾಪಿಸಿತು. ಬೆಂಗಳೂರು-ಬೊಂಬಾಯಿನ ಕ್ರಾಂತಿಘೋಷವನ್ನು ಪ್ರತಿಧ್ವನಿಸಿ ಕೂಗಿತು—

" ಚಲೇಜಾವ್ ಬ್ರಿಟಿಷ್ ಸೈತಾರ್
ಛೋಡ್‌ದೇ ಹಮಾರಾ ಹಿಂದೂಸ್ತಾನ್."

ಆ ಘೋಷಕ್ಕೆ ಬೆಚ್ಚಿದಂತೆ, ಅಂಗಡಿ ಮುಂಗಟ್ಟುಗಳ ಬಾಗಿಲುಗಳು ಮುಚ್ಚಿ, ಶಾಲೆ, ಕಾಲೇಜು, ಕಾರ್ಖಾನೆಗಳು ಬರಿದಾದವು.

ಇಂಟರ್‌ಮಿಡಿಯೆಟ್ ಕಾಲೇಜಿನ ವಿದ್ಯಾರ್ಥಿಗಳೂ, ದೇಶದ ಜನತೆಯನ್ನು ಹಿಂಬಾಲಿಸಿ, ಸ್ವಾತಂತ್ರ್ಯ ಸಮರದ ಪವಿತ್ರ ರಣಾಂಗಣಕ್ಕೆ ಇಳಿದರು.

ಕಾಲೇಜು ಬರಿದಾಯಿತು - ಆದರೆ ಅಷ್ಟರಿಂದಲೇ ವಿದ್ಯಾರ್ಥಿವೃಂದ ತೃಪ್ತವಾಗಲಿಲ್ಲ.

ಆರಂಭವಾದ ಸ್ವಾತಂತ್ರ್ಯ ಸಮರ ಗುರಿ ಮುಟ್ಟುವವರೆಗೂ ಮುಂದುವರಿಯಬೇಕಾಗಿತ್ತು. ಹಿಂದಿನ ಸಮರಗಳಂತೆ ಈ ಬಾರಿ, ಕುರಿಗಳಂತೆ ನುಗ್ಗಿ ಕಾರಾಗೃಹಗಳನ್ನು ಕಿಕ್ಕಿರಿಸುವುದರಿಂದಲೇ ಸಮರ ಮುಕ್ತಾಯವಾಗುವಂತಿರಲಿಲ್ಲ. ಸೆರೆ ಸೇರುವ ಮುನ್ನ ಗಾಂಧೀಜೀ ಬಹು ಸ್ಪಷ್ಟವಾಗಿ ಹೇಳಿದ್ದರು—

" ಕಾರಾಗೃಹ ಯಾತ್ರೆಯೊಂದೇ ನಮ್ಮ ಈ ಬಾರಿಯ ಸಮರ ತಂತ್ರವಲ್ಲ, ಸ್ವಾತಂತ್ರ್ಯ ಸಾಧನೆಗಾಗಿ ಅಗತ್ಯವಿದ್ದುದೆಲ್ಲವನ್ನು ಮಾಡಬೇಕು.

ಕಾರ್ಮಿಕರೇ - ಮುಷ್ಕರ ಹೂಡಿ
ರೈತರೇ - ಕಂದಾಯ ಕೊಡಬೇಡಿ
ವಿದ್ಯಾರ್ಥಿಗಳೇ - ಶಾಲೆ ಕಾಲೇಜು ಬಿಟ್ಟು ಬನ್ನಿ
ನೌಕರರೇ - ಕಚೇರಿಗಳ ಬಾಗಿಲು ಮುಚ್ಚಿಸಿ
ವ್ಯಾಪಾರಿಗಳೇ - ವಿದೇಶೀ ವಸ್ತುಗಳನ್ನು ಬಹಿಷ್ಕರಿಸಿ—

ಅಷ್ಟೇ ಅಲ್ಲ—

ಅಂಚೆ ಸಾಗದಂತೆ ಮಾಡಿ, ರೈಲು ಚಲಿಸಿದಂತೆ ಮಾಡಿ

ಸರಕಾರದ ರಕ್ತ ಹರಿವ ನರನರವೂ ಬಂಧಿತವಾಗಿ, ಸಾಮ್ರಾಜ್ಯಶಾಹಿಯ ಶಕ್ತಿ ಕುಂಠಿತವಾಗಿ ಅದು ಸೋತು ನೆಲಕ್ಕೆ ಉರುಳಲಿ.

ಸ್ವಾತಂತ್ರ್ಯ - ಸಂಪೂರ್ಣ ಸ್ವಾತಂತ್ರ್ಯ - ಇಲ್ಲವೇ ಸಾವು."

೦

ಗಾಂಧೀಜೀಯ ಆದೇಶದ ಅಕ್ಷರಕ್ಷವನ್ನೂ ಆಚರಣೆಯಲ್ಲಿ ತಂದು ಸಾಧಿಸಲು ದೇಶ ಸಿದ್ಧವಾಗಿತ್ತು.

ಇಂಟರ್‌ಮೀಡಿಯೆಟ್ ಕಾಲೇಜಿನ ವಿದ್ಯಾರ್ಥಿ ವೃಂದವೂ ಈ ಮಹಾ ಸಮರದಲ್ಲಿ ತನ್ನ ಪಾಲಿನ ಸೇವೆ ಸಲ್ಲಿಸಲು ಸಿದ್ಧವಾಗಿ, ವಿದ್ಯಾರ್ಥಿ ನಾಯಕರ 'ಕ್ರಿಯಾ ಸಮಿತಿ' ಯೊಂದನ್ನು ರಚಿಸಿತು. ಆ ಸಮಿತಿ ರಹಸ್ಯವಾಗಿ ಸೇರಿ ತನ್ನ ಕಾರ್ಯಕ್ರಮವನ್ನು ನಿರ್ಧರಿಸಿತು—

ಒಂದು ಕಡೆ, ಘೋಷಣೆ, ಭಾಷಣ, ಮೆರವಣಿಗೆ, ಬಹಿಷ್ಕಾರಗಳ ಬಹಿರಂಗ ಕಾರ್ಯಕ್ರಮವೂ ನಡೆಯಬೇಕು ;

ಇನ್ನೊಂದು ಕಡೆ, ಅಧಿಕಾರ ಯಂತ್ರವನ್ನು ಮುರಿದುರುಳಿಸುವ ವಿನಾಶಾತ್ಮಕ ರಹಸ್ಯ ಚಟುವಟಿಕೆಗಳೂ ನಡೆಯಬೇಕು.

ಒಂದೊಂದು ಬಗೆಯ ಕೆಲಸಕ್ಕೂ ಒಂದೊಂದು ಪ್ರತ್ಯೇಕ ತಂಡ ನಿರ್ಮಾಣವಾಯಿತು. ಆ ಕೆಲಸದಲ್ಲಿ ಎಲ್ಲರಿಗೂ ಪಾಲಿತ್ತು. ಎಂತಲೇ ಎಲ್ಲರಿಗೂ ಆಹ್ವಾನ ಹೋಯಿತು, ಬೇಂದ್ರೆಯವರ ಕವಿತಾ ವಾಣಿಯಲ್ಲಿ—

"ಚಂಡಿ ಚಾಮುಂಡಿ ಪೇಳ್ – ನಿನಗೆ ಬೇಕಾದುದೇನು ?
ಗಂಡಸಾದರೆ ನಿನ್ನ ಬಲಿ ಕೊಡುವಿಯೇನು ?"

ಎಲ್ಲ ವಿದ್ಯಾರ್ಥಿಗಳಿಗೂ ಬಂದ ಈ ಆಹ್ವಾನ ಮೂರ್ತಿಯನ್ನೂ ತಲುಪಿತು.

ಗಾಂಧೀಜೀಯವರ ದಸ್ತಗಿರಿಯ ಸುದ್ದಿಯನ್ನು ಕೇಳಿದಾಗ, ಬೊಂಬಾಯಿ ಮೊದಲಾದ ನಾನಾ ನಗರಗಳಲ್ಲಿ ನಡೆದ ಹತ್ಯಾಕಾಂಡ, ಅತ್ಯಾಚಾರಗಳ ವಾರ್ತೆಯನ್ನು ಸವಿವರವಾಗಿ ಓದಿದಾಗ, ಎಲ್ಲ ಭಾರತೀಯರಂತೆಯೇ ಮೂರ್ತಿಯ ರಕ್ತವೂ ಕುದಿದು ಕೆಂಗೆಂಡವಾಗಿತ್ತು. ಎಲ್ಲರಂತೆಯೇ ಅವನೂ—

'ಆದದ್ದಾಗಲಿ – ಈ ಅತ್ಯಾಚಾರಿಗಳನ್ನು ಸುಟ್ಟು, ಅವರ ಶವಭಸ್ಮವನ್ನು ಹಣೆಗಿಟ್ಟುಕೊಳ್ಳುವವರೆಗೂ ಬಿಡಬಾರದು. ನಾನು ಸತ್ತರೂ ಸರಿಯೆ – ಸಾಮ್ರಾಜ್ಯಷಾಹಿಯನ್ನು ಸಮಾಧಿ ಮಾಡಲೇಬೇಕು.'

—ಎಂದು ಹಲ್ಲು ಮಸೆದಿದ್ದ.

ಆ ಕ್ರೋಧೋದ್ರೇಕದ ಉತ್ಸಾಹದಲ್ಲೇ, ಹಿಂಡುಗಟ್ಟಿ ಜಯಘೋಷ ಗಳನ್ನು ಕೂಗುತ್ತ ಹೊರಬಿದ್ದ ನೂರಾರು ವಿದ್ಯಾರ್ಥಿಗಳೊಂದಿಗೆ ತಾನೂ

ಕಾಲೇಜನ್ನು ಬಿಟ್ಟು ಹೊರಬಿದ್ದು, ಬಹಿರಂಗಸಭೆಯಲ್ಲಿ ನಿರ್ಮಿತವಾದ 'ವಿದೇಶೀ ವಸ್ತ್ರ ದಹನಾಗ್ನಿಕುಂಡಕ್ಕೆ' ಕ್ಕೆ ತನ್ನ ಮೈ ಮೇಲಿನ ಉಲ್ಲನ್ ಕೋಟನ್ನು ಅರ್ಪಿಸಿ, ತಲೆಯ ಮೇಲೆ ಖಾದಿ ಟೋಪಿ ಧರಿಸಿದ್ದ.

ಆಗಸ್ಟ್ ಹದಿನೈದರಂದು ನಡೆದ ಪ್ರಚಂಡ ವಿದ್ಯಾರ್ಥಿಗಳ ಮೆರವಣಿಗೆಯಲ್ಲಿ ಅವನೂ ಭಾಗವಹಿಸಿದ.

ತನ್ನ ವಿದ್ಯಾರ್ಥಿ ಜೊತೆಗಾರರೊಂದಿಗೆ ತಾನೂ ಮುಂದೆ ಏನೇನು ಮಾಡಬಹುದು ಎಂಬುದನ್ನೆಲ್ಲಾ ಪರಮೋತ್ಸಾಹದಿಂದ ಚರ್ಚಿಸಿದ.

ದಿನದಿನವೂ, ದಿನಪತ್ರಿಕೆಗಳಲ್ಲಿ, ಅಲ್ಲಿ ರೈಲು ಉರುಳಿತು, ಇಲ್ಲಿ ಸೇತುವೆ ಮುರಿಯಿತು, ಒಂದುಕಡೆ ಅಂಚೆ ಲೂಟಿಯಾಯಿತು. ಮತ್ತೊಂದುಕಡೆ ಖಜಾನೆ ದರೋಡೆಯಾಯಿತು, ಮೂರನೆಯಕಡೆ ಮೈಲಿಗಟ್ಟಲೆ ತಂತಿ ಕತ್ತರಿಸಲ್ಪಟ್ಟಿತು ಎಂದು ಸುದ್ದಿಗಳು ಬರುತ್ತಿದ್ದವು.

ಆ ಕಾರ್ಯ ಬೆಂಗಳೂರಿನಲ್ಲೂ ನಡೆಯುತ್ತಿತ್ತು.

ಎಷ್ಟೋ ಜನ ವಿದ್ಯಾರ್ಥಿಚಳುವಳಿಗಾರರ ಪಾಲಿಗೆ ಕಾನಕಾನಹಳ್ಳಿ ರಸ್ತೆಯಲ್ಲಿದ್ದ ಸರ್ದಾರ್ ವೆಂಕಟರಾಮಯ್ಯನವರ ರಹಸ್ಯ ಬಿಡಾರ ಕಾಶೀ ಕ್ಷೇತ್ರವಾಗಿ ಪರಿಣಮಿಸಿತ್ತು

ದಿನದಿನಕ್ಕೆ ಸಿ.ಐ.ಡಿ. ಗಳ ಸಂಖ್ಯೆ ನಾಯಿಕೊಡೆಯಂತೆ ಬೆಳೆದು, ರಸ್ತೆಯಲ್ಲಿ ಅಡ್ಡಾಡುವುದೂ ಒಂದುಬಗೆಯ ರೋಮಾಂಚಕಾರಿ ಘಟನೆಯ ಸ್ವರೂಪ ತಾಳಿತ್ತು – ಕಾವೇರಿದ ಸ್ವಾತಂತ್ರ್ಯ ಸಂಗ್ರಾಮದ ವಾತಾವರಣದಲ್ಲಿ.

ಮೂರ್ತಿಯೂ ದಿನದಿನವೂ ತನ್ನ ಸುತ್ತಲ ವಿದ್ಯಾರ್ಥಿಗಳಲ್ಲೇ 'ಅವನು ರೈಲು ಉರುಳಿಸಲು ಹೋಗಿದ್ದ, ಇವನು ಬಾಂಬು ತಯಾರಿಕೆಯಲ್ಲಿ ನಿರತನಾಗಿದಾನೆ, ಮತ್ತೊಬ್ಬ ತಂತಿ ಕತ್ತರಿಸಲು ಹೋಗಿದ್ದ, ಮಗದೊಬ್ಬ ದಸ್ತಗಿರಿ ಮಾಡಲು ಬಂದ ಪೋಲೀಸರ ಕೈಯಿಂದ ಬಹು ಚಾತುರ್ಯದಿಂದ ತಪ್ಪಿಸಿಕೊಂಡು ಹೋದ, ಮತ್ತಾರೋ ಒಬ್ಬನನ್ನು ಹಿಡಿಯಲು ನಗರದ ಸಿ.ಐ ಡಿ. ದಳವೆಲ್ಲಾ ಪ್ರಯತ್ನಿಸಿ ವಿಫಲವಾಯಿತು' ಎಂದು ವಾರ್ತೆಗಳನ್ನು ಕೇಳುತ್ತಿದ್ದ.

ಅಂಥ ಸುದ್ದಿಗಳನ್ನು ಕೇಳಿದಾಗ, ಅವನ ಮೈಯ ರಕ್ತವೂ ಕಾವೇರಿ, ಸಂಗ್ರಾಮದ ಅಮಲೇರಿ ತಾನೂ ಅಂಥ ಏನಾದರೊಂದು ಸಾಹಸಕೃತ್ಯ ಮಾಡಬೇಕು ಎಂದು ಹಂಬಲಿಸುತ್ತಿದ್ದ.

ಎಷ್ಟೋಬಾರಿ, ಬ್ರಿಟಿಷ್ ಸಾಮ್ರಾಜ್ಯಶಾಹಿ ಹೆದರಿ, ನಡುಗಿ, ಅಧಿಕಾರವನ್ನೊಪ್ಪಿಸಿ ಹೊರಡಲು ಸಿದ್ಧವಾಗುವಂಥ ಯಾವುದೋ ಮಹಾ ಸಾಹಸದ ಕೆಲಸವನ್ನು ಸಾಧಿಸಿದ ಹಾಗೆ, ಅದನ್ನು ಮೆಚ್ಚಿದ ಜನ ತನಗೆ ನೂರಾರು ಹೂಮಾಲೆಗಳನ್ನು ಹಾಕಿದಂತೆ, ಹೆಂಗಳೆಯರ ಸಾಲುಸಾಲು ತನ್ನ ಹಣೆಗೆ ಕುಂಕುಮವಿಟ್ಟು, ವಿಜಯಾರತಿ ಬೆಳಗಿದಂತೆ, ಲಕ್ಷಾಂತರ ಕಂಠಗಳು ತನ್ನ ಹೆಸರಿನ ಜಯಘೋಷವನ್ನು ಕೂಗಿದಂತೆ ಕನಸು ಕಾಣುತ್ತಿದ್ದ.

ಕನಸು ಕಾಣುತ್ತಿದ್ದ ಅಷ್ಟೆ – ಆದರೆ ಅಂಥದಿರಲಿ, ಅದರಲ್ಲಿ ನೂರರಲ್ಲೊಂದು ಭಾಗದಂಥ ಕೆಲಸವನ್ನೂ ಮಾಡಲಿಲ್ಲ, ಅಷ್ಟೇಕೆ – ಮೊದಲ ದಿನ ಮೆರವಣಿಗೆಯಲ್ಲಿ ಭಾಗವಹಿಸಿದ ಬಳಿಕ ಮತ್ತೆ, ಅವನು ಯಾವ ಕಾರ್ಯಕ್ರಮದಲ್ಲೂ ಭಾಗವಹಿಸಲಿಲ್ಲ.

ಅದಕ್ಕೆ ಮೊದಲ ಕಾರಣ ಅವನ ತಂದೆ ವಾಸುದೇವಯ್ಯನವರ ಭಯ—

ಆತ ಕೆಲಸಮಾಡುತ್ತಿದ್ದ ಬ್ಯಾಂಕು ಹೆಚ್ಚಾಗಿ ವಿದೇಶೀ ಆಡಳಿತಗಾರರ ಆಡಳಿತಕ್ಕೆ ಒಳಪಟ್ಟಿತ್ತು. ತನ್ನ ಮಗ ಚಳುವಳಿಯಲ್ಲಿ ಭಾಗವಹಿಸಿದರೆ, 'ದೊರೆ' ಎಲ್ಲಿ ಮುನಿಸಿಕೊಂಡು, ತನ್ನ ಕೆಲಸಕ್ಕೇನಾದರೂ ಸಂಚಕಾರ ತಂದಾನೋ ಎಂದು ಹೆದರಿ, ವಾಸುದೇವಯ್ಯ ಮೊದಲದಿನದ ಮೆರವಣಿಗೆಯಲ್ಲಿ ಭಾಗವಹಿಸಿ ಬಂದ ಮಗನಿಗೆ—

'ನೀನು ಕಾಲೇಜಿಗೂ ಹೋಗಬೇಡ, ಈ ಗದ್ದಲದಲ್ಲೂ ಸೇರಬೇಡ. ಸುಮ್ಮನೆ ಮನೇಲಿದ್ದು ಬಿಡು. ಹೊರಗೆ ಕಾಲೇ ಇಡಬೇಡ.'

—ಎಂದು ಕಟ್ಟುಮಾಡಿದ್ದರು.

ಬರೀ ಆ ಕಟ್ಟೆ ಆಗಿದ್ದಿದ್ದರೆ ಮೂರ್ತಿ ತನ್ನ ಏರುಯೌವ್ವನದ ಹುಮ್ಮಸ್ಸಿನಲ್ಲಿ ಅದನ್ನು ಮುರಿಯುವ ಸಾಹಸ ಮಾಡುತ್ತಿದ್ದನೋ ಏನೋ. ಆದರೆ, ವಾಸುದೇವಯ್ಯ ಅವನ ಉತ್ಸಾಹದ ಕಾಲಿಗೆ ಬಿಗಿದ ಬೇಡಿಗೆ ಅನಸೂಯಮ್ಮ ತಮ್ಮ ಕಣ್ಣೀರಿನ ಭದ್ರ ಬೆಸುಗೆಯನ್ನು ಬಿಗಿದು, ಆ ಬೇಡಿಯನ್ನು ಮತ್ತಷ್ಟು ಬಲಗೊಳಿಸಿದ್ದಳು.

ಅಲ್ಲಿ ಪೋಲೀಸರು ಲಾಠಿ ಛಾರ್ಜು ಮಾಡಿದರು, ಇಲ್ಲಿ ಗೋಲೀಬಾರ್ ಮಾಡಿದರು—

ಅಲ್ಲಿ ಇಷ್ಟು ಜನರ ಮೈ ಕೈ ಮುರಿಯಿತು ; ಇಲ್ಲಿ ಅಷ್ಟು ಜನ ಸತ್ತರು—

—ಎಂಬ ಸುದ್ದಿಯನ್ನು, ದಿನದಿನವೂ ನೆರೆಹೊರೆಯವರ ಬಾಯಿಂದ ಕೇಳುತ್ತಿದ್ದ ಅನಸೂಯಮ್ಮನಿಗೆ, ದೇಶದ ಇಡೀ ಪೋಲೀಸು ಪಡೆಯೇ, ತನ್ನ ಒಬ್ಬನೇ ಮಗನಾದ ಮೂರ್ತಿ, ಮನೆಬಿಟ್ಟು ಮಿಸುಕಿದರೂ ಸಾಕು, ಕೊಲ್ಲಲು ಸಿದ್ಧವಾಗಿ ಬಂದೂಕವನ್ನು 'ಬಾರ್' ಮಾಡಿಕೊಂಡು ನಿಂತಿದ್ದಂತೆಯೇ ತೋರಿ, ಮೂರ್ತಿ, ಸಾವಿರಾರು ಜನರೊಂದಿಗೆ ಮೆರವಣಿಗೆಯಲ್ಲಿ ಭಾಗವಹಿಸಿ ಬಂದ ದಿನ, ನಾಲ್ಕು ಗಂಟೆಗಳ ಕಾಲ ಅತ್ತು ಕರೆದು, ಅವನಿಂದ ಈ ಚಳುವಳಿಯಲ್ಲಿ ಭಾಗವಹಿಸುವುದಿಲ್ಲವೆಂದೂ, ಚಳುವಳಿ ನಡೆಯುತ್ತಿರುವ ಸ್ಥಳಕ್ಕೆ – ಕೊನೆಗೆ ಭಾಷಣಗಳಿಗೆ ಸಹಾ ಹೋಗುವುದಿಲ್ಲವೆಂದೂ ಆಣೆ ಮಾಡಿಸಿಕೊಂಡಿದ್ದಳು.

ಅದಕ್ಕೂ ಮೀರಿ ಅವನು ಚಳುವಳಿಯಲ್ಲಿ ಭಾಗವಹಿಸಿದರೆ, ತಾನೇ ಭಾವಿಯಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳುವ ಬೆದರಿಕೆ ಹಾಕಿದ್ದಳು.

ತಂದೆಯ ಕಟ್ಟು, ತಾಯಿಯ ಕಣ್ಣೀರು – ಇವೆರಡರ ಇದಿರು ಸೋತು ಮೂರ್ತಿ ಸುಮ್ಮನೆ ಮನೆಯಲ್ಲಿ ಕುಳಿತುಬಿಟ್ಟ.

ಅದರೊಂದಿಗೆ ಒಂದು ದಿನ—

ಮೂರ್ತಿ, ಹಗಲು ಒಂಭತ್ತು ಗಂಟೆಯ ವೇಳೆಗೆ, ಮನೆಗೆ ಅಗತ್ಯವಾದ ಸಾಮಾನನ್ನು ಕೊಳ್ಳಲೆಂದು, ಅವೆನ್ಯೂ ರೋಡಿನ ಕಡೆ ಹೋಗಿ, ಕೆಂಪೇಗೌಡ ರಸ್ತೆಯ ಕಡೆಯಿಂದ ಬರುತ್ತಿರುವಾಗ, ಮೆಜೆಸ್ಟಿಕ್ ಚೌಕದ ಕಡೆಯಿಂದ ಅಠಾರಾ ಕಛೇರಿಯ ಕಡೆ ಹೊರಟ. ಒಂದು ಪ್ರಚಂಡ ಮೆರವಣಿಗೆ ಆ ರಸ್ತೆಯಲ್ಲೇ ಬಂದಿತು.

ಯಾರದೋ ದಸ್ತಗಿರಿಯನ್ನು ಪ್ರತಿಭಟಿಸಿ ಆ ಮೆರವಣಿಗೆ ಹೊರಟಿತ್ತು. ಎಲ್ಲ ಮೆರವಣಿಗೆಗಳಂತೆ, ಆ ಮೆರವಣಿಗೆಯಲ್ಲೂ ಸಾವಿರಾರು ಮಂದಿ ವಿದ್ಯಾರ್ಥಿಗಳು, ಕಾರ್ಮಿಕರು ಭಾಗವಹಿಸಿದ್ದರು.

ರಾಷ್ಟ್ರನಾಯಕರ ಪುಷ್ಪಮಾಲಾಲಂಕೃತವಾದ ಭಾವಚಿತ್ರಗಳನ್ನು ಹಿಡಿದು, ದೇಶಭಕ್ತಿ, ಸ್ವಾತಂತ್ರ್ಯ ಸಮರೋತ್ಸಾಹವನ್ನು ಮೂಡಿಸುವ ಗೀತೆಗಳನ್ನು ಹಾಡುತ್ತ, ಹಿಮವನ್ನು ಕರಗಿಸಿ ಕೆಂಡವಾಗಿ ಮಾಡುವಂತೆ ಉದ್ರೇಕ

ಕರವಾದ ಜಯಘೋಷಗಳನ್ನೂ, ಖಂಡನಾಘೋಷಗಳನ್ನೂ ಕೂಗುತ್ತಾ, ಬಂದ ಆ ಮೆರವಣಿಗೆಯ ಗುಂಪು ' ಪ್ರಭಾತ್ ಟಾಕೀಸ್ ' ನ ಹತ್ತಿರ ಬರುತ್ತಿದ್ದಂತೆಯೇ, ಇದಿರುಬದಿರುಯ ' ಮೈಸೂರು ಬ್ಯಾಂಕ್ ' ಚೌಕದ ಕಡೆಯಿಂದ ಜೀಪ್‌ಗಳಲ್ಲಿ ಕುಳಿತ ಪೋಲೀಸರ ಪಡೆಯೊಂದು ಬಂದು ಮೆರವಣಿಗೆಯ ಗುಂಪನ್ನು ತಡೆಯಿತು.

ಪೋಲೀಸರು ಅಲ್ಲಿಗೆ ಬರುತ್ತಿದ್ದ ಹಾಗೇ, ಇದ್ದಕ್ಕಿದ್ದ ಹಾಗೇ ವಾತಾವರಣದಲ್ಲೇನೋ ವಿದ್ಯುದಾವೇಗ ಮೂಡಿ, ಮೆರವಣಿಗೆಯಲ್ಲಿ ಭಾಗವಹಿಸದೆ, ರಸ್ತೆಯ ಬದಿಯಲ್ಲಿ ಓಡಾಡುತ್ತಿದ್ದ ಜನರೂ ಅಲ್ಲಲ್ಲೇ ನಿಂತು ನೋಡಿದರು. ಎಲ್ಲರಂತೆ ಮೂರ್ತಿಯೂ ನಿಂತ.

ಇದ್ದಕ್ಕಿದ್ದ ಹಾಗೇ ಲಕ್ಷಾಂತರ ಜನ ವಾಸಿಸುವ, ಬೃಹತ್-ನಗರಿಯ ಮಹಾ ರಾಜಬೀದಿಯಲ್ಲೂ, ಸಹಸ್ರಾರು ಮಂದಿ ಜನರಿದ್ದೂ ಗಾಢವಾದ, ಭಯೋತ್ಪಾದಕ ಮೌನ ವ್ಯಾಪಿಸಿತು.

ಜೀಪಿನಲ್ಲಿ ಕುಳಿತ ಪೋಲೀಸು ಅಧಿಕಾರಿ, ಮೆರವಣಿಗೆಯ ಗುಂಪನ್ನು ಸಮೀಪಿಸಿ, ಅವರ ಮುಂದೇ ತನ್ನ ಜೀಪ್‌ನ್ನು ನಿಲ್ಲಿಸಿ ಇಳಿದು, ನಾಲ್ಕಾರು ಮಂದಿ ಅಸ್ತ್ರಧಾರೀ ಪೋಲೀಸರೊಂದಿಗೆ ಹೋಗಿ, ನಡೆಯುತ್ತಿದ್ದ ಮೆರವಣಿಗೆಯನ್ನು ನಿಲ್ಲುವಂತೆ – ಆಜ್ಞಾಪಿಸಿದ.

ಮೆರವಣಿಗೆಯ ಮುಖಂಡ, ಆ ಅಧಿಕಾರಿಯ ಇದುರಿಗೆ ಬಂದು—

" ಮೆರವಣಿಗೆಯನ್ನು ಏಕೆ ನಿಲ್ಲಿಸಬೇಕು ? "

—ಎಂದು ಕೇಳಿದ.

" ಅದು ಸಿಟಿ ಮ್ಯಾಜಿಸ್ಟ್ರೇಟರ ಆಜ್ಞೆ. ಕ್ರಿಮಿನಲ್ ಪ್ರೊಸೀಜರ್ ಕೋಡಿನ ೧೪೪ ನೇ ವಿಧಿಗೆ ಅನುಗುಣವಾಗಿ, ಸಿಟಿ ಮ್ಯಾಜಿಸ್ಟ್ರೇಟರು, ನಗರದಲ್ಲಿ ಮೆರವಣಿಗೆ ಮೊದಲಾದ ಪ್ರದರ್ಶನಗಳು ನಡೆಯುವುದನ್ನು, ಒಂದು ಕಡೆ ಐದು ಮಂದಿಗಿಂತ ಹೆಚ್ಚಾಗಿ ಗುಂಪು ಕಲೆಯುವುದನ್ನು ನಿಷೇಧಿಸಿದ್ದಾರೆ. ಆ ಅಪ್ಪಣೆಯ ಅಧಿಕಾರದ ಮೇಲೆ – ನಾನು ನಿಮಗೆ ಆಜ್ಞಾಪಿಸುತ್ತಿದ್ದೇನೆ. ಈ ಮೆರವಣಿಗೆ, ಕೂಡಲೇ, ಶಾಂತಿಯುತವಾಗಿ ಚೆದರಬೇಕು."

—ಅಧಿಕಾರ ವಾಣಿಯಲ್ಲಿ ದರ್ಪಯುತವಾಗಿ ಅಪ್ಪಣೆ ಮಾಡಿದ

ಪೋಲೀಸ್ ಅಧಿಕಾರಿ, ತನ್ನ ಗದರಿಕೆಯ ಧ್ವನಿಗೇ ಗುಂಪು ಸೋತು ಶರಣಾಗ ಬೇಕು ಎಂಬಂತೆ.

ಆದರೆ ಆತನ ದರ್ಪೋದ್ಧತ ಅಪ್ಪಣೆಗೆ ಮೆರವಣಿಗೆಯ ಮುಖಂಡ ಅಳುಕಲಿಲ್ಲ, ಅಂಜಲಿಲ್ಲ. ಆದಕ್ಕೆ ಪ್ರತಿಯಾಗಿ, ಆ ಅಧಿಕಾರಿಯಷ್ಟೇ ಬಿಗಿಯಾಗಿ ಎದೆ ಸೆಟೆಸಿ—

" ಅದು ಸಾಧ್ಯವಿಲ್ಲ."

—ಎಂದ.

ಸಹಸ್ರಾರು ಜನರಿದ್ದರೂ, ದಟ್ಟವಾಗಿ ಹಬ್ಬಿದ ಮೌನದಲ್ಲಿ ಮೆರವಣಿಗೆಯ ಮುಖಂಡನ ಮಾತು, ಕತ್ತಲಲ್ಲಿ ಕೇಳುವ ಗುಂಡಿನೇಟಿನಷ್ಟು ಸ್ಪಷ್ಟವಾಗಿ ಕೇಳಿಸಿ, ಮೆರವಣಿಗೆಯ ಗುಂಪು, ಉತ್ಸಾಹದಿಂದ ಕೇಕೆ ಹಾಕಿ, ಜಯಘೋಷ ಮಾಡಿತು.

ಮುಖಂಡನ ಉತ್ತರ, ಗುಂಪಿನ ಜಯಘೋಷ ಕೇಳಿ ಪೋಲೀಸ್ ಅಧಿಕಾರಿಯ ಮುಖ ಕೋಪದಿಂದ ಕೆಂಪೇರಿತು. ಮೀಸೆಯ ಕುಡಿಯನ್ನು ಹಲ್ಲಿನಿಂದ ಕಡಿಯುತ್ತಾ, ಮುಂಗೈಯನ್ನು ಸೊಂಟದಲ್ಲಿ ಜೋಲಾಡುತ್ತಿದ್ದ ರಿವಾಲ್ವರಿನ ಮೇಲೆ ಬೆದರಿಸುವಂತೆ ಇಟ್ಟು ಹೇಳಿದ—

" ಮೆರವಣಿಗೆ ಚದುರಲೇಬೇಕು—"

" ಅದು ಸಾಧ್ಯವೇ ಇಲ್ಲ."

" ಇಲ್ಲವಾದರೆ—"

" ಇಲ್ಲವಾದರೆ ಏನು ಮಾಡುತ್ತೀರ ? "

" ಮ್ಯಾಜಿಸ್ಟ್ರೇಟರ ಅಪ್ಪಣೆಯಂತೆ, ಮೆರವಣಿಗೆಯನ್ನು ಬಲಾತ್ಕಾರವಾಗಿ ಚೆದರಿಸಬೇಕಾಗುತ್ತದೆ. ಕಡೆಯ ಬಾರಿಗೆ ಹೇಳುತ್ತೇನೆ – ಶಾಂತಿಯುತವಾಗಿ ಹೊರಟುಹೋಗಿ."

" ಅದು ಸಾಧ್ಯವೇ ಇಲ್ಲ."

" ಅದು ಮ್ಯಾಜಿಸ್ಟ್ರೇಟರ ಆಜ್ಞೋಲ್ಲಂಘನೆ—"

" ಉಲ್ಲಂಘಿಸುವುದಕ್ಕೇ ಹೊರಟಿದ್ದೇವೆ – ನಾವು."

" ಹಾಗಾದರೆ ಅದರ ಪರಿಣಾಮ ಅನುಭವಿಸಬೇಕಾಗುತ್ತದೆ – ಎಚ್ಚರ ವಿರಲಿ."

" ಸಿದ್ಧವಾಗಿದ್ದೇವೆ."

—ಎಂದು ಮುಖಂಡ ಸೆಟೆದು ನಿಂತು " ಬೋಲೋ ಮಹಾತ್ಮಾ ಗಾಂಧೀಕಿ – ಜೈ " ಎಂದು ಘೋಷಿಸಿದ.

ಮೆರವಣಿಗೆಯಲ್ಲಿ ನೆರೆದ ಸಹಸ್ರಾರು ಕಂಠಗಳೂ ಘೋಷಿಸಿದವು—

" ಆಜಾದೀಕಿ ಲಡಾಯ್ – ಜಿಂದಾಬಾದ್ "

" ಜಾಲಿಂ ಶಾಹಿ – ಮುರ್ದಾಬಾದ್ "

" ಮಹಾತ್ಮಾ ಗಾಂಧೀಕಿ ಜೈ "

" ಜವಹರ್‌ಲಾಲ್‌ಜೀಕಿ ಜೈ "

" ಇಂಕಿಲಾಬ್ – ಜಿಂದಾಬಾದ್ "

" ಸಾಮ್ರಾಜ್ಯಶಾಹಿ – ಮುರ್ದಾಬಾದ್ "

ಸಹಸ್ರಾರು ಮಂದಿ ಒಕ್ಕೊರಲಿನಲ್ಲಿ ಕೂಗಿದ ಜಯಘೋಷಗಳ ಅಮಲೇರಿ, ಅಕ್ಕಪಕ್ಕದಲ್ಲಿ ನಿಂತವರೂ, ಹುಚ್ಚಾಗಿ ಚೀರಿ ಜಯಘೋಷ ಮಾಡಿದರು.

ರಸ್ತೆಯ ಇಬ್ಬದಿಯ ಮನೆಗಳಿಂದ, ಅಂಗಡಿ ಮುಂಗಟ್ಟುಗಳಿಂದ – ಗಾಳಿ ಗದಗದಿಸುವಂತೆ ಮೊಳಗಿತು ಜನಕಂಠದ ಧೀರ ಜಯಘೋಷ—

ಆ ಘೋಷ ಅಡಗುತ್ತಿದ್ದಂತೆಯೇ, ಮೆರವಣಿಗೆಯ ಗುಂಪಿನೊಳಗಿದ್ದವ ನೊಬ್ಬನು ಹಾಡಲಾರಂಭಿಸಿದ—

" ಸಾಕಪ್ಪ ನಮಗಿನ್ನು ಬಿಳಿ ಸರಕಾರ
ಹಾಕಪ್ಪ ಇಂದೇನೇ ಅದಕೆ ಬಹಿಷ್ಕಾರ ! ! "

ಒಂಟಿ ಕಂಠ ಹೇಳಿದ ಆ ಬಿಡುಗಡೆಯ ಗೀತೆಯನ್ನು ಸಹಸ್ರಸಹಸ್ರ ಕಂಠಗಳು ಪ್ರತಿಧ್ವನಿಸಿ ಹಾಡಿದವು—

" ಸಾಕಪ್ಪ ನಮಗಿನ್ನು ಬಿಳಿ ಸರಕಾರ
ಹಾಕಪ್ಪ ಇಂದೇನೇ ಅದಕೆ ಬಹಿಷ್ಕಾರ ! ! "

ಹಾಡಿನ ಒಂದು ನುಡಿ ಮುಗಿಯುತ್ತಿದ್ದಂತೆಯೇ ಮತ್ತೆ ಜಯಘೋಷ ಮಾರ್ಮೊಳಗಿತು.

ಆ ಬಿಡುಗಡೆಯ ಗೀತೆಯನ್ನು, ಜಯಘೋಷವನ್ನು ಕೇಳಿ ಪೋಲೀಸ್ ಅಧಿಕಾರಿ ಮತ್ತಷ್ಟು ಉದ್ರಿಕ್ತನಾಗಿ—

" ಎರಡು ನಿಮಿಷ ಅವಕಾಶ ಕೊಟ್ಟಿದೇನೆ – ಗುಂಪು ಚೆದರಲೇಬೇಕು "

—ಎಂದು, ಬೂಟುಗಾಲನ್ನು ತಾರುರಸ್ತೆಯ ಮೇಲೆ ಅಪ್ಪಳಿಸಿ, ಚೀರಿ ಹೇಳಿದ.

ಆವನ ಬೆದರಿಕೆಗೆ ಉತ್ತರವಾಗಿ, ಮೆರವಣಿಗೆಯ ಮುಖಂಡ—

" ನೌಜವಾನ್ – ಆಗೇ ಬಢೋ "

—ಎಂದು ಚೀರಿ, ಮೆರವಣಿಗೆಯ ಗುಂಪಿಗೆ ಮುಂದೆ ನಡೆಯಲು ಅಪ್ಪಣೆ ಕೊಟ್ಟ.

ಆದುವರೆಗೂ ಚಲಿಸದೆ ನಿಂತಿದ್ದ ಗುಂಪು, ಮತ್ತೊಮ್ಮೆ ಮುಗಿಲು ಬಿರಿಯುವಂತೆ ಜಯಘೋಷ ಮಾಡಿ, ಒಂದೆ ವ್ಯೆಯ್ಯಂತೆ ಮುಂದೆ ಚಲಿಸಿತು.

ಅದನ್ನು ಕಂಡ ಪೋಲೀಸ್ ಅಧಿಕಾರಿ, ಗುಂಪಿನ ದಾರಿಯಿಂದ ಸರಿದು, ಜೀಪಿನಲ್ಲಿ ಕುಳಿತು ವ್ಹಿಷಲ್ ಊದಿದ. ಅದನ್ನು ಪ್ರತಿಧ್ವನಿಸಿದಂತೆ ಹತ್ತಾರು ವ್ಹಿಷಲ್‌ಗಳ ಸದ್ದು ಕೇಳಿ ಬಂದು, ಆ ವೇಳೆಗೆ ಮೈಸೂರು ಬ್ಯಾಂಕಿನ ಚೌಕದಲ್ಲಿ, ಮೆಜೆಸ್ಟಿಕ್ ಚೌಕದಲ್ಲಿ, ಕೆಂಪೇಗೌಡ ರಸ್ತೆಯ ಇಬ್ಬದಿಯಲ್ಲಿ ಅಲ್ಲಲ್ಲಿ, ಪೋಲೀಸರನ್ನು ತುಂಬಿಕೊಂಡು ಕಾದಿದ್ದ ವ್ಯಾನ್‌ಗಳು, ಸೈರನ್ನಿನ ಸದ್ದುಮಾಡಿ, ಕೆಂಪೇಗೌಡ ರಸ್ತೆಯತ್ತ ನುಗ್ಗಿದವು.

" ಸ್ಟಾರ್ಟ್ – ಲಾಠಿ ಛಾರ್ಜ್ "

—ಪೋಲೀಸ್ ಅಧಿಕಾರಿ ಚೀರಿ ಹೇಳಿದ.

ಆ ಕೂಗು ಕೇಳುತ್ತಿದ್ದಂತೇ ತಲೆಗೆ ಟಿನ್ನಿನ ಹ್ಯಾಟು, ಕೈಯಲ್ಲಿ ಲಾಠಿ ಧರಿಸಿದ ನೂರಾರು ಮಂದಿ ಪೋಲೀಸರು ಮೆರವಣಿಗೆಯ ಗುಂಪಿನ ಮೇಲೆ, ಕೈಯ ಲಾಠಿಗಳನ್ನು ಝಳಪಿಸುತ್ತ ನುಗ್ಗಿದರು.

ಇದ್ದಕ್ಕಿದ್ದಂತೆಯೇ ಅಲ್ಲಕಲ್ಲೋಲವಾಯಿತು. ಗುಂಪಿನಿಂದ ಜಯನಾದ, ಚೀತ್ಕಾರ, ಕ್ರೋಧೋದ್ರಿಕ್ತ ಕೇಕೆಗಳು ಕೇಳಬರತೊಡಗಿತು.

ಬಿಸಿಲಿನಲ್ಲಿ ಲಾಠಿಗಳು, ಥಳಥಳಿಸುತ್ತ ತಿರುಗಿ ಜನರನ್ನು ಪ್ರಹರಿಸಿದವು. ದೈತ್ಯಕೋಲಾಟ ನಡೆದಂತೆ ಲಾಠಿಗಳು ಮಾನವ ದೇಹಕ್ಕೆ ಅಪ್ಪಳಿಸುವ ಸದ್ದು ಕೇಳಿತು.

ಜಯಘೋಷದೊಂದಿಗೆ ' ಅಯ್ಯೋ, ಅಮ್ಮಾ ' ಎಂಬ ನೋವಿನ ಸದ್ದೂ

ಬೆರೆತು, ಅಲ್ಲಲ್ಲಿ ಬಿಳಿ ಬಟ್ಟೆಯ ಮೇಲೆ ನೆತ್ತರಗೆಂಪು ಕಾಣಿಸಿತು.

ಗುಂಪು ಹೋ ಎಂದು ಚೀರಿ, ಪೋಲೀಸರ ಮೇಲೆ ಧಾಳಿ ಮಾಡಿತು. ಕಲ್ಲು, ಇಟಿಗೆ ಚೂರುಗಳೂ ಹಾರತೊಡಗಿದವು.

ಮೂರ್ತಿ ಗರಬಡಿದಂತೆ ನಿಂತಿದ್ದ—

ಅವನ ಎದುರಿಗೇ ಇದ್ದ ಒಬ್ಬನ ಮೇಲೆ, ಹತ್ತಾರು ಲಾಠಿಗಳು ಒಂದೇ ಬಾರಿಗೆ ಆಘಾತ ಮಾಡಿದವು. ನಿಂತ ಆತ ಇದ್ದಕ್ಕಿದ್ದಂತೇ ಕಾಲು ಮುರಿದಂತೆ, ನೆಲಕ್ಕೊರಗಿದ

ತಾರು ರಸ್ತೆಯ ಮೇಲೆ ರಕ್ತ ಹರಿಯಿತು.

ತಾರು ಬಳಿದು ಕಪ್ಪಾದ ನೆಲದ ಮೇಲೆ ರಕ್ತ, ಕೆಂಪು ರಕ್ತ, **ಮಾನವ ರಕ್ತ** – ಹರಿಯಿತು.

ಅಂದಿನವರೆಗೂ ಮೂರ್ತಿ ತನ್ನ ಬಾಳಿನಲ್ಲೆಂದೂ ರಕ್ತ ಆರೀತಿ ಹರಿದಿದ್ದನ್ನು ಕಂಡಿರಲಿಲ್ಲ. ಬುಗ್ಗೆಯಿಂದ ಚಿಮ್ಮಿದ ನೀರಿನಂತೆ, ಮಾನವನ ಮೈಯಿಂದ ರಕ್ತ ಹರಿದು ಚಿಮ್ಮಿತು.

ಆ ರಕ್ತವನ್ನು ನೋಡುತ್ತಿದ್ದ ಹಾಗೇ ಮೂರ್ತಿಗೆ ತಲೆ ಸುತ್ತಿ ಬಂದಂತಾಯಿತು.

ಒಂದು ಗಳಿಗೆ, ಮೂರ್ತಿಗೆ ನೆಲಕ್ಕುರುಳಿದ ಆ ಮೈಯೊಂದಿಗೆ ತಾನೂ ಉರುಳುವೆನೇನೋ ಎನಿಸಿತು—

ಒಂದು ಗಳಿಗೆ – ಅಷ್ಟೇ – ಮರುಗಳಿಗೆಯೇ—

ಆ ರಕ್ತದಷ್ಟೇ ಉಗ್ರ ಕೆಂಪಾದ ಕ್ರೋಧ ಅವನ ಮೈಯ ನರನರದಲ್ಲೂ ಮಿಂಚಿನಂತೆ ಸಂಚರಿಸಿತು. ದೇಶಕ್ಕಾಗಿ ಅವನು ಮಾಡಬೇಕೆಂದಿದ್ದ ತ್ಯಾಗ, ಬಲಿದಾನದ ಭಾವನಗಳು—

ಅತ್ಯಾಚಾರವನ್ನು ಕಂಡು ಕೆರಳಿ, ಆರ್ತನ ರಕ್ಷಣೆಗೆ, ಆರ್ತನ ನೋವಿನ ಪ್ರತೀಕಾರಕ್ಕೆ ಮುನ್ನುಗ್ಗುವ ಪುರುಷ ಸಹಜ ಭಾವನೆಗಳು—

ಮೂರ್ತಿಯ ರಕ್ತವನ್ನು ಕುದಿಕಾವೇರಿಸಿದವು

ನಿರಸ್ತ್ರ ಸ್ವಾತಂತ್ರ್ಯ ಯೋಧನ ಮೇಲೆ ಪಾಶವೀ ದಾಳಿ ನಡೆಸಿದ ಪೋಲೀಸರನ್ನು ಹಿಡಿದು, ಕೈಯಾರ, ತನ್ನ ಬೆರಳ ಉಗುರುಗಳಲ್ಲೇ ಅವರ

ನರನರವನ್ನು ಸೀಳಿ, ಅವರ ಗಂಟಲಿಗೇ ಬಾಯಿ ಹಚ್ಚಿ ಅವರ ನೆತ್ತರು ಕುಡಿದು ತನ್ನ ಕ್ರೋಧತೃಷೆ ತೀರಿಸಿಕೊಳ್ಳಬೇಕು ಎನಿಸಿತು.

ಕ್ರೋಧಾವೇಶದಿಂದ ಅವನ ಮೈ ಕಂಪಿಸುತ್ತಿತ್ತು. ರಕ್ತತೃಷೆಯಿಂದ ಅವನ ನಾಲಿಗೆ ಒಣಗಿ ಮೈಯ ನರನರಗಳೂ ಹುರಿಗೊಂಡಿದ್ದವು.

ನುಗ್ಗಬೇಕು – ಹುಲಿಯಂತೆ ಹಾರಬೇಕು—

ಹಾಗೆಂದುಕೊಂಡೇ ಮೂರ್ತಿ, ತನಗೆ ಅರಿವಾಗದಂತೆಯೇ ಒಂದು ಹೆಜ್ಜೆ ಮುಂದೆ ಸರಿದ—

ಸುಯ್ಯೆಂದು ನಾಲ್ಕಾರು ಲಾಠಿಗಳು ಬೀಸಿದವು, ಹಗಲಿನ ಬೆಳಕಿನಲ್ಲಿ ಬೆಳ್ಳಗೆ ಸುತ್ತುವ ಬಿಳಿಯ ಲಾಠಿಗಳು ಕರಾಲ ಕಾಲನ ಘೋರ, ರಕ್ತಪಿಪಾಸಿ ನಖ – ದಂತಗಳಂತೆ ಕಂಡವು.

ನುಗ್ಗಬೇಕು.

ಆ ಲಾಠಿಯ ಆಘಾತಕ್ಕೆ ತುತ್ತಾದವನನ್ನು ಉಳಿಸಲಿಲ್ಲ—

ತಾನೂ ಆ ದೇಹದಂತೆಯೇ ನೆತ್ತರುಗಾರುತ್ತ ತಾರುರಸ್ತೆಯಲ್ಲಿ ಉರುಳಲು—

ಇದ್ದಕ್ಕಿದ್ದ ಹಾಗೇ ಮುಂದೆ ನುಗ್ಗಲೆಳಸುವ ಮೂರ್ತಿಯ ಕಾಲು ರಕ್ತ ಹೆಪ್ಪುಗಟ್ಟಿದಂತಾಗಿ, ಮೈಯ ಮೇಲೆ ಹತ್ತಾರು ಹಾವುಗಳು ಹರಿದಂತಾಗಿ—

ಮುಂದೆ ನುಗ್ಗಲೆಳಸಿದವನು ಗಕ್ಕನೆ ನಿಂತುಬಿಟ್ಟ.

ಅವನ ಕಿವಿಗಳಲ್ಲೇನೋ ಸುಯ್ಯೆಂದು ಮೊರೆದು ಕೂಗುತ್ತಿತ್ತು—

‘ ಓಡು, ಓಡು, ಇಲ್ಲಿಂದ ಓಡು – ಇಲ್ಲದಿದ್ದರೆ ನೀನು ಬದುಕಲಾರೆ. ನೀನೂ ರಕ್ತ ಕಾರುತ್ತ ರಸ್ತೆಯಲ್ಲುರುಳಬೇಕಾಗುವುದು.’

ಮೂರ್ತಿ ಹಿಂದಕ್ಕೆ ತಿರುಗಿ ಓಡಲೆತ್ನಿಸಿದ—

ಅದೂ ಆಗಲಿಲ್ಲ – ಅವನ ಹಿಂದಿನಿಂದ ಉದ್ರಿಕ್ತ ಜನದ ಗುಂಪು ಮುಂದಕ್ಕೆ ಒತ್ತುತ್ತಿತ್ತು—

ಗರಬಡಿದಂತೆ, ಜೆವರಿಡುತ್ತಾ ನಿಂತಲ್ಲಿಯೇ ನಿಂತ ಮೂರ್ತಿ.

ಲಾಠಿ, ಬೂಟುಗಾಲುಗಳು, ಕೈಗೆ ಸಿಕ್ಕವರನ್ನು ಥಳಿಸುತ್ತಾ, ಕಾಲಿಗೆ ಸಿಕ್ಕವರನ್ನು ತುಳಿಯುತ್ತಿರುವಾಗಲೇ ಗುಂಪಿನ ಮೇಲೆ ಅಶ್ವಾರೋಹೀ ರಿಜರ್ವ್ ಪಡೆ ಧಾಳಿ ಮಾಡಿತು.

ಕುದುರೆಗಳ ಕಾಲಿಗೆ ಸಿಕ್ಕವನೊಬ್ಬ ಜಜ್ಜಿಹೋಗಿ, ರಸ್ತೆಯ ಮೇಲೆ ರಕ್ತಕೆಸರು ಚೆಲ್ಲಿತು.

ಜನ ಚೀರುತ್ತಲೇ ಇತ್ತು, ಚೀತ್ಕರಿಸುತ್ತಲೇ—ಇತ್ತು—

ಇದ್ದಕ್ಕಿದ್ದ ಹಾಗೇ ಬಂದೂಕಗಳ ಸಿಡಿತದ ಸಪ್ಪಳವೂ ಕೇಳಿ ಬಂದು, ಅದುವರೆಗೂ ಪೋಲೀಸರನ್ನು ಪ್ರತಿಭಟಿಸುತ್ತಿದ್ದ ಜನರ ಗುಂಪು ಚೆಲ್ಲಾಪಿಲ್ಲಿಯಾಗಿ ರಕ್ಷಣೆಯತ್ತ ಹುಚ್ಚಾಗಿ ನುಗ್ಗಿತು.

ರಸ್ತೆಯ ಇಬ್ಬದಿಯಲ್ಲಿನ ಮರಗಳಲ್ಲಿದ್ದ ನೂರಾರು ಹಕ್ಕಿಗಳು ಹೆದರಿ, ಮರ ಬಿಟ್ಟು ಮುಗಿಲಿಗೆ ಹಾರಿ, ಭಯದಿಂದ ಚೀರುತ್ತಾ ಹಾರಲಾರಂಭಿಸಿದವು

ವ್ಯಾನುಗಳ ಸೈರನ್ ಶಬ್ದ, ಕುದುರೆಗಳ ಕೆನೆತ, ಬಂದೂಕಗಳ ಸಿಡಿತ, ಜಯಘೋಷ, ಚೀತ್ಕಾರ—

ನೂರಾರು ಬಗೆಯ ಸದ್ದುಗಳು ಹಬ್ಬಿ, ನಗರ ನಡುಗಿತು—

ಜನ ದಾರಿ ಸಿಕ್ಕತ್ತ ನುಗ್ಗಿದರು—

ಮೂರ್ತಿಯೂ ಗಲ್ಲಿಯೊಂದರಲ್ಲಿ ನುಗ್ಗಿ ಓಡಿದ—

ಓಡಓಡುತ್ತಲೇ ಒಮ್ಮೆ ಹಿಂದಿರುಗಿ ನೋಡಿದ—

ಜನವಿಹೀನವಾದ ತಾರು ರಸ್ತೆಯಲ್ಲಿ ಹತ್ತಾರು ಹೆಣಗಳು ಉರುಳಿ, ಕಾಲನ ಕೋಣಗಳಂತಿದ್ದ ಕಪ್ಪು ಕುದುರೆಗಳ ಮೇಲೆ ಕುಳಿತ ಕಪ್ಪು ದಿರಸಿನ ಪೋಲೀಸರು ಸುತ್ತುತ್ತಿದ್ದರು.

ಲಾಠಿಗಳು ಹೊಳೆಯುತ್ತಿದ್ದವು—

ಬಂದೂಕಗಳು ಸಿಡಿಯುತ್ತಿದ್ದವು—

ತಾರು ರಸ್ತೆಯಲ್ಲಿ ರಕ್ತದ ಕೋಡಿ ಹರಿಯುತ್ತಿತ್ತು.

ಮೂರ್ತಿ ಓಡಿದ, ಭಯದಿಂದ ಚೀತ್ಕಾರ ಮಾಡುತ್ತಾ ಓಡಿದ – ಅವನು ಹೇಗೆ ಮನೆಗೆ ಬಂದನೋ ಅದು ಅವನಿಗೇ ತಿಳಿಯದು. ಅಂತೂ 'ಅಮ್ಮಾ....ಅಮ್ಮಾ....' ಎಂದು ಚೀರುತ್ತಾ, ಹೇಗೋ ಮನೆಬಾಗಿಲನ್ನು ಸೇರಿ, ತನ್ನ ಕೂಗನ್ನು ಕೇಳಿ—

'ಏನೋ....ಏನೋ....ಏನಾಯಿತೋ ಮೂರ್ತಿ ?'

—ಎಂದು ತಾನೂ ಬೆದರಿ ಕೂಗುತ್ತಾ ಬಂದ ಅನಸೂಯಮ್ಮನ ಧ್ವನಿ ಕೇಳಿ, ಹಾಗೇ ಮನೆಬಾಗಿಲಲ್ಲಿ ಉರುಳಿಬಿದ್ದ.

ಆ ದಿನ ಮಲಗಿದ ಮೂರ್ತಿ, ಮತ್ತೆ ಮೇಲೇಳುವುದಕ್ಕೆ ಹದಿನೈದು ದಿನ ಬೇಕಾಯಿತು.

ಹದಿನೈದು ದಿನ 'ಪೋಲೀಸರು–ಬಂದೂಕ–ಕುದುರೆ – ಲಾಠಿ' ಎಂದು ಬಡಬಡಿಸುತ್ತಾ, ಗಳಿಗೆಗೊಮ್ಮೆ ಬೆಚ್ಚಿಬಿದ್ದು ಚಿಟ್ಟನೆ ಚೀರುತ್ತಾ, ಹಾಸಿಗೆಯಲ್ಲಿ ಬಿದ್ದಿದ್ದ.

ಆ ಭೀತಿ – ಜ್ವರದ ಕಾವು ಇಳಿದು, ಮೈ ತಂಪಾದ ಮೇಲೂ ಮೂರ್ತಿಗೆ ಬೀದಿಯಲ್ಲಿ ಕಾಲಿಡಲು ಧೈರ್ಯ ಬರಬೇಕಾದರೆ ಒಂದು ತಿಂಗಳು ಕಳೆಯಿತು.

ಅವನಿಗೆ ಆ ಭೀತಿಯಿಂದ ಸಂಪೂರ್ಣವಾಗಿ ಬಿಡುಗಡೆಯಾಗುವ ವೇಳೆಗೆ, ಡಿಸೆಂಬರ್ ತಿಂಗಳು ಸಮೀಪಿಸಿ, ಮತ್ತೆ ಕಾಲೇಜಿನ ಬಾಗಿಲು ತೆಗೆದು, ಬಂಧಿತ ವಿದ್ಯಾರ್ಥಿಗಳು ಬಿಡುಗಡೆಯಾಗಿ, ತಮ್ಮ ತಮ್ಮ ತರಗತಿಗಳಿಗೆ ಮರಳಿದರು.

ಮತ್ತೆ ಶಾಲಾ ಜೀವನ ಆರಂಭವಾಯಿತು.

ಚಳುವಳಿಯಿಂದ ಶಾಲೆಗೆ ಮರಳಿದ ಒಬ್ಬೊಬ್ಬ ವಿದ್ಯಾರ್ಥಿಯೂ, ತಾನು ಮಾಡಿದ ಸಾಹಸ ಕೃತ್ಯವನ್ನು ವಿವರಿಸಿ ಹೇಳುತ್ತಿದ್ದ.

ಆದರೆ ಮೂರ್ತಿ—

ಸುಮ್ಮನೆ ಕುಳಿತು ಕೇಳುತ್ತಿದ್ದ—

ಅವನ ಬೆಂಚಿನಲ್ಲೇ ಇದ್ದ ಗೋವಿಂದರಾಜು ಹೆಮ್ಮೆಯಿಂದ ಹೇಳಿದ—

"ಆವತ್ತು ಪ್ರಭಾತ್ ಟಾಕೀಸ್‌ನ ಹತ್ತಿರ ಗೋಲಿಬಾರ್ ಮಾಡಿದ್ರಲ್ಲಾ – ಅವತ್ತೇನಾಯ್ತು ಗೊತ್ತೇನೋ ?"

"ಏನಾಯ್ತು ?"

"ನಾನೂ ರಾಧಾಕೃಷ್ಣ, ವಸಂತ, ಸಿದ್ದರಾಮು, ಷಫಿ – ಎಲ್ಲಾ ಒಂದೇ ಕಡೆ ಇದ್ವಿ. ನಮ್ಮ ಕಡೆ ಒಬ್ಬ ಪೋಲೀಸಿನೋನು ನುಗ್ಗಿ ಬಂದ – ಲಾಠಿ ತಿರುಗಿಸ್ತಾ. ನಾವೆಲ್ಲಾ ಸೇರಿಕೊಂಡು, ಆ ನನ್ನ ಮಗನ್ನ ಪಕ್ಕದ ಗಲ್ಲೀಲಿ ಎಳಕೊಂಡು ಮೋರೀಲಿ ಹಾಕಿ ತುರುಕಿ ಬಿಟ್ವಿ. ಷಫಿ ಇದಾನಲ್ಲಾ ರುಸ್ತುಂ ಕಣೋ – ಅವನಿಗೂ ಬಂದೂಕ ಉಡಾಯ್ಸೋದು ಗೊತ್ತು. ಅದ್ಯಾಂಗೆ ಮಾಡಿದ್ನೋ ಏನೋ, ಒಬ್ಬ ಪೋಲೀಸ್ನೋನ ಹತ್ರ ಇದ್ದ ಬಂದೂಕ

ಕಿತ್ಕೊಂಡು – ಮೂರು ಜನ ಪೋಲೀಸ್ನೋರ್ನ ಮಲಗಿಸಿಬಿಟ್ವಿ. ನಮ್ಗೂ ಒಂದೆರಡು ಏಟು ಬಿತ್ತು. ಆದ್ರೂ ಬಿಡ್ಲಿಲ್ಲ – ರಚ್ಚು ತೀರಿಸಿಕೊಂಡೇಬಿಟ್ವಿ."

—ಕಣ್ಣುಗಳಲ್ಲಿ ಹೆಮ್ಮೆ, ಗೆಲವುಗಳ ಬೆಳಕನ್ನು ತುಳುಕಿಸುತ್ತ ಹೇಳಿದ ಗೋವಿಂದರಾಜು.

ಅವನು ಹೆಮ್ಮೆಯಿಂದ ತಲೆ ಸೆಟೆಸಿ ಹೇಳಿ, ಮೂರ್ತಿಯನ್ನು—

" ಅವತ್ತು ನೀನೆಲ್ಲಿದ್ದೋ ? "

—ಎಂದು ಕೇಳಿದ.

ಅವನು ತಲೆ ಸೆಟೆಸಿ ಕೇಳಿದ—

ಇವನು ಸುಮ್ಮನೆ ನೆಲಕ್ಕೆ ತಲೆ ಬಾಗಿಸಿದ.

ಗೋವಿಂದರಾಜುವಿನ ಹಾಗೇ ಇನ್ನೂ ಎಷ್ಟೋ ಜನ ತಾವು ಮಾಡಿದ ಸಾಹಸಗಳನ್ನು ವಿವರಿಸುತ್ತಿದ್ದರು. ಅವರು ಹೇಳಿದುದನ್ನು ಕೇಳಿದಾಗ ಮೂರ್ತಿಯ ಮೈಗೂದಲೂ ನಿಮಿರುತ್ತಿದ್ದವು.

ಅವನೂ ಅಂಥದು ಏನಾದರೂ ಮಾಡಬೇಕೆಂದು ಕನಸು ಕಂಡಿದ್ದ.

ಕನಸು ಕಂಡಿದ್ದ – ಅಷ್ಟೆ.

ಅವರು ಹೆಮ್ಮೆಯಿಂದ ತಲೆ ಸೆಟೆಸಿದ್ದರು—

ಇವನು ತಲೆಬಾಗಿಸಿದ್ದ.

' ಆ ಭಯ, ಹಾಳು ಭಯ ಒಂದು ಇಲ್ದೆಹೋಗಿದ್ರೆ – ಅವತ್ತು ನಾನೂ ಇವರ ಹಾಗೇ ಏನಾದ್ರೂ ಮಾಡಬಹುದಾಗಿತ್ತು '

—ಎಂದು ತನಗೆ ತಾನೇ ನೂರಾರು ಬಾರಿ ಹೇಳಿಕೊಂಡ.

ಏನಾದರೂ ಮಾಡಬಹುದಿತ್ತು—

ಆದರೆ ಏನೂ ಮಾಡಲಿಲ್ಲ.

' ನೆನೆನೆನೆಯೋ ಆ ದಿನವ
ಓ, ಭಾರತಬಾಂಧವ
ನೆನೆನೆನೆಯೋ ಆ ದಿನವ ! '

ರೋಮಾಂಚಕಾರೀ ಆಗಸ್ಟ್ ಚಳುವಳಿಯನ್ನು ನೆನೆದು ದೇಶ ಹೆಮ್ಮೆಯಿಂದ ತಲೆ ನಿಮಿರಿಸಿತ್ತು.

ಆದನ್ನು ನೆನೆನೆನೆದು ಮೂರ್ತಿ ತಲೆಬಾಗಿಸಿದ್ದ.

ಆವನ ಎದುರಿಗೇ ಪೋಲೀಸರು ಜನರನ್ನು ಲಾಠಿಯಿಂದ ಥಳಿಸಿದ್ದರು, ಗುಂಡಿಟ್ಟು ಕೊಂದಿದ್ದರು. ತಾರು ರಸ್ತೆ ರಕ್ತದ ಕಾಲುವೆಯಾಗಿತ್ತು.

ಆ ರಕ್ತದಲ್ಲಿ ಮೂರ್ತಿಯ ರಕ್ತದ ಒಂದು ಹನಿಯೂ ಇರಲಿಲ್ಲ.

ಎಲ್ಲರೂ ಪ್ರತಿಭಟಿಸಿದಾಗ ಇವನು ಓಡಿದ್ದ.

ಹತ್ತಾರು ಜನರಂತೆ ಹೆಮ್ಮೆಯಿಂದ ಎದೆ ಸೆಟೆಸುವ ಅವಕಾಶ–ಇವನ ಪಾಲಿಗೆ ತಪ್ಪಿಹೋಯಿತು. ಆಗ ನಾಚಿ, ತನಗೆ ತಾನೇ ಹೇಳಿಕೊಂಡಿದ್ದ—

'ಥತ್ – ಈ ಹಾಳು ಭಯ ಬಿಟ್ಟುಬಿಡಬೇಕು.'

'ಈ ಭಯ ಒಂದಿಲ್ದೆ ಹೋದ್ರೆ ಏನಾದರೂ ಸಾಧಿಸಬಹುದು.'

'ಭಯ ಬಿಡಬೇಕು. ಬಂದದ್ದನ್ನು ಅನುಭವಿಸಬೇಕು, ಬಯಸಿದ್ದನ್ನು ಪಡೆಯಬೇಕು.'

ಅಂದಿನಿಂದ ಈ ಮಾತನ್ನು ಮೂರ್ತಿ ತನಗೆ ತಾನು ಸಾವಿರ ಬಾರಿ ಹೇಳಿಕೊಂಡಿದ್ದ—

'ಬಯಕೆಗೂ ಭಯಕ್ಕೂ ನೆಂಟಸ್ತಿಕೆ ಸಾಧ್ಯವಿಲ್ಲ; ಭಯವಿದ್ದರೆ ಬಯಕೆ ಸಫಲವಾಗುವುದಿಲ್ಲ.'

# ೧೩

‘ ಬಯಕೆ ತೀರಬೇಕು, ಭಯ ಬಿಡಬೇಕು.’

—ಎಂದಿನಂತೆ ಇಂದೂ ಭಯ ಬಯಕೆಗಳ ಯುದ್ಧ ನಡೆದಾಗ ಮೂರ್ತಿ ತನಗೆ ತಾನೇ ಹೇಳಿಕೊಂಡ.

ಸುತ್ತ ಹಬ್ಬಿದ ಕಾಡ ಮೌನವನ್ನು, ತನ್ನ ಸಿಳ್ಳು ಕೂಗಿನಿಂದ ಕತ್ತರಿಸುತ್ತಾ, ಹೊಗೆ ಕಾರುತ್ತಾ ರೈಲು ಮುಂದೆ ನುಗ್ಗುತ್ತಿತ್ತು.

ತನ್ನ ಜೊತೆಗೆ ಬಂದ ಹೆಂಗಸನ್ನು ಇದಿರು ಸೀಟಿನ ಮೇಲೆ ಮಲಗಲು ಬಿಟ್ಟು, ವ್ಯಾಸರಾಯ ಮೂರ್ತಿಯ ಪಕ್ಕದಲ್ಲೇ, ಅವನ ಹಾಸಿಗೆಯ ಮೇಲೆ ಕುಳಿತಿದ್ದ.

ಮೂರ್ತಿ ಮಾತನಾಡದೆ ಏನೋ ಯೋಚಿಸುತ್ತಿದ್ದುದನ್ನು ನೋಡಿ ವ್ಯಾಸರಾಯ—

“ ಇವತ್ತ್ಯಾಕೋ ಭಾಳ ಬಾಯಾರಿಕೆ ಆಗ್ತಾ ಇದೆ. ನೀವೇನೂ ಅಂದ್ಕೊಳ್ಳದೆ ಹೋದರೆ........’

—ಎಂದು, ಮೂರ್ತಿ ತನ್ನ ಬದಿಯಲ್ಲಿರಿಸಿಕೊಂಡ ಕಿತ್ತಳೆಯ ಹಣ್ಣಿನತ್ತ ಕೈಚಾಚಿದ.

“ ಅದಕ್ಕೇಕೆ ಸಂಕೋಚ – ತಗೊಳ್ಳಿ ”

—ಎಂದು ಮೂರ್ತಿ, ತಾನೇ ಅವನ ಕೈಗೆ ಒಂದು ಕಿತ್ತಳೆಹಣ್ಣು ತೆಗೆದುಕೊಟ್ಟ.

ವ್ಯಾಸರಾಯ ಹಣ್ಣು ತೆಗೆದುಕೊಂಡು, ಮೂರ್ತಿಯನ್ನು ಅವನ ಯೋಚನೆಗೆ ಬಿಟ್ಟು, ತನ್ನ ಪಾಡಿಗೆ ತಾನು ಕಿತ್ತಲೆಹಣ್ಣು ಸುಲಿದು ತಿನ್ನಲಾರಂಭಿಸಿದ.

ವ್ಯಾಸರಾಯ ತನ್ನನ್ನು ಅಷ್ಟು ಧಾರಾಳವಾಗಿ ಹಣ್ಣು ಕೇಳಿದುದನ್ನು ಕಂಡು ಮೂರ್ತಿಗೆ ಆಶ್ಚರ್ಯವೆನಿಸಿತು.

‘ ಇಷ್ಟು ಅಲ್ಪಕಾಲದ ಪರಿಚಯದಲ್ಲಿ ಈ ಮನುಷ್ಯ ಎಷ್ಟು ಸಲಿಗೆ ತೆಗೆದುಕೊಂಡಿದಾನೆ.’

ಹಾಗೇ ಅನಿಸಿತು—

‘ ಈ ಮನುಷ್ಯ ಎಷ್ಟು ಬೇಗ ಬದಲಾಯಿಸಿದ. ಮೊದಲು ತನ್ನನ್ನು ಕಂಡರೆ ಅವನ ಕಣ್ಣು ಆಗದವರನ್ನು ಕಂಡಹಾಗೆ ನೋಡುತ್ತಿತ್ತು. ಮಾತಾಡುವುದಿರಲಿ, ನೋಡುವುದೂ ಬೇಸರ ಎಂಬಂತೆ ವರ್ತಿಸುತ್ತಿದ್ದ. ಏನೋ ಸಂಶಯದ, ಅಸಮಾಧಾನದ ದೃಷ್ಟಿಯಿಂದಲೇ ನೋಡುತ್ತಿದ್ದ.’

ಆದರೆ ಈಗ—

ಅದಾವುದೂ ಇಲ್ಲದೆ, ಇಷ್ಟು ನಿಸ್ಸಂಕೋಚವಾಗಿ ವರ್ತಿಸುತ್ತಿದ್ದಾನೆ. ‘ ಒಳ್ಳೇ ವಿಚಿತ್ರ ಮನುಷ್ಯ ವ್ಯಾಸರಾಯ ’ ಎನಿಸಿತು ಮೂರ್ತಿಗೆ.

ಹಾಗೇ – ಅವನು ಎಷ್ಟು ಧಾರಾಳವಾಗಿ ತನ್ನ ಬಯಕೆಯನ್ನು ವ್ಯಕ್ತಪಡಿಸಿದ.

ಹಣ್ಣು ಬೇಕು ಎನಿಸಿತು – ಕೇಳಿದ – ಅಲ್ಲಿಗೆ ಅದು ಮುಗಿದುಹೋಯಿತು. ತಾನೇ ಆಗಿದ್ದಿದ್ದರೆ, ಅಲ್ಪ ಪರಿಚಿತರನ್ನು ಹಾಗೆ ಕೇಳುತ್ತಿದ್ದನೇ ? ಊಹೂ – ಅವನಾಗಿಯೇ ಕೊಟ್ಟರೂ ತೆಗೆದುಕೊಳ್ಳಲು ಹಿಂಜರಿಯುತ್ತಿದ್ದ.

ಆದರೆ ಈ ಮನುಷ್ಯನಿಗೆ ಮಾತ್ರ ಅಂಥ ದಾಕ್ಷಿಣ್ಯ, ಸಂಕೋಚ ಯಾವುದೂ ಇದ್ದಂತಿರಲಿಲ್ಲ. ತನಗೆ ಬೇಕಾದ ಹಣ್ಣು ಕೇಳುವ ವಿಷಯದಲ್ಲೇ ಏನು, ತಿಂಡಿ ತಿನ್ನುವ ವಿಷಯದಲ್ಲಿ, ತಾನು ತಿಂದ ತಿಂಡಿಯ ಹಣವನ್ನು ಪರಕೀಯನಿಂದ ಕೊಡಿಸುವ ವಿಷಯದಲ್ಲಿ – ಯಾವ ವಿಷಯದಲ್ಲೂ ವ್ಯಾಸರಾಯನಿಗೆ ಸಂಕೋಚವಾಗಲಿ, ದಾಕ್ಷಿಣ್ಯವಾಗಲಿ ಇದ್ದಂತಿರಲಿಲ್ಲ.

ಸಂಕೋಚವಿಲ್ಲ– ನಿಜ – ಆದರೆ ಆದರಿಂದ ಆತನಿಗೆ ಆದ ನಷ್ಟವೇನು ?

ಹಾಗೆ ನೋಡಿದರೆ, ವ್ಯಾಸರಾಯ ಸಂಕೋಚ ವ್ಯಕ್ತಪಡಿಸಿದ್ದರೇ ನಷ್ಟವಾಗುತ್ತಿತ್ತು.

ಈಗ – ಹಣವೂ ಉಳಿಯಿತು, ಬೇಕಾದುದು ದೊರೆತು ಬಯಕೆಯೂ ತೀರಿತು.

‘ ಇದ್ದರೆ ಹೀಗಿರಬೇಕು ’ ಎನಿಸಿತು ಮೂರ್ತಿಗೆ. ಹೀಗಿದ್ದರೇ, ಸ್ವಂತಕ್ಕೆ ನಷ್ಟವಿಲ್ಲದೆ ಸುಖಪಡಲು ಸಾಧ್ಯವೆಂದೂ ತೋರಿತು ಅವನಿಗೆ.

ಹಾಗಿದ್ದರೆ ತಾನೂ ಅದೇ ಮಾರ್ಗ ಅನುಸರಿಸಬಾರದೇಕೆ ?

ಅವನಿಗೆ ತನ್ನ ಬಳಿ ಇದ್ದ ಹಣ್ಣು ಬೇಕಾಗಿತ್ತು – ಕೇಳಿದ, ಪಡೆದ.
ಹಾಗೇ ತನಗೂ, ಅವನ ಬಳಿಯ ' ಹೆಣ್ಣು 'ಬೇಕಾಗಿದೆ–ಕೇಳಬಾರದೇಕೆ?
ವ್ಯಾಸರಾಯ ತನ್ನನ್ನು ಹಣ್ಣು ಕೇಳಿದಷ್ಟೇ ಸಹಜವಾಗಿ ತಾನು—
' ನೋಡಿ, ನನಗೂ ತುಂಬಾ ದಾಹ – ನಿಮ್ಮ ಜೊತೆಯ ಹೆಣ್ಣಿನದು.'

—ಎಂದು ಕೇಳಿದರೆ, ಅದಕ್ಕೆ ಆ ಮನುಷ್ಯ ಏನು ಹೇಳುತ್ತಾನೋ ಪ್ರಯತ್ನಿಸಿ ನೋಡಬೇಕು ಎನಿಸಿತು. ಆದರೆ ಅಂಥ ಪ್ರಶ್ನೆಯ ಯೋಚನೆ ಯಿಂದಲೇ ಅವನ ಮುಖ ಕೆಂಪೇರಿತು.

ತನ್ನ ಮನಸ್ಸಿನಲ್ಲಿ ನಿಶ್ಶಬ್ದವಾಗಿ ಮೂಡಿದ ಮಾತೂ, ಆಕಸ್ಮಿಕವಾಗಿ ಹತ್ತಿರದಲ್ಲಿರುವವನಿಗೆ ಕೇಳಿಸಿತೇನೋ ಎಂಬಂತೆ ಹೆದರಿ, ಮೂರ್ತಿ ತನ್ನ ಕಣ್ಣನ್ನು ಹೊರಳಿಸಿ ನೋಡಿದ.

ವ್ಯಾಸರಾಯ ಯಾವ ಚಿಂತೆಯೂ ಇಲ್ಲದೆ ಹಣ್ಣು ತಿನ್ನುತ್ತಿದ್ದ.

ಆಕೆ – ಇಂದಿರಾ – ಇದಿರು ಸೀಟಿನಲ್ಲಿ ಕುಳಿತ ಅವರಿಬ್ಬರನ್ನೂ ನೋಡು ತ್ತಿದ್ದಳು. ಆಕೆ ಅವರ ಕಡೆ ನೋಡುತ್ತಿರುವಾಗ ಆಕೆಯ ಕಣ್ಣುಗಳಲ್ಲಿ ಯಾವ ಭಾವವೂ ಇದ್ದಂತಿರಲಿಲ್ಲ. ಆದರೆ ಮೂರ್ತಿಯ ಕಣ್ಣು ಆಕೆಯ ಮುಖವನ್ನು ನೋಡಿದಾಗ ಮಾತ್ರ ಏಕೋ ಆಕೆಯ ಕಣ್ಣುಗಳು ಕೊಂಚ ಚಂಚಲವಾದವು.

ಮುಖವನ್ನು ಒಂದು ಬದಿಗೆ ತಿರುಗಿಸಿದಳು.

ಮೂರ್ತಿ ತನ್ನತ್ತ ತಿರುಗಿದ, ನೋಟಕ್ಕೂ ಬಹು ಮೃದುವಾಗಿ, ನಯ ವಾಗಿ ಕಾಣುತ್ತಿದ್ದ ಅವಳ ಕೆನ್ನೆಯನ್ನೇ ನೋಡುತ್ತಿದ್ದ—

' ಆ ಕೆನ್ನೆಯನ್ನು ಒಮ್ಮೆ ನಯವಾಗಿ ನೇವರಿಸಬಹುದಾದರೆ . . . '

ಮೂರ್ತಿಯ ಮುಖದಿಂದ ತಾನೇತಾನಾಗಿ ನಿಟ್ಟುಸಿರು ಹೊರ ಹೊಮ್ಮಿತು.

ಅವನ ನಿಟ್ಟುಸಿರನ್ನು ಕೇಳಿ, ಹಣ್ಣು ತಿನ್ನುವುದರಲ್ಲಿ ನಿರತನಾಗಿದ್ದ ವ್ಯಾಸರಾಯ ಅವನತ್ತ ತಿರುಗಿ—

" ಏನು ಸಾರ್ ಬಹಳ ಯೋಚನೆ ಮಾಡ್ತಾ ಇದೀರಿ ? "

—ಎಂದು ಕೇಳಿದ.

ಅವನು ಆ ಪ್ರಶ್ನೆಯನ್ನು ಕೇಳಿದಾಗ, ಮೂರ್ತಿಗೆ ತಟಕ್ಕನೆ ತನ್ನ

ಯೋಚನೆಯನ್ನು ಅವನಿಗೆ ಹೇಳಿಬಿಡಬೇಕು ಎನಿಸಿತು. ಆದರೆ ಅದನ್ನು ಬಾಯಿಬಿಟ್ಟು ಹೇಳಲಾಗದೆ—

" ಏನೂ ಇಲ್ಲ – ಊರು ಬಿಟ್ಟು ಬಹಳ ದಿನ ಆಯ್ತು. ಮನೇಕಡೆ ಯೋಚನೆ ಮಾಡ್ತಾ ಇದ್ದೆ."

—ಎಂದ.

" ಊರು ಬಿಟ್ಟು ಭಾಳಾ ದಿನ ಆದ್ರೆ – ಈ ವಯಸ್ಸಿನಲ್ಲಿ ' ಮನೆಕಡೆ ' ಯೋಚನೆ – ಬರಬೇಕಾದದ್ದೇ."

—ಕಡೆಯ ಮಾತನ್ನು ಅರ್ಥಗರ್ಭಿತವಾಗಿ ಹೇಳಿ, ನಕ್ಕ ವ್ಯಾಸರಾಯ.

ಅವನ ನಗುವಿನ ಕಾರಣ ಮೂರ್ತಿಗೆ ಅರ್ಥವಾಗಲಿಲ್ಲ. ಅವನ ಮಾತು, ನಗು – ಎಂಥದೂ ಏನೋ ಒಳ ಅರ್ಥವನ್ನು ಹುದುಗಿಸಿಕೊಂಡಿದ್ದವು.

" ಅದ್ಯಾಕೆ – ಹಾಗೆ ನಗ್ತೀರ ನನ್ನ ಮಾತು ಕೇಳಿ ? "

—ಎಂದು ಕೇಳಿದ.

" ಊಹೂ – ನಿಮ್ಮ ಮಾತು ಕೇಳಿ ನಗು ಬರ್ಲಿಲ್ಲ."

" ಮತ್ತೆ—? "

" ಏನೂ ಇಲ್ಲ – ಹೋಗ್ಲಿ ಬಿಡಿ—"

—ಎಂದು ಮಾತಿನ ಜಾಡು ಬದಲಿಸುವವನಂತೆ—

" ನಿಮಗೆಷ್ಟು ಜನ ಮಕ್ಕಳು ? "

—ಎಂದು ಕೇಳಿದ ವ್ಯಾಸರಾಯ.

ವ್ಯಾಸರಾಯನ ಮಾತು ಕೇಳಿ ಮೂರ್ತಿಗೆ ಆಶ್ಚರ್ಯವಾಯಿತು. ಇದ್ದಕ್ಕಿದ್ದಹಾಗೇ ಇವನು ನನ್ನನ್ನು ಈ ಪ್ರಶ್ನೆ ಏಕೆ ಕೇಳಿದ ಎಂದು ಯೋಚಿಸುತ್ತಲೇ —

" ಎಷ್ಟೂ ಇಲ್ಲ."

—ಎಂದು ಉತ್ತರಕೊಟ್ಟ.

" ಅಂದರೆ—? "

" ಮದುವೆಯೇ ಇಲ್ಲ, ಇನ್ನೂ ಮಕ್ಕಳೆಲ್ಲಿಂದ ತರಲಿ."

—ಎಂದ ಮೂರ್ತಿ ನಗುತ್ತಾ.

" ಮದುವೆಯಾಗದೆ ಹೋದರೂ ಮಕ್ಕಳಾಗಬಾರದೂಂತ ಯಾವ ಶಾಸ್ತ್ರ ಹೇಳಿದೆ ? ಈ ಕಾಲದಲ್ಲಿ ಅವೆರಡಕ್ಕೂ ಸಂಬಂಧವೇ ಇಲ್ಲ."

—ಎಂದ ವ್ಯಾಸರಾಯ ತಾನೂ ನಗುತ್ತಾ.

ಅವನ ಮಾತಿನ ಅಂತರಾರ್ಥ ಮೂರ್ತಿಗೆ ಅ[illegible]ಗಿ ಮೂರ್ತಿಯೂ ನಕ್ಕ.

" ನಾನು ಹೇಳಿದ್ದು ನಗೋ ವಿಷಯ ಅಲ್ಲ ಸಾರ್. ಕಾಲ ಹಾಗಿದೆ."

" ಅಂದ್ರೆ . . . . . "

" ಈ ಕಾಲದ ಜನಕ್ಕೆ ಮದುವೆಯ ವಿಷಯದಲ್ಲಿ ಅಷ್ಟಾಗಿ ನಂಬಿಕೆ ಇಲ್ಲ. ಬಾಡಿಗೆಮನೆ ಸುಲಭವಾಗಿ ಸಿಗೋವಾಗ ಸ್ವಂತ ಮನೆ ಕಟ್ಟಿಸೋಕೆ ಯಾರು ಹೋಗ್ತಾರೆ ಹೇಳಿ. ಹಾಗೆ ನೋಡಿದ್ರೆ-ಒಂದ್ರೀತೀಲಿ ಅದೂ ಒಳ್ಳೇದೇ ಅನ್ನಿ."

" ಏಕೆ ? "

" ಮನೆ ಕಟ್ಟಿಸಿದರೆ ಬ್ಯಾಡಾನ್ನಿಸಿದರೆ ಬಿಡೋಕೆ ಸಾಧ್ಯವೇ ? ಬಾಡಿಗೆ ಮನೆ ಆದ್ರೆ ಬೇಕಾದಾಗ ಬಿಟ್ಟು ಇನ್ನೊಂದನ್ನ ಹುಡುಕಿಕೋಬಹುದು. ಕಟ್ಟಿರೋನಿಗೆ ಒಂದೇ ಮನೆ ಆದ್ರೆ, ಬಾಡಿಗೆ ಕೊಡ್ತೀನಿ ಅನ್ನೋನಿಗೆ ಒಂದು ಸಾವಿರ - ಯಾವ ಹೊತ್ತಿಗೆ ಎಂಥಾದ್ದು ಬೇಕೆನ್ನಿಸಿದರೆ ಅಂಥಾದ್ದು. ಅದೇ ಒಳ್ಳೇದಲ್ವೇ ? ಹಾಗೆ ನೋಡಿದ್ರೆ – ಹಾಗೆ ಬಿಡಿಬಿಚ್ಚಾಗಿರೋದೇ ಸುಖ."

—ಎಂದ ವ್ಯಾಸರಾಯ ಮೂರ್ತಿಯತ್ತ ಕಣ್ಣು ಹೊಡೆದು.

ಅವನ ಮಾತು ಕೇಳಿ ಮೂರ್ತಿಗೆ ನಗು ಬರಲಿಲ್ಲ. ಅದಕ್ಕೆ ಪ್ರತಿಯಾಗಿ, ಸುಲಭವಾಗಿ ಅರ್ಥವಾಗುವ ಅವನ ವ್ಯಂಗ್ಯೋಕ್ತಿಯನ್ನು ಕೇಳಿ ಅವನ ಮುಖ ಕೆಂಪೇರಿತು.

ವ್ಯಾಸರಾಯನ ಮಾತಿನ ಅರ್ಥ ಆಕೆಗೂ ಆಗಿರಬೇಕು. ಎಂತಲೇ ಆಕೆಯ ಮುಖವೂ ನಸುಗೆಂಪಾಗಿತ್ತು.

ಅದನ್ನು ಕಂಡ ಬಳಿಕ ಮೂರ್ತಿಗೆ, ಹೆಂಗಸಿನ ಇದಿರು ಅಂಥ ಸರಸ ಸಲ್ಲಾಪ ನಡೆಸುವುದು ಅಸೌಜನ್ಯವೆನಿಸಿ, ಆ ಮಾತನ್ನು ಅಲ್ಲಿಗೇ ಮುರಿದು, ಕಿಟಕಿಯಾಚೆ ತಲೆಹಾಕಿ ನೋಡಿ—

" ಇನ್ನೂ ಆನಂದಪುರ ಬರ್ಲಿಲ್ಲಾಂತ ಕಾಣುತ್ತೆ ಅಲ್ವೆ, ಈ ರೈಲು ಯಮ ನಿಧಾನ."

ಎಂದ.

" ಬರುತ್ತೇಳೆ – ಬರದೆ ಎಲ್ಲಿ ಹೋಗುತ್ತೆ ? ಊರಿಗೆ ಬಂದೋಳು ನೀರಿಗೆ ಬರೋಲ್ವೆ ? ನಿಧಾನವಾಗಿ ಬರಲಿ – ಈಗೇನು ಅವಸರ ? "

ಎಂದ ವ್ಯಾಸರಾಯ, ನಿಸ್ಸಂಕೋಚವಾಗಿ, ಮೂರ್ತಿಯ ಸಿಗರೇಟು ಪೆಟ್ಟಿಗೆಗೆ ಕೈಹಾಕಿ.

ಅದನ್ನು ನೋಡಿ ಏಕೋ ಮೂರ್ತಿಗೆ ನಗು ಬಂತು.

## ೧೪

" ಆನಂದಾಪುರ . . . . . ಆನಂದಾಪುರ . . . . . "

ಕೈಯಲ್ಲಿ ಕೆಂಪು ದೀಪ ಹಿಡಿದ ಪೋರ್ಟರು ಕೂಗಿ ಹೇಳಿದ.

ನಿಲ್ದಾಣದ ಬಳಿಗೆ ಬರುವ ವೇಳೆಗೆ ವೇಗ ಕಡಮೆಯಾದ ರೈಲು, ಅಷ್ಟುದೂರ ಬಂದ ಆಯಾಸಕ್ಕೆಂಬಂತೆ ಬುಸುಗರೆಯುತ್ತಾ ನಿಂತಿತು.

ಮೂರ್ತಿ ಹಾಗೇ ನಿಲ್ದಾಣದತ್ತ ಇಣುಕಿ ಹಾಕಿದ.

ಸ್ಟೇಷನ್‌ಮಾಸ್ಟರನ ಕೋಣೆಯಲ್ಲಿ, ನಿಲ್ದಾಣದ ಮೇಲೆ ಸೀಮೆಎಣ್ಣೆಯ ದೀಪಗಳು ಉರಿಯುತ್ತಿದ್ದರೂ, ನಿಲ್ದಾಣದಲ್ಲಿ ಸಾಕಷ್ಟು ಕತ್ತಲೆ ತುಂಬಿತ್ತು. ಆ ನಿಲ್ದಾಣದ ಮೇಲೂ ಹೆಚ್ಚು ಜನ ಗದ್ದಲವಿರಲಿಲ್ಲ. ಎಲ್ಲೋ ಒಬ್ಬಿಬ್ಬರು ಪ್ರಯಾಣಿಕರು ಕಾದಿದ್ದರು.

ಮೂರ್ತಿಯ ಸಿಗರೇಟನ್ನು ಎಳೆಯುತ್ತಾ ಅವನ ಪಕ್ಕದಲ್ಲಿ ಕುಳಿತಿದ್ದ ವ್ಯಾಸರಾಯ, ರೈಲು ನಿಂತ ಬಳಿಕ ಎದ್ದು, ಮೈಮುರಿದು—

" ಕೂತು ಕೂತು ಕಾಲು ಜೋಮು ಹಿಡಿದುಹೋಗಿದೆ. ಒಂದು ಗಳಿಗೆ ಹಾಗೇ ಕಾಲಾಡಿಸಿಕೊಂಡು ಬರ್ತೀನಿ "

—ಎಂದು ಹೇಳಿ, ಗಾಡಿಯಿಂದ ಕೆಳಗಿಳಿದು ಹೋದ.

ವ್ಯಾಸರಾಯನೂ ತನ್ನ ಸೀಟಿನ ಮೇಲೆ, ತಾನು ಹಾಸಿದ ಹಾಸಿಗೆಯ ಮೇಲೆ ಕುಳಿತಿದ್ದುದರಿಂದ, ಮಂಡಿ ಮುದುರಿ ಕುಳಿತುಕೊಳ್ಳಬೇಕಾಗಿ ಬಂದಿದ್ದ ಮೂರ್ತಿಗೆ, ತಾನೂ ವ್ಯಾಸರಾಯನ ಹಾಗೇ, ಒಂದು ಗಳಿಗೆ ಇಳಿದು, ಕಾಲಾಡಿಸಿಕೊಂಡು ಬಂದರೆ ವಾಸಿ ಎಂದೇ ತೋರಿತು. ಆದರೆ, ಏಕೋ ಅದು ಬೇಕಾಗಲಿಲ್ಲ.

ಅದರ ಬದಲು, ವ್ಯಾಸರಾಯ ಇಲ್ಲದಿರುವಾಗ, ಅವಕಾಶ ಸಿಕ್ಕಷ್ಟು ಹೊತ್ತು ಎದುರಿಗೆ ಕುಳಿತ ಹೆಣ್ಣನ್ನು, ಯಾವ ಆತಂಕವೂ ಇಲ್ಲದೆ ಕಣ್ಣತುಂಬ ನೋಡುತ್ತಾ ಕುಳಿತಿರುವುದು, ಕತ್ತಲು ಕವಿದ ನಿಲ್ದಾಣದಲ್ಲಿ ತಿರುಗುವುದಕ್ಕಿಂತ ಉತ್ತಮವಾದದ್ದು ಎನಿಸಿತು.

ಹಾಗೆಂದುಕೊಂಡು, ಅದುವರೆಗೂ ಸೀಟಿನ ಮೇಲೆ ಮುದುರಿಕೊಂಡಿದ್ದ

ಕಾಲನ್ನು, ಚಾಚಿ, ಮೈಮುರಿದು ಸರಿಯಾಗಿ ಕುಳಿತುಕೊಂಡ. ತನ್ನಷ್ಟಕ್ಕೆ ತಾನೇ ಅವನ ದೃಷ್ಟಿ ಆಕೆಯತ್ತ ಹರಿಯಿತು.

ತನ್ನತ್ತಲೇ ನೋಡುತ್ತಿದ್ದ ಅವನ ನೋಟದಿಂದ ಆಕರ್ಷಿತಳಾದವಳಂತೆ ಆಕೆಯೂ, ತನ್ನ ದೃಷ್ಟಿಯನ್ನು ಮೂರ್ತಿಯತ್ತ ತಿರುಗಿಸಿದಳು.

ಇಬ್ಬರ ನೋಟಗಳೂ ಕಲೆತಾಗ – ಮೂರ್ತಿಗೆ ರೋಮಾಂಚ ವಾದಂತಾಯಿತು.

ದೃಷ್ಟಿ ಸಂಗಮವಾದ ಗಳಿಗೆಯಲ್ಲಿ ಹೃದಯದಲ್ಲಿ ಮೂಡಿಬಂದ, ಆಕೆಯನ್ನು ಮಾತನಾಡಿಸಬೇಕೆಂಬ ಚಪಲವನ್ನು ತಡೆಯಲಾರದೆ—

" ನಿಮಗೆ . . . . ನಿಮಗೆ . . . . . ತುಂಬಾ . . . . . ಬೇಜಾರಾಗಿರಬೇಕು. ಅಲ್ವೆ ? "

—ಎಂದು ಇಲ್ಲದ ಧೈರ್ಯ ತಂದುಕೊಂಡು ಕೇಳಿದ.

ತಾನು ಕೇಳಿದ ಪ್ರಶ್ನೆಯಲ್ಲಿ ಅನುಚಿತವಾದ ಮಾತು ಏನೂ ಇರಲಿಲ್ಲವಾದರೂ, ಮಾತನಾಡಿಸಿದಷ್ಟಕ್ಕೇ, ಆಕೆಯ ಮೈ ಮುಟ್ಟಿದಂತಾಗಿ, ಅವನ ಎದೆ ಧಡಧಡಿಸಿ, ಧ್ವನಿ ಕಂಪಿಸುತ್ತಿತ್ತು.

" ಏಕೆ ? "

— ಬಹು ಸರಳವಾಗಿ ಪ್ರಶ್ನೆಮಾಡಿದಳು ಆಕೆ.

ತಾನು ಆಕೆಯನ್ನು ಮಾತನಾಡಿಸಿದಾಗ, ಆಕೆ ತನ್ನ ಪ್ರಶ್ನೆಗೆ ಉತ್ತರ ಕೊಡುವಳೆಂಬ ನಿರೀಕ್ಷೆ ಇದ್ದರೂ, ಆಕೆ ತನ್ನ ಪ್ರಶ್ನೆಗೆ ಉತ್ತರ ಕೊಟ್ಟಿದ್ದರಿಂದಲೇ ಮೂರ್ತಿಗೆ ಅಮೃತ ಹೀರಿದಷ್ಟು ಹರ್ಷವಾಗಿ, ಅವನ ಮುಖ ಅರಳಿತು.

ತಾನು ಆಕೆಯನ್ನು ಪ್ರಶ್ನಿಸುತ್ತಿದ್ದ ಹಾಗೇ, ಆಕೆ ಹಿಂದು ಮುಂದು ನೋಡದೆ ಉತ್ತರ ಕೊಟ್ಟಿದ್ದನ್ನು ಕಂಡು ಮೂರ್ತಿಗೆ, ಆಕೆ, ತಮ್ಮಿಬ್ಬರ ಮಧ್ಯೆ, ಕಾರ್ಗಲ್ಲ ಕೋಟೆಯಂತಿದ್ದ ರಕ್ಷಾರೇಖೆಯನ್ನು ತಾನಾಗಿಯೇ ಕತ್ತರಿಸಿ, ತನ್ನ ಸಮೀಪಕ್ಕೆ ಅವನನ್ನು ಆಹ್ವಾನಿಸಿದಂತೆಯೇ ತೋರಿತು. ಆ ಭಾವನೆಯ ಬೆಳಕಿನಲ್ಲಿ ನೋಡಿದಾಗ ಆಕೆ ಹಿಂದೆ ಕಂಡುದಕ್ಕಿಂತಲೂ ಹೆಚ್ಚು ಸುಂದರಿಯಾಗಿ ಕಂಡುಬಂದಳು. ಆಕೆ ತನ್ನ ಪ್ರಶ್ನೆಗೆ ಉತ್ತರ ಕೊಟ್ಟ ಮಹೋಪಕಾರಕ್ಕಾಗಿ, ಆಕೆಗಾಗಿ ಬೇಕಾದದ್ದನ್ನು ಮಾಡಬಹುದು ಎಂದೇ ತೋರಿತು.

" ಏಕೆ ? "

—ಎಂಬ ಮುಗ್ಧ, ಸರಳ, ಸಹಜ ಪ್ರಶ್ನೆಯ ಎರಡು ಅಕ್ಷರಗಳು ಮೂರ್ತಿಯ ಪಾಲಿಗೆ, ತನಗಾಗಿ ಆಕೆಯ ಚೆಂದುಟಿಗಳಿಂದ ತುಳುಕಿದ ಸ್ವಾಗತದ ಮಧುವಿನ ಎರಡು ಹನಿಗಳಂತೆಯೇ ತೋರಿತು.

ಆ ಸಂತೋಷದಲ್ಲಿಯೇ ಬೀಗುತ್ತ, ಆನಂದದ ಅಮಲೇರಿದವನಂತೆ.

" ನಾವು . . . ನಾವು . . . ನಾವಿಬ್ರೇ . . . ಮಾತಾಡ್ತಾ ಇದ್ವಿ . . . ನಿಮಗೆ . . . ಯಾರೂ . . . ಜೊತೆ ಇಲ್ಲಾಂತ . . . "

—ಎಂದು ಅರಬರೆ ಮಾತನಾಡಿದ.

ಮೂರ್ತಿ ಹಾಗೆ ತೊದಲುತ್ತ ಮಾತನಾಡಿದುದನ್ನು ಕೇಳಿ ಆಕೆಗೆ ಆಶ್ಚರ್ಯವಾಗಿರಬೇಕು. ಆ ಆಶ್ಚರ್ಯದ ಬೆಳಕು ಆಕೆಯ ಕಣ್ಣಲ್ಲಿ ಮಿಂಚಿತು.

ಒಂದು ಗಳಿಗೆ ಆ ಬೆಳಕು – ಅಷ್ಟೆ – ಮರುಗಳಿಗೆಯೇ ಆ ಕಣ್ಣುಗಳು ನಿರ್ಭಾವವಾದವು.

' ಇಲ್ದಿದ್ರೆ ಏನಾಯ್ತು ? "

—ಬಹು ಯಾಂತ್ರಿಕವಾಗಿ ಕೇಳಿದಳು ಆಕೆ.

ತನ್ನ ಪ್ರಶ್ನೆಗೆ ಆಕೆ ಕೊಟ್ಟ ಉತ್ತರವನ್ನು ಕೇಳಿ, ಗಗನದಲ್ಲಿ ವಿಹರಿಸುತ್ತಿದ್ದ ಮೂರ್ತಿ ಇದ್ದಕ್ಕಿದ್ದಂತೆಯೇ ನೆಲಕ್ಕೆ ಕುಸಿದ. ಆ ಉತ್ತರದಿಂದ ಏಕೋ ಅವನಿಗೆ ಬಹು ನಿರಾಶೆಯಾದಂತಾಯಿತು.

(ನಿಜ – ಕಾದಂಬರಿಯ ನಾಯಕಿ, ನಾಯಕನ ಪ್ರಶ್ನೆಗೆ ಆ ರೀತಿ ಉತ್ತರ ಕೊಡುತ್ತಿರಲಿಲ್ಲ. ಆಕೆ ಏನು ಹೇಳುತ್ತಿದ್ದಳು ? ಏನು ಹೇಳುತ್ತಿದ್ದಳೋ – ಅಂತೂ ಇಂಥ ನೀರಸವಾದ ಉತ್ತರ ಕೊಡುತ್ತಿರಲಿಲ್ಲ.)

' ಹಾಗಲ್ಲ . . . ಒಬ್ಬರೇ ಇದ್ದರೆ ಬೇಜಾರಾಗೋಲ್ವೆ ? "

—ನಿರಾಶೆಯ ಪಾತಾಳದಾಳಕ್ಕೆ ಇಳಿಯುತ್ತಿದ್ದ ತನ್ನ ಧ್ವನಿಯನ್ನು ಪ್ರಯತ್ನಪಟ್ಟು ಮೇಲಕ್ಕೆ ತಂದು ಕೇಳಿದ ಮೂರ್ತಿ.

ಅವನ ಆ ಪ್ರಶ್ನೆಯನ್ನು ಕೇಳಿ ಆಕೆ ಮತ್ತಷ್ಟು ಚಕಿತಳಾದಂತೆ ಕಂಡು ಬಂದಳು. ಆ ಅಚ್ಚರಿ ತೂಗಿ ತೊನೆಯುತ್ತಿದ್ದ ಧ್ವನಿಯಲ್ಲಿ ಕೇಳಿದಳು.

" ನಾನೆಲ್ಲಿ ಒಬ್ಬಳೇ ಇದ್ದೆ ? ನೀವೆಲ್ಲಾ ಇದ್ದಿರಲ್ಲಾ—? "

ತನ್ನ ಪ್ರಶ್ನೆಗೆ ಮರುಪ್ರಶ್ನೆ ಮಾಡಿ ಆಕೆ ಕೊಟ್ಟ ಉತ್ತರವನ್ನು ಕೇಳಿ

ಮೂರ್ತಿ ನಿರುತ್ತರನಾದ. ಏಕೋ – ಆ ಪ್ರಶ್ನೆಯಿಂದ ಆಕೆ, ಮೂರ್ತಿ ಬಹು ಪ್ರಯತ್ನಪಟ್ಟು ಆರಂಭಿಸಿದ ಸಂಭಾಷಣೆಯ ಸಫಲತೆಯನ್ನು ಕತ್ತರಿಸಿದಂತೆ ತೋರಿತು.

(ನಿಜ ಕಾದಂಬರಿಯ ನಾಯಕಿ ಹಾಗೆ, ನಾಯಕ ಪ್ರಯತ್ನಪಟ್ಟು, ಸಂದರ್ಭ ಸಾಧಿಸಿ ಆರಂಭಿಸಿದ ಸಂಭಾಷಣೆಯನ್ನು ಕೂಡಲೇ ಮುಕ್ತಾಯಗೊಳಿಸುವಂತೆ ಮಾತನಾಡುತ್ತಿರಲಿಲ್ಲ. ಎಂಥ ಹೊಲಸು ಚಲಚ್ಚಿತ್ರದ ನಾಯಕಿಯೂ ಹಾಗೆ ಮಾಡುತ್ತಿರಲಿಲ್ಲ. ನಿಜ – ಆಕೆ, ನಾಯಕ ತನ್ನನ್ನು ಮಾತಾಡಿಸುವುದನ್ನೇ ಕಾದಿದ್ದು, ನಾಯಕನ ಬಗ್ಗೆ ತನ್ನ ಅಚಲ, ಅಮರ, ಪವಿತ್ರ ಪ್ರೇಮವನ್ನು ವ್ಯಕ್ತಗೊಳಿಸಿ, ಅದಕ್ಕೆ ತನ್ನ ತುಟಿಗಳ ಸಾಕ್ಷಿ ಕೊಡುತ್ತಿದ್ದಳು. ಆದರೆ ಈ ಹುಡುಗಿ ಚೆಲುವೆ – ಆದರೆ ಎಷ್ಟು ಅಸಹಜವಾಗಿ ವರ್ತಿಸುತ್ತಾಳೆ! ಈಕೆ – ಇಂದಿರಾ—[ಓ, ಎಷ್ಟು ಸೊಗಸಾದ ಹೆಸರು !] ಎಲ್ಲ ಕಾದಂಬರಿಗಳ, ಎಲ್ಲ ಚಲಚ್ಚಿತ್ರ ನಾಯಕಿಯರಂತೆಯೇ, ಸಹಜವಾಗಿ, ಸ್ವಾಭಾವಿಕವಾಗಿ ವರ್ತಿಸಿದ್ದರೆ ಎಷ್ಟು ಚೆನ್ನಾಗಿರುತಿತ್ತು. ಋಷಿಕನ್ಯೆಯಾದ ಶಕುಂತಲಾ [ಪಠ್ಯ ಪುಸ್ತಕದ ಪುಟಗಳ ಅಕ್ಷರೋದ್ಯಾನದಲ್ಲಿ ಅವಳನ್ನು ಕಂಡ ನೆನಪು] ಕೂಡಾ, ಮುಖವನ್ನು ಮುತ್ತಿದ ದುಂಬಿಯನ್ನು ಓಡಿಸುವ ನೆಪದಿಂದ, ಮತ್ತೆ ಮತ್ತೆ ದುಷ್ಯಂತ [ಅವನಿಗಿಂತ ತಾನೇನು ಕಡಮೆ !] ನನ್ನ, ನೋಡಿ, ತನ್ನ 'ಪ್ರಥಮ ನೋಟದ ಪ್ರಣಯ' ವನ್ನು ಸಾರಿದ್ದಳು. ಹಾಗಿರುವಾಗ ಇವಳು—

ಚಲಚ್ಚಿತ್ರ ತಯಾರಕರ 'ಏಜಂಟ್' ನೊಂದಿಗೆ ಚಲಚ್ಚಿತ್ರರಂಗಕ್ಕೆ [ಅರ್ಥಾತ್ ತಯಾರಕನ ಶಯ್ಯಾಗೃಹ] ಸೇರಲು ಹೋಗುತ್ತಿರುವ ಈ ಹುಡುಗಿ [ನಿಜ – ಇವಳು ಆ ಓದಿದ ನಾಟಕದ ಶಕುಂತಲೆಗಿಂತ ಚೆಲುವೆ !] ಈ ಇಂದಿರಾ—[ಆ ಹೆಸರು ಹಿಡಿದು ಅವಳನ್ನೊಮ್ಮೆ ಕರೆಯಬಹುದಾದರೆ . . . ] ತನ್ನ ಪ್ರಶ್ನೆಗೆ ಹೀಗೆ ಉತ್ತರ ಕೊಡಬೇಕೇ ? [ತುಟಿಗಳನ್ನು ವ್ಯರ್ಥಗೊಳಿಸಿ !] ಇಷ್ಟು ಅಸಹಜವಾಗಿ, ಅಸ್ವಾಭಾವಿಕವಾಗಿ [ನಿಜ – ಅವನ ನಿರೀಕ್ಷೆಗೆ ತೀರಾ ವಿರುದ್ಧವಾಗಿ] ಪ್ರಶ್ನೆಗೆ ಮರುಪ್ರಶ್ನೆ ಕೇಳಬೇಕೆ ?]

ತನ್ನ ಪ್ರಶ್ನೆಗೆ ಉತ್ತರವಾಗಿ ಆಕೆ ಮಾಡಿದ ಮರುಪ್ರಶ್ನೆಯನ್ನು ಕೇಳಿ ಮೂರ್ತಿಗೇಕೋ ಬಹು ಬೇಸರವಾಯಿತು. ಆಕೆಯನ್ನು ಮತ್ತೆ ಮಾತನಾಡಿಸ

ಬಾರದೆಂದೇ ತೋರಿತು. (ಮಾತನಾಡಿಸುತ್ತಿದ್ದ ಹಾಗೇ ತೊಡೆಯ ಮೇಲೆ ಬರದ ಹುಡುಗಿಯನ್ನು ಮಾತನಾಡಿಸಿ ಏನು ಉಪಯೋಗ ?)

ಆ ಬೇಸರದಲ್ಲೇ ಆಕೆಯೊಂದಿಗೆ ಮಾತು ನಿಲ್ಲಿಸಿ, ಹಾಗೇ ಕಿಟಕಿಯಿಂದ ಹೊರಗೆ ತಲೆಹಾಕಿ ನೋಡಿದ.

ಮೂರ್ತಿ ಹಾಗೆ ಕಿಟಕಿಯಿಂದಾಚೆಗೆ ಬಗ್ಗಿ ನೋಡಿದಾಗಲೇ, ಯಾರೋ ಒಬ್ಬ ಪ್ರಯಾಣಿಕ ತಾನೂ ಆ ಗಾಡಿಯಲ್ಲಿ ಹತ್ತಬೇಕೆಂದು, ಕಿಟಕಿಯ ಮೂಲಕ ಒಳಗೆ ನೋಡಿದ.

ಅದನ್ನು ಕಂಡ ಮೂರ್ತಿ ಆತ ಗಾಡಿಯೊಳಗೆ ಬಂದಾನೆಂದು, ಅಲ್ಲೇ ತಡೆಯಲು—

" ಇದು ಥ್ರೂ ಕ್ಯಾರೇಜ್."

—ಎಂದ.

" ಥ್ಯಾಂಕ್ಸ್."

—ಎಂದು ಅಷ್ಟೇ ಹೇಳಿ ಆತ ಹೊರಟುಹೋದ.

ಆತ ಕಿಟಕಿಯಲ್ಲಿ ಒಂದು ಗಳಿಗೆ ಇಣುಕಿ ನೋಡಿದಾಗ ಮೂರ್ತಿಗೆ ಅವನ ಮುಖ ಕಂಡಿತ್ತು. ಆ ಮುಖ – ಒಮ್ಮೆ ನೋಡಿದರೂ ಮರೆಯುವಂಥ ಮುಖವಲ್ಲ.

ಅಗಲವಾದ, ಸ್ವಲ್ಪ ಚೌಕಾಕಾರವಾದ ಆ ಮುಖದಲ್ಲಿ, ಕೊನೆ ಹುರಿ ಮಾಡಿದ ದಪ್ಪಮೀಸೆ ಎಷ್ಟು ಎದ್ದು ಕಾಣಿಸುತ್ತಿತ್ತೋ ಆ ಮೀಸೆಯ ಮೇಲೂ ಎದ್ದು ಕಾಣುವಷ್ಟು ದಪ್ಪವಾಗಿತ್ತು ಮೂಗು. ಆ ಮೂಗಿನ ಮಾಟಕ್ಕೆ ಮಾಡಿಸಿದಂಥ ಉಬ್ಬು ಹಣೆ, ಮೀಸೆಯೊಂದಿಗೆ ಸ್ಪರ್ಧಿಸಿದಂತೆ, ದಟ್ಟವಾಗಿ ಬೆಳೆದ ಹುಬ್ಬು—

ಖಂಡಿತವಾಗಿಯೂ ಒಮ್ಮೆ ನೋಡಿದರೆ, ಮತ್ತೆ ಎಂದೂ ಮರೆಯುವಂಥ ಮುಖವಲ್ಲ ಅದು.

ಆತನ ಧ್ವನಿಯೂ ಅದಕ್ಕೆ ತಕ್ಕ ಹಾಗೇ ಇತ್ತು

ಆತನನ್ನು ನೋಡಿ ಮೂರ್ತಿ—

" ಪರವಾಯಿಲ್ಲ. ಒಳ್ಳೆ ಯಮಾಭೀಷಣನಂಥ ಮನುಷ್ಯ "

—ಎಂದುಕೊಂಡು, ಬೇರೆ ಗಾಡಿಗಳನ್ನು ನೋಡುತ್ತಾ ಹೋಗುತ್ತಿದ್ದ

ಆತನನ್ನೇ ನೋಡಿದ. ಆತ ಹಾಗೆ ಗಾಡಿಗಳನ್ನು ನೋಡಿಕೊಂಡು ಹೋಗುತ್ತಿರುವಾಗಲೇ, ಗಾರ್ಡು ಹಸಿರುದೀಪ ತೋರಿಸಿ, ರೈಲು ಹೊರಡಬಹುದೆಂಬ ಸೂಚನೆಯ ವ್ವಿಷಲ್ ಊದಿದ.

ಗಾರ್ಡಿನ ವ್ವಿಷಲ್‌ಗೆ ಉತ್ತರವಾಗಿ ರೈಲೂ ಶಿಳ್ಳು ಹಾಕಿತು.

ಇನ್ನು ರೈಲು ಹೊರಡುತ್ತದೆ ಎಂದುಕೊಂಡು ಮೂರ್ತಿ, ತಲೆಯನ್ನು ಒಳಗೆಳೆದುಕೊಂಡು ನೋಡಿದ—

ಆದರೆ ಒಂದು ಗಳಿಗೆ ಕಾಲಾಡಿಸಿಕೊಂಡು ಬರುತ್ತೇನೆ ಎಂದು ಹೇಳಿದ ವ್ಯಾಸರಾಯ, ರೈಲು ಚಲಿಸುವ ಸೂಚನೆ ಕೊಟ್ಟರೂ, ಇನ್ನೂ ಗಾಡಿಯೊಳಗೆ ಹತ್ತಿರಲಿಲ್ಲ.

' ಈ ಮನುಷ್ಯ ಎಲ್ಲಿ ಹೋದ ? '

—ಎಂದುಕೊಂಡು ಮೂರ್ತಿ ಮತ್ತೆ ಪ್ಲಾಟ್‌ಫಾರಂ ಕಡೆ ನೋಡಿದ.

ಪ್ಲಾಟ್‌ಫಾರಂ ಮೇಲೆ, ಸ್ಟೇಷನ್ ಮಾಸ್ಟರು, ಪೋರ್ಟರು ವಿನಾ ಮತ್ತಾರೂ ಕಾಣಲಿಲ್ಲ.

' ಅರೆ – ಈತ ಎಲ್ಲಿ ಹೋದ ? '

ಮೂರ್ತಿಯ ಪ್ರಶ್ನೆ, ಆಶ್ಚರ್ಯವೇ ಇಂದಿರೆಯ ಮುಖದ ಮೇಲೂ ಮೂಡಿತ್ತು.

ರೈಲು, ಗಾಡಿಗಳನ್ನು ತುಯ್ದು ಮುಂದಕ್ಕೆ ಚಲಿಸಿತು.

' ರೈಲು, ಹೊರಟಿತಲ್ಲಾ — ವ್ಯಾಸರಾಯ ಎಲ್ಲಿ ? '

—ಎಂಬ ಪ್ರಶ್ನೆಯನ್ನೇ ಒಬ್ಬರಿಗೊಬ್ಬರು ಕೇಳುವಂತೆ, ಇಬ್ಬರೂ ಒಬ್ಬರ ಮುಖ ಒಬ್ಬರು ನೋಡಿಕೊಂಡರು—

' ವ್ಯಾಸರಾಯ ಎಲ್ಲಿ ಹೋದ ? '

# ೧೫

ಮೂರ್ತಿಗೆ ಹೀಗೆ ಯೋಚಿಸುತ್ತಿರುವಾಗಲೇ, ರೈಲು ಚಲಿಸಲಾರಂಭಿಸಿದ ಬಳಿಕ, ಗಾಡಿಯ ಹಿಂಬದಿಯ ಬಾಗಿಲು, ಧಡಕ್ಕನೆ ತೆಗೆದು, ವ್ಯಾಸರಾಯ ಒಳಗೆ ಬಂದ.

ಆತ ನಿಲ್ದಾಣದ ಕಡೆಯ ಬಾಗಿಲಿನಿಂದ ಒಳಗೆ ಬರದೆ ಬೇರೆ ಬಾಗಿಲಿನ ಮೂಲಕ ಪ್ರವೇಶಿಸಿದುದನ್ನು ಕಂಡು ಮೂರ್ತಿ ಚಕಿತನಾಗಿ, ಆ ಕಡೆ ತಿರುಗಿ—

"ಅರೆ – ಎಲ್ಹೋಗಿದ್ರಿ ?"

—ಎಂದು ಕೇಳಿದ.

ಅಷ್ಟೆ – ಬಾಗಿಲು ತೆರೆದುಕೊಂಡು ಒಳಗೆ ಬಂದ ವ್ಯಾಸರಾಯನನ್ನು ನೋಡಿ, ಮೂರ್ತಿಯ ಬಾಯಿಂದ ಮತ್ತೆ ಮಾತುಗಳೇ ಹೊರಡಲಿಲ್ಲ.

ಮಾತು ನಿಲ್ಲಿಸಿ, ಅಚ್ಚರಿದುಂಬಿದ ಕಣ್ಣುಗಳಿಂದ ಅಪರಿಚಿತನನ್ನು ನೋಡುವಂತೆ ನೋಡಿದ—

ವ್ಯಾಸರಾಯನಲ್ಲಿ ಅಷ್ಟು ಪರಿವರ್ತನೆಯಾಗಿತ್ತು !

ಆತನ ಮುಖ ಇದ್ದಕ್ಕಿದ್ದಂತೆಯೇ ಭೂತವನ್ನು ಕಂಡು, ಬೆದರಿ ಬೆಚ್ಚಿದವನಂತೆ, ಕೆದರಿ, ಬೂದಿ ಬಡಿದುಕೊಂಡಷ್ಟು ಮಟ್ಟಿಗೆ ಬಿಳಚಿಕೊಂಡು, ಹಣೆಯಿಂದ ಬೆವರು ಧಾರಾಕಾರವಾಗಿ ಹರಿಯುತ್ತಿತ್ತು.

ಆತ ತನಗಾದ ಭಯವನ್ನು ಬೇರೆ ಯಾರಿಗೂ ತೋರ್ಪಡಿಸಬಾರದು ಎಂದಿದ್ದರೂ, ಅವನ ಎಲ್ಲ ಹತೋಟಿಗೂ ಮೀರಿ, ಅವನ ಮೈ ಕಂಪಿಸುತ್ತಿತ್ತು.

ಭಯ – ಕುಶಲ ಶಿಲ್ಪಿ ಚಿತ್ರಿಸಿದ ಪ್ರಚಂಡ ಭಯದ ಸಜೀವ ಶಿಲ್ಪದಂತಿದ್ದ ವ್ಯಾಸರಾಯ.

ಹೆಗಲ ಮೇಲೆ ಹೊದ್ದ ಉತ್ತರೀಯದಿಂದ, ಮುಖದಿಂದ ಬಸಿಯುತ್ತಿದ್ದ ಬೆವರನ್ನು ಒರೆಸಿಕೊಳ್ಳುತ್ತಾ, ಗಟ್ಟಿಯಾಗಿ ಉಸಿರು ಬಿಡುತ್ತಾ, ವ್ಯಾಸರಾಯ ಒಳಗೆ ಬಂದು, ಸೀಟಿನ ಮೇಲೆ ಧಡಕ್ಕನೆ ಕುಕ್ಕರಿಸಿಕೊಂಡು—

" ಒಂದು ಸಿಗರೇಟು ಕೊಡಿ - ಸಾರ್—"

—ಎಂದು ಕೇಳಿದ, ಮೂರ್ತಿಯತ್ತ ಕೈಚಾಚಿ.

ಮೂರ್ತಿಯತ್ತ ಚಾಚಿದ ಅವನ ಕೈಯಷ್ಟೇ, ಅವನ ಧ್ವನಿಯೂ ಕಂಪಿಸುತ್ತಿತ್ತು.

' ಎಲಾ ಇವನ ! ಗಾಡಿಯಿಂದ ಇಳಿದು ಹೋಗುವಾಗ ಈ ಮನುಷ್ಯ ಎಷ್ಟು ಗೆಲುವಾಗಿದ್ದ. ಅಂಥಾದ್ದರಲ್ಲಿ - ಈ ಎರಡು ಮೂರು ನಿಮಿಷಗಳ ಅವಧಿಯಲ್ಲಿ ಈತನಿಗೆ ಏನಾಯಿತು ? ಯಾಕಿಷ್ಟು ಹೆದರಿದಾನೆ ? ಏನು ಕಂಡು ಹೆದರಿದ ? ಯಾರೂ ಹೆದರುವಂಥದು ಏನೂ ಆಗಲಿಲ್ಲವಲ್ಲಾ '

—ಎಂದು ತನಗೆ ತಾನೇ ಚಿಂತಿಸುತ್ತಲೇ ಮೂರ್ತಿ, ಪ್ರಕಟವಾಗಿ ಆತನನ್ನು ಏನೂ ಪ್ರಶ್ನೆಮಾಡದೆ, ತನ್ನ ಸಿಗರೇಟು ಪೆಟ್ಟಿಗೆ, ಕಡ್ಡಿಪೊಟ್ಟಣವನ್ನು ತೆಗೆದು ಆತನಿಗೆ ಕೊಟ್ಟ.

ಸಿಗರೇಟು ಹೊತ್ತಿಸುವಾಗಲೂ, ಕಡ್ಡಿ ಹಿಡಿದ ಅವನ ಕೈ ನಡುಗುತ್ತಿತ್ತು. ಸಿಗರೇಟು ಹೊತ್ತಿಸಿ, ಬುಸುಬುಸು ಹೊಗೆಯುಗುಳುತ್ತಾ ಕುಳಿತಿದ್ದ ವ್ಯಾಸರಾಯ.

ಆತ ಸಿಗರೇಟು ಎಳೆಯುತ್ತಿದ್ದ ರೀತಿಯನ್ನು ನೋಡಿದರೆ, ಆತನಿಗೆ ಏನೂ ಮಾತಾಡುವ ಇಷ್ಟವಿದ್ದಂತಿರಲಿಲ್ಲ. ಅಷ್ಟೇ ಅಲ್ಲ ' ಯಾರೂ ನನ್ನನ್ನು ಮಾತನಾಡಿಸಬೇಡಿ ' ಎಂಬಂತಿದ್ದವು, ಭೀತ ಮುಖದಲ್ಲಿ ಉಗ್ರವಾಗಿ ಉರಿಯುತ್ತಿದ್ದ ಆತನ ಕಣ್ಣುಗಳು.

ಅದನ್ನು ಕಂಡು, 'ಹೀಗೇಕೆ ?' ಎಂದು ಕೇಳಬೇಕೆಂದಿದ್ದ ಮೂರ್ತಿಯ ಮಾತು ಹಾಗೇ ಬತ್ತಿಹೋಗಿ ' ಏನಾದರೂ ಇದ್ದರೆ ಆತನೇ ಹೇಳಲಿ, ನಾನೇಕೆ ಕೆಣಕಬೇಕು ' ಎಂದುಕೊಂಡು ಸುಮ್ಮನಾದ.

ಅವನು ಸುಮ್ಮನಾದ. ಆದರೆ ಆಕೆ—?

ಆಕೆಯ ಮುಖ, ವ್ಯಾಸರಾಯನ ಭೀತ ಮುಖಕ್ಕೆ ಹಿಡಿದ ಕನ್ನಡಿಯಂತಿತ್ತು. ವ್ಯಾಸರಾಯನ ಅನಿರೀಕ್ಷಿತ ವರ್ತನೆಯಿಂದ ಆಕೆಯೂ ವ್ಯಗ್ರಚಿತ್ತಳಾದುದು, ಭೀತಳಾದುದು, ಆಕೆಯ ಮುಖಭಾವದಲ್ಲಿ ಸ್ಪಷ್ಟವಾಗಿತ್ತು.

" ಯಾಕೆ....ಯಾಕೆ....ಏನಾಯ್ತು ? "

—ಭೀತಿ, ಸಂದೇಹ, ಕಾತರಗಳು ತುಂಬಿ ತುಳುಕುವ ಧ್ವನಿಯಲ್ಲಿ ಕೇಳಿದಳು ಆಕೆ.

" ಯಾಕೋ....ಯಾಕೋ....ನನ್ನ ತಿಥಿ ಮಾಡೋಕೆ – ಬಾಯ್ಮುಚ್ಚಿಕೊಂಡಿರು "

—ಕಂಡವರ ಮೇಲೆ ಎಗರಿ ಬೀಳುವ ಹುಚ್ಚುನಾಯಂತೆ ಹೇಳಿದ ವ್ಯಾಸರಾಯ, ಆಗತಾನೇ ಹೊತ್ತಿಸಿದ ಸಿಗರೇಟನ್ನು ನೆಲಕ್ಕೆ ಹಾಕಿ ತುಳಿದು.

ಅವನ ಆ ಏಟಿನಂಥ ಮಾತು ಕೇಳಿ ಆಕೆಗೆ ಎಷ್ಟು ನೋವಾಯಿತೋ, ಮೂರ್ತಿಗೂ ಅಷ್ಟೇ ಬೇಸರವಾಯಿತು. ಆ ಬೇಸರದಿಂದಲೇ ಅವನತ್ತ ನೋಡಿದ.

ಆಕಸ್ಮಿಕ ಭಯ, ವ್ಯಾಸರಾಯ ಅದುವರೆಗೂ ಧರಿಸಿದ ಮನುಷ್ಯತ್ವದ ಮುಖವಾಡವನ್ನು ಹರಿದು ಹಾಕಿ, ಅವನೊಳಗಿನ ಪಶುವನ್ನು ಬೆಳಕಿಗೆ ತಂದಿತ್ತು.

ಬಿರುಸಾದ ಮಾತಿನಿಂದ ಆಕೆಯ ಬಾಯಿ ಮುಚ್ಚಿಸಿದ ವ್ಯಾಸರಾಯ, ಒಮ್ಮೆ ಭಯವಿಹ್ವಲವಾದ ಇಂದಿರೆಯ ಮುಖವನ್ನು, ಮತ್ತೊಮ್ಮೆ ಮೂರ್ತಿಯ ಮುಖವನ್ನು ಮಾತಿನಷ್ಟೇ ಬಿರುಸಾದ ನೋಟದಿಂದ ನೋಡಿದ, ಮೂರ್ತಿಯ ಮುಖದಲ್ಲಿ ಅವನು ಏನು ಕಾಣಬಯಸಿದನೋ ಏನೋ, ಅವನು ಬಯಸಿದುದು ಅವನಿಗೆ ಮೂರ್ತಿಯ ಮುಖದಲ್ಲಿ ಕಂಡಿತೋ ಇಲ್ಲವೋ, ಏನಾಯಿತೋ – ಕುಳಿತಿದ್ದವನು ತಟಕ್ಕನೆ ಮೇಲಕ್ಕೆದ್ದು. ಗಾಡಿಯಲ್ಲಿ, ಬೋನಿನಲ್ಲಿ ಸಿಕ್ಕ ಕಾಡಪಶುವಿನಂತೆ ಅತ್ತಿಂದಿತ್ತ ಸುತ್ತ ತೊಡಗಿದ.

ಉದ್ರಿಕ್ತನಾದ ವ್ಯಾಸರಾಯನ ತಲೆಯಲ್ಲಿ ಏನು ಯೋಚನೆ ಸುತ್ತುತ್ತಾ ಇತ್ತೋ ಏನೋ – ಅಂತೂ ಆತ ಬಹು ಗಾಢವಾದ ಚಿಂತೆಗೆ ಒಳಗಾಗಿರುವ ನೆಂಬುದನ್ನು ಅವನು ಓಡಾಡುವ ರೀತಿ, ಓಡಾಡುತ್ತಲೇ ಆಗಾಗ ಕೈಬೆರಳು ಗಳನ್ನು ಮುರಿದುಕೊಳ್ಳುವುದು, ಹೆಗಲ ಮೇಲಿನ ಉತ್ತರೀಯವನ್ನು ಎಳೆದು ಸರಿಪಡಿಸಿಕೊಳ್ಳುವುದು, ಕೋಟಿನ ಕೊನೆಯನ್ನು ಜಗ್ಗುವುದರಿಂದ ಸ್ಪಷ್ಟವಾಗಿತ್ತು.

ಹಾಗೆ ಸುತ್ತುತ್ತಿರುವಾಗಲೂ, ಆತ, ಒಮ್ಮೊಮ್ಮೆ ತಟಕ್ಕನೆ ತಲೆಯನ್ನು ತಿರುಗಿಸಿ, ಒಮ್ಮೆ ಇಂದಿರೆಯನ್ನು, ಒಮ್ಮೆ ಮೂರ್ತಿಯನ್ನು ದಿಟ್ಟಿಸಿ ನೋಡುತ್ತಿದ್ದ. ಅವನ ಆ ನೋಟ, ಏನೋ ತೂಕಮಾಡುವಂತೆ, ಏನೋ ಲೆಕ್ಕ ಹಾಕುವಂತೆ, ಏನೋ ಬೆಲೆ ಕಟ್ಟುವಂತೆ ಇತ್ತು.

ಹಾಗೆ ನೋಡಿ, ಮತ್ತೆ ಒಂದು ನಿರ್ಧಾರಕ್ಕೆ ಬರಲಾಗದವನಂತೆ ಮತ್ತೆ ಶತಪಥ ಹಾಕಲಾರಂಭಿಸುತ್ತಿದ್ದ.

ಇಕ್ಕಟ್ಟಾದ ಗಾಡಿಯಲ್ಲಿ ಅವನು ಹಾಗೆ ಸುತ್ತುತ್ತಿರುವಾಗ ಒಮ್ಮೆ, ಇಂದಿರೆಯ ಸೀಟಿನಿಂದ ಕೆಳಗೆ ಬಿಟ್ಟ ಕಾಲು, ಅವನ ಕಾಲಿಗೆ ತಗಲಿತು.

" ಥತ್ - ಕಾಲೆತ್ತಿ ಸೀಟಿನ ಮೇಲಿಟ್ಟುಕೊಳ್ಳೋಕೆ ಆಗೋದಿಲ್ವೆ ಕಳ್ಳಮುಂಡೆ "

—ಎಂದು ಅಬ್ಬರಿಸಿದ ವ್ಯಾಸರಾಯ.

ಆ ಮಾತು ಕೇಳಿ ಆಕೆ ಕೆಂಡ ತುಳಿದಂತೆ ಬೆಚ್ಚಿಬಿದ್ದು, ತಟಕ್ಕನೆ ಇಳಿಬಿಟ್ಟ ಕಾಲನ್ನು ಎತ್ತಿ ಸೀಟಿನ ಮೇಲಿಟ್ಟುಕೊಂಡಳು. ಆತನ ಹೊಲಸು ಬೈಗಳನ್ನು ಕೇಳಿ ಇಂದಿರೆಯ ಮುಖ, ಒಮ್ಮೆ ದಟ್ಟವಾಗಿ ಕೆಂಪಾಗಿ, ಮರುಗಳಿಗೆಯೇ ಸುಣ್ಣ ಬಳಿದಷ್ಟು ಬಿಳಿದಾಯಿತು.

ಆ ಮಾತನ್ನು ಕೇಳಿ, ಆಕೆಯ ಮುಖವನ್ನು ಕಂಡು ಮೂರ್ತಿಗೂ ಸುಮ್ಮನಿರುವುದಾಗಲಿಲ್ಲ.

" ಏನು ಸಮಾಚಾರ ವ್ಯಾಸರಾವ್ ? ಇದ್ದಕ್ಕಿದ್ದ ಹಾಗೇ ಇದೇಕೆ ಹೀಗಾಡ್ತಾ ಇದೀರಿ........"

—ಎಂದು ಕೇಳಿದ.

" ನೀವೊಂದ್ಗಳಿಗೆ ಸುಮ್ನೆ ಇರಿ ಸಾರ್. ನನ್ನದೇ ನನಗಾಗಿದೆ,"

—ಎಂದು ಮೂರ್ತಿಯನ್ನು ಗದರಿಸಿಕೊಂಡಂತೆ ಹೇಳಿ, ತಟಕ್ಕನೆ ಶತಪಥ ಹಾಕುವುದನ್ನು ನಿಲ್ಲಿಸಿ, ಕಿಟಕಿಯ ಹೊರಗೆ ತಲೆ ಹಾಕಿಕೊಂಡು ನಿಂತ.

ಮೂರ್ತಿ, ಇಂದಿರೆ ಇಬ್ಬರೂ ತಮ್ಮತ್ತ ತಿರುಗಿದ ಅವನ ಬಾಗಿದ ಬೆನ್ನನ್ನು ನೋಡಿದರು. ಏಕೋ ಆಕೆಯ ಕಣ್ಣುಗಳಲ್ಲಿ ನಿಧಾನವಾಗಿ ನೀರು ತುಂಬಿತು.

'ಛೆ, ಛೆ, ಎಂಥ ಕಾಡು ಪ್ರಾಣೀನ ಕಟ್ಟಿಕೊಂಡು ನರಳೋ ಅವಸ್ಥೆ ಬಂತು ಈ ಹುಡುಗೀಗೆ.'

—ಎಂದುಕೊಂಡು ಪಶ್ಚಾತ್ತಾಪದ ಸಿಟ್ಟುಸಿರಿಟ್ಟ ಮೂರ್ತಿ.

ಇಂದಿರೆಯ ಕಣ್ಣಲ್ಲಿ ತುಂಬಿದ ನೀರು, ಹನಿ ಹನಿಯಾಗಿ, ಆಕೆಯ ದುಃಖವಿವರ್ಣವಾದ ಕೆನ್ನೆಯ ಇಳಿಜಾರಿನ ಮೇಲೆ ಜಾರಿ, ಆಕೆಯ ಎದೆಯ ಮೇಲೆ ಧುಮುಕುತ್ತಿತ್ತು.

ಆಕೆಯ ಎದೆಯ ಮೇಲೆ ಉರುಳುವ ಕಂಬನಿ, ಮೂರ್ತಿಯ ಹೃದಯದ ಮೇಲೆ ಕಾದ ಸೀಸದ ಹನಿಗಳಂತೆ ಬಿದ್ದು, ಅವನ ಹೃದಯದಲ್ಲಿ ಕರುಣೆಯ ಸೆಲೆ ಮೂಡಿಸಿ—

'ಹೆದರಬೇಡ, ನನ್ನ ಸಂಪೂರ್ಣ ಸಹಾನುಭೂತಿ ನಿನಗಿದೆ'

—ಎಂಬಂತೆ ಇಂದಿರೆಯತ್ತ ನೋಡಿದ.

ಆಕೆಯೂ ಅವನ ಕಡೆ ನೋಡಿದಳು—

ಭಯ, ದುಃಖಗಳ ವಿಷಸಮಯದಲ್ಲಿ ಅನುಕಂಪವನ್ನು, ನೆರವನ್ನು ಯಾಚಿಸಿ, ಚಾಚಿದ ಕೈಯ್ಯಂತಿತ್ತು ಆಕೆಯ ನೋಟ.

ಆದರೆ ವ್ಯಾಸರಾಯ ಇನ್ನೂ ಅವರಿಗೆ ಬೆನ್ನು ತಿರುಗಿಸಿಯೇ ನಿಂತಿದ್ದ.

ರೈಲು ವೇಗವಾಗಿ ಹೋಗುತ್ತಿತ್ತು.

## ೧೬

ಹಾಗೆ ಎರಡು ಮೂರು ನಿಮಿಷಗಳ ಕಾಲ ನಿಂತಿದ್ದ ವ್ಯಾಸರಾಯ, ಇದ್ದಕ್ಕಿದ್ದ ಹಾಗೇ ತನ್ನ ತಲೆಯನ್ನು ಒಳಗೆ ಎಳೆದುಕೊಂಡು, ಬಾಗಿದ ಬೆನ್ನನ್ನು ಸೆಟೆಸಿ, ತಿರುಗಿ, ಮೂರ್ತಿಯ ಮುಖವನ್ನು ದಿಟ್ಟಿಸಿ ನೋಡಿ—

" ಇನ್ನೊಂದು ಸಿಗರೇಟು ಇದ್ರೆ ಕೊಡಿ ಸಾರ್—"

—ಎಂದ.

ಮೂರ್ತಿ ಮರುಮಾತಾಡದೆ ಸಿಗರೇಟು ಕೊಟ್ಟ.

ಸಿಗರೇಟು ಹೊತ್ತಿಸುವಾಗಲೂ ಅವನ ಕಣ್ಣುಗಳು ಮೂರ್ತಿಯ ಮುಖವನ್ನೇ ದಿಟ್ಟಿಸಿ ನೋಡುತ್ತಿದ್ದವು - ತನ್ನೆದುರಿನ ವ್ಯಕ್ತಿಯನ್ನು ಸಮ್ಮೂಢಗೊಳಿಸುವ ಇಂದ್ರಜಾಲಕನಂತೆ.

ಸಿಗರೇಟು ಹೊತ್ತಿಸಿ, ಹೊಗೆಯೂದಿ, ಒಂದು ಗಳಿಗೆ ಹಾಗೇ ಮೂರ್ತಿಯನ್ನು ನೋಡುತ್ತಿದ್ದು ಬಳಿಕ, ವ್ಯಾಸರಾಯ, ಮೂರ್ತಿಯ ಪಕ್ಕದಲ್ಲೇ ಬಂದು ಕುಳಿತ.

" ಸಾರ್—"

—ಒಂದು ಗಳಿಗೆ ಸುಮ್ಮನಿದ್ದು ಬಳಿಕ ಎತ್ತಲೋ ನೋಡುತ್ತಾ ಮೂರ್ತಿಯನ್ನು ಮಾತನಾಡಿಸಿದ ವ್ಯಾಸರಾಯ. ಅವನ ಈ ಮಾತಿನಲ್ಲಿ ಹಿಂದಿನ ಒರಟುತನ, ಸಿಟ್ಟು, ದರ್ಪ ಯಾವುದೂ ಇರದೆ ಬಹು ನಯವಾಗಿತ್ತು.

ಆ ಧ್ವನಿಯನ್ನು ಕೇಳಿ ಮೂರ್ತಿ ಚಕಿತನಾದ. ಎಷ್ಟು ಬೇಗ, ಎಷ್ಟು ಪರಿವರ್ತನೆ !

" ಏನು ? "

" ನಿಮ್ಮಿಂದ ಒಂದು ಬಹಳ ದೊಡ್ಡ ಉಪಕಾರ ಆಗಬೇಕಲ್ಲಾ ಸಾರ್ ?........"

—ದೀನ ಯಾಚಕನಂತೆ ಕೇಳಿದ ವ್ಯಾಸರಾಯ.

" ಏನು ಹೇಳಿ ? "

" ನೀವು ನನ್ನ ಉಳಿಸ್ತೀನೀಂತ ಮಾತು ಕೊಟ್ಟರೆ ಹೇಳ್ತೀನಿ...."

ಅವನ ಮಾತು ಕೇಳಿ ಮೂರ್ತಿಯ ಅಚ್ಚರಿ ಮತ್ತಷ್ಟು ಹೆಚ್ಚಾಯಿತು. ತಾನು ಅವನಿಗೆ ತೀರಾ ಅಪರಿಚಿತ. ಹಾಗಿರುವಾಗ ತಾನು ಅವನನ್ನು ಉಳಿಸುವುದು ಹೇಗೆ? ಏತರಿಂದ ಉಳಿಸಬೇಕು? ಇದ್ದಕ್ಕಿದ್ದ ಹಾಗೆ ಅಂಥ ಗಂಡಾಂತರ ಏನು ಒದಗಿರಬಹುದು ಇವನಿಗೆ?

ಈ ಯೋಚನೆಯಲ್ಲಿ ಮೂರ್ತಿಗೆ ಅವನ ಪ್ರಶ್ನೆಗೆ ಉತ್ತರ ಕೊಡುವುದೂ ಮರೆತು, ಸುಮ್ಮನಿದ್ದ.

" ಏನ್ಸಾರ್........"

—ವ್ಯಾಸರಾಯನೇ ಮತ್ತೆ ಮಾತನಾಡಿಸಿದ ಅಂಗಲಾಚಿ ಬೇಡುವ ಧ್ವನಿಯಲ್ಲಿ.

" ಏನು ಹೇಳಿ ? "

" ಏನೋ ಸಾರ್........ನೀವು ದೊಡ್ಡ ಮನಸ್ಸು ಮಾಡಿ ನನ್ನ ಉಳಿಸಬೇಕು........"

" ಅದೇನು ಹೇಳಿ – ನನ್ನಿಂದಾದ್ರೆ ಮಾಡುತ್ತೇನೆ."

" ಆದ್ರೆ . . . ಗೀದ್ರೆ . . . ಅಂತ ಅನ್ನಬಾರದು ಸಾರ್. ಏನಾದ್ರೂ ಆಗ್ಲಿ ನೀವು ನನ್ನ ಉಳಿಸ್ತೀನಿ ಅಂತ ಮಾತು ಕೊಡಬೇಕು . . . "

" ನನ್ನಿಂದ ಆಗೋ ಅಂಥ ಕೆಲಸ ಆದ್ರೆ ಮಾಡ್ತೀನಿ ಅಂತ ಹೇಳಲಿಲ್ವೆ ? . . . ಅದೇನು ಹೇಳಿ . . . "

" ಏನೋ ನೋಡಿ ಸಾರ್ . . . ನನ್ನ, ಅವಳ ಮಾನ, ಪ್ರಾಣ ಎಲ್ಲಾ ಇವತ್ತು ನಿಮ್ಮ ಕೈಲಿದೆ. ಉಳಿಸಿಕೊಡಬೇಕು."

ವ್ಯಾಸರಾಯನ ಮಾತನ್ನು ಕೇಳುತ್ತಾ, ಗಳಿಗೆಗಳಿಗೆಗೆ ಮೂರ್ತಿಯ ಅಚ್ಚರಿ ಹೆಚ್ಚಿತು. ವ್ಯಾಸರಾಯ ಹೇಳಿದುದನ್ನು ಕೇಳಿ ಇಂದಿರೆಯೂ ಏಕೋ ಬೆಚ್ಚಿಬಿದ್ದಳು. ಭೀತಿ ತಾನೇತಾನಾಗಿ ಆಕೆಯ ಮುಖದಲ್ಲಿ ತುಂಬಿ, ಆಕೆಯೂ, ಮೂರ್ತಿ ವ್ಯಾಸರಾಯನ ಪ್ರಶ್ನೆಗೆ ಏನು ಉತ್ತರ ಹೇಳುವನೋ ಎಂದು ಅವನತ್ತ ನೋಡಿದಳು.

ಆ ನೋಟದಿಂದ ಪ್ರೇರೇಪಿತನಾದವನಂತೆ ಮೂರ್ತಿ—

" ಅಂಥಾದ್ದೇನಾಗಿದೆ ಹೇಳಿ....? "

—ಎಂದು ಕೇಳಿದ, ಆಗಲೂ ಅಭಯದ ಭರವಸೆಯನ್ನು ಕೊಡಲಾಗದೆ.

" ಇವತ್ತು ನಾನು ಎದ್ದ ಹೊತ್ತು ನೆಟ್ಟಗಿಲ್ಲ ಸಾರ್. ಎಂಥ ರಾಹು ವೇಳೇಲಿ ಮನೆ ಬಿಟ್ನೋ ಏನೋ - ಯಾವುದು ಆಗೋಲ್ಲಾಂತ ಇದ್ನೋ ಅದೇ ಆಗಿಹೋಯ್ತು."

" ಅಂದ್ರೆ—"

—ವ್ಯಾಸರಾಯನ ಮಾತೇ ಅರ್ಥವಾಗದೆ ಕೇಳಿದ ಮೂರ್ತಿ.

" ಜನ್ಮಜನ್ಮೇಪಿ ಯಾರ ಕಣ್ಣಿಗೆ ಬೀಳಬಾರದು ಅಂತ ವಿಶ್ವಪ್ರಯತ್ನ ಮಾಡ್ತಿದ್ನೋ, ಆ ಶನಿ ಕಣ್ಣಿಗೇ ಬಿದ್ಹಾಗಾಯ್ತು. ಇನ್ನವನ ಕೈಗೆ ಸಿಕ್ಕಿದರೆ ಅವನು, ನನ್ನ ಜೀವವರಸೆ ಬಿಡೋದಿಲ್ಲ."

—ಪ್ರಾಣಾಪತ್ತು ಬಳಿ ಸಾರಿದವನಷ್ಟು ಭೀತನಾಗಿ ಹೇಳಿದ ವ್ಯಾಸರಾಯ.

" ಯಾರು ? "

" ಅದೇ - ಆನಂದಾಪುರ ಸ್ಟೇಷನ್ನಲ್ಲಿ, ಗಾಡೀಲಿ ಇಣುಕಿ ಹಾಕಿ ನೋಡಿದ್ನಲ್ಲಾ - ಅವನು. ಆ ದರಿದ್ರದೋನು - ನನ್ನ ಪಾಲಿನ ಆ ಜನ್ಮಶನಿ. ಹಾಳಾದೋನು - ನೆಗದ್ಬಿದ್ಹಾದ್ರೂ ಹೋದ್ರೆ ನಾನು ಹಾಯಾಗಿರಬಹುದು. ಆದ್ರೆ - ಯಾಕೋ ನನ್ನ ಮೇಲೆ ದೇವರಿಗಷ್ಟು ಕರುಣೆ ಇಲ್ಲ - ಆ ಸೂಳೇ ಮಗ ಚಿರಂಜೀವಿಯಾಗಿದಾನೆ."

—ಎದೆಯಲ್ಲಿದ್ದ ದ್ವೇಷದ ಹಾಲಾಹಲವನ್ನು ಕಕ್ಕುತ್ತಾ ಹೇಳಿದ ವ್ಯಾಸರಾಯ—

" ನನಗೆ ಗೊತ್ತು - ಒಂದಲ್ಲ ಒಂದು ದಿನ, ಇಲ್ಲ ಅವನು ನನ್ನ ಕೈಲಿ ಸಾಯ್ತಾನೆ, ಇಲ್ಲ ನಾನು ಅವನ ಕೈಲಿ ಸಾಯ್ತೀನಿ. ಅಲ್ಲೀವರೆಗೂ ನಮ್ಮಿಬ್ಬರಿಗೂ ಬಿಡುಗಡೆ ಇಲ್ಲ."

" ಯಾರು ಆತ ? ಆತನಿಗೆ ನಿಮ್ಮ ಮೇಲೆ ಯಾಕಷ್ಟು ದ್ವೇಷ ? "

—ವ್ಯಾಸರಾಯನ ಮಾತು ಕೇಳಿ ಮೂಡಿದ ತನ್ನ ಕುತೂಹಲವನ್ನು ತಡೆಯಲಾಗದೆ ಕೇಳಿದ ಮೂರ್ತಿ.

" ನಾನು ಬದುಕಿರೋದೇ ಆ ಬೇಕೂಫನಿಗೆ ಹೊಟ್ಟೆಉರಿ—ಈಗದೆಲ್ಲಾ

ಯಾಕೆ ಸಾರ್ ? ಅದ್ಯಾವ್ದೂ ವಿವರಿಸೋಕೆ ಈಗ ಹೊತ್ತಿಲ್ಲ. ನೀವು ನನ್ನ ಅವನಿಂದ ಕಾಪಾಡಬೇಕು........"

" ಆದ್ರೆ – ಅವನಿಗೆ ನೀವು ಇಲ್ಲಿರೋದು ಹ್ಯಾಗೆ ಗೊತ್ತು ? ಆವನು ಗಾಡೀಲಿ ಇಣುಕಿ ನೋಡಿದಾಗ – ನೀವು ಇಲ್ಲಿ ಇರ್ಲಿಲ್ಲವಲ್ಲ...."

" ನಾನು ಗಾಡಿಯಿಂದ ಇಳೀದಾಗ ನೋಡ್ದ...."

" ನೋಡಿದ್ರೆ – ಸ್ಟೇಷನ್ನಲ್ಲಿ ಅಷ್ಟು ಕತ್ತಲಿತ್ತಲ್ಲಾ – ಆತನಿಗೆ ನಿಮ್ಮ ಗುರುತು ಸಿಗೋದು ಸಾಧ್ಯವೇ ? "

" ಎಂಥ ಕತ್ತಲಿದ್ರೇನು ಸಾರ್ – ನನ್ನ ಅವನು – ಎಲ್ಲಿ ಹ್ಯಾಗಿದ್ರೂ ಗುರುತು ಹಿಡೀತಾನೆ ; ಅಂಥ ಹದ್ದಿನ ಕಣ್ಣು ಆ ಹಾಳಾದೋನ್ದು. ನನಗೆ ಗೊತ್ತು – ನಾನು ಈ ಗಾಡಿಯಿಂದ ಇಳಿದದ್ದು ನೋಡೇ, ಅವನಿಲ್ಲಿಗೆ ಬಂದು ಇಣುಕಿ ಹಾಕಿದ್ದು."

" ಆದ್ರೆ ನೀವಿಲ್ಲಿ ಇರಲಿಲ್ಲವಲ್ಲಾ........"

" ಸದ್ಯ – ಅವನು ಕಣ್ಣಿಗೆ ಬಿದ್ದ ಮೇಲೆ ನಾನ್ಯಾಕೆ ಇಲ್ಲಿರಬಾರದು. ಮೂರು ಗಾಡಿ ಆಚೆ ಹೋಗಿ, ರೈಲು ಪಕ್ಕದಲ್ಲಿ ಅವಿತುಕೊಂಡಿದ್ದೆ. ಹಾಗೂ ಎರಡು ಗಾಡಿ ಹುಡುಕಿ ನೋಡ್ದ – ನಾನೆಲ್ಲೂ ಅವನ ಕಣ್ಣಿಗೆ ಬೀಳಲಿಲ್ಲ, ಅದಕ್ಕೇ ಇಲ್ಯಾರಿದಾರೋ ಅಂತ ನಾನು ಇಳಿದ ಗಾಡೀಲಿ ಬಂದು ನೋಡ್ದ, ಸದ್ಯ–ನಾನಾಗ ಗಾಡಿ ಬಿಟ್ಟು ಇಳಿದದ್ದೇ ಒಳ್ಳೇದಾಯ್ತು. ಇಲ್ದೆ ಹೋಗಿದ್ರೆ– ಅಲ್ಲೇ ಅಮರಿಕೊಳ್ತಾ ಇದ್ದ. ಪಾರಾಗೋಕೆ ಅವಕಾಶಾನೆ ಇರ್ತಾ ಇರಲಿಲ್ಲ......."

" ಅಂತೂ – ಆ ಕತ್ತಲಲ್ಲೂ ನಿಮಗೆ ಆತನ ಗುರುತು ಸಿಕ್ಕದ್ದು ಹೆಚ್ಚು. . . . "

" ಒಂದು ಸಲ ನೋಡಿದ್ರೆ ಮತ್ತೆ ಮರೆಯೊ ಹಾಗಿತ್ತೇ ಸಾರ್, ಆ ಲೌಡಿಮಗನ ಮುಖ........"

—ಬಹು ಕರ್ಕಶವಾಗಿ ಹೇಳಿದ ವ್ಯಾಸರಾಯ.

ಮೂರ್ತಿಯೂ ಆತನ ಮುಖ ನೋಡಿದ್ದ, ನೋಡಿದಾಗ ಇವನಿಗೂ ಹಾಗೇ ಅನಿಸಿತ್ತು—

" ಒಮ್ಮೆ ನೋಡಿದರೆ ಮತ್ತೆಂದೂ ಮರೆಯುವಂಥ ಮುಖವಲ್ಲ ಆತನದು. "

" ಈಗದೆಲ್ಲಾ ಮಾತ್ಯಾಕೆ ಸಾರ್, ಅದ್ಯಾವುದಕ್ಕೂ ಹೊತ್ತಿಲ್ಲ. ಮುಂದಿನ ಸ್ಟೇಷನಲ್ಲೇ ಮತ್ತವನು ಈ ಗಾಡಿಗೆ ಬಂದ್ರೂ ಬರಬಹುದು, ಆದ್ರಿಂದ – ನಮ್ಮಿಬ್ಬರನ್ನೂ ಉಳಿಸಬೇಕೂಂತ ನಿಮಗೆ ಮನಸ್ಸಿದ್ರೆ ಹೇಳಿ ? ನಿಮ್ಮ ಹೆಸರು ಹೇಳಿ ಬದುಕಿಕೋತೀನಿ. ಇಲ್ಲಾಂದ್ರೇ – ನಾವಿಬ್ರೂ ಜೈಲಿಗೆ ಹೋಗಿ ಪಡಬಾರದ ಅವಸ್ಥೆ ಎಲ್ಲಾ ಪಡಬೇಕಾಗುತ್ತೆ ? ನನ್ನ ಮೇಲೆ ನಿಮಗೆ ಕನಿಕರ ಇಲ್ದೆ ಹೋದ್ರೂ – ಆ ಹೆಣ್ಣು ಹೆಂಗಸಿನ ಮೇಲಾದ್ರೂ ದಯೆ ತೋರಿಸಿ. ನಿಮ್ಮ ಉಪಕಾರ ನಾವಿಬ್ರೂ ಮರೆಯೋಲ್ಲ."

—ಎಂದ ವ್ಯಾಸರಾಯ, ತಾನೇ ಇಂದಿರೆಯ ಪರವಾಗಿಯೂ ಸಹಾನುಭೂತಿ ಯಾಚಿಸಿ.

ವ್ಯಾಸರಾಯ ಹೇಳಿದುದೆಲ್ಲವನ್ನೂ ಕೇಳಿ ಮೂರ್ತಿಗೂ ದಿಗಿಲಾಗಿತ್ತು. ಆ ಭಯದಲ್ಲೇ ' ನನ್ನನ್ನು ಯಾವುದಕ್ಕೂ ಸಿಕ್ಕಿಸಬೇಡ, ' ಎಂದು ಹೇಳ ಬೇಕೆಂದೇ ತೋರಿತು. ಹಾಗೇ ಹೇಳಿಬಿಡಬೇಕು ಎಂದಿದ್ದವನು, ವ್ಯಾಸರಾಯ ಇಂದಿರೆಯ ಹೆಸರನ್ನು ಮುಂದೆ ಮಾಡಿದುದನ್ನು ಕಂಡು, ಮತ್ತೆ ಅನಿರ್ಧಾರ ದಲ್ಲಿ ತೂಗುತ್ತಾ, ಇಂದಿರೆಯತ್ತ ನೋಡಿದ.

ಆಕೆಯ ಭೀತನೇತ್ರಗಳೂ ಆತನ ನೆರವನ್ನು ಯಾಚಿಸಿದವು.

ಆ ಸುಂದರ ನೇತ್ರಗಳ ಬೇಡಿಕೆಗೆ ಇಲ್ಲ ಎನ್ನಲಾರದೆ—

' ಆಗ್ಲಿ – ಏನು ಮಾಡಬೇಕು ಹೇಳಿ ? "

—ಎಂದ.

" ಈಗ ಆಗ್ಲಿ ಎಂದು ಆಮೇಲೆ ಹಿಂದ್ಲೇಟು ಹೊಡೀಬಾರ್ದು ಸಾರ್. ಈಗ ಒಪ್ಪಿಕೊಂಡದ್ದನ್ನ ಕಡೇವರೆಗೂ ನಡೆಸಿಬಿಡಬೇಕು. ಮಧ್ಯದಲ್ಲಿ ಅಚಾ ತುರ್ಯ ಆದರೆ – ನಮ್ಮಿಬ್ಬರ ಅವಸ್ಥೆ ಮುಗಿದು ಹೋದಂತೆಯೇ ? "

" ಇರಲಿ – ಅದೇನು ಹೇಳಿ ? ಖಂಡಿತ ನಿಮ್ಮ ಕೆಲಸ ಮಾಡಿ ಕೊಡ್ತೀನಿ. "

ಮೂರ್ತಿ ನೀಡಿದ ಭರವಸೆಯ ಮಾತನ್ನು ಕೇಳಿ, ವ್ಯಾಸರಾಯನನ್ನು ಆವರಿಸಿದ್ದ ಉದ್ವಿಗ್ನತೆ ಕೊಂಚ ತಾಂಡವಾಯಿತು,

" ಸರಿ ಸಾರ್ – ನೀವಷ್ಟು ಹೇಳಿದ್ರೆ ಬದುಕಿದೆ "

—ಎಂದು ಇಂದಿರೆಯತ್ತ ತಿರುಗಿ—

" ಇಂದಿರಾ...."

—ಎಂದ.

" ಏನು ? "

" ನೀನೂ ಅಷ್ಟೆ – ಗಪ್‌ಚಿಪ್ ನಾನು ಹೇಳಿದ ಹಾಗೆ ಕೇಳಬೇಕು. ಗೊತ್ತಾಯ್ತೆ ? ಮಧ್ಯೆ ಎಲ್ಲೂ ತೊಂಚಾವಂಚಾ ಮಾಡಬಾರದು. ನಾನು ಹೇಳಿದ ಹಾಗೆ ಕೇಳಿದ್ರೆ – ನಿನಗೇನೂ ಭಯ ಇಲ್ಲ. ಗೊತ್ತಾಯ್ತೇ ? ರಾಯರೂ ನಿನ್ನ ಕೈ ಬಿಡೊಲ್ಲ – ಅಲ್ಲವೇ ಸಾರ್ ? "

—ಎಂದು ಎಳೆಯ ಮಕ್ಕಳನ್ನು ನಂಬಿಸುವಂತೆ ಕೇಳಿದ ವ್ಯಾಸರಾಯ.

" ಹೂ. "

—ಎಂದ ಮೂರ್ತಿ.

" ಸರಿ ಮತ್ತೆ – ಏನು ಇ ಂ ದಿ ರಾ – ನಾನು ಹೇಳಿದ ಹಾಗೆ ಕೇಳ್ತೀಯಾ ? "

" ಹೂ."

" ನಾನು ಹೇಳಿದ ಹಾಗೆ ಇದ್ದುಬಿಡು. ಆ – ನನ್ನ ಮಗ ಏನು ಹೇಳಿದರೂ ಕಮಕ್, ಕಿಮಕ್ ಅನ್ನಬೇಡ, ಗೊತ್ತಾಯ್ತೆ ? ಅವನೇನು ಕೇಳಿದ್ರೂ ರಾಯರು ಉತ್ತರ ಕೊಡ್ತಾರೆ. ನೀನು ಮಾತೇ ಆಡಬಾರದು."

" ಹೂ."

—ಏನು ಹೇಳಿದರೂ ಮಾಡುವ ಮಗುವಿನಂತೆ ಹೇಳಿದಳು ಇಂದಿರಾ.

" ಹಾಗಂದು....ಮತ್ತೆ...."

" ಊಹೂ – ನನ್ನಾಣೆಗೂ, ನೀವು ಹೇಳಿದ ಹಾಗೆ ಕೇಳ್ತೀನಿ...."

—ಭೀತಿ ವಿಹ್ವಲಳಾಗಿ ಹೇಳಿದಳು ಇಂದಿರೆ.

" ಹಾಗಂದ್ರೆ ಸರಿ. ಮತ್ತೆ ಈ ಭಯ ಪಯ ಎಲ್ಲಾ ಬಿಟ್ಟು ಬಿಟ್ಟು, ನಗನಗ್ತಾ ಗಂಡನ ಜೊತೇಲಿ ಊರಿಗೆ ಹೋಗ್ತಿರೋಳ ಹಾಗೆ ಅವನು ಇಲ್ಲಿರೋವರೆಗೂ ನೀನು ರಾಯರ ಪಕ್ಕದಲ್ಲಿ ಕೂತಿರಬೇಕು...."

" ಥ್ಹ—! "

—ವ್ಯಾಸರಾಯ ಹೇಳಿದುದನ್ನು ಕೇಳಿ ಮೂರ್ತಿ, ಇಂದಿರಾ, ಇಬ್ಬರೂ ಚಕಿತರಾಗಿ ಒಟ್ಟಿಗೆ ಕೇಳಿದರು.

"ಹಾನೂ ಇಲ್ಲ – ಹೂನೂ ಇಲ್ಲ. ಬದುಕೋಕೆ ಈಗಿರೋದು ಅದೊಂದೇ ದಾರಿ. ಇಲ್ಲಾಂದ್ರೆ – ಜೈಲಿಗೆ ಹೋಗಬೇಕಾಗುತ್ತೆ. ಏನಂತೀಯಾ ?"

ವ್ಯಾಸರಾಯ ಜೈಲಿನ ಹೆಸರು ಹೇಳುತ್ತಿದ್ದ ಹಾಗೇ ಇಂದಿರಾ ಮತ್ತೊಮ್ಮೆ ಬೆಚ್ಚಿಬಿದ್ದು—

"ಇಲ್ಲ – ನೀವ್ಹೇಳಿದ್ಹಾಗೆ ಕೇಳ್ತೀನಿ."

—ಎಂದಳು.

"ಆಷ್ಟಾದರೆ ಸರಿ—"

—ಎಂದು ವ್ಯಾಸರಾಯ ಒಮ್ಮೆ ಇಂದಿರೆಯನ್ನು ನಖಶಿಖಾಂತವಾಗಿ ಪರೀಕ್ಷಿಸುವಂತೆ ನೋಡಿ—

"ನೀನು ಹೊಸ ಸೀರೆ ಉಟ್ಕೊಂಡು ಬಂದದ್ದೇ ಒಳ್ಳೇದಾಯ್ತು. ರಾಯರ ಹೆಂಡತಿ ಅಂದ್ರೂ ಒಪ್ಪೋ ಹಾಗೇ ಇದೀಯ – ನೋಡೋಕೆ ಸರಿ ಹೋಯ್ತು, ಇರೋದೂ ಹಾಗೇ ಇರಬೇಕು – ಅಷ್ಟೆ. ಏನ್ಸಾರ್ ನೀವೂ ಆಷ್ಟೆ – ಸ್ವಲ್ಪಾನೂ ಐಬು ಬಿಟ್ಕೊಡಬಾರದು. ಅವನದು ಮಹಾ ಹದ್ದಿನ ಕಣ್ಣು, ಎಳ್ಳು ಕಾಳಷ್ಟು ಅನುಮಾನ ಬಂದ್ರೂ ಗ್ರಹಚಾರ ಬಿಡಿಸಿಬಿಡ್ತಾನೆ. ಗಂಡ ಹೆಂಡ್ತಿ ಅಂದ್ರೆ – ಥೇಟ್ ಗಂಡ ಹೆಂಡತಿ ಹಾಗೇ – ಮಾತೂ, ರೀತಿ, ನಯ, ನಡತೆ – ಎಲ್ಲಾ ಬಿಲ್ಕುಲ್ ಹಾಗೇ ಇರಬೇಕು. ಏನು ಸಾರ್...."

—ಎಂದ.

ಅವನ ಮಾತನ್ನು ಕೇಳಿ ಮೂರ್ತಿಗೆ ಒಂದು ಗಳಿಗೆ ತಾನು ನುಂಗಲಾಗದ ತುತ್ತನ್ನು ನುಂಗಲು ಯತ್ನಿಸುತ್ತಿರುವೆನೇನೋ ಅನಿಸಿ ಭಯವಾಯಿತು.

ಭಯ—

ಅದರ ಬೆನ್ನಹಿಂದೇ ಬಯಕೆ—

ವ್ಯಾಸರಾಯನ ಸಲಹೆಗೆ ಒಪ್ಪಿಕೊಂಡರೆ, ಆ ಹುಡುಗಿ, ಆ ರೂಪವತಿ,

ತನ್ನ ಪಕ್ಕದಲ್ಲಿ, ತನ್ನ ಮಡದಿಯಂತೆ ಕುಳಿತುಕೊಳ್ಳುತ್ತಾಳೆ. ಸ್ವಲ್ಪ ಹೊತ್ತಾದರೂ ಅವಳ ದೇಹಸಾಮೀಪ್ಯದ ಸುಖವನ್ನು ಅನುಭವಿಸಬಹುದು.

ಮುಂದೆ – ಈ ಉಪಕಾರಕ್ಕಾಗಿ—?

ಮೂರ್ತಿಯ ಮನಸು ಏನೇನೋ ಕನಸು ಕಂಡು, ಆ ಕನಸಿನಿಂದ ಮೂಡಿದ ಬಯಕೆಯಲ್ಲಿ ಭಯವನ್ನು ಮರೆತ.

'ಬಯಸಿದುದನ್ನು ಪಡೆಯಬೇಕೆಂದರೆ ಭಯವನ್ನು ಬಿಡಬೇಕು.'

'ಭಯವನ್ನು ಬಿಡಬೇಕು – ಬಯಸಿದುದನ್ನು ಪಡೆಯಬೇಕು.'

ಹಾಗೆ ಯೋಚಿಸುತ್ತಲೇ ಮೂರ್ತಿ ಇಂದಿರೆಯ ಕಡೆ ನೋಡಿದ. ಏಕೋ, ಅವನು ತನ್ನತ್ತ ನೋಡುವುದನ್ನು ಕಂಡು ಇಂದಿರೆ ನಾಚಿ, ತಲೆ ಬಾಗಿಸಿದಳು.

ಆ ಸಹಜವಾದ ತಲೆ ಬಾಗಿಸುವಿಕೆಯಲ್ಲೂ ಎಂಥ ಬೆಡಗಿದೆ!

ಆ ಬಾಗಿದ ತಲೆಯನ್ನು ನೋಡಿದಾಗ ಅವನ ಕಣ್ಣಿಗೆ, ಆ ತಲೆಯ ಮರೆಯಲ್ಲಿದ್ದ ವಕ್ಷವೂ ಕಂಡಿತು—

ಆ ಮೈ – ತನ್ನ ಪಕ್ಕದಲ್ಲಿ, ಮಡದಿಯಂತೆ—

ಎದೆ ಭಯದಿಂದ ಡಡದಡಿಸುತ್ತಿದ್ದರೂ ಹುಚ್ಚು ಧೈರ್ಯ ಮಾಡಿ ಹೇಳಿದ ಮೂರ್ತಿ—

"ನೀವೇನೂ ಯೋಚಿಸಬೇಡಿ."

ವ್ಯಾಸರಾಯನ ಕಣ್ಣುಗಳೂ ಮೂರ್ತಿಯ ಕಣ್ಣನೋಟವನ್ನೇ ಹಿಂಬಾಲಿಸಿ, ಅವನು ನೋಡಿದುದನ್ನೆಲ್ಲಾ ನೋಡಿದವು. ನೋಡಿ, ಅವನ ಮುಖದ ಮೇಲೆ ಏನೋ ತಾತ್ಸಾರದ ನಗೆ ಮೂಡಿತು.

"ನೀನಷ್ಟು ಹೇಳಿದ ಮೇಲೆ, ಇನ್ಯಾಕೆ ಸಾರ್, ನನಗೆ ಯೋಚನೆ. ಇಗೋ – ಆ ಯೋಚನೆ ಬಿಟ್ಟುಬಿಟ್ಟೆ."

—ಎಂದು ಹೇಳಿದ.

ಅವನ ಮುಖದಲ್ಲಿ ತಾತ್ಸಾರವಿತ್ತಾದರೂ, ಆ ತಾತ್ಸಾರ ಅವನ ಧ್ವನಿಯಲ್ಲಿರಲಿಲ್ಲ, ಅದಕ್ಕೆ ಪ್ರತಿಯಾಗಿ ಬೆನ್ನುಚಪ್ಪರಿಸುವ ಪ್ರಶಂಸಾ ಭಾವವಿತ್ತು.

ಅಷ್ಟು ಹೇಳಿ, ಮೂರ್ತಿಯ ಪಕ್ಕದಲ್ಲಿ ಕುಳಿತಿದ್ದ ವ್ಯಾಸರಾಯ ಮೇಲಕ್ಕೆ ಎದ್ದು, ಇಂದಿರಾ ಕುಳಿತ ಸೀಟಿಗೆ ಹೋಗಿ ಕುಳಿತು—

"ನಾಸಿದೀನಿ, ರಾಯರಿದ್ದಾರೆ – ಏನೂ ಹೆದರಿಕೋಬೇಡ. ಆ—"

—ಎಂದು ಅವಳ ಕೆನ್ನೆಯನ್ನು ಮೃದುವಾಗಿ ತಟ್ಟಿ—

"ಹಾಗಾದ್ರೆ – ನೀನು ಹೋಗಿ ಅವರ ಪಕ್ಕದಲ್ಲೇ ಕುತೂಕೋ."

—ಎಂದ.

ಅವನು ಹೇಳಿದುದನ್ನು ಕೇಳಿ, ಮೂರ್ತಿ, ಇಂದಿರಾ ಇಬ್ಬರೂ ಬೆಚ್ಚಿದರು. ಇಂದಿರೆಯಂತೂ ವ್ಯಾಸರಾಯನ ಮಾತು ಕೇಳಿ, ನಖಶಿಖಾಂತವಾಗಿ ಕೆಂಪೇರಿ—

"ಈ . . . ಗ್ಲೇ . . . ನೇ . . ."

—ಎಂದು ಕಂಪಿಸುವ ಧ್ವನಿಯಲ್ಲಿ ಕೇಳಿದಳು.

"ಹೂ. ಮತ್ತಿನ್ಯಾವಾಗಾಂದುಕೊಂಡೆ. ಆ ಛಾಡಕೊವ್ ಬಂದ ಮೇಲೆ ಹೋಗಿ ಕೂತ್ಕೋತೀಯೇನು ನನ್ನ ತಿಥಿ ಮಾಡೋಕೆ ?"

—ತಟಕ್ಕನೆ ಬಹು ಕರ್ಕಶವಾಗಿ ಕೇಳಿದ ವ್ಯಾಸರಾಯ.

"ಹಾ . . . ಹಾ . . . ಹಾ . . . ಗ . . . ಲ್ಲ . . ."

"ಹ್ಯಾಗೂ ಇಲ್ಲ. ಹೋಗಿ, ಕೂತುಕೊ. ಈಗ್ಲಿಂದ ಅವರ ಪಕ್ಕದಲ್ಲಿ ಕೂತುಕೊಳ್ಳೋದು ಅಭ್ಯಾಸ ಆಗಬೇಕೋ ಬ್ಯಾಡ್ವೋ ? ತಟಕ್ಕಂತ ಹೋಗಿ ಕೂತುಕೊಳ್ಳಲಿಕ್ಕಾಗುತ್ತೇ? . . ನಾಚ್ಕೋಬೇಡ . . ಇದಕ್ಕಿಷ್ಟು ನಾಚಿಕೊಂಡ್ರೆ ನಾಳೆ ಹತ್ತಾರು ಜನ ಗಂಡಸರ ಜೊತೇಲಿ ಪಾರ್ಟಿ ಮಾಡಬೇಕಲ್ಲಾ – ಹ್ಯಾಗೆ ಮಾಡ್ತಿ . . . ಹೋಗು . . . ನಾನು ಹೇಳಿದ ಹಾಗೆ ಕೇಳು ಇಂದಿರಾ . . ."

—ಎಂದ ವ್ಯಾಸರಾಯ.

ಆದರೂ ಇಂದಿರಾ ಅವನ ಪಕ್ಕದಿಂದ ಎದ್ದು ಮೂರ್ತಿಯ ಬಳಿಗೆ ಬರಲಿಲ್ಲ. ಉಳಿದೆಲ್ಲ ಯೋಚನೆಗಳನ್ನು ಗೆದ್ದ ಸ್ತ್ರೀ ಸಹಜ ಲಜ್ಜೆ ಅವಳ ಮೈಗೆ ಮೇಲೇಳದಂತೆ ಬೇಡಿ ಬಿಗಿದಿತ್ತು.

ಒಮ್ಮೆ ಮೂರ್ತಿಯತ್ತ, ಮತ್ತೊಮ್ಮೆ ವ್ಯಾಸರಾಯನತ್ತ ನೋಡಿ, ಹಾಗೇ ತಲೆ ತಗ್ಗಿಸಿ ಕುಳಿತಳು.

"ಥತ್ – ಈ ಹಾಳು ಹೆಂಗಸರ ಸಮಾಚಾರಾನೇ ಇಷ್ಟು. ಏನು

ಹೇಳಿನ್ರೊ ತರಲೇನೇ . . . ಆ ನಾಚಿಕೆಗೀಚಿಕೇಗೆಲ್ಲಾ ಇವತ್ತು ಹೊತ್ತಿಲ್ಲಾಂತ ಹೇಳಲಿಲ್ವೆ ? ಹೋಗು – ಇಂದಿರಾ . . . ”

—ಎಂದು, ತಾನೇ ಬಲವಂತವಾಗಿ, ಇಂದಿರೆಯ ರೆಟ್ಟೆಯನ್ನು ಹಿಡಿದು ಮೇಲೆಬ್ಬಿಸಿ, ಮೂರ್ತಿಯ ಪಕ್ಕಕ್ಕೆ ತಳ್ಳಿದ.

ಆಕೆ ತನ್ನ ಸೀಟಿನ ಮೇಲೆ ಕುಳಿತಾಗ, ಮೂರ್ತಿಯೂ ಏಕೋ ಯಾಂತ್ರಿಕವಾಗಿ ತಟಕ್ಕನೆ ದೂರ ಸರಿದು, ತಮ್ಮಿರ್ವರ ನಡುವೆ ಅಷ್ಟು ಸ್ಥಳ ಬಿಟ್ಟು ಕುಳಿತ.

ಅವನ ಮುಖವೂ ಕೆಂಪೇರಿ, ಅಂಗೈ ಬೆವರಿಟ್ಟಿತು.

ಇಂದಿರೆಯಂತೂ ತೋಳಲ್ಲಿ ಮುಖ ಮುಚ್ಚಿಕೊಂಡು ಮುದುರಿ ಕುಳಿತಿದ್ದಳು.

ಅವರಿಬ್ಬರನ್ನೂ ಕಂಡು ವ್ಯಾಸರಾಯ ಒಂದು ಗಳಿಗೆ ನಕ್ಕು—

“ ಚೆನ್ನಾಯ್ತು ಸಾರ್. ಅವಳಂತೂ ಹೇಳಿ ಕೇಳಿ ಹುಡುಗಿ. ಗಂಡಸು – ನಿಮಗೂ ನಾಚಿಕೇನೇ ?—ಸರೀರಿ ಸಾರ್. ಸರಿಯಾಗಿ ಗಂಡ – ಹೆಂಡತಿ ಕೂತ್ಕೊಳ್ಳೋ ಹಾಗೆ ಕೂತ್ಕೊಳ್ಳಿ. ಎದ್ದೇಳಿ ಸಾರ್ – ಹಾಗಲ್ಲ ಕೂತ್ಕೊಳ್ಳೋದು – ಕಿಟಕಿ ಪಕ್ಕದ ಮೂಲೇಗೆ ಅವಳನ್ನು ಕೂಡಿಸಿ. ಅವಳ ಪಕ್ಕದಲ್ಲಿ ನೀವು, ಒತ್ತಿಕೊಂಡು ಕೂತ್ಕೊಳ್ಳಿ . . . . ಗೊತ್ತಾಯ್ತೆ ಸಾರ್.... ಅಥವಾ ನಾನೇ ಇಬ್ಬರನ್ನೂ ಕೂಡಿಸಿ ತೋರಿಸಬೇಕೋ . . . . ”

— ಎಂದು ಹೇಳಿ ವ್ಯಾಸರಾಯ ಎದ್ದು ನಿಂತ.

ಅವನು ಎದ್ದು ನಿಂತುದನ್ನು ಕಂಡು ಇಂದಿರಾ ಆ ಲಜ್ಜೆಯಲ್ಲೂ ಭೀತಳಾಗಿ, ತಟಕ್ಕನೆ ತಲೆ ಎತ್ತಿ ನೋಡಿದಳು.

ತಾನು ಸುಮ್ಮನಿದ್ದರೆ, ವ್ಯಾಸರಾಯ ಆಡಿದಂತೇ ಮಾಡಬಹುದೆಂದು ಹೆದರಿದ ಮೂರ್ತಿಯೂ, ತಾನು ಕುಳಿತಿದ್ದ ಸ್ಥಳದಿಂದ ಎದ್ದು ಇಂದಿರೆಗೆ—

“ ಬನ್ನಿ, ಇಲ್ಲಿ ಕೂತುಕೊಳ್ಳಿ ”

—ಎಂದ.

ಮೂರ್ತಿ ಇಂದಿರೆಯನ್ನು ಬಹುವಚನದಲ್ಲಿ ಕರೆದುದನ್ನು ಕಂಡು ವ್ಯಾಸರಾಯ—

“ ಲಕ್ಷಣ ಆಯ್ತು ಸಾರ್ ”

—ಎಂದ.

" ಏಕೆ ? "

—ಬೆಚ್ಚಿ ಕೇಳಿದ ಮೂರ್ತಿ.

" ಅಲ್ಲಾ ಸಾರ್ – ಬನ್ನಿ, ಹೋಗಿ, ಅಮ್ಮಾಂತ ಅವನೆದುರಿಗೂ ಮಾತಾಡಿದ್ರೆ ನನ್ನ ಕತ್ತಿಗೆ ಉರಲು ಹಾಕಿಸಿ ಬಿಡ್ತೀರಿ – ಅಷ್ಟೆ. ಅದೆಲ್ಲಾ ಬಿಟ್ಬಿಡಿ ಸಾರ್. ಹೆಂಡತೀನ ಮಾತಾಡ್ಸೋ ಹಾಗೇ ಮಾತಾಡ್ಸಿ, ಹೆಂಡತಿ ಜೊತೇಲಿ ಇರೋ ಹಾಗೇ ಇರಿ. ಗೊತ್ತಾಯ್ತೆ ? ನಾನಾಗ್ಲೇ – ಹೇಳಲಿಲ್ವೇ– ಸ್ವಲ್ಪದರಲ್ಲಿ, ಐಬು ಗೊತ್ತಾದ್ರೂ ನನಗೆ ಗಲ್ಲು ಗ್ಯಾರಂಟೀಂತ . . . . ಇಂದಿರಾ . . . . ನೀನೇನು ಮಾಡ್ತಿ ಹೇಳು. ನಾಚಿಕೆ ಪಟ್ಕೊಂಡು, ನಿನಗೆ ಒಳ್ಳೇದು ಮಾಡೋದಕ್ಕೆ ಕರಕೊಂಡು ಬಂದ ನನ್ನ ಜೇಲಿಗೆ ಹಾಕಿಸಿ, ನೀನೂ ಕೆಡ್ತೀಯೋ – ಅಥವಾ ಉಳಿಸಿಕೋತೀಯೋ ? "

— ಎಂದು ಕೇಳಿದ ವ್ಯಾಸರಾಯ.

ಆ ಮಾತಿಗೆ ಇಂದಿರಾ ಏನೂ ಉತ್ತರ ಕೊಡದೆ, ಕುಳಿತಲ್ಲಿಂದ ಎದ್ದು ಹೋಗಿ, ಮೂರ್ತಿ ತೆರವು ಮಾಡಿದ ಜಾಗದಲ್ಲಿ ಕುಳಿತಳು.

ಮೂರ್ತಿ ಆಕೆಯ ಪಕ್ಕದಲ್ಲಿ ಕುಳಿತ.

" ನಡುವೆ ಅಷ್ಟು ಜಾಗ ಬಿಡಬಾರದು ಸಾರ್ . . . . ಸರಿಯಾಗಿ ಕೂತುಕೋ ಇಂದಿರಾ . . . . ಎಲ್ಲಾ ಸ್ವಲ್ಪ ಹೊತ್ತು . . . . ಅಷ್ಟೆ."

— ಎಂದು ಹೇಳಿದ ವ್ಯಾಸರಾಯ.

ಅವನ ಮಾತಿಗೆ ಕಟ್ಟುಬಿದ್ದು, ಇಂದಿರಾ ಸ್ವಲ್ಪ ಮೂರ್ತಿಯತ್ತ ಸರಿದಳು. ಆದರೆ ತಗ್ಗಿಸಿದ ತಲೆಯನ್ನು ಮೇಲೆತ್ತಲಿಲ್ಲ

ಆಕೆಯ ವೇಗವಾಗಿ ತುಯ್ಯುವ ಎದೆಯ ಮಿಡಿತ ಮೂರ್ತಿಗೆ ಕೇಳಿಸುತ್ತಿತ್ತು.

ಗಾಳಿಗೆ ಆಡುವ ಮುಂಗೂದಲ ಎಳೆಯೊಂದು ಮೂರ್ತಿಯ ಕೆನ್ನೆಯನ್ನು ನೇವರಿಸಿ, ಅವನ ಮೈಯಲ್ಲಿ ನೂರಾರು ಮಿಂಚು ಒಮ್ಮೆಲೆ ಹರಿದಂತಾಯಿತು.

ಅವನ ಹಣೆಯ ಮೇಲೆ ಹತ್ತಾರು ಬೆವರ ಹನಿಗಳು ಮೂಡಿದವು.

ಅವರಿಬ್ಬರನ್ನೂ ನೋಡುತ್ತಲೇ ಇದ್ದ ವ್ಯಾಸರಾಯ, ಏನೋ ಯೋಚಿಸಿ, ತಟಕ್ಕನೆ ಎದ್ದು, ಪಕ್ಕದಲ್ಲಿದ್ದ ' ಕ್ಲಾಸೆಟ್ ' (Claset) ನೊಳಗೆ ಹೋಗಿ ಬಾಗಿಲು ಹಾಕಿಕೊಂಡು, ಅವರ ದೃಷ್ಟಿಯಿಂದ ಮರೆಯಾದ.

ಇದ್ದಕ್ಕಿದ್ದ ಹಾಗೇ, ಗಾಡಿಯೊಳಗೆ ಆಡುತ್ತಿದ್ದ ಗಾಳಿ ಎಲ್ಲೋ ತಲೆಮರೆಸಿಕೊಂಡು, ವಿಚಿತ್ರವಾದ ಸಾಂದ್ರವಾದ ದಗೆ ಹಬ್ಬಿ, ಮೂರ್ತಿಯ ಹೃದಯವನ್ನು ಹತ್ತಿ ಕುಳಿತಂತೆ ತೋರಿತು ಮೂರ್ತಿಗೆ.

ಯಾವುದೋ ಊಹಾತೀತವಾದ ಸ್ವಪ್ನಲೋಕದಲ್ಲಿದ್ದವನಂತಿದ್ದ ಮೂರ್ತಿ.

" ಇದು ನಿಜವೇ, ಇದು ನಿಜವೇ, ಇದು ನಿಜವೇ ? "

—ಎಂದು ಹತ್ತಾರುಬಾರಿ ತನ್ನ ಮಿದುಳನ್ನೇ ಪ್ರಶ್ನಿಸಿಕೊಂಡ.

" ನಿಜ – ಇದು ವಾಸ್ತವ, ಸ್ವಪ್ನವಲ್ಲ."

—ಎಂದೇ ಹೇಳಿತು ಅವನ ಬಳಿಯಲ್ಲಿ ಕುಳಿತ ಹೆಣ್ಣಿನ ಮೈಯ ಕಾವು.

ಹೆಣ್ಣು, ತಾನು ಬಯಸಿದ ಹೆಣ್ಣು—

ಈ ಲಾವಣ್ಯವತಿ—

ತನ್ನ ಪಕ್ಕದಲ್ಲಿ, ತನ್ನ ಮಡದಿಯಂತೆ . . . . .

ಈಕೆ – ತನ್ನ ಪಕ್ಕದಲ್ಲಿ, ತನ್ನ ಮಡದಿಯಂತೆ ಕುಳಿತ ಈಕೆ—

ತನಗೆ ತೀರಾ ಅಪರಿಚಿತಳು. ಆಕೆಯನ್ನು ತನ್ನ ಜೀವನದಲ್ಲಿ ಕಂಡುದು ಇದೇ ಮೊದಲ ಬಾರಿ – [ಇದೇ ಕೊನೆಯ ಬಾರಿಯೂ ಆಗಬಹುದು] ಆದರೂ ಈಕೆಯನ್ನು ತಾನು ಮಡದಿಯಂತೆ ಕಾಣಬೇಕು, ಹಾಗೆ ವ್ಯವಹರಿಸಬೇಕು—

ಕೇವಲ ಅಲ್ಪ ಕಾಲಾವಧಿಗಾದರೂ ಈಕೆ—

' ನನ್ನ ಪತ್ನಿ '

ಆ ಭಾವನೆ ಸುಳಿದು ಮೂರ್ತಿಯ ಮೈಯಲ್ಲಿ ವಿಚಿತ್ರಕಂಪನ ಮೂಡಿತು. ನೂರಾರು ಭಾವನೆಗಳು ಸ್ಪರ್ಧೆಗಟ್ಟಿ ಓಡಿದವು ಅವನ ನರನಾಡಿಗಳಲ್ಲಿ—

ತನಗೆ – ಹೀಗನಿಸುತ್ತಿದೆ—

ಈಕೆಗೆ—

ಅನಿವಾರ್ಯವಾದ ಪರಿಸ್ಥಿತಿಯಲ್ಲಿ, ಅಸಹಾಯಕಳಾಗಿ, ಅಪರಿಚಿತನ ಪತ್ನಿಯಂತೆ ಅಭಿನಯಿಸಬೇಕಾಗಿ ಬಂದ ಈ ಅಬಲೆಗೆ—? ಏನನ್ನಿಸುತ್ತಿರ

ಬಹುದು ? ಎಷ್ಟು ಬೇಸರ, ಮನಸ್ಸಿಗೆಷ್ಟು ಯಾತನೆಯಾಗಿರಬಹುದು ? ತನ್ನ ವಿಷಯದಲ್ಲಿ ಆಕೆ ಏನು ಭಾವಿಸಿರಬಹುದು—

ಆ ಯೋಚನೆಯಲ್ಲೇ ಮೂರ್ತಿ ಇಂದಿರೆಯತ್ತ ನೋಡಿದ.

ಆಕೆ ತಗ್ಗಿಸಿದ ತಲೆಯನ್ನು ಮೇಲಕ್ಕೆ ಎತ್ತದೆ, ಕುಳಿತಂತೆಯೇ ಕುಳಿತಿದ್ದಳು.

ಆ ತಗ್ಗಿಸಿದ ಮುಖ – ಆ ಮುಖದ ಮೇಲೆ ಏನು ಭಾವನೆಯ ಚಿತ್ರವಿರಬಹುದು—? ಮನದಲ್ಲಿ ಆ ಪ್ರಶ್ನೆ ಮೂಡಿ, ಆಕೆಯ ಮುಖವನ್ನು ಎತ್ತಿ ನೋಡಬೇಕು, ಆಕೆಯನ್ನು ಮಾತನಾಡಿಸಬೇಕು ಎನಿಸಿತು.

ಆದರೆ ಆ ಯೋಚನೆಗೇ ಅವನ ಮೈ ಬೆವರಿ, ಸುತ್ತಲೂ ನೋಡಿದ – ಯಾರೂ ಇರಲಿಲ್ಲ ಅದನ್ನು ಕಂಡು ಅವನಿಗೆ ಕೊಂಚ ಧೈರ್ಯ ಬಂದಂತಾಯಿತು.

" ಇಲ್ಲಿ ನೋಡಿ . . . . "

—ಬಹು ಮೃದುವಾಗಿ ಪಿಸುಧನಿಯಲ್ಲಿ ಮಾತನಾಡಿಸಿದ.

" ಆ "

—ಉಸಿರ ಎಳೆಯುಷ್ಟು ಮೃದುವಾದ ಧ್ವನಿಯಲ್ಲಿ ಆಕೆ ಅವನ ಕರೆಗೆ ಉತ್ತರ ಕೊಟ್ಟಳು.

ಆಕೆ ತನ್ನ ಮಾತಿಗೆ ಉತ್ತರ ಕೊಟ್ಟ ಬಳಿಕ ಮೂರ್ತಿಗೆ ಮತ್ತಷ್ಟು ಧೈರ್ಯ ಬಂದಂತಾಯಿತು. ತನ್ನ ಪಕ್ಕದಲ್ಲಿದ್ದ ಆಕೆಯ ಕೈಯನ್ನು ನೇವರಿಸಿದ.

ಆಕೆ ತಟಕ್ಕನೆ ತನ್ನ ಕೈಯನ್ನು ಸರಿಸಿ, ಅವನತ್ತ ತಲೆ ಎತ್ತಿ ನೋಡಿದಳು. ಮರುಗಳಿಗೆಯೇ, ಆಕೆಗೆ ಏನು ತೋಚಿತೋ ಏನೋ – ಯಾಂತ್ರಿಕವಾಗಿ ತನ್ನ ಕೈಯನ್ನು ಅವನ ಬಳಿ ಸರಿಸಿದಳು.

ಮೂರ್ತಿಯ ಮುಖವನ್ನೇ ನೋಡುತ್ತಿದ್ದ ಆಕೆಯ ಕಣ್ಣುಗಳಲ್ಲಿ ತಟಕ್ಕನೆ ಎಂಥದೋ ನೋವು ಸುಳಿದು ಮಾಯವಾಯಿತು.

" ನಿಮಗೆ ಬೇಸರವೇ ? "

" ಏಕೆ ? "

" ನಾನು . . . . ಹೀಗೆ . . . . ನಿಮ್ಮ . . . . ಹತ್ತಿರ . . . .

" ಅವರು ಹೇಳಲಿಲ್ಲವೇ – ' ನೀವು ' ಎನ್ನಬೇಡಿ."

—ತಟಕ್ಕನೆ ಎಚ್ಚರಳಾಗಿ ಹೇಳಿದಳು ಇಂದಿರಾ.

ಆಕೆಯ ಮಾತು ಕೇಳಿ ಮೂರ್ತಿಗೂ ವ್ಯಾಸರಾಯನ ಎಚ್ಚರಿಕೆಯ ಮಾತು ನೆನಪಾಗಿ, ತನ್ನ ಮೈಮರೆವಿಗಾಗಿ ಬೇಸರ ಬಂತು.

" ನಿಜ . . . ಮರೆತಿದ್ದೆ . . . ಹಾಗಾದರೆ ಏನೆಂದು ಕರೆಯಲಿ . . . "

ಆ ಪ್ರಶ್ನೆಗೆ ಆಕೆ ಉತ್ತರ ಕೊಡಲಿಲ್ಲ.

" ಇಂದಿರಾ ಎಂದು ಕರೆಯಲೆ . . . . . ? "

—ಮೂರ್ತಿಯೇ ಕೇಳಿದ ಆ ಪ್ರಶ್ನೆಗೆ ಆಕೆ ಉತ್ತರ ಕೊಡಲಿಲ್ಲ ಸಮ್ಮತಿ ಸೂಚಕವಾಗಿ ತಲೆಯಾಡಿಸಿದಳು.

" ಇಂದಿರಾ . . . . "

" ಆ "

" ನನ್ನ ಮೇಲೆ ನಿನಗೆ ಬೇಜಾರೇ . . . . "

" ಏಕೆ ? "

" ನಿನ್ನ ಹತ್ತಿರ ಹೀಗೆ ಕುಳಿತಿರುವುದಕ್ಕೆ . . . . "

" ಊಹೂ . . . . . "

" ಮತ್ತೆ . . . . . "

" ನೀವು ತುಂಬಾ ಒಳ್ಳೆಯವರು."

—ಹೃದಯದಲ್ಲಿ ಉಕ್ಕಿಬಂದ ಕೃತಜ್ಞತೆಯನ್ನು ಹತ್ತಿಕ್ಕಲಾರದೆ, ತನ್ನ ಕೈಯ ಬಳಿಯಿದ್ದ ಮೂರ್ತಿಯ ಕೈಯನ್ನು ಹಿಡಿದು ಹೇಳಿದಳು ಇಂದಿರಾ.

" ಏಕೆ ? "

" ನಮಗೋಸ್ಕರ . . . . ನಮಗೋಸ್ಕರ . . . . "

ಆಕೆ ತಾನಾಗಿಯೇ ತನ್ನ ಕೈ ಒತ್ತಿದಾಗ, ತನ್ನ ಹೃದಯದಲ್ಲಿ ದಿಗ್ಗನೆ ಮೂಡಿ ಬಂದ ಭಾವಾವೇಗವನ್ನು ತಡೆಯಲಾಗದೆ, ಏನಾಡುತ್ತಿರುವೆನೆಂದು ಯೋಚನೆಯನ್ನೂ ಮಾಡದೆ—

" ನಿನಗೋಸ್ಕರ ನಾನು ಏನು ಬೇಕಾದರೂ ಮಾಡುತ್ತೇನೆ ಇಂದಿರಾ "

—ಎಂದ ಭಾವೋತ್ಕಟವಾದ ಧ್ವನಿಯಲ್ಲಿ.

ಮೂರ್ತಿ ಆ ಮಾತಾಡಿದಾಗ ಅವನ ಧ್ವನಿಯಲ್ಲಿ ಮೂಡಿದ ತೀವ್ರತೆ, ಅವನಾಡಿದ ಮಾತು ಕೇಳಿ ಇಂದಿರಾ ಚಕಿತಳಾದಳು.

" ನನಗೋಸ್ಕರ . . . . . . ನನಗೋಸ್ಕರ . . . . . . ಇದಕ್ಕೆ ಒಪ್ಪಿಕೊಂಡಿರಾ ? "

—ತಡೆತಡೆದು ಕೇಳಿದಳು.

" ಹೂ."

" ಏಕೆ ? "

ಆ ಪ್ರಶ್ನೆಯನ್ನು ಕೇಳಿ ಮೂರ್ತಿ ಒಂದು ಗಳಿಗೆ ಅವಾಕ್ಕಾದ. ಮರುಗಳಿಗೆಯೇ ಯಾವುದೋ ಶಕ್ತಿ ತಾನೇ ಅವನಿಂದ ನುಡಿಸಿತು—

" ನೀನು . . . ನೀನು . . . ತುಂಬಾ ಚೆಲುವೆ ! "

ಅವನು ಆಡಿದ ಆ ಮಾತನ್ನು ಕೇಳಿ ಇಂದಿರೆಯ ಮುಖ ತಟಕ್ಕನೆ ಬಿಳುಪೇರಿ, ಮರುಗಳಿಗೆಯೇ ಕೆಂಪೇರಿತು. ಮೂರ್ತಿ ಅವಳ ಮುಖವನ್ನೇ ದಿಟ್ಟಿಸಿ ನೋಡುತ್ತಿದ್ದ.

ಆ ನೋಟದ ಭಾರವನ್ನು ಸಹಿಸಲಾಗದಂತೆ ಅವಳ ಮುಖ ಬಾಗಿತು.

ಅವಳ ಬಾಗಿದ ಕಣ್ಣು ಸೂಚಿಸಿದ ಅವಳ ದೇಹಭಾಗ ಮೂರ್ತಿಯನ್ನು ಸೂಜಿಗಲ್ಲಿನಂತೆ ಸೆಳೆದು, ತಾನೇನು ಮಾಡುತ್ತಿದ್ದೇನೆ ಎಂಬ ಅರಿವೇ ಇಲ್ಲದೆ, ತನ್ನ ಪಕ್ಕದಲ್ಲಿ ಕುಳಿತ ಅವಳನ್ನು ಬಿಗಿದಪ್ಪಿ ಹೇಳಿದ—

" ಇಂದಿರಾ – ನಿನ್ನನ್ನು ನಾನು ಪ್ರೀತಿಸುತ್ತೇನೆ."

ಆ ಮಾತು ಕೇಳಿ ಇಂದಿರಾ ಚಾಟಿಯ ಏಟು ತಿಂದಂತೆ ಮಿಡುಕಿ ತನ್ನನ್ನು ಸುತ್ತಿದ ಅವನ ತೋಳನ್ನು ಬಿಡಿಸಿ—

" ದಯವಿಟ್ಟು . . . . ದಯವಿಟ್ಟು . . . ಅದೊಂದು ಮಾತು ಹೇಳಬೇಡಿ . . . . "

—ಎಂದಳು.

" ಏಕೆ ? "

ಆ ಪ್ರಶ್ನೆಗೆ ಇಂದಿರಾ ಉತ್ತರ ಕೊಡಲಿಲ್ಲ.

" ಹೋಗಲಿ ಬಿಡು – ನಿನಗೆ ಬೇಸರವಾಗುವುದಾದರೆ ಆ ಮಾತು ಆಡುವುದಿಲ್ಲ. ಅಂತೂ – ನಾನು ನಿನ್ನನ್ನು ಪ್ರೀತಿಸುವುದು ಸತ್ಯ."

—ಎಂದ ಮೂರ್ತಿ, ಆಕೆಯಿಂದ ಸ್ವಲ್ಪ ದೂರ ಸರಿದು.

ಅವನು ದೂರಸರಿದುದನ್ನು ಕಂಡು, ಇಂದಿರಾ ತಾನೇ ಅವನ ಕೈಯನ್ನು ನೇವರಿಸಿ ಹೇಳಿದಳು—

" ನನ್ನ ಮೇಲೆ . . . ಸಿಟ್ಟು ಬಂತೇ ? . . . "

" ಏಕೆ ? "

" ಹಾಗೆ ಹೇಳಿದೆ ಎಂದು . . . ? . . . "

ಆ ಮಾತಿಗೆ ಮೂರ್ತಿ ಏನೂ ಉತ್ತರ ಹೇಳಲಿಲ್ಲ

" ನನ್ನನ್ನು . . . ನೀವು ಪ್ರೀತಿಸುತ್ತೀರಾ . . . "

" ಹೂ."

" ಹಾಗೇ ಪ್ರೀತಿಸುತ್ತಿರಿ . . . . ಪ್ರೀತಿಸುತ್ತಾ . . . . ಪ್ರೀತಿಸುತ್ತಾ ಮರೆತುಬಿಡಿ . . . "

" ಏಕೆ ? "

" ಇವೆಲ್ಲಾ . . . ಇವೆಲ್ಲಾ . . . . ಕೆಲವು ಗಳಿಗೆಯ ನಾಟಕ . . . . ಅದಕ್ಕೇ . . . ? ನಾಳೆ ನಾನು ಯಾರೋ . . . ನೀವು ಯಾರೋ . . . "

ಇಂದಿರೆ ಹೇಳಿದ ಮಾತನ್ನು ಕೇಳಿ ತಟಕ್ಕನೆ ಮೂರ್ತಿ ಅವಳ ಮುಖವನ್ನು ನೋಡಿದ

ಆಕೆಯ ಕಣ್ಣುಗಳಲ್ಲಿ ನಗೆ ಇರಲಿಲ್ಲ, ಅಣಕವಿರಲಿಲ್ಲ, ಅಪಹಾಸ್ಯವಿರಲಿಲ್ಲ – ಅದಕ್ಕೆ ಪ್ರತಿಯಾಗಿ ಏನೋ ಪ್ರಚಂಡ ಯಾತನೆ ತುಂಬಿ ತುಳುಕುತ್ತಿತ್ತು.

ಆಕೆಯ ಕಣ್ಣ ಅಂಚಿನಲ್ಲಿ ಮೂಡಿದ ಕಂಬನಿ ಅವನನ್ನು ದಿಟ್ಟಿಸಿ ನೋಡಿತು.

ಎಷ್ಟು ಕಹಿ – ಆದರೆ ಎಷ್ಟು ಸತ್ಯ ಆಕೆಯ ಮಾತು !

ವಾಸ್ತವತೆಯ ಅರಿವಾಗಿ ಮೂರ್ತಿಯ ಕರುಳನ್ನು ಕತ್ತರಿಸಿದಂತಾಯಿತು. ಬೆರಳ ಕುಡಿಯಿಂದ ಆ ಕಂಬನಿಯನ್ನು ಒರೆಸಿ, ಆಕೆಯ ಮೃದುವಾದ ಕೆನ್ನೆಗಳನ್ನು ನೇವರಿಸಿದ.

ಎಷ್ಟು ನಯವಾದ, ಮೃದುವಾದ ಕೆನ್ನೆಗಳು ಅವು.

ಇಂದಿರೆಯ ಮೈ ಏಕೋ ಭಾರವಾಗಿ, ಅವನ ಮೈಯ ಮೇಲೆ ಒರಗಿತು. ಅವನ ತೋಳು ಅವಳನ್ನು ಬಳಸಿತು. ಅದಕ್ಕೆ ಅವಳು ಬೇಡವೆನ್ನಲಿಲ್ಲ. ಅದಕ್ಕಿಂತ ಹೆಚ್ಚಿನ ಉತ್ಸಾಹವನ್ನೂ ತೋರಲಿಲ್ಲ.

~~ಹೆಚ್ಚು ಸದ್ದು ಮಾಡದೆ ಗಾಡಿಯೊಳಗೆ ಬಂದ ಆಜಾನುಬಾಹು ಮನುಷ್ಯ~~

ಆದರೂ ತನ್ನ ಎದೆಯ ಮೇಲೆ ಒರಗಿದ ಅವಳ ಬಗ್ಗೆ ಮೂರ್ತಿಯಲ್ಲಿ ಅಪಾರವಾದ ಅಭಿಮಾನ ಮೂಡಿ—

" ನೀನೇನೂ ಹೆದರಬೇಡ ಇಂದಿರಾ . . , ನಾನಿದೀನಿ."

—ಎಂದು ಅಭಯ ನೀಡಿದ.

ಅವಳು, ಹಾಗೇ ತೋಳನ್ನು ಮೇಲೆ ಚಾಚಿ, ಅವನ ಕ್ರಾಪನ್ನು ನೇವರಿಸಿ, ಅವನ ಮುಖವನ್ನು ತನ್ನ ತಲೆಗೆ ಒತ್ತಿಕೊಂಡಳು.

ರೈಲು ಕತ್ತಲಿನಲ್ಲಿ ಶಿಳ್ಳು ಹಾಕುತ್ತಾ ಓಡುತ್ತಿತ್ತು.

(೧೮೪ ನೇ ಪುಟದ ೨೭ ನೇ ಪಂಗ್ತಿ ' ಹೆಚ್ಚು........ಮನುಷ್ಯ' ತಪ್ಪಾಗಿ ಪ್ರಿಂಟಾಗಿರುತ್ತೆ)

# ೧೮

ಮುಚ್ಚಿದ ' ಕ್ಲಾಸೆಟ್ ' ನ ಬಾಗಿಲು ತೆರೆದ ಸದ್ದಾಗಿ, ಇಂದಿರಾ ತಟಕ್ಕನೆ ಮೂರ್ತಿಯಿಂದ ಕೊಂಚ, ದೂರ ಸರಿದು ಕುಳಿತಳು.

ಕ್ಲಾಸೆಟ್‌ನಿಂದ ಹೊರಬಂದ ವ್ಯಾಸರಾಯ ಅವರಿಬ್ಬರನ್ನು ನೋಡಿದ.

ಅವರಿಬ್ಬರ ಮುಖಗಳೂ ಕೆಂಪೇರಿ, ಇಂದಿರಾ ಕಳ್ಳನೋಟದಲ್ಲಿ ಮೂರ್ತಿಯ ಮುಖ ನೋಡಿ, ಮತ್ತೆ ಮುಖವನ್ನು ಪಕ್ಕಕ್ಕೆ ತಿರುಗಿಸಿದಳು.

ಅದನ್ನು ನೋಡಿಯೂ ನೋಡದವನಂತೆ ವ್ಯಾಸರಾಯ—

" ಇನ್ನೊಂದು ಒಳ್ಳೇ ವಿಷಯವನೇ ಮರೆತುಬಿಟ್ಟಿದ್ದೆ ನೋಡಿ ಸಾರ್ . . . ಸದ್ಯ – ನನ್ನದೃಷ್ಟ ಚೆನ್ನಾಗಿತ್ತು, ಜ್ಞಾಪಕಕ್ಕೆ ಬಂತು . . . "

—ಎಂದ.

" ಏನು ? "

" ನಿಮ್ಮ ಟಿಕೆಟ್ ಎಲ್ಲಿ – ಇಲ್ಲಿ ಕೊಡಿ ಸಾರ್."

—ಎಂದ.

" ಏಕೆ ? "

" ಇಂಥಾದ್ರಲ್ಲೆಲ್ಲಾ ಅವನು ಕದೀಮ ಸಾರ್. ತಟಕ್ಕಂತ ನೀವಿಬ್ರೂ ಎಲ್ಲಿಗೆ ಹೋಗ್ತಿರಾಂತ ಕೇಳಿ, ಟಿಕೆಟ್ ಕೊಡಿ ಅಂತ ಕೇಳಿದ್ರೆ ಆಗೇನ್ಮಾಡ್ತೀರ ? ಇಗೋ – ನಮ್ಮಿಬ್ಬರದೂ ಟಿಕೆಟ್ ನಿಮ್ಮ ಹತ್ತಿರ ಇರಲಿ ಕೇಳಿದ್ರೆ ಕಡೂರಿಗೆ ಹೋಗ್ತೀದೀರೀಂತ ಹೇಳಿ. ನಿಮ್ಮ ಟಿಕೆಟ್ ನನಗೆ ಕೊಡಿ. ಕಡೂರಿನಲ್ಲಿಳಿದಾಗ ಬದಲಾಯಿಸಿಕೊಂಡ್ರಾಗುತ್ತೆ."

—ಎಂದು ವ್ಯಾಸರಾಯ ತನ್ನ ಬಳಿ ಇದ್ದ ಟಿಕೆಟ್ಟುಗಳನ್ನು ಮೂರ್ತಿಗೆ ಕೊಟ್ಟ.

ವ್ಯಾಸರಾಯನ ಮುನ್ನೆಚ್ಚರಿಕೆಯನ್ನು ಕಂಡು ಮೂರ್ತಿಗೆ ಆಶ್ಚರ್ಯವಾಯಿತು. ' ಎಷ್ಟು ಸಣ್ಣ ಸಣ್ಣ ಅಂಶಾನೂ ಯೋಚನೆ ಮಾಡ್ತಾನೆ. ಪಕ್ಕಾ ಕದೀಮ ' ಎಂದುಕೊಂಡ. ಏಕೋ ಹಾಗೆನ್ನಿಸಿ ಅವನಿಗೆ ವ್ಯಾಸರಾಯನ

ವಿಷಯದಲ್ಲಿ ಕೊಂಚ ಭಯವೂ ಮೂಡಿತು. ಮಾತನಾಡದೆ, ತನ್ನ ಟಿಕೆಟ್ಟನ್ನು ಅವನಿಗೆ ಕೊಟ್ಟು, ಅವನ ಟಿಕೆಟ್ಟುಗಳನ್ನು ತಾನು ತೆಗೆದುಕೊಂಡ.

ಮೂರ್ತಿ ಕೊಟ್ಟ ಟಿಕೆಟ್ಟುಗಳನ್ನು ತೆಗೆದುಕೊಳ್ಳುತ್ತಲೇ ವ್ಯಾಸರಾಯ—

“ಇಂದಿರಾ – ನಿನ್ನ ಕತ್ತು ಕಾಣೋ ಹಾಗೆ ಬಿಟ್ಕೋಬೇಡ. ಕತ್ನಲ್ಲಿ ಕರಿಮಣಿಸರ ಇಲ್ಲ. ಎಲ್ಲಾದ್ರೂ ನೋಡಿಬಿಟ್ಟಾನು. ಮಹಾ ಹದ್ದಿನ ಕಣ್ಣು ’

—ಎಂದು ಇಂದಿರೆಗೆ ಎಚ್ಚರಿಕೆ ಹೇಳಿದ.

ಅವನ ಮಾತು ಕೇಳಿ ಮೂರ್ತಿಗೆ ‘ಆತ’ನದು ಹದ್ದಿನ ಕಣ್ಣಾದರೆ, ಇವನದೇನೂ ಕಡಮೆ ದರ್ಜೆಯ ಕಣ್ಣು ಎನಿಸಲಿಲ್ಲ. ಹಾಗೇ ಇವನು ಇಷ್ಟು ಹೆದರಿ ಎಚ್ಚರಿಕೆ ವಹಿಸುತ್ತಿರುವ ‘ಆತ’ ಯಾರಿರಬಹುದು ಎಂಬ ಯೋಚನೆಯೂ ಬಂತು ಮೂರ್ತಿಗೆ.

ಅದರೊಂದಿಗೆ, ಅದುವರೆಗೂ ಅವನು ಕುರಿತ ಯೋಚನೆಗಳೆಲ್ಲವೂ ಮತ್ತೆ ಜಾಗ್ರತವಾದವು.

‘ಆತ ಯಾರು?

‘ಆತನಿಗೂ ಇವನಿಗೂ ಏನು ಸಂಬಂಧ?

‘ಆತನಿಗೆ ಇವನು ಇಷ್ಟು – ತನ್ನ ಜೊತೆಯಲ್ಲಿ ಬಂದ ಹೆಂಗಸನ್ನು, ಅಪರಿಚಿತನ ಪತ್ನಿಯನ್ನಾಗಿ ಮಾಡುವಷ್ಟು – ಹೆದರಲು ಏನು ಕಾರಣ?

‘ಈ ಹುಡುಗಿಗೂ ಇವನಿಗೂ ಎಲ್ಲಿಯ ಸಂಬಂಧ? ಹೇಗೆ ಜೊತೆಯಾದರು?

‘ಇವನ, ‘ಆತ’ನನ್ನು ಮೋಸಗೊಳಿಸುವ ತಂತ್ರದಲ್ಲಿ ನಾನು ಪಾಲುಗಾರನಾಗಲು ಒಪ್ಪಿದುದು ಸರಿಯೇ?

‘ಇವನಂತೂ ಶುದ್ಧ ನಾಡಿಕೆಗೇಡಿಯಾಗಿ ಕಾಣುತ್ತಾನೆ. ಇವಳು—?

‘ಇವಳು ಎಂಥವಳು?

‘ಇವಳೂ ಅವನ ಗುಣದ ಗುಂಪಿಗೇ ಸೇರಿದವಳೇ?

‘ಇವರಿಬ್ಬರೂ ಸೇರಿ, ಏನೋ ಭಯದ ನಾಟಕ ಆಡಿ, ನನಗೇನಾದರೂ ಮೋಸ ಮಾಡಲು ಯತ್ನಿಸುತ್ತಿದ್ದಾರೆಯೇ?’

—ಹೀಗೇ ನೂರೆಂಟು ಯೋಚನೆಗಳು ಮೂರ್ತಿಯ ಮಿದುಳನ್ನು ಮುತ್ತಿಗೆ ಹಾಕಿದವು.

ಒಂದರ ಮೇಲೆ ಒಂದು ಬಗೆ ಬಗೆಯ ಯೋಚನೆಗಳು ಬಂದು, ಮೂರ್ತಿಗೆ ತಾನಾವುದೋ ಅಭೇದ್ಯವಾದ ರಹಸ್ಯದ ಕೋಟೆಯಲ್ಲಿ ಬಂದಿಯಾಗಿದ್ದಂತೆ ತೋರಿ ಒಂದು ಗಳಿಗೆ ಭಯವಾಯಿತು.

ಮರುಗಳಿಗೆಯೇ ಏನೋ ಹುಚ್ಚು ಧೈರ್ಯ ಹೇಳಿತು—

‘ ಇವನಾಗಲಿ, ಇವಳಾಗಲಿ ನಿನಗೇನು ಮಾಡಬಲ್ಲರು ? ನಿನ್ನ ಬಳಿ ಸಾವಿರಾರು ರೂಪಾಯಿಗಳೂ ಇಲ್ಲ, ಸೇರುಗಟ್ಟಲೆ ಬಂಗಾರವೂ ಇಲ್ಲ. ಜೇಬಿನಲ್ಲಿರುವುದೆಲ್ಲಾ ನೂರು – ನೂರಿಪ್ಪತ್ತು ರೂಪಾಯಿ—

‘ ಅಷ್ಟಕ್ಕಾಗಿ ಇವರು ಆಟ ಕಟ್ಟಿದ್ದರೆ – ಲಾಭ ನನ್ನದೇ. ಇಂಥ ಸುಂದರಿಯ ಸಹವಾಸಕ್ಕಿಂತ – ಅದು ಕೇವಲ ಅಲ್ಪ ಕಾಲಿಕವಾದುದಾದರೂ – ತನ್ನಲ್ಲಿರುವ ಹಣ ಹೆಚ್ಚಿನದಲ್ಲ.’

ಹಾಗೆಂದುಕೊಂಡೇ ಮೂರ್ತಿ ಇಂದಿರೆಯತ್ತ ನೋಡಿದ.

ಆಕೆಯೂ ಏನೋ ಯೋಚನೆ ಮಾಡುತ್ತಿದ್ದಳು. ಇಂದಿರಾ ಅವನತ್ತ ನೋಡಲಿಲ್ಲ, ಅವನೊಂದಿಗೆ ಮಾತಾಡಲಿಲ್ಲ. ಆದರೂ ಅವಳ ಮುಖ ಹೇಳಿತು—

‘ ನಾನು ನಿರ್ದೋಷಿ ’

ಆ ಮುಖವನ್ನು ನೋಡಿ ತನಗೆ ತಾನೇ ಹೇಳಿಕೊಂಡ—

‘ ಅವನು ಎಂಥವನಾದರೂ ಆಗಲಿ. ಇವಳಿಗೋಸ್ಕರ ಏನು ಬೇಕಾದರೂ ಮಾಡಬಹುದು.’

ಮೂರ್ತಿ ಹಾಗೆ ಯೋಚಿಸುತ್ತಿರುವಾಗಲೇ, ಮಾರ್ಗಮಧ್ಯದ ಹಳ್ಳಿಯ ನಿಲ್ದಾಣವೊಂದರಲ್ಲಿ ರೈಲು ನಿಂತಿತು.

“ ಸಾರ್ – ಹುಷಾರಾಗಿರ್ರಿ ”

—ಎಂದು ಹೇಳಿದ ವ್ಯಾಸರಾಯ ಭಯ ತುಂಬಿ ತುಳುಕುವ ಧ್ವನಿಯಲ್ಲಿ.

ಅವನ ಮಾತನ್ನು ಕೇಳುತ್ತಿದ್ದ ಹಾಗೇ ಇಂದಿರಾ ತಟಕ್ಕನೆ ಮೂರ್ತಿಗೆ ಒತ್ತಿಕೊಂಡು ಕುಳಿತಳು.

" ಹೆದರಬೇಡಿ "

—ಎಂದ ಮೂರ್ತಿ.

ಇಂದಿರೆಯ ದೇಹ ಸಾಮೀಪ್ಯದಿಂದ ಪ್ರಚೋದಿತವಾದ ಮೂರ್ತಿಯ ಮಿದುಳು ಮಿಂಚಿನ ವೇಗದಿಂದ ಕೆಲಸಮಾಡತೊಡಗಿತು.

ವ್ಯಾಸರಾಯ, ಇಂದಿರ, ಮೂರ್ತಿ—

ಮೂವರ ಕಣ್ಣುಗಳೂ, ನಿಲ್ದಾಣದತ್ತಲೇ ನೋಡುತ್ತಿದ್ದವು.

ಅದೊಂದು ಬಹು ಸಣ್ಣ ಹಳ್ಳಿಯ ನಿಲ್ದಾಣ. ಅವರ ಸಮೀಪದಲ್ಲೆಲ್ಲೂ ಹಳ್ಳಿ ಕೂಡ ಇದ್ದಂತಿರದೆ ನಿಲ್ದಾಣದ ಸುತ್ತ ಬೆಳೆದ ಕಾಡು ಕತ್ತಲಲ್ಲಿ ಭೋ ಗುಟ್ಟುತ್ತಿತ್ತು. ಕತ್ತಲಲ್ಲಿ, ನಕ್ಷತ್ರಾಂಕಿತವಾದ ಮುಗಿಲಿಗೆ ಚಾಚಿದ ಬಿದಿರುಮೆಳೆ ಗಳ ಕಪ್ಪು ತೆನೆಗಳ ಕಾರೊಡಲಿನಲ್ಲಿ ಅಲ್ಲೊಂದು ಇಲ್ಲೊಂದು ಮಿಣುಕು ಹುಳು ಗಳು, ಕತ್ತಲಿನ ಬಟ್ಟೆಯಲ್ಲಿ ಬೆಳಕಿನ ಎಳೆಗಳನ್ನು ನೇಯುತ್ತಿದ್ದವು.

ಆ ನಿಲ್ದಾಣದಲ್ಲಿ ಹೆಚ್ಚು ಜನ ಇರಲಿಲ್ಲ.

ಅಲ್ಲಿ ರೈಲು ಬಹು, ಅತ್ಯಲ್ಪಕಾಲ ನಿಲ್ಲುತ್ತಿದ್ದುದರಿಂದ ಇದ್ದ ಇಬ್ಬರು ಮೂವರು ಪ್ರಯಾಣಿಕರು, ರೈಲು ಬಂದು ನಿಲ್ಲುತ್ತಿದ್ದ ಹಾಗೇ, ತಮಗೆ ಹತ್ತಿರ ವಾದ ಗಾಡಿಗಳಲ್ಲಿ ಹೋಗಿ ಕುಳಿತುಕೊಂಡರು.

ಯಾವ ಗಾಡಿಗಳಲ್ಲೂ ಹೆಚ್ಚು ಜನವಿರಲಿಲ್ಲವಾದುದರಿಂದ ಯಾರೂ ಖಾಲಿ ಇದ್ದ ಗಾಡಿಗಳಿಗಾಗಿ ಹುಡುಕಿಕೊಂಡು ಅಲೆಯಬೇಕಾಗಿರಲಿಲ್ಲ.

ಎಂತಲೇ ಇವರು ಕುಳಿತ ಗಾಡಿಯ ಬಳಿ ಯಾರೂ ಸುಳಿಯಲಿಲ್ಲ.

ನಿಲ್ದಾಣದಲ್ಲಿ ಒಂದೂ ಒಂದೂವರೆ ನಿಮಿಷಕಾಲ ನಿಂತ ಶಾಸ್ತ್ರ ಮಾಡಿದ ರೈಲು, ಮತ್ತೆ ಸಿಳ್ಳುಹಾಕಿ ತನ್ನ ಪ್ರಯಾಣವನ್ನು ಆರಂಭಿಸಿತು.

' ಸದ್ಯ ' ಆತ ' ಬರಲಿಲ್ಲ '

—ಎಂದುಕೊಂಡ ಮೂರ್ತಿ, ಗಾಡಿ ನಿಧಾನವಾಗಿ ಚಲಿಸಲಾರಂಭಿಸಿ ದಾಗ.

ವ್ಯಾಸರಾಯನ ಮುಖದ ಮೇಲೂ ಅದೇ ಬಿಡುಗಡೆಯ ಭಾವವಿತ್ತು. ಗಾಡಿಯು ನಿಧಾನವಾದ ' ಚುಕು ಚುಕು – ಜುಗು ಜುಗು ' ಶಬ್ದ ಆರಂಭ ವಾದಾಗ ಮೂರ್ತಿಗೆ ಏನೋ ಹೇಳಬೇಕೆಂದು ಅವನ ಕಡೆ ತಿರುಗಿದವನು, ಹಿಂಬದಿಯ ಬಾಗಿಲ ಕಿಟಕಿಯತ್ತ ನೋಡಿ, ತಟಕ್ಕನೆ ಬಾಯಿ ಮುಚ್ಚಿಕೊಂಡ.

ಕೂಡಲೇ ಅವನ ಕಣ್ಣುಗಳಲಿ ' ಎಚ್ಚರಿಕೆಯ ' ಬೆಳಕು ಹೊಳೆಯಿತು.

ಅದನ್ನು ಕಂಡು ಮೂರ್ತಿಯೂ ಅತ್ತ ಕಡೆ ಕಣ್ಣು ಹೊರಳಿಸಿದ.

ಮೂರ್ತಿ ಅತ್ತ ಕಡೆ ತಿರುಗುವುದಕ್ಕೂ, ಆ ಬದಿಯ ಬಾಗಿಲನ್ನು ತೆರೆದು ಕೊಂಡು ' ಆತ 'ಗಾಡಿಯೊಳಗೆ ಪ್ರವೇಶಿಸುವುದಕ್ಕೂ ಸರಿಹೋಯಿತು.

ಹೆಚ್ಚು ಸದ್ದು ಮಾಡದೆ ಗಾಡಿಯೊಳಗೆ ಬಂದ ಆಜಾನುಬಾಹು ಮನುಷ್ಯ ನನ್ನು ನೋಡಿ, ಮೂರ್ತಿಗೂ ಒಮ್ಮೆ ತನ್ನ ಹೃದಯವನ್ನು ಹಿಡಿದು ಅಲುಗಿಸಿ ದಂತಾಯಿತು.

ಆದರೂ ತಾನು ಭಯವನ್ನು ವ್ಯಕ್ತಪಡಿಸಿದರೆ, ಕೆಲಸ ಕೆಟ್ಟುಹೋಗುತ್ತದೆ ಎಂದು ಉಕ್ಕುವ ಭೀತಿಯನ್ನು ತಡೆ ಹಿಡಿದು, ತನ್ನ ಪಕ್ಕದಲ್ಲಿ ಕುಳಿತ ಇಂದಿರೆಗೂ ಧೈರ್ಯ ಕೊಡಲು ಅವಳ ಕೈಯನ್ನು ಹಿಸುಕಿದ.

ಇಂದಿರೆಯ ಕೈಯೂ—

ಮರದಿಂದ ಮರಕ್ಕೆ ಹಾರುವಾಗ, ತಾನೆಲ್ಲಿ ಬೀಳುವೆನೋ ಎಂಬ ಭಯ ದಿಂದ ತಾಯನ್ನು ತಬ್ಬಿದ ಮರಿ ಕಪಿಯಂತೆ, ಮೂರ್ತಿಯ ಕೈಯನ್ನು ಒತ್ತಿ ಹಿಡಿದಿತ್ತು.

ಅದರಿಂದಲೇ ಇಂದಿರಾ ಭೀತಳಾಗಿದ್ದುದನ್ನು ಅರ್ಥ ಮಾಡಿಕೊಂಡ ಮೂರ್ತಿ, ವೇಗವಾಗಿ ಒಮ್ಮೆ ಅವಳತ್ತ ನೋಡಿದ. ಆಕೆ ತನ್ನ ಭೀತಿಯನ್ನು ಆದಷ್ಟು ತೋರ್ಪಡಿಸಬಾರದೆಂದಿದ್ದರೂ, ತುಟಿ ಕೊಂಚ ಬಿಳುಪೇರಿತ್ತು. ಅವಳ ಎದೆ, ನೇರವಾಗಿ ನಿಲ್ಲಲು ಆಸರೆಯನ್ನು ಬಯಸಿದಂತೆ, ಅವನ ಬೆನ್ನಿಗೆ ಹತ್ತಿ ಕೊಂಡಿತ್ತು.

ಅವಳ ಆ ಭಯ ಮೂರ್ತಿ ಭಯವನ್ನು ಹೊಡೆದಟ್ಟಿ, ಅವನಲ್ಲಿ ಕ್ರೋಧ ವನ್ನು ಪ್ರೇರೇಪಿಸಿತು. ಹಾಗೇ ತಾನು ಅಭಿನಯಿಸಬೇಕಾಗಿದ್ದ ನಾಟಕದ ನೆನಪೂ ಆಗಿ, ತಟಕ್ಕನೆ ಎದ್ದುನಿಂತು, ' ಅಪಾಯದ ಸರಪಣಿ ' ಯನ್ನು ಎಳೆ ಯಲು ಕೈ ಚಾಚಿದ.

ಆತ ಬಾಗಿಲಿಗೆ ಇದಿರಾಗಿ ಛಾವಣಿ ತಗಲುವಷ್ಟು ಎತ್ತರ, ಕಲ್ಲಿನಲ್ಲಿ ಕಡೆದ ವಿಗ್ರಹದಂತೆ ಸುಮ್ಮನೆ ನಿಂತಿದ್ದವನು, ಮೂರ್ತಿ ' ಅಪಾಯದ ಸರಪಳಿ ' (Danger signal chain) ಯನ್ನು ಎಳೆಯಲು ಸಿದ್ಧನಾದುದನ್ನು ಕಂಡು—

" ಅದರ ಅಗತ್ಯವಿಲ್ಲ ಸಾರ್, ನಾನು ನಿಮಗೆ ಅಪಾಯ ಮಾಡಲು ಬಂದವ ನಲ್ಲ. ಹೆದರಬೇಡಿ "

—ಎಂದು, ನಿಂತಿದ್ದ ಹಾಗೇ ಸಿಗರೇಟು ಹೊತ್ತಿಸಿಕೊಂಡು, ವ್ಯಾಸ ರಾಯನತ್ತ ನೋಡಿದ.

ವ್ಯಾಸರಾಯನೂ ಬಿಟ್ಟ ಕಣ್ಣು ಬಿಟ್ಟಹಾಗೇ, ಆತನತ್ತಲೇ ನೋಡುತ್ತಿದ್ದ—

ಹೆಡೆಯಗಲಿಸಿದ ಹಾವನ್ನು ನೋಡುವ ಬಡಪಾಯಿ ಕಪ್ಪೆಯಂತೆ.

ಅಷ್ಟಾದರೂ ಆತ ವ್ಯಾಸರಾಯನನ್ನು ಮಾತನಾಡಿಸಲಿಲ್ಲ.

ಅದನ್ನು ಕಂಡು ಮೂರ್ತಿಗೆ, ಆತ ಉದ್ದೇಶಪೂರ್ವಕವಾಗಿಯೇ, ಏನೋ ಒಂದು ಅಗೋಚರ ಭೀತಿಯ ವಾತಾವರಣವನ್ನು ನಿರ್ಮಿಸಬೇಕೆಂದೇ ಆ ರೀತಿ, ಮೌನವನ್ನು ಮುಂದುವರಿಸುತ್ತಿದ್ದಾನೆ ಎಂದು ತೋರಿತು.

ಎದೆಯೊಳಗಿನ ' ಆದಷ್ಟು ಬೇಗ ಈ ಪರೀಕ್ಷಾ ಪ್ರಕರಣ ಮುಗಿದು ಹೋದರೆ ಸಾಕು ' ಎಂಬ ಕಾತರದಲ್ಲಿ, ಕೃತ್ರಕವಾದ ಮೌನದ ವಾತಾವರಣ ದುರ್ಭರವಾಗಿ, ಮೂರ್ತಿಯೇ ಅದನ್ನು ಮುರಿದು, ತಾನೂ ನಿಂತ ಹಾಗೇ—

" ಹಾಗಿದ್ದರೆ ನೀವು ಯಾರು ? ಗಾಡಿಯೊಳಗೆ ಹೀಗೇಕೆ ಕಳ್ಳರ ಹಾಗೆ ಪ್ರವೇಶಿಸಿದಿರಿ ? "

—ಎಂದು ಕೇಳಿದ.

ಅವನೊಳಗಿನ ಭೀತಿ, ಆ ತೋರಿಕೆಯ ಕ್ರೋಧದ ಮಾತನ್ನು ಮತ್ತಷ್ಟು ಬಿರುಸುಗೊಳಿಸಿತ್ತು.

" ನಾನು ಕಳ್ಳನಲ್ಲ. ನಿಮ್ಮನ್ನು ಹೆದರಿಸುವುದು ನನ್ನ ಉದ್ದೇಶವಲ್ಲ ಎಂದು ಆಗಲೇ ಹೇಳಲಿಲ್ಲವೇ ? ನೀವು ಉದ್ರೇಕಗೊಳ್ಳಬೇಕಾದ ಅಗತ್ಯವೇನೂ ಇಲ್ಲ. ಸುಮ್ಮನೆ ಕುಳಿತುಕೊಳ್ಳಿ. ಅಗತ್ಯವಿದ್ದಾಗ - ನಾನೇ ನಿಮ್ಮನ್ನು ಮಾತಾಡಿಸುತ್ತೇನೆ "

—ಎಂದ ಆತ, ಗಂಭೀರವಾಗಿದ್ದರೂ, ಅಧಿಕಾರ ದರ್ಪ ತುಂಬಿದ ಧ್ವನಿಯಲ್ಲಿ.

ಆ ಧ್ವನಿಯಲ್ಲಿ ಎಷ್ಟು ಸೌಜನ್ಯವಿತ್ತೋ, ಗಾಂಭೀರ್ಯವಿತ್ತೋ ಅಷ್ಟೇ

ಮಟ್ಟಿಗೆ ' ನೀನು ನೀನಾಗಿಯೇ ಸುಮ್ಮನಿರದಿದ್ದರೆ, ನಿನ್ನನ್ನು ಸುಮ್ಮನೆ ಮಾಡಬಲ್ಲ ಶಕ್ತಿಯೂ ನನಗಿದೆ ' ಎಂಬ ಅಧಿಕಾರ ಭಾವವೂ ಇತ್ತು.

ಆ ಮಾತಿಗೆ ಮರುಮಾತಾಡದೆ ಮೂರ್ತಿ ಹಾಗೇ ಕುಳಿತುಕೊಳ್ಳುತ್ತಿದ್ದ ಹಾಗೇ ಇಂದಿರಾ ಮತ್ತೆ ಅವನಿಗೆ ಒತ್ತಿ ಕುಳಿತಳು. ಪ್ರಕಟವಾಗಲಾಗದ ಭೀತಿ, ಅವಳ ಉಸಿರಿನ ಉಯ್ಯಾಲೆಯಲ್ಲಿ ವೇಗವಾಗಿ ತೂಗುತ್ತಿತ್ತು

ಮೂರ್ತಿಗೆ ಅಷ್ಟು ಹೇಳಿ ಆತ, ಬಾಗಿಲಿಗೆ ಒರಗಿಕೊಂಡು, ಕಾಲಮೇಲೆ ಕಾಲು ಹಾಕಿ ನಿಂತು, ಬಾಯಿಂದ ಸಿಗರೇಟಿನ ಹೊಗೆಯ ವರ್ತುಲಗಳನ್ನು ಸೃಷ್ಟಿಸುತ್ತಾ, ಇದ್ದು, ತಟಕ್ಕನೆ ಬಾಯೊಳಗಿದ್ದ ಅಷ್ಟು ಹೊಗೆಯನ್ನು ಹೊರಗೆ ಊದಿ—

" ಏನೋ ಪ್ರಾಣೇಶ – ಎಲ್ಲಿಗೆ ಪ್ರಯಾಣ ? "

—ಎಂದು ಕೇಳಿದ, ತನ್ನ ಬಲವಾದ ಕೈಗಳನ್ನು ಎದೆಯ ಮೇಲೆ ಕಟ್ಟಿಕೊಂಡು, ಬಲಗೈಯ ಬೆರಳುಗಳಲ್ಲಿ ಹಿಡಿದ ಸಿಗರೇಟನ್ನು ತೂಗಾಡಿಸುತ್ತಾ.

ಆತ ವ್ಯಾಸರಾಯನನ್ನು ಪ್ರಾಣೇಶ ಎಂದು ಕರೆದದ್ದನ್ನು ಕೇಳಿ, ಮೂರ್ತಿಗೆ ಏಕೋ ' ಷಾಕ್ ' ಹೊಡೆದಹಾಗಾಯಿತು.

ವ್ಯಾಸರಾಯನೂ ಬೆಚ್ಚಿಬಿದ್ದ. ಒಂದು ಗಳಿಗೆ ಅವನ ಮುಖದಲ್ಲಿ ಭೀತಿ ಸುಳಿದು, ಮರುಗಳಿಗೆಯೇ ಅದು ಬಿರುಸಾಯಿತು.

" ಎಲ್ಲಿಗೆ ಹೋದ್ರೆ – ಬಂದ್ರೆ ನಿಮಗೇನು ಸ್ವಾಮಿ ? "

—ಎಂದ ಸಿಟ್ಟು ತುಂಬಿ ತುಳುಕುವ ಧ್ವನಿಯಲ್ಲಿ ವ್ಯಾಸರಾಯ.

" ಷಟಪ್ – (Shut up) "

— ತಟಕ್ಕನೆ ಆತ, ಇದ್ದಕ್ಕಿದ್ದ ಹಾಗೇ ಬಹು ಬಿರುಸಾದ, ಉಗ್ರವಾದ ಧ್ವನಿಯಲ್ಲಿ ಗದರಿಸಿ ಹೇಳಿದ—

" ಬಾಯಿ ಮುಚ್ಚಿಕೊಂಡು ಕೇಳಿದ್ದಕ್ಕೆ ಉತ್ತರ ಕೊಡ್ತೀಯೊ, ಅಥವಾ ಬೆಲ್ಟ್ (Belt) ಕೈಗೆ ತಗೊಬೇಕೊ ? ಯಾರ ಹತ್ತಿರ ಮಾತಾಡ್ತಾ ಇದೀಯಾಂತ ನೆನಪಿರಲಿ."

ಆ ಮಾತು ಆಡುತ್ತಿದ್ದ ಹಾಗೇ ಆಳೆತ್ತರದ ವ್ಯಾಸರಾಯ ಗೇಣುದ್ದವಾಗಿ ಹೋದ. ಆ ಮಾತು ಕೇಳಿಯೇ ಅವನ ಮೈ ಬೆಲ್ಟಿನ ಏಟು ತಿಂದಂತೆ ನಡುಗಿತು.

" ಅ . . . . ಅ . . . . ದೇ . . . . ನು . . . . ಬೇಕೊ . . . . ಕೇಳಿ ಸ್ವಾಮಿ . . . . ನಿಮ್ಮಕಣ್ಣಿನಲ್ಲಿ ನಾವು ಭೂಮಿ ಮೇಲಿರೋದೇ ಅಪರಾಧ ವಾಗಿದೆ . . . . "

—ಎಂದ ಭಯ – ಕ್ರೋಧಗಳು ಸಮ ಸಮವಾಗಿ ಬೆರೆತು, ತರಗುಟ್ಟು ತ್ತಿದ್ದ ಧ್ವನಿಯಲ್ಲಿ.

" ಹಾಗೆ – ದಾರಿಗೆ ಬಾ. ಎಲ್ಲಿಗೆ ಹೊರಟಿದೀಯ ? "

" ಬೆಂಗಳೂರಿಗೆ."

" ಎಲ್ಲಿಂದ ಬಂದದ್ದು ? "

" ನ . . . ನ . . . ನಮ್ಮ ಊರಿನಿಂದ."

" ಅಂದ್ರೆ – ಯಾವ ಊರು ? ನಿಮ್ಮ ಊರು ಅಂದ ತಕ್ಷಣ ನನಗೆ ತಿಳಿಯೋಕೆ – ನಿನಗೇನು ಒಂದು ಊರೇ, ಒಂದು ಮನೇನೇ ? ಕೇರಿ ಕೇರಿ ತಿರುಗೋ ನಾಯಿ ಜಾತಿ ನಿನ್ನದು."

—ತೀವ್ರ ತಾತ್ಸಾರ ತುಂಬಿದ ಧ್ವನಿಯಲ್ಲಿ ಕೇಳಿದ ಆತ.

" ಕುಮಟಾದಿಂದ."

" ಬಂದದ್ದಕ್ಕೆ ಬಸ್ ಟಿಕೆಟ್ ಇದೆಯೇ ? "

" ಇಲ್ಲ ಸ್ವಾಮಿ – ದಾರೀಲೇ ಬಿಸಾಕಿಬಿಟ್ಟೆ. ತಾವು ಕಣ್ಣಿಗೆ ಬೀಳ್ತಿರಾಂತ ಗೊತ್ತಿದ್ರೆ ರುಜುವಾತಾಗಿ ಇಟ್ಟುಕೊಳ್ತಿದ್ದೆ . . . . "

—ನಿಧಾನವಾಗಿ ಧೈರ್ಯ ತಂದುಕೊಂಡು, ನಸು ವ್ಯಂಗ್ಯ ಬೆರೆತ ಧ್ವನಿಯಲ್ಲಿ ಹೇಳಿದ ವ್ಯಾಸರಾಯ.

" ಅ – ಹ್ಹಾ – ಹಾಗೋ . . . . ನಾನು ಕಣ್ಣಿಗೆ ಬೀಳ್ತೀನೀಂತ ಗೊತ್ತಿದ್ರೆ . . . . ರುಜುವಾತಾಗೆ ಇಟ್ಕೋತಿದ್ಯೋ . . . ."

—ಎಂದು ಕಟು ವ್ಯಂಗ್ಯ ತುಂಬಿದ ಧ್ವನಿಯಲ್ಲಿ ನಿಧಾನವಾಗಿ ಎಳೆದೆಳೆದು ಕೇಳುತ್ತಿದ್ದವನು, ತಟಕ್ಕನೆ ವಾಸರಾಯನತ್ತ ನುಗ್ಗಿ, ಮಿಂಚಿನ ವೇಗದಲ್ಲಿ ಅವನ ಕೋಟಿಗೆ ಕೈ ಹಾಕಿದ.

ಅದನ್ನು ಕಂಡು ವ್ಯಾಸರಾಯ ಅಷ್ಟೇ ವೇಗವಾಗಿ ಆತನನ್ನು ತಡೆಯಲು ಯತ್ನಿಸಿದ. ' ಛಟಾರ್ ' ಎಂದು ಅವನ ಕೈಮೇಲೆ ಪೆಟ್ಟು ಬಿತ್ತು. ' ಅಮ್ಮಾ ' ಎಂದು ಕೂಗಿ ವ್ಯಾಸರಾಯ , ತನ್ನ ಕೈ ಹಿಂದಕ್ಕೆ ಎಳೆದುಕೊಂಡ.

" ಸುಮ್ಮನಿರು ಅಂತ ಒಂದ್ಸಲ ಹೇಳಲಿಲ್ವೆ. ನನ್ನ ಹತ್ತಿರ ಬಾಲ ಬಿಚ್ತೀಯಾ – ಬೇಕೂಫಾ "

—ಎಂದು ವ್ಯಾಸರಾಯನನ್ನು, ಆ ಏಟಿಗಿಂತ ಬಲವಾದ ಧ್ವನಿಯಲ್ಲಿ ಗದರಿಸಿ, ಒಂದೊಂದಾಗಿ ವ್ಯಾಸರಾಯನ ಜೇಬುಗಳನ್ನೆಲ್ಲಾ ಹುಡುಕಿ, ಅವನ ಜೇಬುಗಳಲ್ಲಿದ್ದುದನ್ನೆಲ್ಲಾ ಹೊರ ತೆಗೆದ.

ಒಂದು ಮಾಸಿದ ಕೃತಕ ರೇಷ್ಮೆಯ, ಪಟ್ಟೆ ಪಟ್ಟೆಯ ಕರ್ಚೀಫು, ಒಂದು ಸಣ್ಣ ಹಳೆಯ ಪರ್ಸ್, ಅಷ್ಟು ಚಿಲ್ಲರೆ ಕಾಸು, ರೈಲ್ವೆ ಟಿಕೀಟು, ಒಂದು ಸಣ್ಣ ಸೆಂಟ್ ಬಾಟಲು, ನಾಲ್ಕಾರು ಹಲ್ಲು ಉದುರಿದ ಕೂಂಬು (comb), ಬೀಡಿಯ ಕಟ್ಟು, ಬೆಂಕಿಯ ಪೊಟ್ಟಣ, ಒಂದೆರಡು ಬಾಡಿದ ವೀಳೆಯದೆಲೆ, ಒಂದೆರಡು ಅಡಿಕೆಯ ಚೂರು, ಸಣ್ಣದೊಂದು ಹೊಗೆಸೊಪ್ಪಿನ ಪೊಟ್ಟಣ, ಮೇಲೆ ಕನ್ನಡಿಯಿದ್ದ ಸುಣ್ಣದ ಡಬ್ಬಿ—

—ಎಲ್ಲವನ್ನೂ ಒಂದೊಂದಾಗಿ ತೆಗೆದು, ವ್ಯಾಸರಾಯನ ಪಕ್ಕದ ಸೀಟಿನ ಮೇಲಿರಿಸಿದ.

ಆ ಸಾಮಾನುಗಳಲ್ಲಿ ಆತ ಎಲ್ಲಕ್ಕಿಂತ ಮೊದಲು ಪರೀಕ್ಷಿಸಿದ್ದು ವ್ಯಾಸ ರಾಯನ ರೈಲ್ವೆ ಟಿಕೆಟ್ಟನ್ನು. ಅದನ್ನು ತಿರುಗಿಸಿ ನೋಡಿ, ಅದರ ಮೇಲಿದ್ದ ತಾರೀಖಿನ ಮುದ್ರೆಯನ್ನು ಪರೀಕ್ಷಿಸಿ—

' ಹೂಂ .. ಇವತ್ತಿನದೇ - ಬೆಂಗಳೂರಿನದು

—ಎಂದು ತನಗೆ ತಾನೇ ಹೇಳಿಕೊಂಡ.

" ಅಷ್ಟಲ್ಲದೆ – ನಾನ್ಯಾಕೆ ಸುಳ್ಳು ಹೇಳಲಿ ಸ್ವಾಮಿ "

—ಎಂದ ವ್ಯಾಸರಾಯ, ಅನ್ಯಾಯವಾಗಿ ಅಬದ್ಧ ನುಡಿದ ಆಪಾದನೆಗೆ ಗುರಿಯಾದ ಸತ್ಯಸಂಧನಂತೆ.

" ಇಲ್ನೋಡು – ಒಂದ್ಸಲ ಹೇಳಿದೀನಿ. ಮಾತಾಡಿಸಿದಾಗ ಮಾತಾಡು. ಇಲ್ದಿದ್ರೆ ಬಾಯ್ಮುಚ್ಚಿಕೊಂಡಿರು. ನಿನ್ನ ತಲೆ ಹರಟೆ ಮಾತ್ರ ತಗೀಬೇಡ."

—ಎಂದ ಆತ ವ್ಯಾಸರಾಯನ ಧ್ವನಿ ಕೇಳೀ ಸಿಟ್ಟು ಬಂದವನಂತೆ, ' ಇದು ಕೊನೆಯ ಎಚ್ಚರಿಕೆ ' ಎಂದು ಹೇಳುವ ಧ್ವನಿಯಲ್ಲಿ.

" ಸರಿ ಸ್ವಾಮಿ ತಮ್ಮ ಚಿತ್ತ "

— ಎಂದ ವ್ಯಾಸರಾಯ.

" ಹಾಗಿರು - ಹಾಗಿದ್ರೆ ನಿನ್ನ ಹಲ್ಲಿಗೆ ಆರೋಗ್ಯ."

—ಎಂದ ಆತ ತನ್ನ ಕಾರ್ಯವನ್ನು ಮುಂದುವರಿಸಿ.

ಆತನ ದೃಷ್ಟಿಯಲ್ಲಿ ವ್ಯಾಸರಾಯನಿಗೆ ಸಂಬಂಧಿಸಿದ ಪ್ರತಿಯೊಂದು ವಸ್ತುವೂ ಸಂದೇಹಾಸ್ಪದವಾದ ವಸ್ತುವಾಗಿದ್ದಂತಿತ್ತು. ಅವನ ಪರ್ಸನ್ನು ತನ್ನ ಜೇಬಿನಲ್ಲಿರಿಸಿಕೊಂಡು, ವ್ಯಾಸರಾಯನ ಸುಣ್ಣದ ಡಬ್ಬಿ, ಬೆಂಕಿಪೊಟ್ಟಣವನ್ನು ತೆರೆದು ಪರೀಕ್ಷೆ ಮಾಡಿದ್ದಲ್ಲದೆ, ಮಡಚಿದ ಕರ್ಚೀಫ್‌ನಲ್ಲೂ ಏನೋ ಅವಿತಿರಬಹುದು ಎಂಬಂತೆ ಅದನ್ನು ಕೊಡವಿ ನೋಡಿದ – ಸೆಂಟ್ ಬಾಟಲಿನ ಬಿರಟೆಯನ್ನು ತೆಗೆದು ಮೂಸಿ ನೋಡಿದ. ಆ ಎಲ್ಲ ವಸ್ತುಗಳ ಪರೀಕ್ಷೆಯೂ ಮುಗಿದ ಮೇಲೆ—

" ಇವನ್ನೆಲ್ಲಾ ತೆಗೆದಿಟ್ಕೋ "

—ಎಂದು ಅಪ್ಪಣೆಮಾಡಿ, ತನ್ನ ಜೇಬಿನಲ್ಲಿರಿಸಿಕೊಂಡ, ವ್ಯಾಸರಾಯನ ಪರ್ಸನ್ನು ತೆಗೆದು, ಅದರ ಖಾನೆಖಾನೆಯನ್ನು ಹುಡುಕಿ, ಅದರಲ್ಲಿದ್ದುದನ್ನೆಲ್ಲಾ ಹೊರಗೆ ತೆಗೆದ.

ವ್ಯಾಸರಾಯನ ಪರ್ಸ್‌ನಲ್ಲೂ ಆತನಿಗೆ ಬೇಕಾದುದೇನೂ ಸಿಗಲಿಲ್ಲ. ನಲವತ್ತು ರೂಪಾಯಿಗಳಷ್ಟು ಹಣ ಇತ್ತು. ಆ ಹಣದ ನೋಟುಗಳಲ್ಲದೆ ಬೇರೇನೂ ಇರಲಿಲ್ಲ.

ಆ ನೋಟುಗಳನ್ನು ತಾತ್ಸಾರದಿಂದ ಆ ಪರ್ಸಿನಲ್ಲೇ ತುರುಕಿ, ಪರ್ಸನ್ನು ವ್ಯಾಸರಾಯನತ್ತ ಒಗೆದು, ಮುಟ್ಟಬಾರದುದನ್ನು ಮುಟ್ಟಿದವನಂತೆ ಕೈಕೊಡವಿಕೊಂಡು—

" ಅಷ್ಟು ಸುಲಭವಾಗಿ ಸಿಗೋ ಹಾಗೆ ನೀನೇನಾದ್ರೂ ಗುಮಾನಿ ಪದಾರ್ಥ ಇಡ್ತೀಯ – ಕಳ್ಳಕೊರಮ."

—ಎಂದ.

" ಗುಮಾನಿ ಸಾಮಾನು ಇದ್ರೆ ತಾನೇ ಸ್ವಾಮಿ, ಎಲ್ಲಾದ್ರೂ ಇಡೋಕೆ . . . . . "

—ಎಂದ ವ್ಯಾಸರಾಯ ಸಮಾಧಾನದ ನಿಟ್ಟುಸಿರುಬಿಟ್ಟು.

" ನಿನ್ನ ಯೋಗ್ತೆ ಎಲ್ಲಾ ನನಗೆ ಗೊತ್ತಿದೆ ಸುಮ್ನಿರು - ಆನಂದಾಪುರದಲ್ಲಿ ನನ್ನ ನೋಡ್ತಿದ್ದ ಹಾಗೇ ಎಲ್ಲೋ ಹೋಗಿ ಅವಿತುಕೊಂಡ್ಯಲ್ಲಾ, ಆಗ್ಲೆ

ಏನಿದ್ದದ್ದನ್ನು ನುಂಗಿ ನೀರು ಕುಡಿದ್ಯೋ – ಈಗ ಹುಡುಕಿದ್ರೆ ಸಿಗುತ್ಯೇ ನನಗೆ ? ”

—ಎಂದ ಆತ ನಿರಾಶೆ ತುಂಬಿ ತುಳುಕುವ ಧ್ವನಿಯಲ್ಲಿ.

“ ಏನು ಸ್ವಾಮಿ, ಒಂದ್ಸಲ ತಪ್ಪು ಮಾಡ್ದೋನು, ಯಾವಾಗಲೂ ಅದೇ ತಪ್ಪು ಮಾಡ್ತಾನೇನು ಸ್ವಾಮಿ ? ಏನೋ ಬುದ್ಧಿ ಇಲ್ದೆ ಒಂದೆರಡು ಸಲ ತಪ್ಪು ಮಾಡ್ದೆ - ಅದಕ್ಕೆ ನೀವು ಕೊಟ್ಟ ಶಿಕ್ಷೆ ಅನುಭವಿಸಿ ಬಾಕಿ ಚುಕ್ತ ಮಾಡಿ ಬಿಟ್ಟೆ . . . . . ”

—ಎಂದ ವ್ಯಾಸರಾಯ ಹಲ್ಲು ಗಿಂಜುತ್ತಾ.

“ ಬಾಯಿ ಮುಚ್ಚಿಕೊಳ್ಳೋ - ಸಾಕು. ನೀನು ಬುದ್ಧಿ ಕಲಿಯೋದು, ಕಾಗೆ ಬೆಳ್ಳಗಾಗೋದೂ ಎರಡು ಒಂದೇ ದಿನ—”

—ಎಂದವನೇ, ತಟಕ್ಕನೆ—

“ ನಿನ್ನ ಸಾಮಾನೆಲ್ಲಿದೆ ? ”

—ಎಂದ.

ಎಲ್ಲ ಪರೀಕ್ಷೆಯೂ ಮುಗಿಯಿತು ಎಂದುಕೊಂಡಾಗ, ಆತ ಇದ್ದಕ್ಕಿದ್ದ ಹಾಗೇ ಕೇಳಿದ ಈ ಪ್ರಶ್ನೆಯನ್ನು ಕೇಳಿ ಬೆಚ್ಚಿಬಿದ್ದು—

“ ಏನು ಸ್ವಾಮಿ ? ”

—ಎಂದ.

“ ನಿನ್ನ ಸಾಮಾನೆಲ್ಲಿದೆ ಅಂತ ಕೇಳಿದ್ದು—”

“ ಇರೋದೆಲ್ಲಾ ಒಂದು ಹಾಸಿಗೆ. ಸೀಟಿನ ಕೆಳಗಿದೆ. ಬೇಕಾದ್ರೆ ಅದನ್ನೂ ಬಿಚ್ಚಿ ಪರಾಂಬರಿಸಬಹುದು.“

—ಎಂದ ವ್ಯಾಸರಾಯ, ಸಾವರಿಸಿಕೊಂಡು.

ಅವನ ಮಾತು ಕೇಳಿ ಆತ, ಸೀಟಿನ ಕೆಳಗೆ ಇಣುಕಿ ನೋಡಿದ. ಅಲ್ಲಿದ್ದುದ್ದು ಹಾಸಿಗೆಯೊಂದೇ. ಯಾವ ಮಾಯದಲ್ಲೋ ವ್ಯಾಸರಾಯ ಆ ಹಾಸಿಗೆಯೊಂದಿಗಿದ್ದ ಟ್ರಂಕನ್ನು, ಮೂರ್ತಿಯ ಸೀಟಿನಡಿಯಲ್ಲಿ ದಬ್ಬಿದ್ದ.

ವ್ಯಾಸರಾಯ ಕುಳಿತ ಸೀಟಿನ ಕೆಳಗೆ ಹಾಸಿಗೆಯೊಂದೇ ಇದ್ದದ್ದನ್ನು ನೋಡಿ, ಆತ, ಮಾತು, ಪರೀಕ್ಷೆ ಎಲ್ಲವೂ ಮುಗಿಯಿತೆಂಬಂತೆ ಕಿಟಕಿಯತ್ತ ಹೋಗಿ, ಹೊರಗೆ ತಲೆಹಾಕಿದ.

ಆತನ ಬೆನ್ನು ತನ್ನತ್ತ ತಿರುಗುತ್ತಿದ್ದ ಹಾಗೇ, ವ್ಯಾಸರಾಯ ಮೂರ್ತಿಯ ಕಡೆ ತಿರುಗಿ, —

" ನನ್ನದು ಮುಗಿಯಿತು. ಇನ್ನು ನಿಮ್ಮದು ಆರಂಭವಾಗುತ್ತದೆ. ಹುಷಾರಾಗಿರಿ "

—ಎಂದು ಸೂಚಿಸುವಂತೆ ಕಣ್ಣುಹೊಡೆದು, ತನ್ನ ಪಾಡಿಗೆ ತಾನು ಗಾಡಿಯ ಛಾವಣಿಯ ಕಡೆ ನೋಡುತ್ತಾ ಕುಳಿತುಕೊಂಡ.

ವ್ಯಾಸರಾಯನ ವಸ್ತುಪರೀಕ್ಷೆ ಯಾವ ದುಷ್ಪರಿಣಾಮವೂ ಇಲ್ಲದೆ ಮುಗಿದದ್ದನ್ನು ಕಂಡು, ಮೂರ್ತಿಗೂ ಕೊಂಚ ಧೈರ್ಯ ಬಂದಿತ್ತು.

' ನಮ್ಮ ಪರೀಕ್ಷೆ ನಡೆಯದೆ ಹೋದರೂ ಹೋಗಬಹುದು '

—ಎಂದೇ ತೋರಿತು ಅವನಿಗೆ.

ಆ ಭಾವನೆಯಿಂದ ಅವನ ಮುಖದ ಮೇಲೆ ಸಮಾಧಾನದ ಭಾವ ಮೂಡಿತು.

' ಇನ್ನೇನೂ ಭಯವಿಲ್ಲ

—ಎಂಬಂತೆ ಇಂದಿರೆಯ ತೋಳನ್ನು ಒತ್ತಿ ಸೂಚಿಸಿದ.

## ೨೦

" Come on - whare are you two going ? Give me your tickets (ಹೇಳಿ, ನೀವಿಬ್ಬರು ಎಲ್ಲಿಗೆ ಹೋಗುತ್ತಿದ್ದೀರಾ? ನಿಮ್ಮ ಟಿಕೆಟ್ಟುಗಳನ್ನು ಕೊಡಿ.)"

—ಒಂದು ಗಳಿಗೆ ಎಲ್ಲ ಮಾತೂ ಮುಗಿಸಿದವನಂತೆ, ಕಿಟಕಿಯಾಚೆ, ಏನೋ ನೋಡುತ್ತಾ ಸಿಳ್ಳು ಹಾಕುತ್ತಿದ್ದ ಆತ, ಮಿಂಚಿನ ವೇಗದಿಂದ ಮೂರ್ತಿಯತ್ತ ತಿರುಗಿ, ಗಡುಸಾದ ಧ್ವನಿಯಲ್ಲಿ ಕೇಳಿದ

ಆಕಸ್ಮಿಕವಾಗಿ ತನ್ನತ್ತ ನುಗ್ಗಿದ ಆ ಪ್ರಶ್ನೆಯ ಇದಿರು ಮೂರ್ತಿಯೂ ತತ್ತರಿಸಿಹೋದ. ಜರ್ಮನರು ಯುದ್ಧದಲ್ಲಿ ಅನುಸರಿಸುತ್ತಿದ್ದ ' ಬ್ಲಿಟ್ಸ್-ಕ್ರಿಗ್' (Blitz - Krieg – ವಿದ್ಯುದ್ - ದಾಳಿ) ಯ ಕ್ರಮವನ್ನು ಆತ, ಅವರ ಪರೀಕ್ಷೆಯಲ್ಲಿ ಅನುಸರಿಸುತ್ತಿದ್ದಂತಿತ್ತು.

ಆತ ಆ ಪ್ರಶ್ನೆಯನ್ನು ಕೇಳಿದ ವೇಗಕ್ಕೆ ಹೆದರಿದ ಮೂರ್ತಿಯ ಬಾಯಿಂದ, ತಟಕ್ಕನೆ—

" ಬೆಂಗಳೂರಿಗೆ "

— ಎಂಬ ಮಾತು ಹೊರಬರುವುದರಲ್ಲಿತ್ತು.

ಬಹು ಪ್ರಯತ್ನಪಟ್ಟು ಆ ಮಾತುಗಳನ್ನು ಮೂರ್ತಿ ತಡೆಹಿಡಿದ.

" Come out – out with the truth (ಹೂ-ಹೇಳು-ಸತ್ಯವನ್ನು.)"

—ಮತ್ತಷ್ಟು ಅಬ್ಬರಿಸಿ ಪ್ರಶ್ನೆಮಾಡಿದ ಆತ.

ಆತನ ಮಾತಿನಲ್ಲಿದ್ದ ಕ್ರೋಧವನ್ನು ಕಂಡು ಮೂರ್ತಿಯ ಪಕ್ಕದಲ್ಲಿ ಕುಳಿತ ಇಂದಿರಾ ಭೀತಳಾಗಿ ಕಂಪಿಸುತ್ತಾ ಮೂರ್ತಿಗೆ ಜೋತುಬಿದ್ದಳು.

ಅವಳ ಭೀತಿ ಮೂರ್ತಿಗೆ ಮಾರ್ಗದರ್ಶಕವಾಯಿತು. [ಅದರೊಂದಿಗೆ ಹೆಣ್ಣಿನೆದುರಿಗೆ ತಾನು ಅಂಜುಬುರುಕನಲ್ಲವೆಂದು, ತೋರಿಸಬೇಕೆಂಬ ಪ್ರದರ್ಶನ ಚಪಲವೂ ಬೆರೆದಿತ್ತು ]

ಮೂರ್ತಿಯೂ ತನ್ನ ಭೀತಿಯನ್ನು ಸಾವರಿಸಿಕೊಂಡು, ಸಿಟ್ಟಿನಲ್ಲೇ—

" ಹಾಗೆ ಕೇಳುವುದಕ್ಕೆ ನಿಮಗೇನು ಅಧಿಕಾರ ? "

—ಎಂದ ಕೇಳಿದ.

" ಕೇಳುವುದಕ್ಕೆ ಅಧಿಕಾರವಿದೆಯೋ ಇಲ್ಲವೋ ' ನಿಮ್ಮ ಸ್ನೇಹಿತ 'ರನ್ನೇ ಕೇಳಿನೋಡಿ."

—ಎಂದ ಆತ.

ಆತ ಮಾತನಾಡುವಾಗ ' ನಿಮ್ಮ ಸ್ನೇಹಿತರನ್ನು ' ಎಂಬ ಶಬ್ದಗಳನ್ನು ಬಹು ಲಘುವಾಗಿ ಉಚ್ಚರಿಸಿದ್ದನ್ನು ಕೇಳಿ ಮೂರ್ತಿಗೆ ಆತ ತನ್ನ ಮಾತಿನಲ್ಲಿ ಏನೋ ಬಲೆಯೊಡ್ಡುತ್ತಿದ್ದಾನೆ ಎಂಬುದು ಅರಿವಾಗಿ, ಹುಷಾರಾಗಿ—

" ಯಾರನ್ನು ಕೇಳಬೇಕು ? ಇಲ್ಲಿ ನನ್ನ ಸ್ನೇಹಿತರು ಯಾರೂ ಇಲ್ಲ."

—ಎಂದ.

" ಹಾಗೋ – ನಿಮಗೂ ಇವನಿಗೂ ಸ್ನೇಹವೇ ಇಲ್ಲವೇ ? "

—ಎಂದ ಆತ ವ್ಯಾಸರಾಯನ ಕಡೆ ಕೈತೋರಿಸಿ.

" ಇಲ್ಲ."

" ಪರಿಚಯ— ? "

" ನನ್ನ ಜನ್ಮದಲ್ಲ ಇದೇ ಮೊದಲಸಲ ಇವರನ್ನು ನೋಡಿದ್ದು."

" ಯಾರನ್ನು ಇವರನ್ನೇ ? "

—ಎಂದು ಆತ ತಟಕ್ಕನೆ ಕಣ್ಣು ಇರಿಯುವಂತೆ ಇಂದಿರೆಯತ್ತ ಬೆರಳು ತೋರಿಸಿದ.

ತನ್ನತ್ತ ತಿವಿಯುವಂತೆ ಚಾಚಿದ ಬೆರಳನ್ನು ಕಂಡು ಇಂದಿರಾ ಗಾಬರಿಯಾಗಿ ತಟಕ್ಕನೆ ಹಿಂದಕ್ಕೆ ಸರಿದಳು.

ಅದನ್ನು ಕಂಡು ಮೂರ್ತಿಗೆ ಆಕೆಯನ್ನು ಅಷ್ಟು ಹೆದರಿಸಿದ, ಅವನಿಗೆ ಕಪಾಳಕ್ಕೆ ಹೊಡೆಯಬೇಕು ಎಂಬಷ್ಟು ಸಿಟ್ಟು ಬಂದಿತು.

" Look here (ಇಲ್ಲಿ ನೋಡಿ) "

—ಎಂದ ಸಿಟ್ಟು ತೆರೆ ಹೊಯ್ಯುವ ಧ್ವನಿಯಲ್ಲಿ.

ಆದರೆ ಅವನ ಸಿಟ್ಟು ಆತನ ಮೇಲೆ ಏನೂ ಪರಿಣಾಮ ಮಾಡಲಿಲ್ಲ. ಮೂರ್ತಿ ಎಷ್ಟು ಸಿಟ್ಟಾಗಿದ್ದನೋ, ಆತ ಅಷ್ಟೇ ಶಾಂತನಾಗಿ—

" ಏನು ? "

—ಎಂದು ಕೇಳಿದ.

" ನೀವು ಯಾರೋ ನನಗೆ ತಿಳಿಯದು. ಅಕ್ರಮವಾಗಿ ಗಾಡಿಯಲ್ಲಿ ಪ್ರವೇಶಿಸಿದ್ದೀ ಅಲ್ಲದೆ, ಈ ರೀತಿಯ ಅಸಭ್ಯ ಪ್ರಶ್ನೆಗಳನ್ನು ಕೇಳತ್ತಿದ್ದೀರ. ಅದೇ ಸಾಲದು ಎಂಬಂತೆ ನಮ್ಮ ಮನೆಯ ಹೆಂಗಸರನ್ನು ಅಪಮಾನ ಗೊಳಿಸುತ್ತೀದ್ದೀರ. ಈಗಲೇ ಹೇಳಿಬಿಡುತ್ತೇನೆ ಕೇಳಿ - ಇನ್ನೊಮ್ಮೆ ಇಂಥ ತುಟಿ ಮೀರಿದ ಪ್ರಶ್ನೆ ಕೇಳಿದರೆ, ಅನಿವಾರ್ಯವಾಗಿ ನಾನು ರೈಲು ನಿಲ್ಲಿಸಿ, ರೈಲ್ವೆ ಅಧಿಕಾರಿಗಳಿಗೆ ನಿಮ್ಮ ಮೇಲೆ ದೂರು ಕೊಡಬೇಕಾಗುತ್ತದೆ. ಎಚ್ಚರ ವಾಗಿ ವರ್ತಿಸಿ."

ಮೂರ್ತಿ ಹೇಳಿದ ಮಾತುಗಳನ್ನೆಲ್ಲವನ್ನು ಆತ ಶಾಂತವಾಗಿ ಕೇಳಿ, ಒಂದೂ ಮರುಮಾತಾಡದೆ, ತನ್ನ ಜೇಬಿನಲ್ಲಿ ಕೈ ಹಾಕಿ, ಒಂದು ಸಣ್ಣ ಬಿಳಿಯ ಕಾರ್ಡು ತೆಗೆದು ಮೂರ್ತಿಯ ಕೈಗೆ ಕೊಟ್ಟ. ಮೂರ್ತಿ ಆ ಕಾರ್ಡನ್ನು ನೋಡಿದ.

ಅದೊಂದು ವಿಸಿಟಿಂಗ್ ಕಾರ್ಡು. ಅದರಲ್ಲಿದ್ದುದಿಷ್ಟೆ—

**ಎನ್ ಆರ್. ರಾಜಗೋಪಾಲ್**, ಬಿ.ಎ., ಬಿ.ಎಲ್.

ಇನ್ಸ್ಪೆಕ್ಟರ್ (ಸಿ.ಐ.ಡಿ. ಬ್ರಾಂಚ್)

ಮೂರ್ತಿ, ಆ ಕಾರ್ಡಿನಲ್ಲಿ ಸಣ್ಣ ಅಕ್ಷರದಲ್ಲಿ ಅಚ್ಚಾದ ಆ ಎರಡು ಸಾಲನ್ನು ಓದಿದ. ಅದನ್ನು ಓದುತ್ತಿದ್ದ ಹಾಗೇ ಅವನ ಎದೆಯ ಮೇಲೆ ಮಂಜಿನ ಗಡ್ಡೆ ಇಟ್ಟಂತಾಯಿತು. ಒಮ್ಮೆ ನಾಲಗೆಯಿಂದ ತುಟಿಗಳನ್ನು ಸವರಿಕೊಂಡು, ಮಾತನಾಡದೆ, ವಿಸಿಟಿಂಗ್ ಕಾರ್ಡನ್ನು ಪುನಃ ಆತನ ಕೈಗೆ ಕೊಟ್ಟ.

" ಸಾಕೆ ? ಅಥವಾ - ಮತ್ತೇನಾದರೂ ಕ್ರೆಡೆನ್ಷಿಯಲ್ಸ್ (Credensials - ಅಧಿಕಾರ ಪತ್ರ) ತೋರಿಸಬೇಕೇ ? "

—ತಣ್ಣಗೆ ಮಂಜಿನಂತೆ ಕೊರೆಯುವ ಧ್ವನಿಯಲ್ಲಿ ಕೇಳಿದ ಆತ.

" ಏನೂ ಅಗತ್ಯವಿಲ್ಲ."

" ಹಾಗಾದರೆ ನನ್ನ ಪ್ರಶ್ನೆಗಳಿಗೆ ಉತ್ತರ ಕೊಡುತ್ತೀರಾ ?—"

—ಎಂದು, ತನ್ನ ಪ್ರಶ್ನೆಗೆ ಮೂರ್ತಿ ಉತ್ತರ ಕೊಡುವುದನ್ನೂ ಕಾಯದೆ, ವ್ಯಾಸರಾಯ ಕುಳಿತ ಸೀಟಿನ ಮೇಲೆ ಕುಳಿತು, ಜೇಬಿನಿಂದ ತನ್ನ ಸಿಗರೇಟು

ಪೆಟ್ಟಿಗೆಯನ್ನು ತೆಗೆದು, ತಾನು ಒಂದನ್ನು ಹೊತ್ತಿಸಿಕೊಂಡು, ಸಿಗರೇಟು, ಕಡ್ಡಿಪೆಟ್ಟಿಗೆಯನ್ನು ಮೂರ್ತಿಯತ್ತ ಚಾಚಿ—

"Have one. (ಒಂದು ತೆಗೆದುಕೊಳ್ಳಿ)"

— ಎಂದ.

ಆತನ ಆಹ್ವಾನದಂತೆ ಮೂರ್ತಿಯೂ, ಆತನ ಸಿಗರೇಟು ಪೆಟ್ಟಿಗೆಯಿಂದ ಒಂದು ಸಿಗರೇಟು ತೆಗೆದು ಹೊತ್ತಿಸಿ, ಮುಂದೆ ಆತ ಏನು ಮಾತನಾಡುವನೋ ಎಂದು ಮೈಯೆಲ್ಲಾ ಕಣ್ಣಾಗಿ ನೋಡತೊಡಗಿದ.

ಆತನ ಈ ಶಾಂತ, ಸ್ನೇಹಪರ ವರ್ತನೆಯಿಂದ ಮೂರ್ತಿಯ ಭೀತಿ ತಗ್ಗದೆ, ಏಕೋ 'ಈತ ಈಗ ಮೊದಲಿಗಿಂತ ಹೆಚ್ಚು ಅಪಾಯಕಾರಿ' ಎನಿಸಿತು.

"ನಿಮ್ಮ ಹೆಸರೇನು ?"

"ನಾರಾಯಣಮೂರ್ತಿ."

"ಕಾಲೇಜಿನಲ್ಲಿ ಓದ್ತಾ ಇದೀರಾ ?"

"ಹೂ."

"ಎಲ್ಲಿ ?"

"ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ."

"ಬಿ. ಎ. ನೋ, ಬಿ. ಎಸ್ಸಿನೋ ?"

"ಬಿ. ಎ."

"ಆನರ್ಸ್ಸೋ, ಪಾಸ್ ಕೋರ್ಸೋ ?"

"ಪಾಸ್ ಕೋರ್ಸ್."

"ಆಪ್ಷನಲ್ಸ್ (Optionals) ಏನು ತೆಗೆದುಕೊಂಡಿದೀರಾ ?"

"ಇಂಗ್ಲಿಷ್, ಹಿಸ್ಟರಿ, ಸೋಷಿಯಾಲಿಜಿ ! (English, History Sociology.)"

"ತುಂಬಾ ಸಂತೋಷ. ಬಿ.ಎ. ಗೆ ನಾನೂ ಅದೇ ಅಪ್ಷನಲ್ಸ್ ತೆಗೆದುಕೊಂಡಿದ್ದೆ. ನನಗೆ ಪ್ರಿಯವಾದ ವಿಷಯಗಳಲ್ಲೇ ಆಸಕ್ತಿ ಇರುವ ಮತ್ತೊಬ್ಬರ ಪರಿಚಯವಾದದ್ದು ನನಗೆ ತುಂಬಾ ಸಂತೋಷ. ನಮ್ಮ ಈ ಪರಿಚಯ ಚಿರಸ್ನೇಹವಾಗಿ ಉಳಿಯುತ್ತದೆ ಎಂದು ನಾನು ನಂಬುತ್ತೇನೆ."

—ಎಂದು ರಾಜಗೋಪಾಲ್ ಮೂರ್ತಿಯತ್ತ ಕೈಚಾಚಿದ.

ಆ ಸ್ನೇಹಹಸ್ತವನ್ನು ನಿರಾಕರಿಸಲಾರದೆ ಮೂರ್ತಿಯೂ—

" I too wish the same (ನಾನೂ ಅದನ್ನೇ ಬಯಸುತ್ತೇನೆ) "

—ಎಂದು ಹೇಳಿ ತನ್ನತ್ತ ಚಾಚಿದ ಕೈಯನ್ನು ಹಿಡಿದು ಕುಲುಕಿದ.

ಅವರಿಬ್ಬರೂ ಪರಸ್ಪರ ಸ್ನೇಹಿತರಂತೆ ಕೈ ಕುಲುಕಿದುದನ್ನು ಕಂಡು ವ್ಯಾಸರಾಯನ ಹಣೆಯ ಮೇಲೆ ಬೆವರು ಮೂಡಿತು.

ರಾಜಗೋಪಾಲ್ ಎರಡು ಜುರಿಕೆ (Puff) ಸಿಗರೇಟು ಎಳೆದು—

" ನೋಡಿ ಮಿ. ಮೂರ್ತಿ, ನಾನು ನಿಮ್ಮ ಸ್ನೇಹಿತ. ನೀವೂ ದಯವಿಟ್ಟು ಹಾಗೆಂದೇ ನಂಬಬೇಕು. ಎಷ್ಟಾದರೂ ನೀವು ವಿದ್ಯಾವಂತರು. ಆದ್ದರಿಂದ ನೀವು ನನ್ನ ಮಾತಿನ ಅಭಿಪ್ರಾಯವನ್ನು ಸದ್ಭಾವನೆಯಿಂದ ಗ್ರಹಿಸುತ್ತೀರ ಎಂದೇ ನಾನು ನಂಬಿದೇನೆ. ಅಲ್ಲವೇ ? "

—ಎಂದ.

" ಸರಿಯೆ."

" ಹಾಗೆ ನಾನು ಊಹಿಸುವುದರಲ್ಲಿ ತಪ್ಪೇನೂ ಇಲ್ಲವಲ್ಲ."

" ಖಂಡಿತವಾಗಿಯೂ ಇಲ್ಲ."

" ಪೋಲೀಸರ ಬಗ್ಗೆ, ಆ ವೃತ್ತಿಯ ಬಗ್ಗೆ ನಿಮಗೆ ಏನು ಅಭಿಪ್ರಾಯ ವಿದೆಯೋ ನನಗೆ ಗೊತ್ತಿಲ್ಲ—"

—ಎಂದು ರಾಜಗೋಪಾಲ್, ತನ್ನ ಮಾತನ್ನು, ಆ ಮಾತಿಗೆ ಮೂರ್ತಿ ಯಿಂದ ಉತ್ತರ ನಿರೀಕ್ಷಿಸಿದಂತೆ, ಅರ್ಧಕ್ಕೇ ತಡೆದ.

ಆದರೆ ಮೂರ್ತಿ ಅದಕ್ಕೆ ಏನೂ ಉತ್ತರ ಹೇಳಲಿಲ್ಲ.

ಅದನ್ನು ಕಂಡು ರಾಜಗೋಪಾಲ್ ತಾನೇ ಮಾತನ್ನು ಮುಂದು ವರಿಸಿದ—

" ಬಹಳ ಜನ ಪೋಲೀಸರ ಬಗ್ಗೆ ತಪ್ಪು ಅಭಿಪ್ರಾಯವನ್ನೇ ಇಟ್ಟು ಕೊಂಡಿರುತ್ತಾರೆ. ಅವರು ಅತ್ಯಾಚಾರಿಗಳು, ಪ್ರಜಾಹಿಂಸಕರು, ನಿರಪರಾಧಿ ಗಳನ್ನು ದಂಡಿಸುವವರು, ಲಂಚಬಡುಕರು, ದುಷ್ಟರಕ್ಷಕರು ಎನ್ನುವ ಭಾವನೆಯೇ ಪೋಲೀಸ್ ಅಧಿಕಾರಿಗಳ ಬಗ್ಗೆ ಬಹು ಜನಕ್ಕಿರುತ್ತವೆ. ನಮ್ಮ ಶಾಖೆಯಲ್ಲಿ ಆ ವಿವರಣೆಗೆ ಅನುರೂಪರಾದ ಅಧಿಕಾರಿಗಳೂ ಇಲ್ಲದಿಲ್ಲ. ಇದ್ದಾರೆ-

ನಾನೂ ಒಪ್ಪುತ್ತೇನೆ. ಊರಿದ್ದಲ್ಲಿ ಹೊಲಗೇರಿ ಇದ್ದೇ ಇರುತ್ತದೆ. ಆದರೆ ಆ ಅಭಿಪ್ರಾಯ ಇಡೀ ಶಾಖೆಗೇ ಅನ್ವಯಿಸುವುದಿಲ್ಲ . . . "

" ಇರಬಹುದು."

" ಕರ್ತವ್ಯಭ್ರಷ್ಟರು ಒಬ್ಬಿಬ್ಬರಿರಬಹುದು – ಆದರೆ ಬಹುಸಂಖ್ಯಾಕರು ಕರ್ತವ್ಯಪರರು. ಪೋಲೀಸರ ಕರ್ತವ್ಯ – ದೇಶದಲ್ಲಿ ಶಾಂತಿ, ಜನಗಳ ಆಸ್ತಿ ಪಾಸ್ತಿ, ರಾಜಕೀಯ ಮತ್ತು ಸಾಮಾಜಿಕ ಹಕ್ಕುಗಳ ರಕ್ಷಣೆ ಮತ್ತು ಶಾಂತಿ ಭಂಗಕಾರರ, ಸಮಾಜದ್ರೋಹಿಗಳ ಬಂಧನ. ಈ ಕೆಲಸಕ್ಕಾಗಿಯೇ ಸರಕಾರ ಪೋಲೀಸ್ ಪಡೆಯನ್ನು ನೇಮಿಸಿರುವುದು—"

" ಸರಿಯೆ."

" ಆದರೆ ಈ ಕೆಲಸ ಬರೀ ಪೋಲೀಸರಿಂದಲೇ ಆಗುವುದಿಲ್ಲ. ಅದಕ್ಕೆ ಜನರ ಅದರಲ್ಲೂ ಕಲಿತವರ ಸಹಕಾರ ಬಹು ಅಗತ್ಯ. ಅಲ್ಲವೇ ? "

" ನಿಜ."

" ನೀವು ಹಾಗೆ ಅಭಿಪ್ರಾಯ ಪಡುವುದು ನನಗೆ ತುಂಬಾ ಸಂತೋಷದ ವಿಷಯ ಮಿ. ಮೂರ್ತಿ. ನಾನೀಗ ನಿಮ್ಮೊಂದಿಗೆ ಮಿತ್ರನಂತೆ, ಮನಬಿಚ್ಚಿ ಮಾತನಾಡಬಹುದು. ಅಲ್ಲವೇ ? "

—ರಾಜಗೋಪಾಲ್, ಮೂರ್ತಿಯ ಮುಖವನ್ನೇ ದಿಟ್ಟಿಸಿ ನೋಡುತ್ತಾ ಹೇಳಿದ.

ಆತ ಆ ಮಾತು ಹೇಳುತ್ತಿದ್ದ ಹಾಗೇ, ಅದುವರೆಗೂ ಆತನ ಮಾತಿನಲ್ಲಿ ಮೈಮರೆತಿದ್ದ ಮೂರ್ತಿ ತಟಕ್ಕನೆ ಎಚ್ಚರವಾದ.

" ನಿಸ್ಸಂದೇಹವಾಗಿ—"

ಮೂರ್ತಿ ತನ್ನ ಮಾತು ಮುಗಿಸುವ ಮೊದಲೆ ಇಂದಿರಾ ಅವನ ಕೈಯನ್ನು ಒತ್ತಿದಳು. ಅದನ್ನು ಕಂಡು ಮೂರ್ತಿ ರಾಜಗೋಪಾಲ್‌ಗೆ—

" ಒಂದು ನಿಮಿಷ ಕ್ಷಮಿಸಿ,"

—ಎಂದು ಹೇಳಿ ಇಂದಿರೆಯತ್ತ ತಿರುಗಿದ.

ಅವಳ ಮುಖ ನೋಡುತ್ತಿದ್ದ ಹಾಗೇ ಅವನಿಗೆ ತನ್ನ ಒಪ್ಪಂದ ನೆನಪಾಗಿ—

" ಏನು ಇಂದಿರಾ ? "

—ಎಂದ, ಆಕೆಯುತ್ತ ತನ್ನ ಕತ್ತು ಬಾಗಿಸಿ.

ಇಂದಿರಾ ಅವನ ಕಿವಿಗೆ ಬಾಯಿಟ್ಟು ಹೇಳಿದಳು—

" ನನಗ್ಯಾಕೋ ಭಯ ಆಗ್ತಾ ಇದೆ."

ಇಂದಿರೆಯ ಬಾಯಲ್ಲಿ ಭಯದ ಮಾತನ್ನು ಕೇಳಿ ಮೂರ್ತಿಯನ್ನು ಬಡಿದೆಬ್ಬಿಸಿದಂತಾಯಿತು. ಕೂಡಲೇ ತನ್ನ ಬುದ್ಧಿಯೆಲ್ಲವನ್ನೂ ತನ್ನ ಹತೋಟಿಗೆ ತಂದುಕೊಂಡು, ನಗುತ್ತಾ—

" ಛಿ ! ಹುಚ್ಚಿ. ಒಳ್ಳೆಯ ಭಯ ಬಂತು ನಿನಗೆ. ಭಯಪಡೋಕೆ ಅವರೇನು ಹುಲೀನೇ, ಕರಡೀನೇ ? ಅಂಥ ಭಯ ಏನೂ ಬಂದಿಲ್ಲ. ಕಳ್ಳಕಾಕರಿಗೆ ಹೆದರೋದು ಬಿಟ್ಟು ಪೋಲೀಸರಿಗೆ ಹೆದರೋದೇ ? ಚೆನ್ನಾಯ್ತು. ನಿನಗೆ ನಮ್ಮ ಮಾತು ಬೇಜಾರಾದ್ರೆ, ಹಾಯಾಗಿ ಮಲಗಿಕೊಂಡು ನಿದ್ದೆ ಮಾಡು."

—ಎಂದು ಹೇಳಿ, ರಾಜಗೋಪಾಲ್‌ನತ್ತ ತಿರುಗಿ—

" ಅಂತೂ ನೀವು ನಮ್ಮ ಮನೆಯವರಿಗೆ ಒಳ್ಳೇ ಭಯ ಹತ್ತಿಸಿಬಿಟ್ಟರಿ, ಮಿ. ರಾಜಗೋಪಾಲ್."

— ಎಂದ.

ಮೂರ್ತಿಯ ಮಾತನ್ನು ಕೇಳಿ ರಾಜಗೋಪಾಲ್‌ನ ಮುಖ ತಟಕ್ಕನೆ ಕೆಂಪೇರಿತು. ಏಕೋ ಆತ ಮೂರ್ತಿಯ ಮಾತಿಗೆ ಏನೂ ಉತ್ತರಕೊಡದೆ, ಸುಮ್ಮನೆ ಅವರಿಬ್ಬರ ಮುಖವನ್ನೂ ದುರುಗುಟ್ಟಿ ನೋಡಿ – ತಟಕ್ಕನೆ—

" ನಿಮ್ಮ ಟಿಕೆಟ್ ಕೊಡಿ."

—ಎಂದ, ಬಿರುಸಾಗಿ.

ಅವನ ಮಾತು, ಮುಖಗಳಲ್ಲಾದ ಅನಿರೀಕ್ಷಿತ ಪರಿವರ್ತನೆಯನ್ನು ಕಂಡು ಮೂರ್ತಿಗೆ ಬೆಚ್ಚಿ ಬೀಳುವಂತಾಯಿತು. ಏನೂ ಮಾತನಾಡದೆ ಸುಮ್ಮನೆ ತನ್ನ ಜೋಬಿನಲ್ಲಿಟ್ಟುಕೊಂಡಿದ್ದ ಟಿಕೆಟ್ಟುಗಳನ್ನು ತೆಗೆದುಕೊಟ್ಟ.

ಅವನು ಕೊಟ್ಟ ಟಿಕೆಟ್ಟುಗಳನ್ನು ನೋಡಿ, ರಾಜಗೋಪಾಲ್—

" ಇವು – ಕಡೂರಿಗೆ—? "

—ಎಂದ.

" ಅಹುದು."

" ನೀವು ಬೆಂಗಳೂರಿನಲ್ಲಿ ಓದುತ್ತಿದ್ದೇನೆ ಎಂದಲ್ಲವೇ ಹೇಳಿದ್ದು ? "

" ಹೌದು."

" ಹಾಗಾದರೆ—? "

" ಹಾಗಾದರೇನು, ಬೆಂಗಳೂರಿನಲ್ಲಿ ಹೋಗುತ್ತಿರುವವರು ಕಡೂರಿಗೆ ಹೋಗಬಾರದೆಂದೇ ? "

—ಕೊಂಚ ಕಾವೇರಿ ಕೇಳಿದ ಮೂರ್ತಿ.

" ಇಲ್ಲಿ ನೋಡಿ ಮಿ. ಮೂರ್ತಿ—"

—ರಾಜಗೋಪಾಲನ ಧ್ವನಿಯಲ್ಲಿ ಹಿಂದಿದ್ದ ಸ್ನೇಹ, ಮಾರ್ದವ ಯಾವೂದೂ ಇರದೆ ಬಿರುಸಾಗಿತ್ತು—

" ನಾನು ಕೇಳಿದ ಪ್ರಶ್ನೆಗಳಿಗೆ, ನೀವು ನೇರವಾಗಿ ಉತ್ತರ ಕೊಡುವುದು ಕ್ಷೇಮ. ಹಾಗಲ್ಲದೆ ಸುತ್ತುಬಳಸು ಮಾತನಾಡಲೆತ್ನಿಸಿದರೆ, ನಾನು ನನ್ನ ಅಧಿಕಾರ ಚಲಾಯಿಸಬೇಕಾಗುತ್ತದೆ. ಅದು ನನಗೂ ಇಷ್ಟವಿಲ್ಲ; ನಿಮಗೂ ಹಿತವಲ್ಲ. ಗೊತ್ತಾಯಿತೇ ? "

—ಕಡ್ಡಿ ಮುರಿದು ತುಂಡು ಮಾಡಿದವನಂತೆ ಹೇಳಿದ ರಾಜಗೋಪಾಲ್.

ಅದನ್ನು ಕೇಳಿ, ಏಕೋ ಮೂರ್ತಿಗೂ ಆದಷ್ಟು ಬೇಗ ಈ ಮಾತುಕಥೆಯ ವ್ಯವಹಾರ ಮುಗಿಸುವುದು ಲೇಸು ಎನಿಸಿ ಹೇಳಿದ—

" ನೋಡಿ ಮಿ. ರಾಜಗೋಪಾಲ್ ? ನೇರವಾಗಿ ಮಾತನಾಡುವುದೇ ನನಗೂ ಇಷ್ಟ. ನಿಮ್ಮ ಮಾತನ್ನು ಕೇಳಿದರೆ, ನಿಮ್ಮ ಪ್ರಶ್ನಾಕ್ರಮವನ್ನು ಕೇಳಿದರೆ, ನಿಮಗೆ ನನ್ನ ವಿಷಯದಲ್ಲಿ, ಏನೋ ಅನುಮಾನವಿರುವಂತಿದೆ. ಪೋಲೀಸರು ನನ್ನಲ್ಲಿ ಆಸಕ್ತಿ ವಹಿಸುವಂಥ ಕೆಲಸವನ್ನು ನಾನೇನೂ ಮಾಡಿಲ್ಲ. ಆದುದರಿಂದ ನನಗೆ ನಿಮ್ಮ ಯಾವ ಪ್ರಶ್ನೆಗಳ ವಿಷಯದಲ್ಲೂ ಭಯವಿಲ್ಲ. ನೀವೂ ಸಂಕೋಚವಿಲ್ಲದೆ ಕೇಳಿ."

ಮೂರ್ತಿಯಿಂದ ರಾಜಗೋಪಾಲ್ ಅಷ್ಟು ನೇರವಾದ ಮಾತನ್ನು ನಿರೀಕ್ಷಿಸಿರಲಿಲ್ಲವೆಂದೇ ಕಾಣುತ್ತದೆ.

ಒಂದು ಗಳಿಗೆ ಸುಮ್ಮನಿದ್ದು ಬಳಿಕ ಹೇಳಿದ—

" Either you are too clever, or you are absolutely innocent—I don't know what you are. (ನೀವು ಅತಿ ಜಾಣರು - ಇಲ್ಲವೇ ತೀರಾ ಮುಗ್ಧರು. ನೀವೇನೋ - ನಾನರಿಯೆ.) ಅಪರಾಧಿಯನ್ನು, ಅವನ ಅಪರಾಧ ಸಾಬೀತಾಗುವವರೆಗೂ ನಿರಪರಾಧಿಯೆಂದು ಭಾವಿಸುವುದೇ ನನ್ನ ಸ್ವಭಾವ. ನಿಮ್ಮನ್ನು, ನಿಮ್ಮ ಬಳಿಯಲ್ಲಿಯ ಹುಡುಗಿಯನ್ನು ನೋಡಿದರೆ, ನೀವು ಪಳಗಿದ ಕೇಡಿಗಳಂತೆ ಕಾಣುವುದಿಲ್ಲ. ಆದ್ದರಿಂದ ನಿಮ್ಮನ್ನು ನಂಬಿ, ನಾನೊಂದು ಪ್ರಶ್ನೆ ಕೇಳುತ್ತೇನೆ ಮಿ. ಮೂರ್ತಿ. ಉತ್ತರ ಕೊಡಿ - ಹಾಗೇ ನೀವು ನನಗೆ ಸುಳ್ಳು ಹೇಳಬಹುದು. ಆದರೆ ನಿಮ್ಮ ಅಂತರಾತ್ಮಕ್ಕೆ ಸುಳ್ಳು ಹೇಳಲಾರಿರಿ. ಆದ್ದರಿಂದ ಅದಕ್ಕೆ ಹೇಳುವಂತೆ ಹೇಳಿ—ಈ ಹುಡುಗಿ ನಿಮ್ಮ ಹೆಂಡತಿಯೇ ?"

—ಗುಂಡಿನೇಟಿನಂತಿತ್ತು ಆ ಪ್ರಶ್ನೆ.

" ಅಲ್ಲವೆಂದು ಸಂದೇಹಿಸುವುದಕ್ಕೆ ನಿಮಗೇನಾದರೂ ಕಾರಣ ಗಳಿವೆಯೇ ? "

—ರಾಜಗೋಪಾಲನ ಪ್ರಶ್ನೆಗೆ ನೇರವಾಗಿ ಉತ್ತರ ಕೊಡಲಾಗದೆ ಕೇಳಿದ ಮೂರ್ತಿ.

" ದಯವಿಟ್ಟು - ನನ್ನ ಪ್ರಶ್ನೆಗೆ ಉತ್ತರ ಕೊಡಿ - ಈಕೆ ನಿಮ್ಮ ಹೆಂಡತಿಯೇ ? "

" ಹೌದು."

" Heaven help you if you are lying to me. (ನೀನು, ನನಗೆ ಸುಳ್ಳು ಹೇಳುತ್ತಿದ್ದರೆ ದೇವರೇ ನಿನ್ನನ್ನು ಕಾಪಾಡಲಿ.)"

—ಎಂದ ರಾಜಗೋಪಾಲ್ ಏಕೋ ಬಳಲಿದವನಂತೆ ಸೀಟಿಗೆ ಒರಗಿ ಕುಳಿತು.

೨೧

ಅಷ್ಟುಹೊತ್ತು ಗಾಡಿಯಲ್ಲಿ ಗಾಢವಾದ ಮೌನ ಹಬ್ಬಿತ್ತು.

ರೈಲು ಆಗಾಗ ಸಿಳ್ಳು ಹಾಕುತ್ತಾ, ವೇಗವಾಗಿ ಹೋಗುತ್ತಿತ್ತು.

ರಾಜಗೋಪಾಲ್ ಸೀಟಿಗೆ ಒರಗಿ ಕುಳಿತಿದ್ದ. ವ್ಯಾಸರಾಯ ಯಾವ ಭಾವವೂ ಇಲ್ಲದ ಮುಖದಿಂದ, ಆ ಗಾಡಿಯಲ್ಲಿ ತನಗೆ ಪರಿಚಿತರಾರೂ ಇಲ್ಲವೆಂಬಂತೆ, ಯಾರ ಕಡೆಗೂ ನೋಡದೆ ಕುಳಿತಿದ್ದ.

ಮೂರ್ತಿ ನಿಶ್ಚಲನಾಗಿ ಕುಳಿತಿದ್ದ – ತನ್ನ ಕಾರ್ಯವನ್ನು ಮಾಡಿದ ತೃಪ್ತಿಯಿಂದ.

ಇಂದಿರಾ ಅವನ ಭುಜವನ್ನು ಒರಗಿ ಕುಳಿತಿದ್ದಳು.

ಏಕೋ ಯಾರೊಬ್ಬರಿಗೂ ಗಾಡಿಯಲ್ಲಿ ಹಬ್ಬಿದ ಮೌನವನ್ನು ಮುರಿಯುವ ಇಚ್ಛೆ ಇದ್ದಂತಿರಲಿಲ್ಲ.

ಕೊನೆಗೆ ರಾಜಗೋಪಾಲನೇ ಆ ಮೌನವನ್ನು ಮುರಿದು ಹೇಳಿದ—

" ಮಿ. ಮೂರ್ತಿ, ನೀವು ಆಕೆಯನ್ನು ನಿಮ್ಮ ಮಡದಿ ಎಂದಿರಿ. ಆದುದರಿಂದ ನನಗೆ ನಿಮ್ಮ ಸಂಬಂಧದಲ್ಲಿ ಸಂದೇಹವನ್ನು ವ್ಯಕ್ತಪಡಿಸುವುದು ಇಷ್ಟವಿಲ್ಲ. ನೀವಿಬ್ಬರೂ, ನಿಮ್ಮ ಮಾತಿನಂತೆ ಗಂಡ - ಹೆಂಡರಾಗಿದ್ದರೆ ನನಗೆ ಬಹು ಸಂತೋಷ – ನಿಮ್ಮ ದಾಂಪತ್ಯ ಸುಖಮಯವಾಗಿ ಚಿರಾಯುವಾಗಲಿ."

" ಥ್ಯಾಂಕ್ಸ್ "

—ಎಂದ ಮೂರ್ತಿ, ಆ ಶುಭಾಶಯಕ್ಕೆ ಉತ್ತರವಾಗಿ.

ರಾಜಗೋಪಾಲ್ ಅವನ ಮಾತೇ ಕಿವಿಗೆ ಬೀಳದವನಂತೆ ಮುಂದುವರಿಸಿದ—

" ಈ ದಿನದ ನನ್ನ ವರ್ತನೆ ತಮಗೆ ಬಹು ವಿಚಿತ್ರವೆಂದೇ ಕಂಡಿರಬೇಕು. ಅದಕ್ಕೆ ಕಾರಣವನ್ನು ಹೇಳುತ್ತೇನೆ ಕೇಳಿ—

" ನಿಮಗೆ ಈತನ—"

—ವ್ಯಾಸರಾಯನ ಕಡೆ ಕೈತೋರಿಸಿ ಹೇಳಿದ ರಾಜಗೋಪಾಲ್—

"—ಪರಿಚಯವಿಲ್ಲ ಎಂದಿರಿ. ಇಲ್ಲವಾದರೆ ನನಗೆ ತುಂಬಾ ಸಂತೋಷ. ಈ ಜನುಮಕ್ಕಲ್ಲ, ಯಾವ ಯಾವ ಜನುಮಕ್ಕೂ ನಿಮಗೆ ಇಂಥ ನೀಚ ವಿಷಕ್ರಿಮಿಯ ಸಹವಾಸವಾಗುವುದು ಬೇಡ.

" ನೋಡುವುದಕ್ಕೆ ಇವನು – ಪ್ರಾಣೇಶ – ತುಂಬಾ ಸಾಭ್ಯಸ್ತನ ಹಾಗೆ ಕಾಣಿಸುತ್ತಾನಲ್ಲವೇ ? ಆದರೆ ಇಂಥ ಚಂಡಾಲ ನಿಮಗೆ ಮೂರು ಲೋಕಗಳಲ್ಲಿ ಹುಡುಕಿದರೂ ಸಿಕ್ಕುವುದಿಲ್ಲ. ಏಳೇಳು ಕೊಲೆ ಮಾಡಿದ ಪಾತಕಿಯೂ ಇವನಿಗಿಂತ ಮೇಲು."

—ರಾಜಗೋಪಾಲ್ ಹೇಳಿದುದನ್ನು ಕೇಳಿ ವ್ಯಾಸರಾಯನ ಮುಖ ಸುಣ್ಣ ಬಳಿದ ಹಾಗಾಯಿತು.

ಆದರೆ ಯಾರೂ ಏನೂ ಮಾತಾಡಲಿಲ್ಲ.

ರಾಜಗೋಪಾಲನೇ ಮುಂದುವರಿಸಿದ—

" ಇವನು ತನ್ನ ಹೆಸರು ಏನು ಎಂದು ನಿಮ್ಮ ಮುಂದೆ ಹೇಳಿದ್ದಾನೋ– ನನಗೆ ತಿಳಯದು. ಆದರೆ ಇವನ ನಿಜವಾದ ಹೆಸರು ಪ್ರಾಣೇಶ. ಇವನ ಊರು, ಶಿರ್ಶಿಯೋ, ಕುಮುಟವೋ ಯಾವುದೋ ಇರಬೇಕು. ಇವನು - ನಾಟಕದಲ್ಲಿ ಅಭಿನಯಿಸುವುದು, ಸಿನಿಮಾಗಳಿಗೆ ನಟರನ್ನು ಹುಡುಕಿ ಕೊಡುವುದು ತನ್ನ ವೃತ್ತಿ ಎಂದೇ ಹೇಳಿಕೊಳ್ಳುತ್ತಾನೆ. ಆದರೆ ಇವನ ಕಸಬು ಅದಲ್ಲ........"

" ಸ್ವಾಮೀ....ತಿಳೀದೋರ ಮುಂದೆಲ್ಲಾ ನನ್ನ ಮರ್ಯಾದೆ ಯಾಕೆ ಕಳೀತೀರಾ ಸ್ವಾಮಿ....ನೀವು ಹೇಳೋ ವೃತ್ತೀನ ನಾನು ಯಾವತ್ತೋ ಬಿಟ್ಟುಬಿಟ್ಟೆ........"

—ಎಂದು ಅಂಗಲಾಚಿದ ವ್ಯಾಸರಾಯ.

" ನನ್ನ ಮಾತಿನ ನಡುವೆ ಮಾತಾಡಿದ್ರೆ ನಿನ್ನ ನಾಲಿಗೆ ಸೀಳಿಬಿಡ್ತೀನಿ ಗುಲಾಮು—"

—ತಟಕ್ಕನೆ ವಿಪರೀತ ಆಕ್ರೋಶದಿಂದ ಹೇಳಿದ ರಾಜಗೋಪಾಲ್. ಹಾಗೆಂದು ಒಂದು ಗಳಿಗೆ ಸುಮ್ಮನಿದ್ದು ತನ್ನ ಬುದ್ಧಿಯನ್ನು ಹತೋಟಿಗೆ ತಂದುಕೊಂಡು—

" ನಾನು ಏನು ಹೇಳ್ತಾ ಇದ್ದೆ ಮಿ. ಮೂರ್ತಿ—? ಎಸ್. ಇವನ ವೃತ್ತಿಯ ವಿಷಯ ಹೇಳ್ತಾ ಇದ್ದೆ – ಅಲ್ವೆ. ನೀವೂ ಕೇಳಿ ತಾಯಿ – ಇವನು ಹೇಳಿ ಕೊಳ್ಳುವುದು ತನ್ನ ವೃತ್ತಿ ' ಸಿನಿಮಾ ತಯಾರಿಕರ ಏಜೆಂಟ್ ' ಅಂತ. ಆದರೆ ಇವನ ನಿಜವಾದ ಕಸಬು, ವೇಶ್ಯಾಗೃಹಗಳಿಗೆ, ಹುಡುಗಿಯರ ಖಯಾಲಿರುವ ಶ್ರೀಮಂತರಿಗೆ, ಅರಿಯದ ಹುಡುಗಿಯರ ಸರಬರಾಯಿ ಮಾಡುವುದು. ಈ ಅಪರಾಧಕ್ಕಾಗಿ ಅವನಿಗೆ ಈಗಾಗಲೇ ಮೂರುಬಾರಿ ಶಿಕ್ಷೆ ಆಗಿದೆ.

" ನಮ್ಮ ಕಾನೂನು ಸಾಕಷ್ಟು ಸಬಲವಾಗಿಲ್ಲ. ಕೊಲೆಪಾತಕಿಗಲ್ಲದೆ ಬೇರಾರಿಗೂ ಮರಣದಂಡನೆ ವಿಧಿಸುವುದು ಸಾಧ್ಯವಿಲ್ಲ. ನನಗೆ ಅಧಿಕಾರ ವಿದ್ದಿದ್ದರೆ, ಅರಿಯದ ಎಷ್ಟೋ ಜನ ಹೆಣ್ಣುಮಕ್ಕಳ ಬಾಳನ್ನು ಹಾಳುಮಾಡಿದ ಈ ಪಾತಕಿಯನ್ನು ಎಂದೋ ಗುಂಡಿಟ್ಟು ಕೊಲ್ಲುತ್ತಿದ್ದೆ. ಆದರೆ ನಾನೂ ಕಾನೂನಿನ ಗುಲಾಮ. ನನಗೆ ಅಧಿಕಾರವಿಲ್ಲ – ಇವನು ಜೀವವರಸೆ ಉಳಿದಿದಾನೆ.

" ಈದಿನ ಇವನು ನನ್ನ ಕಣ್ಣಿಗೆ ಬಿದ್ದುದು ಕೇವಲ ಆಕಸ್ಮಿಕ.

" ಈದಿನ ನಾನು ಕೆಲಸದ ಮೇಲೆ ಬಂದಿರಲಿಲ್ಲ. ಆನಂದಾಪುರದಲ್ಲಿದ್ದ ನನ್ನ ನೆಂಟರನ್ನು ನೋಡುವ ಸಲುವಾಗಿ ಬಂದಿದ್ದೆ. ಅಪಿರೀಕ್ಷಿತವಾಗಿ ಇವನನ್ನು ಸಿಲ್ದಾಣದಲ್ಲಿ ಕಂಡೆ. ಇವನು ನನ್ನನ್ನು ನೋಡುತ್ತಿದ್ದ ಹಾಗೇ, ಎಲ್ಲೋ ತಪ್ಪಿಸಿಕೊಂಡಿದ್ದನ್ನು ಕಂಡು ನನಗೆ ಏಕೋ ಅನುಮಾನವಾಯಿತು. ಆತುರದಲ್ಲಿಯೇ ಈ ಗಾಡಿಯಲ್ಲಿದ್ದಾನೇನೋ ಎಂದು ಇಣಿಕಿ ನೋಡಿದೆ. ಗಾಡಿ ಯಲ್ಲಿ ಈ ತಾಯಿ ಕಣ್ಣಿಗೆ ಬಿದ್ದಳು.

" ನನ್ನ ಸಂಶಯ ಸುಳ್ಳಾಗಿದ್ದರೆ ಕ್ಷಮಿಸಿ ಮಿ. ಮೂರ್ತಿ. ನಿಮ್ಮ ಮನೆಯವರನ್ನ, ವಿವಾಹಿತ ಸ್ತ್ರೀಯನ್ನು, ಅವಮಾನಗೊಳಿಸಬೇಕೆಂಬ ಇಚ್ಛೆ ನನಗೆ ಲವಲೇಶವೂ ಇಲ್ಲ.

" ಚಿಕ್ಕಪ್ರಾಯದ ರೂಪವತಿಯಾದ ಹುಡುಗಿಯನ್ನು ಈ ಗಾಡಿಯಲ್ಲಿ ಕಂಡು – ಮನ್ನಿಸಿ, ಆಗ ನೀವು ಹೀಗೆ ಕುಳಿತಿರಲಿಲ್ಲ – ನನ್ನ ಅನುಮಾನ ಇದ್ದದ್ದೂ ಬಲವಾಯಿತು.

" ಆದುದರಿಂದಲೇ ಹೀಗೆ ಬಂದು, ಅಸಭ್ಯ, ಅನಾಗರಿಕ ರೀತಿಯಲ್ಲಿ ನಿಮ್ಮೆಲ್ಲರನ್ನೂ ಪರೀಕ್ಷೆಮಾಡಬೇಕಾಯಿತು. ನನ್ನನ್ನು ಕ್ಷಮಿಸಿ ಮೂರ್ತಿ."

—ಎಂದು ಒಂದು ಗಳಿಗೆ ಸುಮ್ಮನಿದ್ದು ಬಳಿಕ ತಟಕ್ಕನೆ ಕೇಳಿದ ರಾಜಗೋಪಾಲ್.

" ಈಗಲೂ ಹೊತ್ತು ಮೀರಿಲ್ಲ – ಹೇಳಿ ಮಿ. ಮೂರ್ತಿ – ನಿಮ್ಮ ಅಂತರಾತ್ಮ ಸಾಕ್ಷಿಯಾಗಿ ಹೇಳಿ. ಈಕೆ ನಿಮ್ಮ ಪತ್ನಿಯೇ, ಅಥವಾ—? "

ರಾಜಗೋಪಾಲನ ಪ್ರಶ್ನೆಗೆ ಮೂರ್ತಿಗೆ ಏನಾದರೂ ಉತ್ತರ ಹೇಳುವ ಮೊದಲೇ, ಇಂದಿರೆಯೇ, ಲಜ್ಜೆಯನ್ನು ಮರೆತು, ಮೂರ್ತಿಯನ್ನು ಬಿಗಿದಪ್ಪಿ ಉತ್ತರಕೊಟ್ಟಳು—

" ನಿಜ, ನಿಜವಾಗಿಯೂ ನಾನು ಇವರ ಹೆಂಡತಿ,"

ತನ್ನ ಪ್ರಶ್ನೆಗೆ ಮೂರ್ತಿ ಉತ್ತರ ಕೊಡಬಹುದೆಂದು ನಿರೀಕ್ಷಿಸುತ್ತಿದ್ದಾಗ, ಆ ಪ್ರಶ್ನೆಗೆ ಇದ್ದಕ್ಕಿದ್ದ ಹಾಗೇ ಇಂದಿರೆಯೇ ಉತ್ತರ ಕೊಟ್ಟುದನ್ನು ಕಂಡು ರಾಜಗೋಪಾಲ್ ಅವಾಕ್ಕಾದ.

ಒಂದು ಗಳಿಗೆ ಸುಮ್ಮನಿದ್ದು ಬಳಿಕ ಹೇಳಿದ—

" ತಾಯಿ – ನಿಮ್ಮನ್ನು ನಾನು ನಂಬುತ್ತೇನೆ. ನನಗೆ ಈ ಲಫಂಗನ ವಿಷಯದಲ್ಲಿ ಅನುಮಾನ ಸತ್ತಿಲ್ಲ. ಈಗಲೂ ಬೇಕೆನಿಸಿದರೆ, ಸಂಶಯದ ಮೇಲೆ ನಿಮ್ಮನ್ನು ಮೂವರನ್ನು ದಸ್ತಗಿರಿ ಮಾಡಿ, ಸತ್ಯವನ್ನು ಹೊರಡಿಸಬಹುದು. ಆದರೆ, ತಾಯಿ – ನಿನ್ನ ಮುಖವೇ ನನಗೆ ಹೇಳುತ್ತದೆ – ನೀನು ಏನೂ ಅರಿಯದ ಮುಗ್ಧೆ. ಪೋಲೀಸಿನವನಾಗಿ ಹತ್ತು ವರ್ಷ ನನ್ನ ಜನ್ಮ ತೇಯ್ದಿದ್ದೇನೆ. ಸುಳ್ಳು ಹೇಳುವವರನ್ನು ನಾನು ಸುಲಭವಾಗಿ ಪತ್ತೆ ಹಚ್ಚಬಲ್ಲೆ. ಆದರೆ ನಿನ್ನ ಮುಖ ಸುಳ್ಳು ಹೇಳುವವರದಲ್ಲ. ಆದ್ದರಿಂದ ನಂಬಿ ಹೇಳುತ್ತೇನೆ – ನೀವಿಬ್ಬರೂ ತನ್ನನ್ನು ಕ್ಷಮಿಸಿ. ಮಿ. ಮೂರ್ತಿ – May God be with you. (ದೇವರು ನಿನ್ನ ನೆರವಿಗಿರಲಿ.) "

—ಎಂದಷ್ಟು ಹೇಳಿ ರಾಜಗೋಪಾಲ್ ಸುಮ್ಮನಾದ.

ಆತ ಮಾತು ಮುಗಿಸಿದ ಬಳಿಕ ಯಾರೊಬ್ಬರೂ ಮಾತನಾಡಲಿಲ್ಲ.

ಮುಂದಿನ ಸ್ಟೇಷನ್ನಿನಲ್ಲಿ ಆತ ಇಳಿದುಹೋಗುವವರೆಗೂ ಯಾರೂ ಮಾತನಾಡಲಿಲ್ಲ.

*

# ೨೨

—ಸ್ಟೇಷನ್ನಿನಲ್ಲಿ ರೈಲು ನಿಂತಾಗ ರಾಜಗೋಪಾಲ್ ಕೆಳಗಿಳಿದು ಹೊರಟುಹೋದ.

ಹೋಗುವಾಗಲೂ, ಮೂರ್ತಿ, ಇಂದಿರೆಗೆ—

" ನಿಮ್ಮನ್ನು ನಾನು, ನೀವು ನನ್ನನ್ನು ಮೋಸಗೊಳಿಸಿಲ್ಲವೆಂದೇ ನಂಬಿದೇನೆ. ನಿಮಗೆ ನಿಮ್ಮ ಅಂತರಾತ್ಮವೇ ಸಾಕ್ಷಿಯಾಗಿರಲಿ. ದೇವರು ನಿಮಗೆ ಒಳ್ಳೆಯದನ್ನು ಮಾಡಲಿ."

—ಎಂದು ಹೇಳಿ, ವ್ಯಾಸರಾಯನಿಗೆ—

" ಇವತ್ತು ನಿನ್ನ ಅದೃಷ್ಟ ನೆಟ್ಟಗಿತ್ತು. ಹುಷಾರಾಗಿರು."

—ಎಂದು ಹೇಳಿ, ರಾಜಗೋಪಾಲ್ ಹೊರಟು ಹೋದ.

ನಿಲ್ದಾಣದಲ್ಲಿ ನಿಂತ ರೈಲು ಮತ್ತೆ ಚಲಿಸಿ, ತನ್ನ ಪಯಣವನ್ನು ಆರಂಭಿಸುವವರೆಗೂ, ಗಾಡಿಯಲ್ಲಿದ್ದ ಮೂವರಲ್ಲಿ ಯಾರೊಬ್ಬರೂ ಮಾತನಾಡಲಿಲ್ಲ.

ಮೂವರೂ ಗರಬಡಿದಂತೆ ಸುಮ್ಮನೆ ಕುಳಿತಿದ್ದರು.

ರೈಲು ಗಾರ್ಡಿನ ಹಸಿರು ದೀಪವನ್ನು ಕಂಡು ಶಿಳ್ಳು ಹಾಕಿ, ತನ್ನ ಯಾತ್ರೆಯನ್ನು ಮುಂದುವರಿಸಿ ಅಷ್ಟುದೂರ ಹೋದ ಬಳಿಕ, ವ್ಯಾಸರಾಯ ಜೇಬಿನಿಂದ, ತನ್ನ ಬಣ್ಣಬಣ್ಣದ, ಪಟ್ಟೆಪಟ್ಟೆಯ ಕೃತಕ ರೇಷ್ಮೆಯ ಕರವಸ್ತ್ರವನ್ನು ಹೊರತೆಗೆದು, ಮುಖದಿಂದ ಧಾರಾಕಾರವಾಗಿ ಸುರಿಯುತ್ತಿದ್ದ ಬೆವರನ್ನು ಒರೆಸಿಕೊಳ್ಳುತ್ತಾ—

" ಸದ್ಯ – ಹಾಳು ಶನಿ ತೊಲಗಿಹೋಯ್ತು."

—ಎಂದು ತನಗೆ ತಾನೇ ಹೇಳಿಕೊಂಡ.

ಅದುವರೆಗೂ, ಹೇಗೋ, ಪ್ರಯತ್ನಪಟ್ಟು ದೃಢವಾಗಿ ಕುಳಿತುಕೊಂಡಿದ್ದ ಇಂದಿರಾ ಇದ್ದಕ್ಕಿದ್ದ ಹಾಗೇ ಮೂರ್ತಿಯ ತೊಡೆಯ ಮೇಲೆ ಕುಸಿದುಬಿದ್ದು ಬಿಕ್ಕಿಬಿಕ್ಕಿ ಅಳಲಾರಂಭಿಸಿದಳು.

ಆ ಅಳುವಿನ ಮಧ್ಯೆ ತಡೆತಡೆದು—

" ನನಗೆ ಗೊತ್ತಿರಲಿಲ್ಲ . . . ಇವನು . . . . ಇಂಥೋನೂಂತ . . . . ನನಗೆ ಗೊತ್ತಿರಲಿಲ್ಲ."

ಮೂರ್ತಿಯ ತೊಡೆಯ ಮೇಲೆ, ಬೆಂಕಿಗೆ ಬಿದ್ದ ಪತಂಗದಂತೆ ಹೊರಳುತ್ತಾ, ಮೈಯೆಲ್ಲವೂ ಕಣ್ಣೀರಾಗಿ ಹರಿದುಹೋಗುವಂತೆ ಕಂಬನಿ ಗರೆಯುತ್ತಾ, ಬಿಕ್ಕಿಬಿಕ್ಕಿ ಅಳುತ್ತಾ ಹೇಳಿದಳು ಇಂದಿರಾ.

" ಇವನು . . . ಇವನು . . . . ಇಂಥೋನೂಂತ ನನಗೂ ಗೊತ್ತಿರಲಿಲ್ಲ ! . . . "

—ಇಂದಿರೆಯ ದುಃಖವನ್ನು ಕಂಡು, ತಟಕ್ಕನೆ ಉಕ್ಕಿಬಂದ ಸಿಟ್ಟಿನಲ್ಲಿ ಹಲ್ಲು ಕಡಿಯುತ್ತಾ ಹೇಳಿದ ಮೂರ್ತಿ.

" ಗೊತ್ತಿದ್ರೆ . . . ಗೊತ್ತಿದ್ರೆ . . ಏನ್ಮಾಡ್ತಾ ಇದ್ರಿ ಸಾರ್—"

—ಮೂರ್ತಿಯ ಮಾತನ್ನು ಕೇಳಿ ವ್ಯಾಸರಾಯ, ತಣ್ಣಗೆ ಕೊರೆಯುವಂಥ ಧ್ವನಿಯಲ್ಲಿ ಕೇಳಿದ.

" ಗೊತ್ತಿದ್ರೆ—ನಿನಗೆಂದೂ ಸಹಾಯ ಮಾಡ್ತಾ ಇರಲಿಲ್ಲ. ಹಾಗೇ . . . . ಹಾಗೇ . . . . "

—ಕ್ರೋಧದ ಉದ್ರೇಕದಲ್ಲಿ ತಡೆತಡೆದು ಏದುತ್ತಾ ಹೇಳಿದ ಮೂರ್ತಿ.

" ಹೂ - ಹಾಗೇ - ಮುಂದಕ್ಕೇನು - ಅಪ್ಪಣೆ ಕೊಡಿಸಿ."

—ವ್ಯಂಗ್ಯ ತುಂಬಿತುಳುಕುವ ಧ್ವನಿಯಲ್ಲಿ ಹೇಳಿದ ವ್ಯಾಸರಾಯ.

" ಹಾಗೆ....ಹಾಗೆ....ನಾನೇ ನಿನ್ನ ಪೋಲೀಸಿಗೆ ಕೊಡ್ತಿದ್ದೆ."

—ಮೂರ್ತಿ ಆಕ್ರೋಶದಿಂದ ಹೇಳಿದ.

" ಹೌದೇ ? "

" ಖಂಡಿತವಾಗಿಯೂ........"

" ಹೂ - ಈಗಲೂ ಆ ಕೆಲಸ ತಾವು ಮಾಡಬಹುದು."

" ಮಾಡಬಹುದು - ತೊಂದ್ರೆ ಏನೂ ಇಲ್ಲ—ಇಷ್ಟೆ—"

—ತಟಕ್ಕನೆ ಬಹು ಹರಿತವಾದ ಧ್ವನಿಯಲ್ಲಿ ಮೂರ್ತಿಯ ಗಮನನನ್ನು ತನ್ನತ್ತ ಸೆಳೆದು ಹೇಳಿದ ವ್ಯಾಸರಾಯ—

" ಮಾಡಬಹುದು - ಇದರ ರುಚಿ ನೋಡೋಕೆ ಇಷ್ಟ ಇದ್ರೆ—"

—ಎಂದ ವ್ಯಾಸರಾಯ, ತನ್ನ ಪಂಚೆಯಲ್ಲಿ ಎಲ್ಲೋ ಹುದುಗಿಸಿ ಕೊಂಡಿದ್ದ ಬಹು ನೀಳವಾದ, ಬಳುಕುವಂಥ ಚಾಕುವನ್ನು ಹೊರತೆಗೆದು. ಅದನ್ನು ತನ್ನ ಕೈಯಲ್ಲಿ, ಮೂರ್ತಿಗೆ ಕಾಣುವಂತೆ ಹಿಡಿದು.

ಗಾಡಿಯ ಕ್ಷೀಣ ಬೆಳಕಿನಲ್ಲೂ ಲಕಲಕಿಸುವ ಆ ಚೂರಿಯನ್ನು ನೋಡಿ ಮೂರ್ತಿ ಭೂತದರ್ಶನವಾದಂತೆ ಬೆಚ್ಚಿಬಿದ್ದ.

ಮೂರ್ತಿಯ ತೊಡೆಯ ಮೇಲಿದ್ದ ಇಂದಿರೆಯೂ ಎದ್ದು ಕುಳಿತ ಆ ಚೂರಿಯನ್ನು ನೋಡಿದಿಳು—

ಅದನ್ನು ಕಂಡು ಅವಳ ರಕ್ತವೂ ಹೆಪ್ಪುಗಟ್ಟಿದಂತಾಯಿತು.

ಬಿಟ್ಟ ಕಣ್ಣು ಬಿಟ್ಟ ಹಾಗೇ, ಆ ಚೂರಿಯನ್ನು ನೋಡುತ್ತಿದ್ದಳು.

" ಇದನ್ನ ನೋಡಿದ್ರಾ ಸಾರ್. ಈಗ ಹೇಳ್ತೀನಿ ಕೇಳಿ. ಇನ್ನು ಮುಚ್ಚುಮರೆ ಮಾಡಿ ಏನುಪಯೋಗ? ನಾನು ಯಾರು, ಏನು, ಎಂಥೋನು ಅಂತ ಗೊತ್ತಾಯ್ತೊ – ಇಲ್ವೋ, ಸರಿ. ಈಗ ನೀವು ನನ್ನ ಹಿಡುಕೊಟ್ರೆ - ನನಗೆ ನಾಲ್ಕನೆ ಸಲ ಜೈಲಾಗುತ್ತೆ. ಹದಿನೈದು ವರ್ಷ ಸಜಾ. ನಾನಂತೂ ಖಂಡಿತಾ ಬದುಕಿ ಹೊರಗೆ ಬರೋಲ್ಲ. ಆದ್ರಿಂದ ನನ್ನ ಪಾಲಿಗೆ ಜೈಲಿಗೆ ಹೋಗೋದೂ ಒಂದೇ - ಗಲ್ಲಿಗೇರೋದೂ ಒಂದೆ. ಆದ್ರಿಂದ ಈ ತಪ್ಪಿಗೆ ಸಿಕ್ಕುಹಾಕಿಕೊಂಡು ಜೈಲಿಗೆ ಹೋಗೋದಕ್ಕಿಂತ ನನ್ನ ಪಾಲಿಗೆ ಗಲ್ಲಿಗೇರೋದೇ ವಾಸಿ.

" ನಿಮಗೆ ಗೊತ್ತಿದೆಯೋ ಇಲ್ವೋ ಸಾರ್ - ಗಲ್ಲಿಗೆ ಹಾಕೋದು ಒಂದೇ ಸಲ - ಎಷ್ಟು ಕೊಲೆ ಮಾಡಿದ್ರೂ - ನಾನು ಗಲ್ಲಿಗೆ ಹೋಗೋದು ಒಂದೇ ಸಲ. ಈ ವಿಷಯ ನಿಮಗೆ ನೆನಪಿರಲಿ. ನಿಮ್ಮಿಬ್ಬರನ್ನೂ ಕೊಂದು ಹಾಕಿದರೂ ನಾನು ಗಲ್ಲಿಗೆ ಹೋಗೋದು ಒಂದೇ ಸಲ.

" ಆದ್ರಿಂದ ನನಗೆ ಜೀವ ಭಯ ಇಲ್ಲ.

" ನಿಮಗೆ ಜೀವಭಯ ಇದ್ಯೋ ಇಲ್ವೋ - ಅದು ನೀವು ಆಲೋಚನೆ ಮಾಡಬೇಕಾದ ವಿಷ್ಯ.

" ಹೇಳಿ - ಏನು ಮಾಡ್ತೀರ?

" ಸುಮ್ನಿದ್ರೆ - ನಿಮ್ಮುಪಕಾರ ನಾನು ಮರಯೋಲ್ಲ. ನಿಮಗೆ

ಬೇಕಾದ್ದನ್ನ ನೀವೂ ಅನುಭವಿಸಿ ಸುಖಪಡಬಹುದು - ಇಲ್ಲಾಂದ್ರೆ - ಮುಂದೇನಿದ್ರೂ ನೀವುಂಟು - ಇದುಂಟು."

—ಎಂದ ವ್ಯಾಸರಾಯ ಹರಿತವಾದ ಚೂರಿಯನ್ನು ಬೆಳಕಿನಲ್ಲಿ ಆಡಿಸಿ.

ಆ ಮಾತಿಗೆ ಮೂರ್ತಿ ಏನೂ ಉತ್ತರ ಕೊಡಲಿಲ್ಲ. ಸುಮ್ಮನೆ ಗರಬಡಿದವನಂತೆ, ಗಾಡಿಯ ದೀಪದ ಬೆಳಕಿನಲ್ಲಿ, ಮಿಂಚಿನ ಎಳೆಯಂತೆ, ವ್ಯಾಸರಾಯನ ಕೈಯಲ್ಲಿ ಆಡುತ್ತಿದ್ದ ಚೂರಿಯನ್ನೇ ನೋಡುತ್ತಿದ್ದ.

" ಇಂದಿರಾ - ನಿನಗೂ ಅಷ್ಟೆ - ಏನು ಹೇಳ್ತೀಯಾ ? "

—ಎಂದು ಇಂದಿರೆಯನ್ನು ಕೇಳಿದ ವ್ಯಾಸರಾಯ.

ವ್ಯಾಸರಾಯನ ಕೈಯಲ್ಲಿ ಆಡುತ್ತಿದ್ದ ಚೂರಿಯನ್ನು ನೋಡುತ್ತಲೇ ಇದ್ದ ಇಂದಿರಾ, ತಟಕ್ಕನೆ ಬುಡಮುರಿದ ಬಾಳೆಯಂತೆ ಕುಸಿದು, ಮೂರ್ತಿಯ ಭುಜದ ಮೇಲೆ ಮುಖ|ಒರಗಿಸಿ ಅಳಲಾರಂಭಿಸಿದಳು.

ಅವಳ ಕಂಬನಿ ಮೂರ್ತಿಯ ಮೈಯನ್ನು ತೋಯಿಸುತ್ತಿತ್ತು.

ವ್ಯಾಸರಾಯ ಅವನನ್ನೇ ನೋಡುತ್ತಾ ಇದ್ದ - ಈಗ, ಕಪ್ಪೆಯನ್ನು ನೋಡುವ ಹಾವಿನಂತೆ.

ಮೂರ್ತಿ ಗರಬಡಿದವನಂತೆ ಕುಳಿತಿದ್ದ.

ಇದ್ದಕ್ಕಿದ್ದ ಹಾಗೇ ವ್ಯಾಸರಾಯ ಪಕಪಕ ನಗಲಾರಂಭಿಸಿದ.

ಅವನ ನಗುವನ್ನು ಕೇಳಿ ಗಾಳಿಯೂ ನಡುಗಿತು.

ಹೊರಗೆ ಹಬ್ಬಿದ ಕಾರ್ಗತ್ತಲ್ಲಿನಲ್ಲಿ ಗಾಡಿ ಶಿಳ್ಳು ಹಾಕುತ್ತಾ, ಹೊಗೆ ಕಾರುತ್ತಾ, ವೇಗವಾಗಿ ಮುನ್ನುಗ್ಗುತ್ತಿತ್ತು.